ಶುಕ್ರವಾರ, ಏಪ್ರಿಲ್ 24, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಾಚಿಗೆ ಚಿನ್ನ

ಭಾರತದ ಪ್ರಾಚಿ ಗಾಯಕವಾಡ್ ಗುರುವಾರ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಟೂರ್ನಿಯ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು





ಮೀಸಲಾತಿಗಾಗಿ ಹಕ್ಕೊತ್ತಾಯ...

ಮಹಿಳಾ ಮೀಸಲಾತಿ ಜಾರಿಗೆ ಒತ್ತಾಯಿಸಿ ಮೈಸೂರಿನಲ್ಲಿ ಮಹಿಳಾ ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಮಹಿಳೆ





ಇರಾನ್ ಬೋಟ್ ಧ್ವಂಸ ಮಾಡಿ: ಟ್ರಂಪ್

ಅಮೆರಿಕ–ಇರಾನ್ ನಡುವೆ ಎರಡನೇ ಸುತ್ತಿನ ಮಾತುಕತೆ ಕುರಿತ ಅನಿಶ್ಚಿತತೆ ನಡುವೆಯೇ ಅಮೆರಿಕ ಅಧ್ಯಕ್ಷರ ಕಟು ಆದೇಶ

ದುಬೈ/ಟೆಹರಾನ್ (ಎಪಿ): ‘ಹೊರ್ಮುಜ್ ಜಲಸಂಧಿಯಲ್ಲಿ ಸಂಚಾರಕ್ಕೆ ಅಡ್ಡಿ ಉಂಟು ಮಾಡುತ್ತಿರುವ ಇರಾನ್‌ನ ಸಣ್ಣ ಬೋಟ್‌ಗಳ ಮೇಲೆ ಗುಂಡುಗಳನ್ನು ಹಾರಿಸಿ, ಧ್ವಂಸಗೊಳಿಸಿ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದ ನೌಕಾಪಡೆಗೆ ಆದೇಶಿಸಿದ್ದಾರೆ.

ಈ ಮೂಲಕ ನಿರ್ಣಾಯಕವಾಗಿರುವ ಜಲಸಂಧಿಯಲ್ಲಿ ಮತ್ತೆ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗುವ ಲಕ್ಷಣಗಳು ಗೋಚರಿಸಿವೆ.

‘ಹೊರ್ಮುಜ್ ಜಲಸಂಧಿಯಲ್ಲಿ ಸಂಚರಿಸುವ ಇರಾನ್‌ನ ಸಣ್ಣ ದೋಣಿಗಳನ್ನೂ ಬಿಡಬೇಡಿ. ಅವುಗಳ ಮೇಲೆ ಗುಂಡು ಹಾರಿಸಿ ಧ್ವಂಸ ಮಾಡಿ ಎಂದು ಅಮೆರಿಕ ನೌಕಾಪಡೆಗೆ ಆದೇಶಿಸಿದ್ದೇನೆ’ ಎಂದು ಟ್ರಂಪ್ ಪೋಸ್ಟ್ ಮಾಡಿದ್ದಾರೆ.

‘ಯಾವುದೇ ಹಿಂಜರಿಕೆ ಬೇಡ. ಅವರೀಗ (ಇರಾನ್) ಜಲಸಂಧಿಯನ್ನು ತೆರವುಗೊಳಿಸುತ್ತಿದ್ದಾರೆ. ಅದು ಮುಂದುವರಿಯಬೇಕು. ತೆರವುಗೊಳಿಸುವ ಪ್ರಕ್ರಿಯೆಯ ವೇಗ ಮೂರು ಪಟ್ಟು ಹೆಚ್ಚಾಗಬೇಕು’ ಎಂದು ಅವರು ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿ ಮೂಲಕ ಭಾರತದತ್ತ ತೆರಳುತ್ತಿದ್ದ ‘ಎಪಾಮಿನೊಂಡಾಸ್’ ಮತ್ತು ‘ಎಂಎಸ್‌ಸಿ ಫ್ರಾನ್ಸೆಸ್ಕಾ’ ಹಡಗುಗಳನ್ನು ಇರಾನ್ ನೌಕಾಪಡೆ ಬುಧವಾರ ವಶಕ್ಕೆ ಪಡೆದ ದೃಶ್ಯಗಳನ್ನು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕೋರ್ (ಐಆರ್‌ಜಿಸಿ) ಗುರುವಾರ ಬಿಡುಗಡೆ ಮಾಡಿತು. ಅದರ ಬೆನ್ನಲ್ಲೇ ಟ್ರಂಪ್, ‘ಇರಾನ್‌ನ ಸಣ್ಣ ದೋಣಿಗಳನ್ನೂ ಬಿಡಬೇಡಿ’ ಎಂದು ತನ್ನ ಸೇನೆಗೆ ಸೂಚಿಸಿದ್ದಾರೆ.

ವಿಡಿಯೊದಲ್ಲಿ ಏನಿದೆ: ಇರಾನ್ ಧ್ವಜಗಳನ್ನು ಹೊಂದಿದ ಸ್ಪೀಡ್‌ಬೋಟ್‌ಗಳು ಹಡಗುಗಳ ಸಮೀಪಕ್ಕೆ ಬಂದು, ಮಾಸ್ಕ್ ಧರಿಸಿದ ಸೈನಿಕರು ರೈಫಲ್‌ಗಳೊಂದಿಗೆ ಹಡಗುಗಳನ್ನು ಹತ್ತಿ ವಶಕ್ಕೆ ಪಡೆದ ದೃಶ್ಯ ಆ ವಿಡಿಯೊದಲ್ಲಿದೆ.

ಇರಾನ್ ಸಶಸ್ತ್ರ ಪಡೆಗಳು ನೀಡಿದ ಎಚ್ಚರಿಕೆಗಳನ್ನು ನಿರ್ಲಕ್ಷಿಸಿದ ನಂತರ ಸೈನಿಕರು ಎಪಾಮಿನೊಂಡಾಸ್ ಮೇಲೆ ಗುಂಡು ಹಾರಿಸಿದರು ಎಂದು ಇರಾನ್‌ನ ‘ನೂರ್ ನ್ಯೂಸ್’ ವರದಿ ಮಾಡಿದೆ.



ಹೊರ್ಮುಜ್ ಜಲಸಂಧಿ ದಾಟಲು ಯತ್ನಿಸಿದ ಹಡಗಿನ ಮೇಲೆ ದಾಳಿ ನಡೆಸಿದ ಇರಾನ್ ನೌಕಾಪಡೆಯ ಯೋಧರು ಹಡಗನ್ನು ವಶಪಡಿಸಿಕೊಳ್ಳಲು ಮುಂದಾದ ದೃಶ್ಯ —ಎಎಫ್‌ಪಿ ಚಿತ್ರ

ಟ್ರಂಪ್ ಬೂಟಾಟಿಕೆ: ಇರಾನ್ ಅಧ್ಯಕ್ಷ ಮಸೌದ್

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ವಿರುದ್ಧ ಕದನ ವಿರಾಮವನ್ನು ವಿಸ್ತರಿಸಿರುವುದಾಗಿ ಹೇಳಿರುವುದು ಕೇವಲ ಬೂಟಾಟಿಕೆಯ ಮಾತಾಗಿದೆ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಕುಟುಕಿದ್ದಾರೆ.

‘ಒಂದೆಡೆ ಕದನ ವಿರಾಮ ವಿಸ್ತರಿಸಿ, ಇನ್ನೊಂದೆಡೆ ಬೆದರಿಕೆ, ದಿಗ್ಬಂಧನಗಳನ್ನು ಮುಂದುವರಿಸಿದರೆ ಹೇಗೆ? ಅದು ಕದನ ವಿರಾಮದ ಉಲ್ಲಂಘನೆಯಾಗಿದ್ದು, ಮಾತುಕತೆ ಮುಂದುವರಿಕೆಗೆ ಅಡ್ಡಿಯಾಗುತ್ತದೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಸಂವಾದ ಮತ್ತು ಒಪ್ಪಂದದ ಯತ್ನವನ್ನು ಇರಾನ್ ಸ್ವಾಗತಿಸುತ್ತದೆ. ಆದರೆ ಬದ್ಧತೆಗಳನ್ನು ಉಲ್ಲಂಘಿಸುವುದು, ಬೆದರಿಕೆಗಳನ್ನು ಒಡ್ಡುವುದು ಮತ್ತು ಬಂದರುಗಳ ಮೇಲೆ ದಿಗ್ಬಂಧನ ಹೇರುವುದು ಸಂವಾದಕ್ಕೆ ಪ್ರಮುಖ ಅಡೆತಡೆಗಳಾಗಿವೆ’ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ‘ಜಗತ್ತು ನಿಮ್ಮ ಬೂಟಾಟಿಕೆಯ ವಾಕ್ಚಾತುರ್ಯ, ಹಕ್ಕುಗಳು ಮತ್ತು ಕ್ರಮಗಳ ನಡುವಿನ ವಿರೋಧಾಭಾಸ ವನ್ನು ಗಮನಿಸುತ್ತಿದೆ’ ಎಂದು ಅವರು ಟ್ರಂಪ್ ಹೆಸರನ್ನು ಹೇಳದೆ ಟೀಕಿಸಿದ್ದಾರೆ.

‘ದಿಗ್ಬಂಧನ, ಬೆದರಿಕೆಗಳಿಂದ ಪೂರ್ಣ ಕದನ ವಿರಾಮ ಸಾಧ್ಯವಿಲ್ಲ. ಮೊದಲಿಗೆ ಸೇನಾ ಆಕ್ರಮಣದ ಮೂಲಕ ಗುರಿ ಸಾಧಿಸಲು ಯತ್ನಿಸಿದಿರಿ, ಆಗಲಿಲ್ಲ. ನಂತರ ಬೆದರಿಸುವ ಮೂಲಕ ಗುರಿ ಸಾಧಿಸಲು ಪ್ರಯತ್ನಿಸಿದಿರಿ, ಅದೂ ಆಗಲಿಲ್ಲ. ಈಗ ನಿಮ್ಮ ಮುಂದಿರುವ ಏಕೈಕ ಮಾರ್ಗವೆಂದರೆ ಇರಾನ್ ದೇಶದ ಹಕ್ಕುಗಳನ್ನು ಗುರುತಿಸುವುದಾಗಿದೆ’ ಎಂದು ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಪ್ರತಿಕ್ರಿಯಿಸಿದ್ದಾರೆ.

ಇಸ್ರೇಲ್–ಲೆಬನಾನ್ ನಡುವೆ ಮಾತುಕತೆ–ಬೈರೂತ್ (ಎಪಿ): ಇಸ್ರೇಲ್ ಮತ್ತು ಹಿಜ್ಬುಲ್ಲಾ ಗುಂಪಿನ ನಡುವಿನ ಕದನ ವಿರಾಮವನ್ನು ವಿಸ್ತರಿಸುವ ಕುರಿತು ಇಸ್ರೇಲ್ ಮತ್ತು ಲೆಬನಾನ್ ನಡುವೆ ಗುರುವಾರ ವಾಷಿಂಗ್ಟನ್‌ನಲ್ಲಿ ಎರಡನೇ ಸುತ್ತಿನ ಮಾತುಕತೆ ನಡೆಯಲಿದೆ.

ಅಮೆರಿಕದಲ್ಲಿನ ಲೆಬನಾನ್ ರಾಯಭಾರಿ ನಾಡಾ ಹಮಾದೆ ಮೊವಾದ್ ಮತ್ತು ಇಸ್ರೇಲ್ ರಾಯಭಾರಿ ಯೆಚಿಯಲ್ ಲೀಟರ್ ನಡುವೆ ಮಾತುಕತೆ ನಡೆಯಲಿದೆ.

ಹೊರ್ಮುಜ್: ಸುಂಕ ಸಂಗ್ರಹಿದ ಟೆಹರಾನ್

ಟೆಹರಾನ್ (ಎಎಫ್‌ಪಿ): ಹೊರ್ಮುಜ್ ಜಲಸಂಧಿ ಹಾದು ಹೋಗುವ ಹಡಗುಗಳಿಗೆ ಸುಂಕ ವಿಧಿಸುವ ಪ್ರಕ್ರಿಯೆಯನ್ನು ಇರಾನ್ ಆರಂಭಿಸಿದೆ ಎಂದು ಇರಾನ್‌ನ ಉನ್ನತ ಅಧಿಕಾರಿಯೊಬ್ಬರು ಗುರುವಾರ ಹೇಳಿದ್ದಾರೆ.

‘ಹೊರ್ಮುಜ್ ಜಲಸಂಧಿಯಿಂದ ಪಡೆದ ಮೊದಲ ಆದಾಯವನ್ನು ಸೆಂಟ್ರಲ್ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ’ ಎಂದು ಸಂಸತ್ತಿನ ಡೆಪ್ಯುಟಿ ಸ್ಪೀಕರ್ ಹಮೀದ್‌ರೆಜಾ ಹಾಜಿಬಾಬಾಯ್ ತಿಳಿಸಿದ್ದಾರೆ ಎಂದು ತಸ್ನೀಮ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಆದಾಗ್ಯೂ ಈ ಆದಾಯವನ್ನು ಯಾರು, ಹೇಗೆ ಪಾವತಿಸಿದರು ಎಂಬುದೂ ಸೇರಿದಂತೆ ಹೆಚ್ಚಿನ ಮಾಹಿತಿಯನ್ನು ಅವರು ಬಿಟ್ಟುಕೊಡಲಿಲ್ಲ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಜಲಸಂಧಿ ಮೂಲಕ ಸಾಗಲು ಇರಾನ್ ಕೆಲವೇ ಹಡಗುಗಳಿಗೆ ಅನುಮತಿಸಿದೆ ಎಂದು ಮೂಲಗಳು ತಿಳಿಸಿವೆ. ಈ ಮಾರ್ಗದ ಸಂಚಾರವು ಯುದ್ಧ ಪೂರ್ವ ಸ್ಥಿತಿಗೆ ಮರಳುವುದಿಲ್ಲ ಎಂಬುದಾಗಿ ಇರಾನ್ ಅಧಿಕಾರಿಗಳು ಎಚ್ಚರಿಸಿದ್ದಾರೆ.

ಇರಾನ್ ಸಂಸತ್ತಿನ ಭದ್ರತಾ ಆಯೋಗವು ಟೋಲ್‌ಗಳನ್ನು ವಿಧಿಸುವ ಯೋಜನೆಯನ್ನು ಅನುಮೋದಿಸಿತ್ತು ಎಂದು ಮಾರ್ಚ್ 30ರಂದು ಇರಾನ್ ಸರ್ಕಾರಿ ಮಾಧ್ಯಮ ತಿಳಿಸಿತ್ತು.

ಎರಡನೇ ಸುತ್ತಿನ ಮಾತುಕತೆಗೆ ಪಾಕ್ ಸಿದ್ಧತೆ

ಇಸ್ಲಾಮಾಬಾದ್ (ಪಿಟಿಐ): ಅಮೆರಿಕ ಮತ್ತು ಇರಾನ್ ಜತೆಗೆ ಎರಡನೇ ಸುತ್ತಿನ ಮಾತುಕತೆ ನಡೆಸುವ ಕುರಿತು ಪಾಕಿಸ್ತಾನದ ಗೃಹ ಸಚಿವ ಮೊಹಸಿನ್ ನಖ್ವಿ ಅವರು ಪಾಕಿಸ್ತಾನದಲ್ಲಿರುವ ಅಮೆರಿಕದ ರಾಜತಾಂತ್ರಿಕ ಅಧಿಕಾರಿ ನತಾಲಿ ಬೇಕರ್ ಜತೆ ಗುರುವಾರ ಸಮಾಲೋಚನೆ ನಡೆಸಿದರು.

ಈ ವಾರಾಂತ್ಯದಲ್ಲಿ ಟೆಹರಾನ್ ಮತ್ತು ವಾಷಿಂಗ್ಟನ್ ನಡುವೆ ಮಾತುಕತೆ ನಡೆಯುವಂತೆ ಮಾಡುವ ಉದ್ದೇಶವನ್ನು ಪಾಕ್ ಹೊಂದಿದೆ. ಇದಕ್ಕೆ ಪೂರಕವಾಗಿ ನತಾಲಿ ಅವರನ್ನು ಭೇಟಿಯಾದ ನಖ್ವಿ, ಭದ್ರತಾ ವ್ಯವಸ್ಥೆ ಸೇರಿದಂತೆ ಇತರ ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು.

‘ಉದ್ದೇಶಿತ ಎರಡನೇ ಸುತ್ತಿನ ಶಾಂತಿ ಮಾತುಕತೆಗೆ ಸಂಬಂಧಿಸಿದಂತೆ ಇತ್ತೀಚಿನ ಪ್ರಾದೇಶಿಕ ಸ್ಥಿತಿಗತಿ ಮತ್ತು ರಾಜತಾಂತ್ರಿಕ ಪ್ರಯತ್ನಗಳ ಕುರಿತು ಇಬ್ಬರೂ ನಾಯಕರು ಸಮಗ್ರವಾಗಿ ಚರ್ಚಿಸಿದರು’ ಎಂದು ಪಾಕ್ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಇರಾನ್ ವಿರುದ್ಧ ಕದನ ವಿರಾಮವನ್ನು ಅನಿರ್ದಿಷ್ಟಾವಧಿಗೆ ವಿಸ್ತರಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮವನ್ನು ನಖ್ವಿ ಇದೇ ವೇಳೆ ಶ್ಲಾಘಿಸಿದರು. ಇದು ಉತ್ತಮ ಬೆಳವಣಿಗೆಯಾಗಿದ್ದು, ಉದ್ವಿಗ್ನತೆ ಕಡಿಮೆಗೊಳಿಸಲು ಮಹತ್ವದ್ದಾಗಿದೆ ಎಂದು ಅವರು ವಿವರಿಸಿದರು.

‘ಇದೇ ರೀತಿ ಸಕಾರಾತ್ಮಕ ಪ್ರತಿಕ್ರಿಯೆ ಇರಾನ್ ಕಡೆಯಿಂದಲೂ ಬರುತ್ತದೆ ಎಂಬ ವಿಶ್ವಾಸವಿದೆ’ ಎಂದು ಅವರು ಭರವಸೆ ವ್ಯಕ್ತಪಡಿಸಿದರು.


‘ಸಂಘರ್ಷ ಶಮನಕ್ಕೆ ಮತ್ತು ಶಾಂತಿ ಸ್ಥಾಪನೆಗೆ ಎಲ್ಲ ಹಂತಗಳಲ್ಲೂ ಪಾಕಿಸ್ತಾನದ ನಾಯಕತ್ವ ಪ್ರಯತ್ನಿಸಲಿದೆ. ಎರಡೂ ಕಡೆಯವರಿಗೆ ರಾಜತಾಂತ್ರಿಕ ಮತ್ತು ಶಾಂತಿಯುತ ಪರಿಹಾರ ಪ್ರತಿಪಾದನೆಗೆ ಅವಕಾಶ ದೊರೆಯಲಿದೆ’ ಎಂದು ಸಚಿವರು ಹೇಳಿದರು.

ಸುದ್ದಿ 2 ನಿಮಿಷ

ಪುಸ್ತಕ ಓದದವರ ನಡುವೆ ಪುಸ್ತಕೋದ್ಯಮ: ದಳವಾಯಿ

ಮೈಸೂರು: ‘ಪುಸ್ತಕಗಳನ್ನು ಖರೀದಿಸಲು ಒಲ್ಲದ ಓದುಗರು ಮತ್ತು ವ್ಯವಸ್ಥೆಯ ನಡುವೆ ಕನ್ನಡ ಪುಸ್ತಕೋದ್ಯಮವಿದೆ’ ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಪ್ರೊ.ರಾಜಪ್ಪ ದಳವಾಯಿ ವಿಷಾದಿಸಿದರು.

ನಗರದಲ್ಲಿ ಗುರುವಾರ ವಿಶ್ವ ಪುಸ್ತಕ ದಿನದ ಅಂಗವಾಗಿ ‘ಚಿಂತನ ಚಿತ್ತಾರ’ ಪ್ರಕಾಶನ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರ ಮಳಿಗೆಯು ಏರ್ಪಡಿಸಿದ್ದ ‘ಪತ್ರಕರ್ತರು ಮತ್ತು ಪುಸ್ತಕ ಸಾಂಗತ್ಯ’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



‘ಅನುದಾನವೇ ಇಲ್ಲದ ಸಮಿತಿಗೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಲಾಗಿದೆ. ಮೊದಲಿಗೆ, ಸ್ಥಳೀಯ ಆಡಳಿತ ಸಂಸ್ಥೆಗಳು ಸಾರ್ವಜನಿಕರಿಂದ ವಸೂಲಿ ಮಾಡುವ ಗ್ರಂಥಾಲಯ ತೆರಿಗೆಯು ಇಲಾಖೆಗೆ ನೇರವಾಗಿ ಬರುವಂತಾಗಬೇಕು. ಆ ಬಗ್ಗೆ ಶೀಘ್ರ ಮುಖ್ಯಮಂತ್ರಿಯನ್ನು ಭೇಟಿ ಮಾಡಿ ಗಮನ ಸೆಳೆಯುವೆ’ ಎಂದು ಹೇಳಿದರು.

‘ಪುಸ್ತಕ ಪ್ರಕಾಶಕರ ಸಂಘವು ಮನವಿ ನೀಡಿದ್ದು, ಸಂಘದವರೊಬ್ಬರನ್ನು ಸಮಿತಿಯ ಸಹಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುವುದು’ ಎಂದರುದು ಹೇಳಿದರು.

ಪಾಸಾದ ಖುಷಿಯಲ್ಲಿ ಈಜಲು ಹೋಗಿ ಸಾವು

ಮುಳಬಾಗಿಲು (ಕೋಲಾರ): ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪಾಸಾದ ಖುಷಿಯಲ್ಲಿ ಗುರುವಾರ ಮಧ್ಯಾಹ್ನ ತಾಲ್ಲೂಕಿನ ಸೊಣ್ಣವಾಡಿ ಗ್ರಾಮದಲ್ಲಿ ಸ್ನೇಹಿತರೊಂದಿಗೆ ಈಜಲು ಹೋದ ವಿದ್ಯಾರ್ಥಿ ಬಾವಿಯಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಸೊಣ್ಣವಾಡಿ ಗ್ರಾಮದ ರಘುಪತಿ ಎಂಬುವರ ಪುತ್ರ ಕಿರಣ್ (15) ಮೃತ ವಿದ್ಯಾರ್ಥಿ. ಎಸ್‌ಎಸ್‌ಎಲ್‌ಸಿಯಲ್ಲಿ 625ಕ್ಕೆ 239 ಅಂಕಗಳನ್ನು ಪಡೆದು ಉತ್ತೀರ್ಣನಾಗಿದ್ದ. ಅದೇ ಖುಷಿಯಲ್ಲಿ ಗ್ರಾಮದ ಏಳು ಸ್ನೇಹಿತರೊಂದಿಗೆ ಈಜಲು ಹೋಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಗ್ರಾಮದ ಶಿವರಾಜ್ ಎಂಬುವವರಿಗೆ ಸೇರಿದ ಸುಮಾರು 30 ಅಡಿ ಆಳದ ಬಾವಿ ಅದು. ಕಿರಣ್‌ಗೆ ಸರಿಯಾಗಿ ಈಜು ಬರುತ್ತಿರಲಿಲ್ಲ. ಮುಳಬಾಗಿಲು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಟ್ಸ್‌ಆ್ಯಪ್ ವಿ.ವಿ ಮಾಹಿತಿ ಸ್ವೀಕಾರಾರ್ಹವಲ್ಲ: ಸುಪ್ರೀಂ

ಶಬರಿಮಲೆ ಪ್ರಕರಣದಲ್ಲಿ ನ್ಯಾಯಪೀಠದ ಅಭಿಮತ

ನವದೆಹಲಿ (ಪಿಟಿಐ): ‘ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯ’ದ ಮಾಹಿತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಶಬರಿಮಲೆ ಸೇರಿದಂತೆ ದೇಶದ ವಿವಿಧ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ನಡೆಸುತ್ತಿರುವ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ‘ದಾವೂದಿ ಬೋಹರಾ’ ಸಮುದಾಯಕ್ಕೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದೆ.



‘ದಾವೂದಿ ಬೋಹರಾ’ ಸಮುದಾಯದ ಪರವಾಗಿ ಹಾಜರಾದ ವಕೀಲ ನೀರಜ್ ಕಿಶನ್ ಕೌಲ್ ಅವರು, ‘ಧಾರ್ಮಿಕ ಪರಿಹಾರದ ವಿಷಯಗಳಲ್ಲಿ ನ್ಯಾಯಾಂಗ ನಿರ್ಬಂಧ’ಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಶಶಿ ತರೂರ್ ಬರೆದಿರುವ ಲೇಖನವೊಂದನ್ನು ಸಂವಿಧಾನ ಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು, ‘ವಿಷಯ ತಜ್ಞರು, ನ್ಯಾಯ ಪರಿಣತರು ಮತ್ತು ಎಲ್ಲರ ಅಭಿಪ್ರಾಯಗಳನ್ನು ನಾವು ಗೌರವಿಸುತ್ತೇವೆ. ಆದರೆ, ವೈಯಕ್ತಿಕ ಅಭಿಪ್ರಾಯವು ಯಾವತ್ತೂ ವೈಯಕ್ತಿಕ ಅಭಿಪ್ರಾಯವೇ ಆಗಿದೆ’ ಎಂದರು.

‘ಜ್ಞಾನ ಮತ್ತು ವಿವೇಕವು ಯಾವುದೇ ಮೂಲ, ಯಾವುದೇ ದೇಶ, ಯಾವುದೇ ವಿಶ್ವವಿದ್ಯಾಲಯದಿಂದ ಬಂದರೂ ಸ್ವಾಗತಿಸಬೇಕು, ಇದರಿಂದ ಯಾವುದೇ ಹಾನಿ ಇಲ್ಲ’ ಎಂದು ವಕೀಲ ಕೌಲ್ ಪೀಠಕ್ಕೆ ತಿಳಿಸಿದರು.

ಇದಕ್ಕೆ ಲಘುವಾಗಿ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ‘ಆದರೆ, ವಾಟ್ಸ್‌ಆ್ಯಪ್ ವಿಶ್ವವಿದ್ಯಾಲಯದ ಮಾಹಿತಿ ಒಪ್ಪಲು ಆಗುವುದಿಲ್ಲ’ ಎಂದರು.

‘ನಾನು ಯಾವ ವಿಶ್ವವಿದ್ಯಾಲಯ ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನುವುದರ ಬಗ್ಗೆ ಮಾತನಾಡುತ್ತಿಲ್ಲ. ಅದಕ್ಕೂ ಈ ಚರ್ಚೆಗೂ ಸಂಬಂಧವಿಲ್ಲ. ಜ್ಞಾನ ಮತ್ತು ಮಾಹಿತಿ ಯಾವುದೇ ಮೂಲದಿಂದ ಬಂದರೂ ಅದನ್ನು ಒಪ್ಪಿಕೊಳ್ಳಬೇಕು’ ಎಂದು ಕೌಲ್ ಮನವಿ ಮಾಡಿದರು.

‘ಧಾರ್ಮಿಕ ಪಂಗಡದ ನಿರ್ದಿಷ್ಟ ಆಚರಣೆಯನ್ನು ಅಗತ್ಯ ಮತ್ತು ಅನಿವಾರ್ಯವಲ್ಲ ಎಂದು ಘೋಷಿಸಲು ಮಾನದಂಡಗಳನ್ನು ನಿರ್ಣಯಿಸುವುದು ನ್ಯಾಯಾಲಯಕ್ಕೆ ಅಸಾಧ್ಯವಲ್ಲದಿದ್ದರೂ ಕಷ್ಟಕರ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿತ್ತು.

ತಕ್ಷಣವೇ ಒಎಂಆರ್ ಶೀಟ್ ಅಪ್‌ಲೋಡ್

ಪ್ರಜಾವಾಣಿ ವಾರ್ತೆ

ಸಿಇಟಿ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೊದಲ ದಿನ ಸುಸೂತ್ರವಾಗಿ ನೆರವೇರಿತು.

ರಾಜ್ಯದ 745 ಕೇಂದ್ರಗಳಲ್ಲಿ ನಡೆದ ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ವಿಷಯಗಳ ಪರೀಕ್ಷೆಗೆ ಶೇ 96 ಅಭ್ಯರ್ಥಿಗಳು ಹಾಜರಾಗಿದ್ದರು. ಪರೀಕ್ಷೆ ಮುಗಿದ ಒಂದು ಗಂಟೆಯ ಒಳಗೆ ಒಎಂಆರ್ ಶೀಟ್‌ಗಳನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಕೊನೆ ಕ್ಷಣದಲ್ಲಿ ಪ್ರವೇಶ ಪತ್ರ ಇಲ್ಲದೆ ಪರದಾಡಿದ, ನಿಗದಿತ ಪರೀಕ್ಷಾ ಕೇಂದ್ರಕ್ಕೆ ಹೋಗದೆ ಬೇರೊಂದು ಕೇಂದ್ರಕ್ಕೆ ಹೋಗಿದ್ದ ಅಭ್ಯರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಪರೀಕ್ಷೆ ಬರೆಯಿಸುವಲ್ಲಿ ಪರೀಕ್ಷಾ ಸಿಬ್ಬಂದಿ ಯಶಸ್ವಿಯಾಗಿದ್ದಾರೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ತಿಳಿಸಿದ್ದಾರೆ.

ಮಹಾಲಕ್ಷ್ಮಿ ಲೇಔಟ್‌ನ ಬಿಜಿಎಸ್ ಪಿಯು ಕಾಲೇಜಿನಲ್ಲಿ ಪರೀಕ್ಷೆ ಬರೆಯಬೇಕಿದ್ದ ಅನ್ವಿ ಸೋಜನ್ ಕೆಂಗೇರಿ ಸಮೀಪದ ಬಿಜಿಎಸ್ ಗ್ಲೋಬಲ್ ಕಾಲೇಜಿಗೆ ಹೋಗಿದ್ದರು. ಮಹಾಲಕ್ಷ್ಮಿ ಲೇಔಟ್ ಕಾಲೇಜಿಗೆ ಹೋಗಲು ತಡವಾಗುತ್ತದೆ ಎನ್ನುವ ಕಾರಣಕ್ಕೆ ಕೆಂಗೇರಿಯಲ್ಲೇ ವ್ಯವಸ್ಥೆ ಮಾಡಿಸಿ, ಪರೀಕ್ಷೆ ಬರೆಯಿಸಲಾಗಿದೆ. ಸಾಗರದ ಕಾಲೇಜಿನಲ್ಲಿ ಪರೀಕ್ಷೆ ಬರೆಯಬೇಕಿದ್ದ ಚಿನ್ಮಯಿ ಶಿವಮೊಗ್ಗದ ವಿಜ್ಞಾನ ಕಾಲೇಜಿಗೆ ಹೋಗಿದ್ದರು. ಕಾಲೇಜಿನ ಪ್ರಾಂಶುಪಾಲರು ಅಲ್ಲೇ ಇದ್ದ ವೀಕ್ಷಕರ ಕಾರಿನಲ್ಲಿ ಆ ಅಭ್ಯರ್ಥಿಯನ್ನು ಸಾಗರಕ್ಕೆ ಕಳುಹಿಸಿ, ಪರೀಕ್ಷೆ ಬರೆಯಲು ನೆರವಾಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಕೆಲವೆಡೆ ಘರ್ಷಣೆ, ಪ್ರತಿಭಟನೆ, ಮಾತಿನ ಚಕಮಕಿ ಹೊರತುಪಡಿಸಿದರೆ ಬಹುತೇಕ ಶಾಂತಿಯುತ

ಬಂಗಾಳ, ತಮಿಳುನಾಡು: ದಾಖಲೆ ಮತದಾನ

ಕೋಲ್ಕತ್ತ/ ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭೆಯ ಎಲ್ಲ 234 ಸ್ಥಾನಗಳು ಹಾಗೂ ಪಶ್ಚಿಮ ಬಂಗಾಳ ವಿಧಾನಸಭೆಯ 152 ಸ್ಥಾನಗಳಿಗೆ ಗುರುವಾರ ದಾಖಲೆಯ ಮತದಾನ ನಡೆಯಿತು.

ಪಶ್ಚಿಮ ಬಂಗಾಳದ ಕೆಲವೆಡೆ ಘರ್ಷಣೆ, ಪ್ರತಿಭಟನೆ ಮತ್ತು ಅಭ್ಯರ್ಥಿಯ ಮೇಲೆ ಹಲ್ಲೆ ನಡೆಸಿದ ಘಟನೆಗಳು ವರದಿಯಾಗಿವೆ. ಬಂಗಾಳದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಅದರ ನೆರಳಿನಲ್ಲೇ ನಡೆದ ಮತದಾನದಲ್ಲಿ ಮತದಾರರು ಭಾರಿ ಉತ್ಸಾಹ ತೋರಿದರು.

ಬಂಗಾಳದಲ್ಲಿ 16 ಜಿಲ್ಲೆಗಳ 152 ಕ್ಷೇತ್ರಗಳಾದ್ಯಂತ ಬೆಳಿಗ್ಗೆಯಿಂದಲೇ ಮತದಾರರು ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದರು. ಬೆಳಿಗ್ಗೆ 11ಕ್ಕೆ ಶೇ 41, ಮಧ್ಯಾಹ್ನ 1ರ ವೇಳೆಗೆ ಶೇ 62.18 ಮತ್ತು 3ರ ವೇಳೆಗೆ ಶೇ 78ರಷ್ಟು ಮತದಾನ ದಾಖಲಾಯಿತು. ಆ ಬಳಿಕವೂ ತುರುಸಿನ ಮತದಾನ ನಡೆದು ಮತದಾನ ಒಟ್ಟು ಪ್ರಮಾಣ ಶೇಕಡ 90ರ ಗಡಿ ದಾಟಿತು.

ಬೀರ್‌ಭೂಮ್ ಜಿಲ್ಲೆಯ ಖೊಯ್‌ರಸೋಲ್ ಎಂಬಲ್ಲಿ ಮತದಾನ ಕೊನೆಗೊಳ್ಳಲು ಕೆಲವೇ ಗಂಟೆಗಳಿರುವಾಗ ಚುನಾವಣಾ ಅಧಿಕಾರಿಗಳು ಮತ್ತು ಮತದಾರರ ನಡುವೆ ಸಂಘರ್ಷ ನಡೆಯಿತು. ಟಿಎಂಸಿಗೆ ಹಾಕಿದ ಮತಗಳು ಬಿಜೆಪಿಗೆ ಬೀಳುತ್ತಿವೆ ಎಂದು ಕೆಲವು ಮತದಾರರು ಆರೋಪಿಸಿದ್ದು, ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಸಿತು.

ಚುನಾವಣಾ ಅಧಿಕಾರಿಗಳ ಜತೆ ಮಾತಿನ ಚಕಮಕಿ ನಡೆಸಿದ ಮತದಾರರು ಮತಗಟ್ಟೆ ಬಳಿ ಪ್ರತಿಭಟನೆ ನಡೆಸಿದರು. ಪೊಲೀಸರು ಬಲ ಪ್ರಯೋಗಿಸಿ ಪ್ರತಿಭಟನಕಾರರನ್ನು ಚದುರಿಸಿದರು. ಆ ಬಳಿಕ ಸ್ಥಳದಲ್ಲಿ ಕಲ್ಲುತೂರಾಟ ನಡೆಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಮುರ್ಶಿದಾಬಾದ್ ಜಿಲ್ಲೆಯ ನಾವೊದಾದಲ್ಲಿ ಆಮ್ ಜನತಾ ಉನ್ನಯನ್ ಪಾರ್ಟಿ (ಎಜೆಯುಪಿ) ಮತ್ತು ಆಡಳಿತಾರೂಢ ಟಿಎಂಸಿ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆಯಿತು. ಪೊಲೀಸರು ಮತ್ತು ಕೇಂದ್ರ ಮೀಸಲು ಪಡೆ ಸಿಬ್ಬಂದಿ ಜನರ ಗುಂಪನ್ನು ಚದುರಿಸಲು ಲಾಠಿ ಚಾರ್ಜ್ ಮಾಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಂದಿಗ್ರಾಮದಲ್ಲಿ ಮತ ಚಲಾಯಿಸಿದ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ, ‘ಮತದಾರರನ್ನು ಬೆದರಿಸಲು ಟಿಎಂಸಿಯು ಕ್ರಿಮಿನಲ್‌ಗಳನ್ನು ಬಳಸಿಕೊಂಡಿದೆ’ ಎಂದು ಆರೋಪಿಸಿದ್ದಾರೆ. ಅದಕ್ಕೆ ಟಿಎಂಸಿ ತಿರುಗೇಟು ನೀಡಿದ್ದು, ಶಾಂತಿಯುತ ಮತದಾನಕ್ಕೆ ಅಡ್ಡಿಪಡಿಸಲು ಬಿಜೆಪಿ ಪ್ರಯತ್ನಿಸಿದೆ ಎಂದು ದೂರಿದೆ. ಬಂಗಾಳ ದಲ್ಲಿ ಎರಡನೇ ಹಂತದ ಮತದಾನ ಏಪ್ರಿಲ್ 29ರಂದು ನಡೆಯಲಿದೆ.

ತಮಿಳುನಾಡು– ದಾಖಲೆ ಮತದಾನ: ತಮಿಳುನಾಡಿನ 234 ವಿಧಾನಸಭಾ ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ನಡೆದ ಮತದಾನ ಶಾಂತಿಯುತವಾಗಿತ್ತು. ರಾಜ್ಯವು ಈ ಬಾರಿ ದಾಖಲೆಯ ಮತದಾನಕ್ಕೆ ಸಾಕ್ಷಿಯಾಯಿತು.

ತಮಿಳುನಾಡು ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಕೆ.ಅಣ್ಣಾಮಲೈ ಅವರು, ‘ಚುನಾವಣೆಯಲ್ಲಿ ಭಾರಿ ಅಕ್ರಮ ನಡೆದಿದೆ’ ಎಂದು ಆರೋಪಿಸಿದ್ದು, ‘ಮತದಾರರಿಗೆ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸುವಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ’ ಎಂದು ಟೀಕಿಸಿದ್ದಾರೆ.

ಬಿಜೆಪಿ ಅಭ್ಯರ್ಥಿ ಮೇಲೆ ಹಲ್ಲೆ

ಬಂಗಾಳದ ದಕ್ಷಿಣ ದಿನಾಜ್‌ಪುರದ ಕುಮಾರಗಂಜ್‌ನಲ್ಲಿ ತನ್ನ ಅಭ್ಯರ್ಥಿ ಸುವೇಂದು ಸರ್ಕಾರ್ ಅವರ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

‘ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರ ಎದುರಲ್ಲೇ ಹಲ್ಲೆ ನಡೆದಿದೆ’ ಎಂದು ಪಕ್ಷದ ನಾಯಕರೊಬ್ಬರು ದೂರಿದ್ದಾರೆ. ಘಟನೆಯ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ವಿಡಿಯೊ ದೃಶ್ಯಾವಳಿ ಪರಿಶೀಲಿಸಿ ಆರೋಪಿಗಳನ್ನು ಗುರುತಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಭ್ಯರ್ಥಿ ಕಾರಿಗೆ ಕಲ್ಲು: ಅಸನ್‌ಸೋಲ್ ದಕ್ಷಿಣ ಕ್ಷೇತ್ರದ ರಹಮತ್ ನಗರದ ಬಳಿ ಬಿಜೆಪಿ ಅಭ್ಯರ್ಥಿ ಅಗ್ನಿಮಿತ್ರ ಪೌಲ್ ಅವರ ಕಾರಿಗೆ ಕಲ್ಲುತೂರಿದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ‘ಮತಗಟ್ಟೆಯೊಂದರಿಂದ ವಾಪಸ್ ಹೋಗುತ್ತಿದ್ದಾಗ ನನ್ನ ಕಾರಿನ ಮೇಲೆ ಕಲ್ಲು ಎಸೆಯಲಾಗಿದ್ದು, ಹಿಂಭಾಗದ ಗಾಜು ಒಡೆದಿದೆ. ಈ ಕೃತ್ಯದ ಹಿಂದೆ ಯಾರಿದ್ದಾರೆ ಎಂಬುದು ಸ್ಪಷ್ಟ’ ಎಂದು ಅಗ್ನಿಮಿತ್ರ ಸುದ್ದಿಗಾರರಿಗೆ ತಿಳಿಸಿದರು.



ಬಿಜೆಪಿ ಅಭ್ಯರ್ಥಿ ಸುವೇಂದು ಸರ್ಕಾರ್ ಮೇಲೆ ಹಲ್ಲೆ ನಡೆದ ದೃಶ್ಯ —ಪಿಟಿಐ ಚಿತ್ರ

ಮೊದಲ ಹಂತದಲ್ಲಿ ಭಾರಿ ಪ್ರಮಾಣದ ಮತದಾನ ನಡೆದಿರುವುದು ಪಶ್ಚಿಮ ಬಂಗಾಳದಲ್ಲಿ ‘ಬದಲಾವಣೆಯ ಜನಾದೇಶ’ ಖಚಿತ ಎಂಬುದನ್ನು ಸೂಚಿಸುತ್ತದೆ
ನರೇಂದ್ರ ಮೋದಿ, ಪ್ರಧಾನಿ

ಮತದಾನದ ಶೇಕಡಾವಾರು ಪ್ರಮಾಣ ಹೆಚ್ಚಾಗಿರುವುದು ಜನರ ಬೆಂಬಲವು ಮಮತಾ ಬ್ಯಾನರ್ಜಿ ಅವರ ಪರವಾಗಿರುವುದನ್ನು ತೋರಿಸುತ್ತದೆ
ಕುನಾಲ್ ಘೋಷ್, ಟಿಎಂಸಿ ವಕ್ತಾರ

ಬಂಗಾಳ: ಕಾರ್ಯಕರ್ತರ ಜಟಾಪಟಿ

- ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ಮಾತಾಭಂಗಾದಲ್ಲಿ ಟಿಎಂಸಿ–ಬಿಜೆಪಿ ಕಾರ್ಯಕರ್ತರು ಮಾತಿನ ಚಕಮಕಿ ನಡೆಸಿದ್ದಾರೆ.
- ಕೂಚ್ ಬಿಹಾರ್ ನಗರದ ಕೆಲವು ಮತಗಟ್ಟೆಗಳ ಬಳಿ ಟಿಎಂಸಿ ಕಾರ್ಯಕರ್ತರು ಮತದಾನಕ್ಕೆ ಅಡ್ಡಿಪಡಿಸಲು ರಸ್ತೆ ತಡೆ ನಡೆಸಿದ ಆರೋಪ ಕೇಳಿಬಂದಿದ್ದು, ಭದ್ರತಾ ಸಿಬ್ಬಂದಿ ಅವರನ್ನು ಚದುರಿಸಿದ್ದಾರೆ
- ಬೀರ್‌ಭೂಮ್ ಜಿಲ್ಲೆಯ ಲಾಭಪುರ ಮತ್ತು ಮಾಲ್ಡಾದ ಚಂಚಲ್‌ನಲ್ಲಿ ಬಿಜೆಪಿಯ ಬೂತ್ ಏಜೆಂಟ್ ಮೇಲೆ ಹಲ್ಲೆ ಘಟನೆ ನಡೆದಿದೆ
- ಮುರಾರಾಯ್ ಎಂಬಲ್ಲಿ ಕಾಂಗ್ರೆಸ್ ಮತ್ತು ಟಿಎಂಸಿ ಕಾರ್ಯಕರ್ತರ ನಡುವಿನ ಘರ್ಷಣೆಯಲ್ಲಿ ಇಬ್ಬರು ಗಾಯಗೊಂಡಿದ್ದಾರೆ



ಚೆನ್ನೈನ ಮತಗಟ್ಟೆಯೊಂದರಲ್ಲಿ ಸರತಿಯ ಸಾಲಿನಲ್ಲಿ ನಿಂತಿದ್ದ ಮಹಿಳೆಯರು ಮತದಾರರ ಗುರುತಿನ ಚೀಟಿ ಪ್ರದರ್ಶಿಸಿದರು —ಪಿಟಿಐ ಚಿತ್ರ

ವಿದೇಶಿ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣದ ವಿರುದ್ಧ ಜಿಲ್ಲಾಧಿಕಾರಿ ಕ್ರಮ

ವಿಲ್ಲಾ ಹೋಂಸ್ಟೇ ನೋಂದಣಿ ರದ್ದು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಕೇರಳ ಗಡಿ ಭಾಗ ಕುಟ್ಟ ಸಮೀಪದ ವಿಲ್ಲಾ ಹೋಂಸ್ಟೇನಲ್ಲಿ ವಿದೇಶಿ ಮಹಿಳೆಯೊಬ್ಬರ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ, ಆ ಹೋಂಸ್ಟೇ ನೋಂದಣಿಯನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್.ಜೆ.ಸೋಮಶೇಖರ್ ಆದೇಶ ಹೊರಡಿಸಿದ್ದಾರೆ.

ಈ ಹೋಂಸ್ಟೇಗೆ ಪಿ.ಎ. ಪೊನ್ನಪ್ಪ ಎಂಬುವವರ ಹೆಸರಿನಲ್ಲಿ ಪರವಾನಗಿ ಪಡೆದಿದ್ದು, ಅದರ ಅವಧಿ 2029ರವರೆಗೂ ಇತ್ತು. ಆದರೆ, ಈಗ ಹೋಂಸ್ಟೇ ವಿರುದ್ಧ ಆರೋಪ ಕೇಳಿ ಬಂದಿದ್ದು ಅವರನ್ನು ಬಂಧಿಸಲಾಗಿದೆ. ಹೀಗಾಗಿ, ಈ ನೋಂದಣಿ ರದ್ದುಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

ಘಟನೆ ಬಳಿಕ ಎಚ್ಚೆತ್ತಿರುವ ಜಿಲ್ಲಾ ಪೊಲೀಸರು ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಭೆ ನಡೆಸಲು ತೀರ್ಮಾನಿಸಿದ್ದಾರೆ. ‘ಈಗಾಗಲೇ ಹೋಂಸ್ಟೇಗಳಿಗೆ ನೀಡಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು(ಎಸ್‌ಒಪಿ) ಸಮರ್ಪಕವಾಗಿ ಪಾಲನೆಯಾಗದ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ. ಎಲ್ಲ ಹೋಂಸ್ಟೇ ಮಾಲೀಕರಿಗೆ ಕಠಿಣ ಎಚ್ಚರಿಕೆ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಹೊರರಾಜ್ಯದ ಕಾರ್ಮಿಕರು ಬಹುತೇಕ ಎಲ್ಲ ರೆಸಾರ್ಟ್, ಹೋಟೆಲ್, ಹೋಂಸ್ಟೇಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಹಿನ್ನೆಲೆ ಪರಿಶೀಲಿಸದ ಮಾಲೀಕರು, ಕಡಿಮೆ ವೇತನಕ್ಕೆ ಒಪ್ಪುತ್ತಾರೆ ಎಂಬ ಕಾರಣಕ್ಕೆ ಎಗ್ಗಿಲ್ಲದೇ ಅವರನ್ನೇ ನೇಮಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಅಸ್ಸಾಂ ಸೇರಿ ಹೊರರಾಜ್ಯದ ಕಾರ್ಮಿಕರಿಂದ ಹೆಚ್ಚಿನ ಪ್ರಮಾಣದಲ್ಲಿ ಅಪರಾಧ ಕೃತ್ಯಗಳು ನಡೆದಿವೆ. ಹೀಗಿದ್ದರೂ, ಮಾಲೀಕರು ಸ್ಥಳೀಯ ಕಾರ್ಮಿಕರನ್ನು ನಿರ್ಲಕ್ಷಿಸಿ, ಹೊರರಾಜ್ಯದವರಿಗೆ ಆದ್ಯತೆ ನೀಡುತ್ತಿದ್ದಾರೆಂದು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಕೊಡಗು ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಹಾಗೂ ವಕೀಲ ಅಚ್ಚಂಡೀರ ಪವನ್ ಪೆಮ್ಮಯ್ಯ, ‘ಹೊರ ರಾಜ್ಯದ ಕಾರ್ಮಿಕರಿಂದ ಇನ್ನೆಷ್ಟು ಅಪರಾಧಗಳು ನಡೆಯಬೇಕು? ಈ ಘಟನೆಯಿಂದ ಎಚ್ಚೆತ್ತುಕೊಂಡು ಎಲ್ಲ ಮಾಲೀಕರೂ ಹೊರರಾಜ್ಯದವರ ಪೂರ್ವಾಪರ ಪರಿಶೀಲಿಸಿ ಕೆಲಸಕ್ಕೆ ತೆಗೆದುಕೊಳ್ಳಬೇಕು. ಅವರ ಮೇಲೆ ನಿಗಾ ಇರಿಸಬೇಕು’ ಎಂದು ಒತ್ತಾಯಿಸಿದರು.

‘ಹೊರರಾಜ್ಯದವರ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿದ ಬಳಿಕವೇ ನೇಮಿಸಿಕೊಳ್ಳಬೇಕು ಎಂದು ಪ್ರತಿ ಸಭೆಯಲ್ಲಿ ಸೂಚಿಸಿದರೂ ಸಮರ್ಪಕವಾಗಿ ಪಾಲನೆಯಾಗುತ್ತಿಲ್ಲ. ಶೀಘ್ರವೇ ಪ್ರವಾಸೋದ್ಯಮ ಇಲಾಖೆಯೊಂದಿಗೆ ಸಭೆ ನಡೆಸಲಾಗುವುದು’ ಎಂದು ಎಸ್.ಪಿ ಆರ್.ಎನ್.ಬಿಂದುಮಣಿ ತಿಳಿಸಿದರು.

‘ಸಂತ್ರಸ್ತ ಮಹಿಳೆ ಈಗ ಎಲ್ಲಿದ್ದಾರೆ, ಅವರು ಅಮೆರಿಕಕ್ಕೆ ಯಾವಾಗ ತೆರಳಲಿದ್ದಾರೆ ಎಂಬ ಕುರಿತು ಮಾಹಿತಿ ನೀಡಲು ಸಾಧ್ಯವಿಲ್ಲ’ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸ್ ವೈಫಲ್ಯ?

‘ವಿದೇಶಿ ಮಹಿಳೆಗೆ ಜಾರ್ಖಂಡ್ ರಾಜ್ಯದ ಕಾರ್ಮಿಕ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಪೊಲೀಸ್ ವೈಫಲ್ಯವಾಗಿದೆ’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ನಡೆದಿರುವ ಚರ್ಚೆಗೆ ಪ್ರತಿಕ್ರಿಯಿಸಿರುವ ಪೊಲೀಸರು, ‘ಪ್ರಕರಣ ಗೊತ್ತಾದ ಕೂಡಲೆ ಮುಖ್ಯ ಆರೋಪಿಯನ್ನು ಹಾಗೂ ಹೋಂಸ್ಟೇ ಮಾಲೀಕನನ್ನೂ ಬಂಧಿಸಲಾಗಿದೆ. ಹೀಗಿರುವಾಗ, ಪೊಲೀಸ್ ವೈಫಲ್ಯ ಎಲ್ಲಿ?’ ಎಂದು ಪ್ರಶ್ನಿಸುತ್ತಾರೆ.

‘ಲೈಂಗಿಕ ಕಿರುಕುಳ ಪ್ರಕರಣವಾಗಿರುವುದರಿಂದ ಹೆಚ್ಚಿನ ಮಾಹಿತಿ ನೀಡಲಾಗದು. ಎಲ್ಲ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದಷ್ಟೇ ಪೊಲೀಸರು ಹೇಳುತ್ತಿದ್ದಾರೆ.

‘ಎಸ್‌ಐಆರ್: ಪ್ರಜಾತಂತ್ರ ಕೊಲ್ಲುವ ಅಸ್ತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ, ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟದ (ಕರ್ನಾಟಕ) ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಬೃಹತ್ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಭಾಗಗಳ ಜನರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈವರೆಗೆ 13 ರಾಜ್ಯಗಳ 6.50 ಕೋಟಿ ಜನರ ಮತದಾನದ ಹಕ್ಕು ಕಸಿದುಕೊಳ್ಳಲಾಗಿದೆ. ಕರ್ನಾಟಕ ಸೇರಿ ಇತರೆ ರಾಜ್ಯಗಳಲ್ಲಿ ಎಸ್‌ಐಆರ್ ಆರಂಭಿಸಲು ಪ್ರಕ್ರಿಯೆ ಆರಂಭಿಸಲಾಗಿದೆ. ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆ ಮುಕ್ತಾಯಗೊಳ್ಳದೇ ರಾಜ್ಯದಲ್ಲಿ ಈ ಪ್ರಕ್ರಿಯೆ ಆರಂಭಿಸಬಾರದು ಎಂದು ಸಮಾವೇಶವು ಒತ್ತಾಯಿಸಿತು. ‘ಪಶ್ಚಿಮ ಬಂಗಾಳದ ಜತೆಗೆ ಕರ್ನಾಟಕ’ ಎಂಬ ಘೋಷಣೆ ಕೂಗಲಾಯಿತು.

‘ಪ್ರಜಾತಂತ್ರದ ಕಗ್ಗೊಲೆಯನ್ನು ಕರ್ನಾಟಕ ಸಹಿಸುವುದಿಲ್ಲ. ಅರ್ಹ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕುವುದಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಮುಖಂಡರು ಎಚ್ಚರಿಸಿದರು.

ಎಸ್‌ಐಆರ್ ಎಂಬುದು ‘ಪ್ರಜಾತಂತ್ರ ಕೊಲ್ಲುವ ಅಸ್ತ್ರ’ ಎಂದು ಪ್ರತಿಭಟನಕಾರರು ಕಿಡಿಕಾರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ಮಾತನಾಡಿ, ‘ಆರೂವರೆ ಕೋಟಿ ಮತದಾರರ ಹಕ್ಕು ಕಸಿದುಕೊಳ್ಳಲಾಗಿದೆ. ಮತ್ತೆ ಅಧಿಕಾರಕ್ಕೆ ಬರಲು ಬಿಜೆಪಿ ಈ ರೀತಿ ಷಡ್ಯಂತ್ರ ರೂಪಿಸಿದೆ’ ಎಂದರು.

ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ನಸೀರ್ ಅಹಮದ್ ಹಾಗೂ ‘ಎದ್ದೇಳು ಕರ್ನಾಟಕ’ದ ಮುಖಂಡ ನೂರ್ ಶ್ರೀಧರ್ ಮಾತನಾಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ‘ನಮ್ಮ ಮತ ನಮ್ಮ ಹಕ್ಕು’ ವೇದಿಕೆಯ ಬಿ.ಶ್ರೀಪಾದ್ ಭಟ್, ಪಶ್ಚಿಮ ಬಂಗಾಳದ ಶೇಖ್ ಫರೀದುಲ್ಲಾ ಇಸ್ಲಾಂ, ರೈತ ಮುಖಂಡ ಬಡಗಲಪುರ ನಾಗೇಂದ್ರ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್.ದ್ವಾರಕನಾಥ್, ಕಮ್ಯುನಿಸ್ಟ್ ಪಕ್ಷದ ಮುಖಂಡ ಸಿದ್ದನಗೌಡ ಪಾಟೀಲ್, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಕರ್ನಾಟಕ ಜನಶಕ್ತಿಯ ಮಲ್ಲಿಗೆ ಸಿರಿಮನೆ, ಎಸ್‌ಡಿಪಿಐ ರಾಜ್ಯ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಮೊದಲಾದವರು ಪಾಲ್ಗೊಂಡಿದ್ದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ನಡೆದ ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು — ಪ್ರಜಾವಾಣಿ ಚಿತ್ರ

ಜಾಗೃತಿಗೆ ಬಿಜೆಪಿ ಸಿದ್ಧತೆ

ಬೆಂಗಳೂರು: ಕರ್ನಾಟಕದಲ್ಲಿ ಶೀಘ್ರವೇ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗಲಿದ್ದು, ಈ ಬಗ್ಗೆ ಪಕ್ಷದ ಕಾರ್ಯಕರ್ತರಲ್ಲಿ ಜಾಗೃತಿ ಮೂಡಿಸಲು ಸಿದ್ಧತೆ ಮಾಡಿಕೊಳ್ಳಿ’ ಎಂದು ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಸೂಚಿಸಿದ್ದಾರೆ.

‘ಪಕ್ಷದ ಪದಾಧಿಕಾರಿಗಳ ಜತೆ ಗುರುವಾರ ನಡೆಸಿದ ಸಭೆಯ ವೇಳೆ ಅವರು ಈ ಸೂಚನೆ ನೀಡಿದ್ದಾರೆ’ ಎಂದು ಮೂಲಗಳು ಖಚಿತಪಡಿಸಿವೆ. ‘ಎಸ್‌ಐಆರ್ ಪ್ರಕ್ರಿಯೆಯನ್ನು ಚುನಾವಣಾ ಆಯೋಗವೇ ನಡೆಸುತ್ತದೆ. ಆದರೆ ಮತದಾರರು ಪಟ್ಟಿಯಿಂದ ಕೈಬಿಟ್ಟುಹೋಗದಂತೆ ನೋಡಿಕೊಳ್ಳಬೇಕಿದೆ. ಹೀಗಾಗಿ ಈಗಿನಿಂದಲೇ ಮತಗಟ್ಟೆ ಏಜೆಂಟರನ್ನು ಗುರುತಿಸಿ, ಜಾಗೃತಿ ಮೂಡಿಸುವಂತೆ ಅವರು ಹೇಳಿದ್ದಾರೆ’ ಎಂದು ಮೂಲಗಳು ಹೇಳಿವೆ.



ಸಂಜು ಶತಕ
ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟರ್ ಸಂಜು ಸ್ಯಾಮ್ಸನ್ (ಔಟಾಗದೇ 101; 54ಎ) ಅವರು ಗುರುವಾರ ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಶತಕ ಬಾರಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 77,664 | ನಿಫ್ಟಿ 24,173 | ಚಿನ್ನ (Std. 10g) ₹1,58,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,59,500 (ಬೆಂಗಳೂರು)

ಆಪ್ತರ ಜೊತೆ ಸಿ.ಎಂ 'ಔತಣಕೂಟ' ವಿವರ ಪುಟ 5

ತ್ರಿಶ್ಶೂರ್: ಪಟಾಕಿ ನಿಷೇಧ ವಿವರ ಪುಟ 4B

10ರ ಫಲಿತಾಂಶ ನೂರರ ಹತ್ತಿರ

ಎಸ್‌ಎಸ್‌ಎಲ್‌ಸಿ: ವಿದ್ಯಾರ್ಥಿಗಳ ಯಶಸ್ಸು ಶೇ 94.1ಕ್ಕೆ ಜಿಗಿತ
34 ಶೈಕ್ಷಣಿಕ ಜಿಲ್ಲೆಗಳ ಸಾಧನೆ ಶೇ 90ಕ್ಕೂ ಅಧಿಕ
ಶೂನ್ಯ ಫಲಿತಾಂಶ ಇಲ್ಲದ್ದು ಸರ್ಕಾರಿ ಶಾಲೆಗಳ ಹೆಗ್ಗಳಿಕೆ

ಶೂನ್ಯ ಫಲಿತಾಂಶ ಪಡೆದ ಶಾಲೆಗಳು	22	00	05
	ಖಾಸಗಿ	ಸರ್ಕಾರಿ	ಅನುದಾನಿತ

625/625 ಅಂಕ ಪಡೆದವರು



ಬೃಂದಾ ಎಂ. | ಭರತ್ ಜಿ. | ಪ್ರೀತಮ್ ಜಿ ಪೂಜಾರಿ | ಸೌಜನ್ಯ ಕಂದಕೂರ | ಸುಖದೇವ | ಪ್ರಾರ್ಥನಾ | ಧನುಶ್ ಸುಧೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಫಲಿತಾಂಶ ಗುರುವಾರ ಪ್ರಕಟವಾಗಿದ್ದು, ವಿದ್ಯಾರ್ಥಿಗಳ ಯಶಸ್ಸಿನ ಮಟ್ಟ ಶೇ 94.1ಕ್ಕೆ ಜಿಗಿದಿದೆ. ಪ್ರೌಢಶಿಕ್ಷಣ ಇಲಾಖೆಯು ಈ ಬಾರಿ ಶೇಕಡಾವಾರು ಶ್ರೇಯಾಂಕವು ಹೊಸ ಚರಿತ್ರೆಯನ್ನೇ ಸೃಷ್ಟಿಸಿದೆ.

ಪರೀಕ್ಷೆ ಬರೆದಿದ್ದ 2025–26ನೇ ಸಾಲಿನ 7.70 ಲಕ್ಷ ಹೊಸ ವಿದ್ಯಾರ್ಥಿಗಳಲ್ಲಿ 7.24 ಲಕ್ಷ ವಿದ್ಯಾರ್ಥಿಗಳು (ಶೇ 94.1) ತೇರ್ಗಡೆಯಾಗಿದ್ದಾರೆ. ಕಳೆದ ಸಾಲಿನ ಫಲಿತಾಂಶಕ್ಕೆ ಹೋಲಿಸಿದರೆ (80.4) ಶೇ 13.7ರಷ್ಟು ಫಲಿತಾಂಶ ಹೆಚ್ಚಳವಾಗಿದೆ. ರಾಜ್ಯದ ಪ್ರತಿ ಜಿಲ್ಲೆಯ ಫಲಿತಾಂಶವೂ ಗಣನೀಯವಾಗಿ ಸುಧಾರಿಸಿದೆ. 35 ಶೈಕ್ಷಣಿಕ ಜಿಲ್ಲೆಗಳಲ್ಲಿ ಕಲಬುರಗಿ ಹೊರತುಪಡಿಸಿದರೆ ಉಳಿದೆಲ್ಲವೂ ಶೇ 90ಕ್ಕಿಂತ ಅಧಿಕ ಫಲಿತಾಂಶ ಪಡೆಯುವಲ್ಲಿ ಯಶಸ್ಸಿ ಆಗಿವೆ. ಜಿಲ್ಲಾವಾರು ಪಟ್ಟಿಯಲ್ಲಿ ಶೇ 98.40ರಷ್ಟು ಗುರಿ ದಾಟಿದ ದಕ್ಷಿಣ ಕನ್ನಡ ಮೊದಲ ಸ್ಥಾನದಲ್ಲಿದ್ದರೆ, ಕೊನೆಯ ಸ್ಥಾನದಲ್ಲಿರುವ ಕಲಬುರಗಿ ಜಿಲ್ಲೆ ಶೇ 85.06ರಷ್ಟು ಫಲಿತಾಂಶ ದಾಖಲಿಸಿದೆ.

ಏಳು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದಿದ್ದಾರೆ. ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಅಥಣಿ ತಾಲ್ಲೂಕಿನ ಕಟಗೇರಿ ಸರ್ಕಾರಿ ಶಾಲೆಯ ಪ್ರಾರ್ಥನಾ ನಾಗಪ್ಪ ಬಿರಾದಾರ್ ಪಾಟೀಲ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಕಬ್ಬಳದ ಶ್ರೀವಿದ್ಯಾಲಕ್ಷ್ಮಿ ಶಾಲೆಯ ಜಿ.ಭರತ್, ಚಿಕ್ಕಮಗಳೂರು ಜಿಲ್ಲೆ ಸೇಂಟ್ ಮೇರಿಸ್ ಶಾಲೆಯ ಬೃಂದಾ ಎಂ. ತಾಪ್ಸೆ, ಬೆಂಗಳೂರು ಉತ್ತರ ಜಿಲ್ಲೆಯ ಪೂರ್ಣಪ್ರಜ್ಞ ಶಾಲೆಯ ಧನುಷ್ ಸುಧೀರ್ ಮೈಸೂರು, ಉಡುಪಿ ಜಿಲ್ಲೆಯ ಶಂಕರನಾರಾಯಣದ ಮದರ್ ಥೆರೇಸಾ ಶಾಲೆಯ ಪ್ರೀತಂ ಜಿ. ಪೂಜಾರಿ, ವಿಜಯಪುರ ಜಿಲ್ಲೆ ನಾಗರಬೆಟ್ಟದ ಆಕ್ಸ್‌ಫರ್ಡ್ ಶಾಲೆಯ ಸೌಜನ್ಯಾ ಬಸವರಾಜ್ ಕಂದಕೂರ ಹಾಗೂ ರಾಯಚೂರು ಜಿಲ್ಲೆ ಮಾನ್ವಿಯ ಬಿವಿಆರ್ ಶಾಲೆಯ ಸುಖದೇವ ಈ ಸಾಧನೆಯ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ▶6



> **ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿದಂತೆ ಎಲ್ಲರ ಪರಿಶ್ರಮದಿಂದ ದಾಖಲೆಯ ಫಲಿತಾಂಶ ಸಾಧ್ಯವಾಗಿದೆ. ಅನುತ್ತೀರ್ಣ ಪ್ರಮಾಣ ಅತ್ಯಂತ ಕಡಿಮೆ ಇರುವ ಕಾರಣ ಈ ಬಾರಿ ಪರೀಕ್ಷೆ–3 ಇರುವುದಿಲ್ಲ. ಅನುತ್ತೀರ್ಣರಾದ ಎಲ್ಲ ಮಕ್ಕಳನ್ನೂ ಪರೀಕ್ಷೆ–2ಕ್ಕೆ ಸಿದ್ಧಪಡಿಸಲು, ಪರಿಹಾರ ಬೋಧನೆಯ ಮೂಲಕ ಅವರಿಗೆ ನೆರವಾಗಲು ಶಿಕ್ಷಕರಿಗೆ ಸೂಚಿಸಲಾಗಿದೆ**
>
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

ಮೊದಲ 10 ಸ್ಥಾನ ಪಡೆದ ಜಿಲ್ಲೆಗಳು (ಶೇಕಡವಾರು ಫಲಿತಾಂಶ)

ದಕ್ಷಿಣ ಕನ್ನಡ	98.40
ಉಡುಪಿ	98.18
ಉತ್ತರ ಕನ್ನಡ	98.09
ಹಾಸನ	97.51
ಮಂಡ್ಯ	97.45
ಶಿರಸಿ	97.21
ಹಾವೇರಿ	96.87
ಕೊಡಗು	96.70
ಶಿವಮೊಗ್ಗ	96.56
ವಿಜಯನಗರ	96.39

ಹಿಂದಿ: 9,481 ವಿದ್ಯಾರ್ಥಿಗಳು ಅನುತ್ತೀರ್ಣ ▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಒಳ ಮೀಸಲಿಗೆ ಸೂತ್ರ ಸಂಪುಟ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇ 15ರ ಮೀಸಲಾತಿಯಲ್ಲಿ ಒಳ ಮೀಸಲು ಕಲ್ಪಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಮಹತ್ವದ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ (ಏ. 24) ನಡೆಯಲಿದೆ.

ಮಧ್ಯಾಹ್ನ 2 ಗಂಟೆಗೆ ಸಭೆ ನಡೆಯಲಿದೆ. ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ರಚಿಸಲಾಗಿದ್ದ ತಾಂತ್ರಿಕ ಸಮಿತಿಯು ಪರಿಶಿಷ್ಟ ಜಾತಿಯ 'ಎ' (ಎಡಗೈ ಸಂಬಂಧಿತ ಜಾತಿಗಳು), 'ಬಿ' (ಬಲಗೈ ಸಂಬಂಧಿತ ಜಾತಿಗಳು) ಮತ್ತು 'ಸಿ' (ಅಲೆಮಾರಿ, ಅರೆ ಅಲೆಮಾರಿ, ಸ್ಪೃಶ್ಯ ಜಾತಿಗಳು) ಈ ಮೂರು ಗುಂಪುಗಳಿಗೆ ಕ್ರಮವಾಗಿ ಶೇ 5.3, ಶೇ 5.3 ಹಾಗೂ ಶೇ 4.4 ಒಳಮೀಸಲು ನಿಗದಿ ಮಾಡುವಂತೆ ತನ್ನ ವರದಿಯಲ್ಲಿ ಸಲಹೆ ನೀಡಿದೆ ಎಂಬ ಮಾಹಿತಿಯಿದೆ.

ಸಂಪುಟ ಸಭೆಗೂ ಮುನ್ನ ಪರಿಶಿಷ್ಟ ಜಾತಿಯ ಸಚಿವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತ್ಯೇಕ ಸಭೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ▶4A

ದಾಖಲೆ ಮತದಾನ

ಕೋಲ್ಕತ್ತ/ಚೆನ್ನೈ (ಪಿಟಿಐ): ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಗುರುವಾರ ದಾಖಲೆಯ ಮತದಾನವಾಗಿದೆ.



ತಮಿಳುನಾಡು ವಿಧಾನಸಭೆಯ ಎಲ್ಲ 234 ಕ್ಷೇತ್ರಗಳು ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯ 152 ಕ್ಷೇತ್ರಗಳಿಗೆ ಮತದಾನ ನಡೆಯಿತು. 'ಬಂಗಾಳದಲ್ಲಿ ಮೊದಲ ಹಂತದಲ್ಲಿ ಶೇ 92.72ರಷ್ಟು ಮತದಾನ ನಡೆದಿದ್ದು, ಇದು ರಾಜ್ಯದ ಇತಿಹಾಸದಲ್ಲಿ ದಾಖಲಾಗಿರುವ ಅತಿಹೆಚ್ಚು ಶೇಕಡಾವಾರು ಪ್ರಮಾಣ' ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಿಳಿಸಿದ್ದಾರೆ.

ತಮಿಳುನಾಡಿನಲ್ಲಿ ಶೇ 85.14ರಷ್ಟು ಮತದಾನ ದಾಖಲಾಗಿದೆ. ರಾಜ್ಯದ ಇತಿಹಾಸದಲ್ಲಿ ಮತದಾನ ಪ್ರಮಾಣ ಶೇ 80ರ ಗಡಿ ದಾಟಿದ್ದು ಇದೇ ಮೊದಲು. 2011ರ ಚುನಾವಣೆಯಲ್ಲಿ ಶೇ 78.29ರಷ್ಟು ಮತದಾನ ನಡೆದದ್ದು ಇದುವರೆಗಿನ ದಾಖಲೆಯಾಗಿತ್ತು. ಬಂಗಾಳದಲ್ಲಿ ಮತದಾನ ಶಾಂತಿಯುತವಾಗಿತ್ತು ಎಂದು ಅಧಿಕಾರಿಗಳು ಹೇಳಿದರೂ ವಿವಿಧೆಡೆ ಘರ್ಷಣೆ, ಅಭ್ಯರ್ಥಿಗಳ ಮೇಲೆ ಹಲ್ಲೆಯಂತಹ ಘಟನೆಗಳು ನಡೆದಿದ್ದು, ಚುನಾವಣಾ ಆಯೋಗ ವಿವರವಾದ ವರದಿ ಕೇಳಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರುವ ಸಾಧ್ಯತೆ.

ಜಿಬಿಎ ಶಾಲೆಗಳಲ್ಲಿ ಶೇ 88.5 ಫಲಿತಾಂಶ

ಆರು ಪ್ರೌಢಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ನಾಲ್ಕು ನಗರ ಪಾಲಿಕೆಗಳ ವ್ಯಾಪ್ತಿಯ 34 ಶಾಲೆಗಳಲ್ಲಿ ಶೇ 88.5 ರಷ್ಟು ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಮೂವರು ವಿದ್ಯಾರ್ಥಿನಿಯರು 600ಕ್ಕೂ ಹೆಚ್ಚು ಅಂಕ ಪಡೆದಿದ್ದು, 106 ವಿದ್ಯಾರ್ಥಿಗಳು ಉನ್ನತ ಶ್ರೇಣಿ (ಶೇ 85ಕ್ಕಿಂತ ಹೆಚ್ಚು ಅಂಕ) ಗಳಿಸಿದ್ದಾರೆ. ಆರು ಪ್ರೌಢಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ ದಾಖಲಾಗಿದೆ.

2025-26ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗೆ ಒಟ್ಟು 2,063 ವಿದ್ಯಾರ್ಥಿಗಳು ಹಾಜರಾಗಿದ್ದು, ಅವರಲ್ಲಿ 1,833 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಪಶ್ಚಿಮ ನಗರ ಪಾಲಿಕೆಯ ಬಸವನಗುಡಿ, ಸುಬ್ರಹ್ಮಣ್ಯನಗರ, ಮಾರಪ್ಪನಪಾಳ್ಯ, ಕೇಂದ್ರ ನಗರ ಪಾಲಿಕೆಯ ಕಾಟನ್‌ಪೇಟೆ, ಶಾಂತಿನಗರ ಮತ್ತು ಉತ್ತರ ನಗರ ಪಾಲಿಕೆಯ ಮತ್ತಿಕೆರೆ ಪ್ರೌಢಶಾಲೆಗಳು ಶೇ 100ರಷ್ಟು ಫಲಿತಾಂಶ ದಾಖಲಿಸಿವೆ.

ಪಶ್ಚಿಮ ನಗರ ಪಾಲಿಕೆಯ ಬೈರವೇಶ್ವರನಗರ ಪ್ರೌಢಶಾಲೆಯ ವಿದ್ಯಾರ್ಥಿನಿ ಗಾನಶ್ರೀ ಎಸ್ ಅವರು 625ಕ್ಕೆ 611 ಅಂಕಗಳನ್ನು (ಶೇ 97.76) ಪಡೆದು ಪಾಲಿಕೆ ಶಾಲೆಗಳಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಉತ್ತರ ನಗರ ಪಾಲಿಕೆಯ ಗಂಗಾನಗರ ಪ್ರೌಢಶಾಲೆಯ ವಿದ್ಯಾರ್ಥಿನಿ ಜಾರಾ ಫಾತಿಮಾ ಅವರು 610 ಅಂಕಗಳನ್ನು (ಶೇ 97.60) ಗಳಿಸಿ ಎರಡನೇ ಹಾಗೂ ಪಶ್ಚಿಮ ನಗರ ಪಾಲಿಕೆಯ ಹೇರೋಹಳ್ಳಿ ಪ್ರೌಢಶಾಲೆಯ ವಿದ್ಯಾರ್ಥಿನಿ ಲಾವಣ್ಯ ಎ ಅವರು 605 ಅಂಕಗಳನ್ನು (ಶೇ 96.80) ಪಡೆದು ಮೂರನೇ ಸ್ಥಾನ ಪಡೆದಿದ್ದಾರೆ.


ಗಾನಶ್ರೀ ಎಸ್


ಜಾರಾ ಫಾತಿಮಾ


ಲಾವಣ್ಯ ಎ

ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 106 ವಿದ್ಯಾರ್ಥಿಗಳಿಗೆ ಆಯಾ ನಗರ ಪಾಲಿಕೆಗಳ ವತಿಯಿಂದ ತಲಾ ₹25 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ ಎಂದು ನಗರ ಪಾಲಿಕೆಗಳ ಆಡಳಿತಾಧಿಕಾರಿ ಮಹೇಶ್ವರ್ ರಾವ್ ತಿಳಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ 19 ಪ್ರೌಢಶಾಲೆಗಳ ಪೈಕಿ ಕಾಟನ್‌ಪೇಟೆ, ಶಾಂತಿನಗರ ಶಾಲೆಗಳಲ್ಲಿ ಕ್ರಮವಾಗಿ 27, 9 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಈ ಶಾಲೆಗಳು ಶೇ 100ರಷ್ಟು ಫಲಿತಾಂಶ ದಾಖಲಿಸಿವೆ. ಗಾಂಧಿನಗರ, ಜಯ ಮಹಲ್, ಮಾಗಡಿ ರಸ್ತೆ ಶಾಲೆಗಳು ಶೇ 90ಕ್ಕಿಂತ ಹೆಚ್ಚಿನ ಫಲಿತಾಂಶ ಗಳಿಸಿವೆ. ಕೆ.ಜಿ. ನಗರ, ಪಾದರಾಯನಪುರ, ಟಾಸ್ಕರ್ ಟೌನ್ ಶಾಲೆಗಳು ಶೇ 60ಕ್ಕಿಂತ ಕಡಿಮೆ ಫಲಿತಾಂಶ ದಾಖಲಿಸಿವೆ. ಒಟ್ಟಾರೆ 19 ಶಾಲೆಗಳಲ್ಲಿ ಶೇ 77.69ರಷ್ಟು ಫಲಿತಾಂಶ ಬಂದಿದೆ. ಏಳು ವಿದ್ಯಾರ್ಥಿಗಳು ಉನ್ನತ ಶ್ರೇಣಿ ಗಣಿಸಿದ್ದಾರೆ.

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ನಾಲ್ಕು ಶಾಲೆಗಳಲ್ಲಿ ಮತ್ತಿಕೆರೆ ಶಾಲೆಯ 81 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪಿಳ್ಳಣ್ಣಗಾರ್ಡನ್ ಶಾಲೆ ಶೇ 97.50, ಗಂಗಾನಗರ ಶೇ 93.23, ಕ್ಲೀವ್‌ಲ್ಯಾಂಡ್‌ಟೌನ್ ಶಾಲೆ ಶೇ 93.06ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಒಟ್ಟು ನಾಲ್ಕು ಶಾಲೆಗಳಲ್ಲಿ 25 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಬೈರಸಂದ್ರ ಶಾಲೆಯಲ್ಲಿ 23 ವಿದ್ಯಾರ್ಥಿಗಳ ಪೈಕಿ 20 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ 86.96 ಫಲಿತಾಂಶ ದಾಖಲಾಗಿದೆ.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ 10 ಶಾಲೆಗಳಲ್ಲಿ ಬಸವನಗುಡಿ, ಮಾರಪ್ಪನಪಾಳ್ಯ, ಸುಬ್ರಹ್ಮಣ್ಯನಗರ ಶಾಲೆಗಳು ಶೇ 100ರಷ್ಟು ಫಲಿತಾಂಶ ಗಳಿಸಿವೆ. ಬೈರವೇಶ್ವರ ಶಾಲೆ ಶೇ 97.39, ಹೇರೋಹಳ್ಳಿ ಶೇ 97.37, ಶ್ರೀರಾಮಪುರ ಶೇ 97.37, ವಿಜಯನಗರ ಶೇ 96.81, ಶಕ್ತಿಗಣಪತಿ ನಗರ ಶೇ 87.76, ಲಗ್ಗೆರೆ ಶೇ 87.30 ಹಾಗೂ ಕೋದಂಡರಾಮಪುರ ಶಾಲೆ ಶೇ 78.38ರಷ್ಟು ಫಲಿತಾಂಶ ದಾಖಲಿಸಿವೆ. ಒಟ್ಟು 74 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಪಡೆದಿದ್ದಾರೆ.

ವಿದ್ಯಾಭೂಷಣ್ ಇಂಟರ್‌ನ್ಯಾಷನಲ್‌ಗೆ ಶೇ 100ರಷ್ಟು ಫಲಿತಾಂಶ


ಬೇಬಿತ ಬಿ.ಎಂ


ನಿಶಾಂತ್ ಗೌಡ ಎಚ್‌.ಆರ್‌

ಪೀಣ್ಯ ದಾಸರಹಳ್ಳಿ: ಅಂದ್ರಹಳ್ಳಿಯ ಸಾಯಿಬಾಬಾ ನಗರದ ವಿದ್ಯಾಭೂಷಣ್ ಇಂಟರ್‌ನ್ಯಾಷನಲ್ ಶಾಲೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ದಾಖಲಿಸಿದೆ.

ಬೇಬಿತ ಬಿ.ಎಂ, 619 ಮತ್ತು ನಿಶಾಂತ್ ಗೌಡ ಎಚ್.ಆರ್ 613 (98) ಅಂಕಗಳ ಪಡೆದಿದ್ದಾರೆ ಎಂದು ಶಾಲೆಯ ಸಂಸ್ಥಾಪಕ ಬ.ನಾ.ರವಿ ಹಾಗೂ ಪ್ರಾಂಶುಪಾಲರಾದ ಪಾರ್ವತಮ್ಮ ಬ.ನಾ ರವಿ ತಿಳಿಸಿದರು.

ಸೌಂದರ್ಯ ಶಾಲೆ: ಹಾವನೂರು ಬಡಾವಣೆ


ಧನುಷ್ ಬಿ 622 (99.52%)


ಮೋಹಿತ್ ಎಸ್ 621 (99.36%)


ಪ್ರೇರಣಾ ಆರ್ 620 (99.2%)

ಆರ್.ವಿ. ಬಾಲಕಿಯರ ಪ್ರೌಢಶಾಲೆ


ಸಿಂಚನಾ 615


ತ್ರಿಶಾ 592


ಹೊನ್ನುಶ್ರೀ 618


ತನುಶ್ರೀ 612


ಪರಿಣಿತಾ 615

ಸರ್ ಎಂ. ವಿಶ್ವೇಶ್ವರಯ್ಯ ವಿದ್ಯಾನಿಕೇತನ, ಶೆಟ್ಟಿಹಳ್ಳಿ


ಪವನ್ ಡಿ.ಆರ್ 614 (98.24%)


ಶ್ರೀನಿವಾಸ್ ಕೆ 613 (98.8%)


ಗಗನ ಡಿ.ಎನ್ 609 (97.44%)


ಸುದರ್ಶನ್ ಎ.ಎಸ್ 607 (97.12%)


ತೇಜಸ್ ಎಸ್ 601 (96.16%)

ವಿದ್ಯಾನಿಕೇತನ ಪ್ರೌಢಶಾಲೆಗೆ ಶೇ 100 ರಷ್ಟು ಫಲಿತಾಂಶ

ಬೆಂಗಳೂರು: ಟಿ.ದಾಸರಹಳ್ಳಿಯ ಶ್ರೀ ವಿದ್ಯಾನಿಕೇತನ ಪ್ರೌಢಶಾಲೆ ಶೇ 100ರಷ್ಟು ಸಾಧನೆ ಮಾಡಿದೆ. ಮೋಹಿತ್ ಜೆ. 615 ಅಂಕ (ಶೇ 98.4), ಪ್ರೇಮ್ ಕುಮಾರ್ ಎಸ್. 599 ಅಂಕ (ಶೇ95.84) ಪಡೆದಿದ್ದಾರೆ.


ಪ್ರೇಮ್ ಕುಮಾರ್ ಎಸ್‌.


ಮೋಹಿತ್ ಜೆ.


ಅಂಕಿತ ಕೆ 620 (99.2%) ಶ್ರೀ ಅಯ್ಯಪ್ಪ ಎಜುಕೇಷನಲ್ ಸೆಂಟರ್, ಮಲ್ಲಸಂದ್ರ


ವೇದಾ ಜಿ. 610 (ಶೇ 97.6) ಸ್ಟೆಲ್ಲಾ ಮಾರಿಸ್ ಪ್ರೌಢಶಾಲೆ, ವೈಯಾಲಿಕಾವಲ್

ತಾಂಡಾ ಪ್ರತಿಭೆಗೆ ಶೇ 99.4ರಷ್ಟು ಅಂಕ


ಜುಮಾಲಪುರ ಸಣ್ಣ ತಾಂಡಾ ವಿದ್ಯಾರ್ಥಿನಿ ರಾಜೇಶ್ವರಿಗೆ ಸಿಹಿ ತಿನಿಸಿದ ಪೋಷಕರು

• ಭೀಮಶೇನರಾವ್ ಕುಲಕರ್ಣಿ

ಹುಣಸಗಿ (ಯಾದಗಿರಿ ಜಿಲ್ಲೆ): ತಂದೆಯೊಂದಿಗೆ ಬೈಕ್‌ನಲ್ಲಿ ನಿತ್ಯ ಒಟ್ಟು 40 ಕಿ.ಮೀ. ಪ್ರಯಾಣಿಸಿ ವಿದ್ಯಾಭ್ಯಾಸ ಮಾಡಿದ ತಾಲ್ಲೂಕಿನ ಜುಮಾಲಪುರ ಸಣ್ಣ ತಾಂಡಾದ ವಿದ್ಯಾರ್ಥಿನಿ ರಾಜೇಶ್ವರಿ ರಾಠೋಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 99.4 ಅಂಕ ಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ.

1ರಿಂದ 4ನೇ ತರಗತಿಯವರೆಗೆ ತಾಂಡಾದಲ್ಲಿ ಓದಿದ್ದ ರಾಜೇಶ್ವರಿ, ಬಳಿಕ 5ರಿಂದ ಎಸ್‌ಎಸ್‌ಎಲ್‌ಸಿವರೆಗೆ ಹುಣಸಗಿಯ ಎಸ್.ಕೆ.ಶಾಲೆಯಲ್ಲಿ ಅಭ್ಯಾಸ ಮಾಡಿದ್ದಾರೆ. ಬಸ್ ವ್ಯವಸ್ಥೆ ಇಲ್ಲದಕ್ಕೆ ನಿತ್ಯ ತಂದೆಯೊಂದಿಗೆ 40 ಕಿ.ಮೀ. ಬೈಕ್‌ನಲ್ಲಿ ಪ್ರಯಾಣಿಸಿ ತರಗತಿಗೆ ಹೋಗುತ್ತಿದ್ದರು.

‘ಶಿಕ್ಷಕರು ತಿಳಿಸಿಕೊಟ್ಟ ಪಾಠ ಹಾಗೂ ವಿಷಯಗಳ ಬಗ್ಗೆ ನಿತ್ಯ ಓದಿಕೊಳ್ಳುತ್ತಿದ್ದೆ. ಸುಮಾರು ಐದು ಗಂಟೆಗಳ ಓದಿದ್ದರಿಂದಾಗಿ ಕನ್ನಡ, ಹಿಂದಿ, ಗಣಿತ ಹಾಗೂ ಸಮಾಜ ವಿಜ್ಞಾನ ವಿಷಯಗಳಲ್ಲಿ 100ಕ್ಕೆ 100 ಅಂಕ ಗಳಿಸಲು ಸಾಧ್ಯವಾಯಿತು’ ಎನ್ನುತ್ತಾರೆ ರಾಜೇಶ್ವರಿ.

ಒಂದು ಎಕರೆ ಭತ್ತದ ಗದ್ದೆ ಹೊಂದಿರುವ ತಂದೆ ಹೇಮರಡ್ಡಿ ರಾಠೋಡ, ಚಿಕ್ಕ ಅಂಗಡಿ ಇಟ್ಟುಕೊಂಡಿದ್ದಾರೆ. ಮಕ್ಕಳನ್ನು ಚೆನ್ನಾಗಿ ಓದಿಸಬೇಕು ಎಂಬ ಇಚ್ಛೆಯಿಂದ ಕಷ್ಟದ ಜೀವನದ ಕುರಿತು ಮನವರಿಕೆ ಮಾಡುತ್ತಿದ್ದರು. ‘ಮಗಳು ಉತ್ತಮ ಅಂಕ ಗಳಿಸಿದ್ದು, ಖುಷಿ ತಂದಿದೆ’ ಎನ್ನುತ್ತಾರೆ ತಂದೆ ಹೇಮರಡ್ಡಿ. ‘ರಾಜೇಶ್ವರಿ ಗಳಿಸಿದ ಅಂಕಗಳು ತಾಂಡಾದ ವಿದ್ಯಾರ್ಥಿಗಳಿಗೆ ಪ್ರೇರಣೆ ಯಾಗಲಿದೆ’ ಎನ್ನುತ್ತಾರೆ ಬಂಜಾರ ಸಮಾಜದ ಮುಖಂಡ ಮೋತಿಲಾಲ್ ಚವ್ಹಾಣ, ಶೇಖರನಾಯಕ.

ಸುದ್ದಿ 2 ನಿಮಿಷ

‘ಬಿಜೆಪಿಯವರು ಹುಟ್ಟು ಸುಳ್ಳುಗಾರರು’

ರಾಮನಗರ: ಬಿಜೆಪಿಯಲ್ಲಿ ಪ್ರಧಾನಿ ಮೋದಿ ಅವರಿಂದ ಹಿಡಿದು ತಳಮಟ್ಟದ ಕಾರ್ಯಕರ್ತರವರೆಗೆ ಎಲ್ಲರೂ ಹುಟ್ಟು ಸುಳ್ಳುಗಾರರು. ನಾಚಿಕೆಯೇ ಇಲ್ಲದ ಅವರಿಗೆ ಸುಳ್ಳು ಹೇಳದಿದ್ದರೆ ನಿದ್ರೆಯೇ ಬರುವುದಿಲ್ಲ. ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಷಯದಲ್ಲಿ ಬಿಜೆಪಿ ಜೊತೆಗೆ ಜೆಡಿಎಸ್ ಸಹ ಸುಳ್ಳು ಹೇಳುತ್ತಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ವಾಗ್ದಾಳಿ ನಡೆಸಿದರು.

ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆ ಮಸೂದೆಗೆ ಸೋಲಾದ ಹಿನ್ನೆಲೆಯಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ಮಾಡುತ್ತಿರುವ ಟೀಕೆ ಕುರಿತು ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಬಿಜೆಪಿ-ಜೆಡಿಎಸ್ ಮಹಿಳಾ ವಿರೋಧಿಗಳು ಎಂದು ಕಿಡಿಕಾರಿದರು.

ನಿಜವಾಗಿಯೂ ಬಿಜೆಪಿಗೆ ಮಹಿಳಾ ಪರವಾದ ಕಾಳಜಿ ಇದ್ದಿದ್ದರೆ 2023ರಲ್ಲೇ ಪಾಸ್ ಆಗಿದ್ದ ಬಿಲ್‌ಗೆ ಅಂದೇ ಸಂವಿಧಾನಕ್ಕೆ ತಿದ್ದುಪಡಿ ತರುವ ಮಸೂದೆ ಯಾಕೆ ಮಂಡಿಸಿ ಜಾರಿಗೆ ತರಲಿಲ್ಲ. ಆಗ ಎಲ್ಲಾ ಪಕ್ಷಗಳು ಬಿಲ್ ಬೆಂಬಲಿಸಿರಲಿಲ್ಲವೆ ಎಂದು ಪ್ರಶ್ನಿಸಿದರು.

ವಿಶೇಷ ಅಧಿವೇಶನದಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಪ್ರತ್ಯೇಕವಾಗಿ ಮಂಡಿಸಬೇಕಿತ್ತು. ಅದು ಬಿಟ್ಟು, ಕ್ಷೇತ್ರ ಪುನರ್ ವಿಂಗಡನೆ ಬಿಲ್ ಜೊತೆ ತಂದಿದ್ದು ಯಾಕೆ? ಪಂಚರಾಜ್ಯಗಳ ಚುನಾವಣೆಯಲ್ಲಿ ರಾಜಕೀಯ ಲಾಭ ಪಡೆಯುವ ಉದ್ದೇಶವನ್ನು ಎನ್‌ಡಿಎ ಹೊಂದಿದ್ದರಿಂದಲೇ ವಿರೋಧ ಪಕ್ಷಗಳು ಅದಕ್ಕೆ ತಡೆಯೊಡ್ಡಿವೆ ಎಂದು ಸಮರ್ಥಿಸಿಕೊಂಡರು.



ಸಚಿವರನ್ನು ದೂರೋದು ಸರಿಯಲ್ಲ: ಜಿಲ್ಲೆಯಲ್ಲಿ ಹೆಚ್ಚಾಗಿರುವ ಕಾಡಾನೆ ಹಾವಳಿ ತಡೆಗೆ ಅರಣ್ಯ ಇಲಾಖೆ ಸಚಿವರು ಸ್ಪಂದಿಸುತ್ತಿಲ್ಲ ಎಂದು ದೂರುವುದು ಸರಿಯಲ್ಲ. ಇತ್ತೀಚೆಗಷ್ಟೇ ಬಜೆಟ್ ಮಂಡನೆಯಾಗಿದ್ದು ಇಲಾಖೆಗೆ ಹಣ ಬಿಡುಗಡೆಯಾಗಬೇಕಿದೆ. ಮುಖ್ಯಮಂತ್ರಿ ಹಣ ಕೊಟ್ಟರೆ ಸಚಿವರು ಖರ್ಚು ಮಾಡುತ್ತಾರೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

‘ಸಿದ್ದರಾಮಯ್ಯಗೆ ಮಾಟ, ಮಂತ್ರ; ಸಿಬಿಐ ತನಿಖೆ ಮಾಡಿಸಿ’

ರಾಮನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾರೋ ಮಾಟ, ಮಂತ್ರ ಮಾಡಿಸಿರುವುದರಿಂದ ಅಸಹಾಯಕರಾಗಿದ್ದಾರೆ ಎಂದು ಹೇಳಿರುವ ಶಾಸಕ ಕೆ.ಎನ್. ರಾಜಣ್ಣ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸಿಬಿಐ ತನಿಖೆ ಮಾಡಿಸಲಿ ಎಂದು ಮಾಗಡಿ ಶಾಸಕ ಎಚ್. ಸಿ. ಬಾಲಕೃಷ್ಣ ವ್ಯಂಗ್ಯವಾಡಿದರು.

ಈ ಕುರಿತು ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಅವರು ಅಸಹಾಯಕರಾಗಿದ್ದಾರೆ ಎಂದು ನನಗಂತೂ ಅನ್ನಿಸಿಲ್ಲ. ಅವರು ಎಂದಿನಂತೆ ಕೆಲಸ ಮಾಡುತ್ತಿದ್ದಾರೆ. ಯಾರು ಮಾಟ, ಮಂತ್ರ ಮಾಡಿಸಿದ್ದಾರೊ ಇಲ್ಲವೊ ಎಂಬುದು ರಾಜಣ್ಣ ಅವರಿಗೇ ಗೊತ್ತು’ ಎಂದರು.

‘ಮಾಟ, ಮಂತ್ರದ ಬಗ್ಗೆ ನನಗಂತೂ ನಂಬಿಕೆ ಇಲ್ಲ. ಹಾಗಾಗಿ, ರಾಜಣ್ಣ ಅವರು ಈ ವಿಷಯದ ಕುರಿತು ಸಿಬಿಐ ತನಿಖೆ ಮಾಡಿಸಲಿ. ಆಗ ನಿಜ ಗೊತ್ತಾಗುತ್ತದೆ’ ಎಂದು ಹೇಳಿದರು.

ಎಚ್‌ಎಸ್‌ಆರ್ 5ನೇ ಮುಖ್ಯರಸ್ತೆ – ರಾಗಿಗುಡ್ಡವರೆಗೆ ಪ್ರಾಯೋಗಿಕ ಸಂಚಾರ

ಡಬಲ್ ಡೆಕರ್ ಫ್ಲೈಓವರ್: ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೊದಲ ಡಬಲ್ ಡೆಕರ್ ಯೋಜನೆ ಪೂರ್ಣಗೊಂಡಿದ್ದು, ಸಂಚಾರ ಪೊಲೀಸರು ಬುಧವಾರ ಎಚ್‌ಎಸ್‌ಆರ್ ಲೇಔಟ್-ರಾಗಿಗುಡ್ಡ ಡೆಕರ್ ಅನ್ನು ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಿದ್ದಾರೆ.

‘ಸಂಚಾರ ಆಗ್ನೇಯ ಉಪವಿಭಾಗದ ಮಡಿವಾಳ ಸಂಚಾರ ಪೊಲೀಸ್ ಠಾಣೆಯ ಮಿತಿಯೊಳಗೆ, ಹೊರ ವರ್ತುಲ ರಸ್ತೆಯಲ್ಲಿರುವ ಎಚ್‌ಎಸ್‌ಆರ್ 5 ನೇ ಮುಖ್ಯ ರಸ್ತೆಯಿಂದ ಜಯನಗರವರೆಗಿನ (ರಾಗಿಗುಡ್ಡ) ಡಬಲ್ ಡೆಕರ್ ಫ್ಲೈಓವರ್‌ನಲ್ಲಿ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗಿದೆ’ ಎಂದು ಆಗ್ನೇಯ ಸಂಚಾರ ಪೊಲೀಸರು ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ನಗರ ಸಂಚಾರ ಪೊಲೀಸರು ಏ.2 ರಂದು ಡಬಲ್ ಡೆಕರ್ ಮೇಲ್ಸೇತುವೆಯನ್ನು ಪರಿಶೀಲಿಸಿದ್ದರು. ಆದರೆ, ಚಾಲನೆ ದೊರೆತಿರಲಿಲ್ಲ. ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ರ‍್ಯಾಂಪ್‌ಗಳ ಮೇಲೆ 40 ಕಿ.ಮೀ. ವೇಗದ ಮಿತಿಯನ್ನು ವಿಧಿಸಲಾಗಿದೆ. 50 ಟನ್‌ವರೆಗಿನ ಭಾರ ಸಾಗಾಟ ಮಾಡಲು ಅವಕಾಶ ನೀಡಲಾಗಿದೆ.

₹ 449 ಕೋಟಿ ವೆಚ್ಚ: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೋಡ್ ಕಂ ರೈಲ್ (ಡಬಲ್ ಡೆಕರ್) ಮೇಲ್ಸೇತುವೆಯನ್ನು ₹ 449 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಅದರಲ್ಲಿ ರಾಗಿಗುಡ್ಡದಿಂದ ಕೇಂದ್ರ ರೇಷ್ಮೆ ಮಂಡಳಿವರೆಗಿನ ಕಾಮಗಾರಿಯು ಎರಡು ವರ್ಷಗಳ ಹಿಂದೆ ಪೂರ್ಣಗೊಂಡಿತ್ತು. 2024ರ ಜೂನ್‌ನಲ್ಲಿ ಒಂದು ಬದಿಯ ವಾಹನ ಸಂಚಾರ ಆರಂಭವಾಗಿತ್ತು.

ರಾಗಿಗುಡ್ಡದಿಂದ ಎಚ್‌ಎಸ್‌ಆರ್ ಲೇಔಟ್ ಮತ್ತು ಹೊಸೂರು ರಸ್ತೆಯನ್ನು ತಲುಪಲು ಈ ಮೇಲ್ಸೇತುವೆಯಲ್ಲಿ ಸಿಗ್ನಲ್‌ಗಳು ಇಲ್ಲದೇ ಇರುವುದರಿಂದ ವಾಹನಗಳು ಸುಗಮವಾಗಿ ಸಂಚರಿಸಲು ಸಾಧ್ಯವಾಗಿದೆ. ಕೆ. ಆರ್.ಪುರ ಮತ್ತು ಹೊಸೂರು ರಸ್ತೆ ಕಡೆಗೆ ಹೋಗುವ ಪ್ರಯಾಣಿಕರಿಗೆ ಅನುಕೂಲವಾಗಿದೆ. ವಾಹನಗಳು ಒಮ್ಮೆ ಮೇಲ್ಸೇತುವೆ ಏರಿದರೆ 3.3 ಕಿ.ಮೀ. ಮಧ್ಯೆ ಎಲ್ಲಿಯೂ ಇಳಿಯಲು ಅವಕಾಶವಿಲ್ಲ. ತಿರುಗಿ ಬರಲು ಮೂರು ಯು ಟರ್ನ್‌ಗಳಿವೆ. 3.36 ಕಿ.ಮೀ ಉದ್ದದ ರಸ್ತೆ ಮೇಲ್ಸೇತುವೆಯಲ್ಲಿ ರ‍್ಯಾಂಪ್ ಎ. 1.10 ಕಿ.ಮೀ, ರ‍್ಯಾಂಪ್ ಬಿ. 280 ಮೀಟರ್, ರ‍್ಯಾಂಪ್ ಸಿ. 490 ಮೀಟರ್, ರ‍್ಯಾಂಪ್ ಡಿ. 1.14 ಕಿ.ಮೀ. ಹಾಗೂ ರ‍್ಯಾಂಪ್ ಇ. 230 ಮೀಟರ್ ಉದ್ದವಿದೆ.



ಎಚ್‌ಎಸ್‌ಆರ್ ಲೇಔಟ್‌ನಿಂದ ರಾಗಿಗುಡ್ಡ ಕಡೆಗೆ ಡಬಲ್ ಡೆಕರ್ ಮೇಲ್ಸೇತುವೆಯಲ್ಲಿ ವಾಹನಗಳ ಸಂಚಾರ ಆರಂಭಗೊಂಡಿದೆ ಪ್ರಜಾವಾಣಿ ಚಿತ್ರ

ಕೇಂದ್ರ, ರಾಜ್ಯ ಸರ್ಕಾರಕ್ಕೆ ವಿಶ್ವ ಹಿಂದೂ ಪರಿಷತ್ ಆಗ್ರಹ

‘ಲವ್ ಜಿಹಾದ್ ತಡೆಗೆ ಕಠಿಣ ಕಾನೂನು ರೂಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್‌ನ (ಟಿಸಿಎಸ್) ನಾಸಿಕ್ ಘಟಕದಲ್ಲಿ ನಡೆದಿದೆ ಎನ್ನಲಾದ ಮತಾಂತರ ಜಾಲದ ಕಾರ್ಪೊರೇಟ್ ಜಿಹಾದ್ ಖಂಡಿಸಿರುವ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ‘ದೇಶದ ವಿವಿಧೆಡೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿರುವ ಲವ್ ಜಿಹಾದ್ ತಡೆಗೆ ಕಠಿಣ ಕಾನೂನು ರೂಪಿಸಬೇಕು’ ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ವಿಎಚ್‌ಪಿ ಕೇಂದ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ, ‘ಲವ್ ಜಿಹಾದ್ ಜತೆಗೆ ಜಿಮ್‌ಗಳಲ್ಲಿ ಲೈಂಗಿಕ ದೌರ್ಜನ್ಯ ಹಾಗೂ ಜಿಮ್ ಜಿಹಾದ್ ಪ್ರಕರಣಗಳು ವರದಿಯಾಗುತ್ತಿವೆ. ಇಂತಹ ಪ್ರಕರಣಗಳನ್ನು ಖಂಡಿಸುವ ಜತೆಗೆ, ಇದಕ್ಕೆ ಕಾನೂನಿನ ಮೂಲಕ ಕಡಿವಾಣ ಹಾಕಲು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ವಿಎಚ್‌ಪಿ ಕಾರ್ಯಕರ್ತರು ಪ್ರತಿಭಟನೆ ನಡೆಸುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸುತ್ತಿದ್ದಾರೆ. ಶುಕ್ರವಾರವೂ ರಾಜ್ಯದಾದ್ಯಂತ ಈ ಪ್ರತಿಭಟನೆ ಮುಂದುವರೆಯಲಿದೆ’ ಎಂದರು.

ಮುಖ್ಯಾಂಶಗಳು
- ಜಿಮ್‌ಗಳಲ್ಲಿ ಲೈಂಗಿಕ ದೌರ್ಜನ್ಯ ಹೆಚ್ಚುತ್ತಿದೆ
- ಕಾನೂನಿನ ಮೂಲಕ ಕಡಿವಾಣ ಹಾಕಬೇಕಿದೆ
- ವ್ಯವಸ್ಥಿತ ಷಡ್ಯಂತ್ರದ ವಿರುದ್ಧ ಪ್ರತಿಭಟನೆ ಮುಂದುವರಿಕೆ

‘ಜಿಹಾದ್ ಮತ್ತು ಭಯೋತ್ಪಾದನೆ ಇಂದು ಇಡೀ ಜಗತ್ತಿಗೆ ಹಬ್ಬಿದೆ. ಜಿಹಾದ್ ಸಿದ್ಧಾಂತದ ಮೂಲಕ ಇಡೀ ಜಗತ್ತನ್ನು ಇಸ್ಲಾಮೀಕರಣ ಮಾಡುವ ವ್ಯವಸ್ಥಿತ ಷಡ್ಯಂತ್ರದ ಮುಂದುವರಿದ ಭಾಗವೇ, ನಾಸಿಕ್‌ನಲ್ಲಿ ವರದಿಯಾದ ಕಾರ್ಪೊರೇಟ್ ಜಿಹಾದ್, ಹುಬ್ಬಳ್ಳಿಯಲ್ಲಿ ವರದಿಯಾದ ಲವ್ ಜಿಹಾದ್ ಹಾಗೂ ಜಿಮ್ ಲೈಂಗಿಕ ದೌರ್ಜನ್ಯ ಪ್ರಕರಣಗಳಾಗಿವೆ. ಇವು ಒಂದೇ ಕೇಂದ್ರದಿಂದ ನಿರ್ದೇಶಿಸಲ್ಪಡುವ, ವಿದೇಶಿ ಹಣಕಾಸಿನ ನೆರವಿನಿಂದ ನಡೆಯುವ ದೊಡ್ಡ ಜಾಲದ ಭಾಗವಾಗಿವೆ’ ಎಂದು ಆರೋಪಿಸಿದರು.

‘ಲವ್ ಜಿಹಾದ್, ಜಿಮ್‌ನಲ್ಲಿ ನಡೆದ ಲೈಂಗಿಕ ದೌರ್ಜನ್ಯ, ಕಾರ್ಪೊರೇಟ್ ಜಿಹಾದ್ ಮತ್ತು ಕಾಣೆಯಾದ ಮಹಿಳೆಯರ ಪ್ರಕರಣಗಳ ನಡುವಿನ ನಂಟನ್ನು ಭೇದಿಸಲು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ರಾಜ್ಯ ವಿಶೇಷ ತನಿಖಾ ತಂಡವು (ಎಸ್‌ಐಟಿ) ತನಿಖೆ ನಡೆಸಬೇಕು. ವಿದೇಶ ಮೂಲದ ಹಣವನ್ನು ಪತ್ತೆ ಮಾಡಬೇಕು’ ಎಂದು ಆಗ್ರಹಿಸಿದರು.

‘ವಿಎಚ್‌ಪಿ ಕಾರ್ಯಕರ್ತರು ಕಾನೂನಿನ ಚೌಕಟ್ಟಿನಲ್ಲೇ ಕೆಲಸ ಮಾಡುತ್ತಿದ್ದರೂ ಕರ್ನಾಟಕ ಸರ್ಕಾರ ಉದ್ದೇಶಪೂರ್ವಕವಾಗಿ ಎಫ್‌ಐಆರ್ ದಾಖಲಿಸುವುದು ಸೇರಿದಂತೆ ವಿವಿಧ ಕ್ರಮಗಳನ್ನು ಕೈಗೊಳ್ಳುತ್ತಿದೆ. ಸರ್ಕಾರ ಯಾವುದೋ ಒಂದು ಸಮುದಾಯವನ್ನು ಓಲೈಸದೆ, ನಮ್ಮ ಕೆಲ ಕಾರ್ಯಕರ್ತರ ವಿರುದ್ಧ ದಾಖಲಾದ ಪ್ರಕರಣ ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಆಗ್ರಹ

ಅನ್ಯಾಯವಾಗದಂತೆ ಒಳ ಮೀಸಲು ಹಂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ 101 ಸಮುದಾಯಗಳಿಗೆ ಅನ್ಯಾಯವಾಗದಂತೆ ಶುಕ್ರವಾರ ನಡೆಯುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿಯ ಪ್ರಮಾಣವನ್ನು ಹಂಚಿಕೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಜ್ಞಾನ ಪ್ರಕಾಶ್ ಸ್ವಾಮೀಜಿ, ‘ಒಳ ಮೀಸಲಾತಿಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳುವ ತೀರ್ಮಾನದಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾದರೆ, ನಮ್ಮ ಸಮುದಾಯದ ಸಚಿವರು ಹಾಗೂ ಶಾಸಕರು ರಾಜೀನಾಮೆ ನೀಡಬೇಕು’ ಎಂದು ಹೇಳಿದರು.

‘ಎಚ್.ಎನ್. ನಾಗಮೋಹನದಾಸ್ ಆಯೋಗವು ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಿಲ್ಲ. ಅಪೂರ್ಣ ದತ್ತಾಂಶಗಳ ಆಧಾರದ ಮೇಲೆ ಆಯೋಗವು ವರದಿ ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಿದೆ. ಆದ್ದರಿಂದ ಈ ವರದಿಯನ್ನು ತಿರಸ್ಕರಿಸಬೇಕು’ ಎಂದು ಆಗ್ರಹಿಸಿದರು.

‘ನಾಗಮೋಹನದಾಸ್ ಆಯೋಗವು ತನ್ನ ಅಧಿಕಾರದ ವ್ಯಾಪ್ತಿಯನ್ನು ಮೀರಿ ‘ಎ’, ‘ಬಿ’, ‘ಸಿ’, ‘ಡಿ’ ಮತ್ತು ‘ಇ’ ಎಂದು ಹೊಸದಾಗಿ ಗುಂಪುಗಳನ್ನು ಸೃಷ್ಟಿಸಿ, ಪ್ರತ್ಯೇಕವಾಗಿ ಒಳ ಮೀಸಲಾತಿ ನಿಗದಿಪಡಿಸಿರುವುದು ಅಕ್ಷಮ್ಯ ಅಪರಾಧವಾಗಿದೆ’ ಎಂದು ದೂರಿದರು.

‘2025ರ ಆಗಸ್ಟ್ 18ರಂದು ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ಅವೈಜ್ಞಾನಿಕ ನಿರ್ಧಾರಗಳನ್ನು ಹಿಂಪಡೆಯಬೇಕು. ನಾಗಮೋಹನದಾಸ್ ಆಯೋಗದ ವರದಿಯಲ್ಲಿ ಅಲೆಮಾರಿ ಜಾತಿಗಳ ಗುಂಪಿಗೆ ಸೇರಿಸಿದ್ದ ಮತ್ತು ಆಡಳಿತ ಇಲಾಖೆಯ ಟಿಪ್ಪಣಿಯಲ್ಲಿ ಮರುವರ್ಗೀಕರಣ ಮಾಡಿ ಬಲಗೈ ಸಂಬಂಧಿತ ಜಾತಿಗಳ ಗುಂಪಿನಲ್ಲಿ ಸೇರಿಸಿರುವ 16 ಬಲಗೈ ಸಂಬಂಧಿತ ಜಾತಿಗಳನ್ನು ಬಂಜಾರ, ಭೋವಿ ಮತ್ತು ಇತರೆ ಜಾತಿಗಳ ಗುಂಪಿಗೆ ಸಚಿವ ಸಂಪುಟ ಸೇರಿಸಿರುವುದು ಖಂಡನೀಯ’ ಎಂದರು.

‘ಒಳ ಮೀಸಲಾತಿ ಹಂಚಿಕೆಯಲ್ಲಿ ತಾಂತ್ರಿಕ ಸಮಸ್ಯೆ ಬಂದರೆ ಹಳೆ ಮೀಸಲಾತಿಯ ಆಧಾರದ ಮೇಲೆ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಬೇಕು. ನಮ್ಮಿಂದ ಸಾಮಾನ್ಯ ವರ್ಗದ ಉದ್ಯೋಗಾಕಾಂಕ್ಷಿಗಳಿಗೆ ತೊಂದರೆ ಆಗಬಾರದು’ ಎಂದು ತಿಳಿಸಿದರು.

ಚಿತ್ರದುರ್ಗದ ಛಲವಾದಿ ಗುರು ಪೀಠದ ಬಸವನಾಗಿ ದೇವ ಸ್ವಾಮೀಜಿ, ಸಿದ್ದರಾಮ ಶಿವಯೋಗಿ ಸ್ವಾಮಿ, ಒಕ್ಕೂಟದ ರಾಜ್ಯ ಸಂಚಾಲಕ ಶಿವಣ್ಣ ಬಿ. ಕನಕಪುರ ಸುದ್ದಿಗೋಷ್ಠಿಯಲ್ಲಿದ್ದರು.

ಹೂಡಿಕೆಗಳಿಗೆ ವಿನಾಯಿತಿ: ಸಂಪುಟ ಉಪ ಸಮಿತಿ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ರಿಯಾಯಿತಿ ಮತ್ತು ಉತ್ತೇಜನ ಸವಲತ್ತುಗಳನ್ನು ಪಡೆದುಕೊಂಡು ಹೂಡಿಕೆ ಮಾಡುವ ಕಂಪನಿಗಳು, ಸ್ಥಳೀಯರಿಗೇ ಹೆಚ್ಚಿನ ಉದ್ಯೋಗಗಳನ್ನು ನೀಡಬೇಕು ಎಂಬುದರ ಬಗ್ಗೆ ಹೂಡಿಕೆ ಉತ್ತೇಜನ ಮತ್ತು ರಿಯಾಯಿತಿ ಮಂಜೂರು ಸಂಪುಟ ಉಪ ಸಮಿತಿ ಸಭೆಯಲ್ಲಿ ಚರ್ಚೆಯಾಗಿದೆ.

ವಿಧಾನಸೌಧದಲ್ಲಿ ಬುಧವಾರ ನಡೆದ ಸಭೆಯಲ್ಲಿ 13 ವಿವಿಧ ಕಂಪನಿಗಳು ಕೇಳಿರುವ ರಿಯಾಯಿತಿ ಮತ್ತು ವಿನಾಯಿತಿ ಪ್ರಸ್ತಾವಗಳ ಬಗ್ಗೆ ಚರ್ಚೆಯಾಗಿದೆ. ಈ ಕಂಪನಿಗಳು ತೆರಿಗೆ, ಭೂಮಿ, ಮತ್ತಿತರ ಶುಲ್ಕಗಳಲ್ಲಿ ಶೇ 40ರವರೆಗೂ ರಿಯಾಯಿತಿ ಕೇಳಿವೆ. ಅದನ್ನು ಶೇ 25- ಶೇ 30ರಷ್ಟಕ್ಕೆ ತರಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಕಂಪನಿಗಳು ಹೆಚ್ಚಿನ ಪ್ರಮಾಣದ ವಿನಾಯಿತಿ ಕೇಳಿದ್ದರೂ, ಹೂಡಿಕೆಯಿಂದ ರಾಜ್ಯಕ್ಕಾಗುವ ಲಾಭವನ್ನು ಪರಿಗಣಿಸಿ ಅವುಗಳ ಪ್ರಸ್ತಾವಗಳನ್ನು ಕಾಯ್ದಿರಿಸಲಾಗಿದೆ. ಆದರೆ ಸ್ಥಳೀಯರಿಗೆ ಹೆಚ್ಚಿನ ಉದ್ಯೋಗಗಳು ದೊರೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒತ್ತಿ ಹೇಳಿದರು ಎಂದು ತಿಳಿಸಿವೆ.

ಸಚಿವರಾದ ಕೆ.ಜೆ.ಜಾರ್ಜ್, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ, ಶಿವಾನಂದ ಪಾಟೀಲ, ಎನ್.ಎಸ್. ಬೋಸರಾಜ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿ ಭಾಗಿಯಾಗಿದ್ದರು ಎಂದು ಹೇಳಿವೆ.

ಚಿತ್ರಾವಳಿ


ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಮೆಡಿಕಲ್ ಸೈನ್ಸಸ್ ನಗರದಲ್ಲಿ ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭದಲ್ಲಿ 165 ವಿದ್ಯಾರ್ಥಿಗಳು ಪದವಿ ಪಡೆದರು



ಭೂಮಿ ಆರ್ಟಿಸ್ಟ್ಸ್ ಸೆಂಟರ್ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಂ.ಎಸ್.ಮೂರ್ತಿ ಅವರ (ಎಡದಿಂದ ಮೊದಲಿಗರು) ‘ಬೌಲ್’ ಪುಸ್ತಕದ ಬಗ್ಗೆ ಚರ್ಚಿಸಲಾಯಿತು. ಸಿನಿಮಾ ವಿಮರ್ಶಕ ಎನ್. ವಿದ್ಯಾಶಂಕರ್, ಲೇಖಕಿ ವಿಜಯಾ, ವಿಮರ್ಶಕಿ ಸುಮಿತ್ರಾಬಾಯಿ ಹಾಗೂ ಕಾದಂಬರಿಕಾರ ಎಂ.ಕೆ. ಶಂಕರ್ ಪಾಲ್ಗೊಂಡಿದ್ದರು

ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ನಾಮನಿರ್ದೇಶನ • ಪ್ರೋತ್ಸಾಹ ಧನವಾಗಿ ₹75 ಲಕ್ಷ ವಿತರಣೆ

ಹಾಲನಾಯಕನಹಳ್ಳಿ ಗ್ರಾ.ಪಂಗೆ ಕೇಂದ್ರ ಸರ್ಕಾರದ ಪುರಸ್ಕಾರ

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಕೇಂದ್ರ ಸರ್ಕಾರದ ಪಂಚಾಯತ್‌ರಾಜ್ ಸಚಿವಾಲಯ ಪ್ರಕಟಿಸುವ ದೀನ್ ದಯಾಳ್ ಉಪಾಧ್ಯಾಯ ಪಂಚಾಯತ್‌ರಾಜ್ ಅಭಿವೃದ್ಧಿ ಪುರಸ್ಕಾರಕ್ಕೆ ಪೂರ್ವ ತಾಲ್ಲೂಕಿನ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಪಾತ್ರವಾಗಿದೆ. ಅಭಿವೃದ್ಧಿಗೆ ಪ್ರೋತ್ಸಾಹ ಧನವಾಗಿ ₹75 ಲಕ್ಷ ನೀಡಲಾಗಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರತಿ ಹಳ್ಳಿಯ ಮಗುವಿನ ಆರೋಗ್ಯ, ಶಿಕ್ಷಣ, ಸುರಕ್ಷತೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಕೈಗೊಂಡು ಮಕ್ಕಳ ಕಲ್ಯಾಣಕ್ಕೆ ಒತ್ತು ನೀಡುತ್ತಿರುವ ಕಾರಣಕ್ಕೆ ಮಕ್ಕಳ ಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ನಾಮನಿರ್ದೇಶನಗೊಂಡಿದೆ.

ಎಲ್ಲ ಅಂಗನವಾಡಿ ಕೇಂದ್ರಗಳಲ್ಲಿ ಡಿಜಿಟಲ್ ಪರಿವರ್ತನೆ ಮತ್ತು ಸ್ಮಾರ್ಟ್ ಮೂಲಸೌಕರ್ಯ ಒದಗಿಸುವ ಮೂಲಕ ಡಿಜಿಟಲೀಕರಣಗೊಳಿಸಲಾಗಿದೆ. ಮಕ್ಕಳಿಗೆ 360 ಡಿಗ್ರಿ ಅಭಿವೃದ್ಧಿಯ ಮಾದರಿಯನ್ನು ಸಾಂಸ್ಥಿಕಗೊಳಿಸಿ ಮಕ್ಕಳ ಸಮಗ್ರ ಬೆಳವಣಿಗೆಗೆ ಕಾರಣವಾಗಿದೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆ ಹಾಗೂ ಅಂಗನವಾಡಿಯಲ್ಲಿ ಕಂಪ್ಯೂಟರ್ ಪ್ರಯೋಗಾಲಯ, ಸಿ.ಸಿ. ಟಿ.ವಿ ಕ್ಯಾಮೆರಾ ಕಣ್ಗಾವಲು ಮತ್ತು ಅಧುನಿಕ ಕಲಿಕೆ, ರಂಗಮಂದಿರ, ಉಪಾಹಾರ ಕೊಠಡಿ, ಹೊಸ ತರಗತಿ ಕೊಠಡಿ ಹಾಗೂ ಆಟದ ಮೈದಾನಗಳ ವ್ಯವಸ್ಥೆ ಮಾಡಲಾಗಿದೆ. ಮಕ್ಕಳಿಗೆ ಸಮವಸ್ತ್ರ ಕಲಿಕಾ ಸಾಮಾಗ್ರಿ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಅನ್ನು ನೀಡಲಾಗಿದೆ.

ಈ ಪಂಚಾಯಿತಿಯು ನಗರ ಕೇಂದ್ರದಿಂದ 18 ಕಿ.ಮೀ. ದೂರದಲ್ಲಿದೆ. ಸುಮಾರು 3 ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಹರಡಿಕೊಂಡಿರುವ ಇಲ್ಲಿ ಒಟ್ಟು 15,476 ಜನಸಂಖ್ಯೆಯಿದೆ. 15 ಚುನಾಯಿತ ಪ್ರತಿನಿಧಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಹಾಗೂ ಸಿಬ್ಬಂದಿ ಇಲ್ಲಿದ್ದಾರೆ.




ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ಕಲಿಕೆ (ಎಡಚಿತ್ರ) ಮಕ್ಕಳಿಗೆ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು

‘ಗ್ರಾಮಗಳಲ್ಲಿ ಡಿಜಿಟಲ್ ರೂಪಾಂತರ ಮತ್ತು ಸ್ಮಾರ್ಟ್ ಕ್ಲಾಸ್, ಶೈಕ್ಷಣಿಕ ಬೆಂಬಲ, ಆರೋಗ್ಯ ಪೋಷಣೆ, ನೈರ್ಮಲ್ಯ, ಮಕ್ಕಳ ಹಕ್ಕು ಸುರಕ್ಷತೆ, ಪಠ್ಯಕ್ರಮ, ಸಮುದಾಯ ತೊಡಗಿಕೊಳ್ಳುವಿಕೆ, ಪರಿಸರದ ಜಾಗೃತಿ ಮುಂತಾದ ಅಂಶಗಳನ್ನು ಇಟ್ಟುಕೊಂಡು ಕೇಂದ್ರ ಸರ್ಕಾರ ಪುರಸ್ಕಾರಕ್ಕೆ ಆಯ್ಕೆ ಮಾಡಿ ₹75 ಲಕ್ಷ ಪ್ರೋತ್ಸಾಹ ಧನ ನೀಡಿರುವುದು ಖುಷಿ ನೀಡಿದೆ’ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ವಸಂತ್ ಕುಮಾರ್ ಅಭಿಪ್ರಾಯಪಟ್ಟರು.


ವಸಂತ್ ಕುಮಾರ್

ಹಾಲ ನಾಯಕನಹಳ್ಳಿ ಗ್ರಾಮ ಪಂಚಾಯಿತಿ ಮೊದಲಿನಿಂದಲೂ ಅಭಿವೃದ್ಧಿ ಕಾರ್ಯಗಳ ಜೊತೆಗೆ ಮಕ್ಕಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಕೊಂಡು ವಿಶೇಷ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸಲು ಪ್ರೋತ್ಸಾಹಿಸು ವುದು, ಮಕ್ಕಳ ಅಧಿವೇಶನ, ಶಿಕ್ಷಣ, ಸ್ವಚ್ಛತೆ, ಪರಿಸರ ಪ್ರಜ್ಞೆಯನ್ನು ಮಕ್ಕಳಲ್ಲಿ ಬೆಳೆಸಲಾಗುತ್ತಿದೆ. ಬೆಂಗಳೂರು ನಗರದಲ್ಲಿ ಹಾಲನಾಯಕನಹಳ್ಳಿ ಗ್ರಾಮ ಪಂಚಾಯಿತಿ ಮಾತ್ರ ಪುರಸ್ಕಾರಕ್ಕೆ ಪಾತ್ರವಾಗಿದೆ ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜುನಾಥ್ ಅವರು ಹೇಳಿದರು.


ಮಂಜುನಾಥ್

‘ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್, ಅನಿಲ ಕೊರತೆ ಇಲ್ಲ’

ಗೊಂದಲ ಸರಿಪಡಿಸಲು ಕಾಲಮಿತಿಯೊಳಗೆ ಕ್ರಮ: ತೈಲ ಕಂಪನಿಗಳ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ನಡುವೆಯೂ ಕರ್ನಾಟಕದಲ್ಲಿ ಪೆಟ್ರೋಲ್, ಡೀಸೆಲ್ ವಿತರಣೆಯಲ್ಲಿ ಕೊರತೆಯಾಗಿಲ್ಲ. ಗೃಹ ಹಾಗೂ ವಾಣಿಜ್ಯ ಸಿಲಿಂಡರ್, ಆಟೊ ಎಲ್‌ಪಿಜಿ ವಿತರಣೆಯಲ್ಲಿ ಆಗುತ್ತಿರುವ ಗೊಂದಲಗಳಿಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ’ ಎಂದು ತೈಲ ಮಾರುಕಟ್ಟೆ ಕಂಪನಿಗಳು ಭರವಸೆ ನೀಡಿವೆ.



ಸಿದ್ಧಾರ್ಥ ಅಗರವಾಲ್

‘ಮಾರ್ಚ್ ತಿಂಗಳಲ್ಲಿ ಆತಂಕದ ಕಾರಣದಿಂದ ರಾಜ್ಯದಲ್ಲಿ ದಿನಕ್ಕೆ ಬುಕ್ಕಿಂಗ್ ಪ್ರಮಾಣ 3.75 ಲಕ್ಷಕ್ಕೆ ಏರಿಕೆಯಾಗಿತ್ತು. ಇದರಿಂದ ವಿತರಣಾ ಅವಧಿ ವಿಳಂಬವಾಗಿತ್ತು. ಆದರೆ, ಈಗ ಪರಿಸ್ಥಿತಿ ಸ್ಥಿರವಾಗಿದೆ. ಬುಕ್ಕಿಂಗ್ ಪ್ರಮಾಣ ದಿನಕ್ಕೆ 3.06 ಲಕ್ಷಕ್ಕೆ ಇಳಿಕೆಯಾಗಿದ್ದು ವಿತರಣಾ ಅವಧಿ ಸಹಜ ಸ್ಥಿತಿಗೆ ಮರಳಿದೆ’ ಎಂದು ತೈಲ ಕಂಪನಿಗಳ ಕರ್ನಾಟಕದ ನೋಡಲ್ ಅಧಿಕಾರಿ ಸಿದ್ಧಾರ್ಥ ಅಗರವಾಲ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಕಳೆದ ತಿಂಗಳು ರಾಜ್ಯ ಸರ್ಕಾರ ಹೊರಡಿಸಿದ ಮಾರ್ಗಸೂಚಿ ಪ್ರಕಾರ ಆದ್ಯತೆ ಮೇಲೆ ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು ಸೇರಿದಂತೆ ಅಗತ್ಯ ಸೇವೆಗಳಿಗೆ ವಾಣಿಜ್ಯ ಸಿಲಿಂಡರ್ ಒದಗಿಸುತ್ತಿದ್ದೇವೆ. ಹೋಟೆಲ್‌ಗಳಿಗೂ ಗುರಿ ನಿಗದಿಪಡಿಸಲಾಗಿದ್ದು, ಅದರಂತೆ ಹಂಚಿಕೆಯಾಗುತ್ತಿದೆ’ ಎಂದರು.

‘ರಾಜ್ಯದಲ್ಲಿ ಎಲ್‌ಪಿಜಿ ಅನಿಲ ವಿತರಣೆಯಡಿ 12 ಬಾಟ್ಲಿಂಗ್ ಘಟಕ, 1,279 ವಿತರಕರು ಸೇವೆ ಒದಗಿಸುತ್ತಿದ್ದಾರೆ. ರಿಟೇಲ್ ಕ್ಷೇತ್ರದಲ್ಲಿ 7,593 ಇಂಧನ ಮಳಿಗೆ ಹೊಂದಿದೆ. ಇದಲ್ಲದೇ 15 ಮೆಟ್ರಿಕ್ ಟನ್ ಕಚ್ಚಾ ತೈಲ ಸಾಮರ್ಥ್ಯದ ಸಂಸ್ಕರಣಾಗಾರವಿದೆ. ಬೆಂಗಳೂರು, ಮಂಗಳೂರು, ಮೈಸೂರು, ಕಾರವಾರ, ಹುಬ್ಬಳ್ಳಿ, ಬೆಳಗಾವಿ, ವಿಜಯಪುರ, ಕಲಬುರಗಿ ಸೇರಿ 10 ಟರ್ಮಿನಲ್‌ಗಳು ಹಾಗೂ 10 ಬಲ್ಕ್ ಡಿಪೋಗಳು ವಿತರಣೆಗೆ ಅನುವು ಮಾಡಿಕೊಡುತ್ತಿವೆ’ ಎಂದು ವಿವರಿಸಿದರು.

5 ಕೆ.ಜಿ ಸಿಲಿಂಡರ್: ‘ಆರ್ಥಿಕವಾಗಿ ಹಿಂದುಳಿದವರು ಹಾಗೂ ವಲಸಿಗರಿಗೆ 5 ಕೆ.ಜಿ ಎಲ್‌ಪಿಜಿ ಸಿಲಿಂಡರ್ ಮಾರಾಟಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಯಾವುದಾದರೂ ದಾಖಲೆ ನೀಡಿದ ಒಂದೇ ದಿನದಲ್ಲಿ ಸಿಲಿಂಡರ್ ನೀಡಲಾಗುತ್ತಿದೆ. ಮತ್ತೊಂದು ಸಿಲಿಂಡರ್ ಪಡೆಯಲು 5 ದಿನದ ಅವಧಿ ನಿಗದಿಪಡಿಸಲಾಗಿದೆ. ಗ್ರಾಹಕರು 5 ಕೆ.ಜಿ ಸಿಲಿಂಡರ್ ಪಡೆದುಕೊಳ್ಳಬೇಕು’ ಎಂದು ಹೇಳಿದರು.

‘ಗೃಹ ಹಾಗೂ ವಾಣಿಜ್ಯ ಸಿಲಿಂಡರ್ ದುರ್ಬಳಕೆ ಹಾಗೂ ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆಯೂ ಮೇಲ್ವಿಚಾರಣೆ ಬಲಪಡಿಸಲಾಗಿದೆ. ಆಹಾರ ಇಲಾಖೆ ಸಹಯೋಗದಲ್ಲಿ 3,775 ದಾಳಿಗಳನ್ನು ಮಾಡಲಾಗಿದೆ. 35 ಎಫ್‌ಐಆರ್ ದಾಖಲಿಸಲಾಗಿದ್ದು, 20 ಮಂದಿ ಬಂಧಿಸಿ ಸಿಲಿಂಡರ್ ಜಪ್ತಿ ಮಾಡಲಾಗಿದೆ’ ಎಂದರು.

ಹೆಚ್ಚು ಅನಿಲ ಸಂಪರ್ಕಕ್ಕೆ ಅವಕಾಶವಿಲ್ಲ: ಒಂದಕ್ಕಿಂತ ಹೆಚ್ಚು ಅನಿಲ ಸಂಪರ್ಕಕ್ಕೆ ಅವಕಾಶವಿಲ್ಲ ಅಂಥವರನ್ನು ಗುರುತಿಸಿ ಒಂದು ಸಂಪರ್ಕ ರದ್ದುಪಡಿಸಲಾಗುತ್ತಿದೆ. ಸಮಸ್ಯೆ ಯಾದವರು ಸಂಬಂಧಪಟ್ಟ ಅನಿಲ ಹಂಚಿಕೆ ಕಚೇರಿಗೆ ತೆರಳಿ ಇಕೆವೈಸಿ ಮಾಡಿಸಿಕೊಂಡರೆ ಗೊಂದಲ ಬಗೆಹರಿಸಲಾಗುತ್ತಿದೆ ಎಂದರು.

ಪಿಎನ್‌ಜಿಗೆ ಒತ್ತು: ‘ಎಲ್‌ಪಿಜಿ ಬದಲಿಗೆ ಮನೆಗೆ ನೇರ ಅನಿಲ ಸಂಪರ್ಕ ಕಲ್ಪಿಸುವ ಪಿಎನ್‌ಜಿ ಬಳಕೆಗೆ ಉತ್ತೇಜಿಸಲಾಗುತ್ತಿದೆ. ಮಾರ್ಚ್‌ನಲ್ಲಿ 5.01 ಲಕ್ಷ ಪಿಎನ್‌ಜಿ ಗ್ರಾಹಕರ ಗುರಿ ತಲುಪಿದೆ. ಬೆಂಗಳೂರಿನಲ್ಲೂ 3 ಲಕ್ಷ ಮಂದಿ ಸದ್ಯ ಪಿಎನ್‌ಜಿ ಬಳಸುತ್ತಿದ್ದಾರೆ. ಜೂನ್‌ವರೆಗೂ 24 ಸಾವಿರ ಸಂಪರ್ಕ ಕಲ್ಪಿಸುವ ಗುರಿ ಹೊಂದಲಾಗಿದೆ. ಸಣ್ಣ ಪುಟ್ಟ ಅಡೆತಡೆಗಳ ನಡುವೆ ಪಿಎನ್‌ಜಿ ಸೇವೆಗೆ ಗ್ರಾಹಕರನ್ನು ಬದಲಾಯಿಸಲಾಗುತ್ತಿದೆ’ ಎಂದು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನ(ಗೇಲ್) ಸಿಜಿಎಂ ಸಂಜಯಕುಮಾರ್ ಸಿಂಗ್ ವಿವರಿಸಿದರು.

‘ಆಟೊ ಎಲ್‌ಪಿಜಿ ಕೊರತೆ ನಿಜ’

‘ಆಟೊ ಎಲ್‌ಪಿಜಿ ಹಂಚಿಕೆ ವಿಚಾರದಲ್ಲಿ ದೂರುಗಳಿವೆ. ಖಾಸಗಿ ಕಂಪನಿಗಳ ಕಾರ್ಯಾಚರಣೆ ಕಡಿಮೆಯಾದ ಕಾರಣದಿಂದ ತೈಲ ಕಂಪನಿಗಳ ಬೇಡಿಕೆ ಹೆಚ್ಚಿದೆ. ಇದರಿಂದ ಅಲ್ಲಲ್ಲಿ ಸಾಲು ಇರುವುದನ್ನು ಗಮನಿಸಿದ್ದೇವೆ’ ಎಂದು ತೈಲ ಕಂಪನಿಗಳ ಕರ್ನಾಟಕದ ನೋಡಲ್ ಅಧಿಕಾರಿ ಸಿದ್ಧಾರ್ಥ ಅಗರವಾಲ್ ತಿಳಿಸಿದರು.

‘ಕರ್ನಾಟಕದಲ್ಲಿ ತೈಲ ಕಂಪನಿಗಳು ಶೇ 20ರಷ್ಟು ಮಾರುಕಟ್ಟೆ ಪಾಲನ್ನು ಹೊಂದಿವೆ. ಈ ಸೀಮಿತ ಅವಕಾಶದಲ್ಲಿಯೇ ಕಂಪನಿಗಳು ಆಟೊ ಎಲ್‌ಪಿಜಿ ಒದಗಿಸುತ್ತಿವೆ. ತೈಲ ಕಂಪನಿಗಳು ಉತ್ಪಾದನೆ ಹೆಚ್ಚಿಸಿ ಗರಿಷ್ಠ ಲಭ್ಯತೆ ಖಚಿತಪಡಿಸುತ್ತಿವೆ’ ಎಂದು ಹೇಳಿದರು.



ನಗರದ ಅಲಿಯಾನ್ಸ್ ಫ್ರಾಂಸೆಸ್‌ನಲ್ಲಿ ಹೊಸದಾಗಿ ನವೀಕರಿಸಿದ ಗ್ರಂಥಾಲಯ, ಎಸ್. ಎಲ್. ಭೈರಪ್ಪ ಅವರ ಹೆಸರಿನ ಪ್ರದರ್ಶನ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಭಾರತದಲ್ಲಿನ ಫ್ರಾನ್ಸ್ ರಾಯಭಾರಿ ಥಿಯರಿ ಮಾತೂ ಮಾತನಾಡಿದರು. ಅಲಿಯಾನ್ಸ್ ಫ್ರಾಂಸೆಸ್‌ನ ಜೀನ್ ಫ್ರಾಂಕೋಯ್ ಹ್ಯಾನ್ಸ್, ಫ್ರಾನ್ಸ್‌ನ ರಾಜತಾಂತ್ರಿಕ ಅಧಿಕಾರಿ ಮಾರ್ಕ್ ಲಾಮಿ, ಅಲಿಯಾನ್ಸ್ ಫ್ರಾಂಸೆಸ್‌ನ ಅಧ್ಯಕ್ಷರಾದ ಚಿನ್ಮಯ ಚಿಗಟೇರಿ ಉಪಸ್ಥಿತರಿದ್ದರು

ಕಾಂಗ್ರೆಸ್ ನಿಲುವಿಗೆ ಖಂಡನೆ

ಬೆಂಗಳೂರು: ‘ಮುಸ್ಲಿಮರು ಓಟು ಹಾಕಲು ಮಾತ್ರ’ ಎಂಬ ಸಂದೇಶವನ್ನು ದಾವಣಗೆರೆ ಉಪ ಚುನಾವಣೆಯ ಸಂದರ್ಭ ಮತ್ತು ಆನಂತರ ಮುಸ್ಲಿಮರಿಗೆ ಕಾಂಗ್ರೆಸ್ ಒಂದು ಸಂದೇಶ ಕಳುಹಿಸಿದಂತಿದೆ ಎಂದು ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್ ಟೀಕಿಸಿದೆ.

ಪಕ್ಷದೊಳಗಿನ ಹುದ್ದೆಗಳು, ಸ್ಥಾನಮಾನ, ಪ್ರಾತಿನಿಧ್ಯ ಮತ್ತು ಅವಕಾಶಗಳನ್ನು ಹಕ್ಕುಗಳಾಗಿ ಪರಿಗಣಿಸದೇ ದಯೆ ಅಥವಾ ಉಪಕಾರ ಎಂಬಂತೆ ಬಿಂಬಿಸಲಾಗುತ್ತಿದೆ. ಅನ್ಯಾಯದ ವಿರುದ್ಧ ಧ್ವನಿ ಎತ್ತುವವರಿಗೆ ಶಿಸ್ತುಕ್ರಮಗಳ ಬೆದರಿಕೆ ಹಾಕಲಾಗುತ್ತಿದೆ ಎಂದು ಮಹಾಜ್ ರಾಜ್ಯ ಸಂಯೋಜಕ ಮಸೂದ್ ಅಬ್ದುಲ್ ಖಾದಿರ್ ತಿಳಿಸಿದ್ದಾರೆ.

ಮುಗಿದ ಮತ: ದೆಹಲಿಗೆ ಡಿಕೆಶಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯ ಮತದಾನ ಮುಗಿದ ಬೆನ್ನಲ್ಲೇ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಷ್ಟ್ರ ರಾಜಧಾನಿಗೆ ದೌಡಾಯಿಸಿದರು. ರಾಜ್ಯ ಸರ್ಕಾರದ ಅಧಿಕಾರ ಹಂಚಿಕೆ ವಿಷಯದ ಬಗ್ಗೆ ಹೈಕಮಾಂಡ್ ನಾಯಕರನ್ನು ಗುರುವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಾನು ಪಕ್ಷದ ನಾಯಕರನ್ನು ಭೇಟಿಯಾಗಿದ್ದೇನೆ. ನಾನು ನಮ್ಮ ಕೆಲಸ ಮಾಡುತ್ತಿರುತ್ತೇನೆ. ಆದರೆ, ಯಾರನ್ನು ಭೇಟಿಯಾಗಿರುವೆ ಎಂದು ಹೇಳುವುದಿಲ್ಲ. ದೆಹಲಿಗೆ ಗಾಳಿ ಕುಡಿಯಲು ಬಂದಿಲ್ಲ' ಎಂದು ಮಾರ್ಮಿಕವಾಗಿ ಹೇಳಿದರು.

‘ತಮಿಳುನಾಡು, ಕೇರಳ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಚುನಾವಣೆ ಪ್ರವಾಸ ಮಾಡಿದ್ದೆ. ಎಲ್ಲೆಲ್ಲಿ ಏನಾಗಿದೆ ಎಂದು ನಮ್ಮ ನಾಯಕರಿಗೆ ಮಾಹಿತಿ ನೀಡಬೇಕಿದೆ. ಈ ಮೂರು ರಾಜ್ಯಗಳಲ್ಲಿ ಪ್ರಚಾರ ಮಾಡಲು ಪಕ್ಷ ನನಗೆ ಜವಾಬ್ದಾರಿ ನೀಡಿತ್ತು. ಕರ್ನಾಟಕದಲ್ಲಿ ಚುನಾವಣೆ ಮಾಡುವುದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿಯಾಗಿ ನನ್ನ ಕರ್ತವ್ಯ. ಅದನ್ನು ಮಾಡುತ್ತೇನೆ’ ಎಂದು ತಿಳಿಸಿದರು.

ರಾಜ್ಯದಲ್ಲಿ ಬದಲಾವಣೆಗಳ ಬಗ್ಗೆ ಚರ್ಚೆ ಮಾಡುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಜವಾಬ್ದಾರಿ ಸ್ಥಾನದಲ್ಲಿರುವ ನಾನು ಈ ವಿಚಾರವಾಗಿ ಮಾಧ್ಯಮಗಳ ಮುಂದೆ ಚರ್ಚೆ ಮಾಡಲು ಆಗುವುದೇ? ನಾನು ಮಾಧ್ಯಮಗಳ ಮುಂದೆ ಮಾತಾಡುವುದಿಲ್ಲ. ನೀವು ನನ್ನಿಂದ ಈ ಬಗ್ಗೆ ಮಾಹಿತಿ ಪಡೆಯುವ ಪ್ರಯತ್ನವನ್ನೂ ಮಾಡಬೇಡಿ‘ ಎಂದರು.

ಮುಖ್ಯಮಂತ್ರಿ ಆಪ್ತ ಸಚಿವರು ಬುಧವಾರ ಭೇಟಿ ಮಾಡಿ ಚರ್ಚೆ ಮಾಡಿರುವ ಬಗ್ಗೆ ಮಾಹಿತಿ ಇಲ್ಲ. ಯಾರು ಯಾರ ಆಪ್ತರು, ಯಾರಿಗೆ ಆಪ್ತರಲ್ಲ ಎಂಬುದು ನನಗೆ ಗೊತ್ತಿಲ್ಲ. ನಾನು ಈ ಸಭೆಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ‘ ಎಮದು ಅವರು ಹೇಳಿದರು.

‘ಹೈದರಾಬಾದ್ ಗೆ ಕುಟುಂಬ ಸಮೇತ ಹೋಗಿದ್ದೆ, ಅಲ್ಲಿಂದ ದೆಹಲಿಗೆ ಬಂದಿರುವೆ. ಬೆಂಗಳೂರು ಸಮಸ್ಯೆಗಳ ಬಗ್ಗೆ ಕೇಂದ್ರ ಸಚಿವರ ಜೊತೆ ಚರ್ಚೆ ಮಾಡಬೇಕಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಶುಕ್ರವಾರ ಬೆಳಿಗ್ಗೆ 11.45ಕ್ಕೆ ಭೇಟಿ ಮಾಡುತ್ತೇನೆ‘ ಎಂದು ಅವರು ಹೇಳಿದರು.

ಅಲ್ಪಸಂಖ್ಯಾತ ನಾಯಕರ ಅಸಮಾಧಾನದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಅವರು ತಮ್ಮ ಭಾವನೆ ಹಾಗೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ತಪ್ಪಿಲ್ಲ. ಕೆಲವು ಬಾರಿ ನಾವು ಹೇಳಿರುವುದು ಸರಿ ಇಲ್ಲದಿರಬಹುದು. ಕೆಲವು ಬಾರಿ ಅವರು ಹೇಳಿದ್ದು ಸರಿ ಇಲ್ಲದಿರಬಹುದು. ನಾವೆಲ್ಲರೂ ಕೂತು ಚರ್ಚೆ ಮಾಡುತ್ತೇವೆ’ ಎಂದು ಸ್ಪಷ್ಟಪಡಿಸಿದರು.

ಅಲ್ಪಸಂಖ್ಯಾತ ನಾಯಕರ ಅಮಾನತು ವಾಪಸ್ ಪಡೆಯಬೇಕು ಎಂಬ ಆಗ್ರಹದ ಬಗ್ಗೆ ಉತ್ತರಿಸಿದ ಅವರು, ‘ನಾವು ಯಾರನ್ನೂ ಅಮಾನತು ಮಾಡಿಲ್ಲ. ಅವರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ರಾಜೀನಾಮೆ ಪತ್ರದಲ್ಲಿ ಏನಿದೆ ಎಂದು ಒಮ್ಮೆ ವಿಶ್ಲೇಷಣೆ ಮಾಡಿ‘ ಎಂದರು.

ಬಂಡಾಯ ಸಾಹಿತ್ಯ ಅಭಿಯಾನ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಹಮ್ಮಿಕೊಂಡಿರುವ ‘ಬಂಡಾಯ ಸಾಹಿತ್ಯ: ಹೊಸ ತಲೆಮಾರು’ ಅಭಿಯಾನವನ್ನು ವಿವಿಧ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತಿದೆ.



ಬರಗೂರು ರಾಮಚಂದ್ರಪ್ಪ

ಈ ಅಭಿಯಾನಕ್ಕೆ ಬೆಂಗಳೂರಿನಲ್ಲಿ ಮಾರ್ಚ್ 15ರಂದು ಚಾಲನೆ ದೊರೆತಿತ್ತು. ಸಾಹಿತ್ಯ, ಸಮಾಜ ಮತ್ತು ಜನಸಂಸ್ಕೃತಿಗಳ ಬಗ್ಗೆ ತಾತ್ವಿಕ ತಿಳಿವಳಿಕೆ ಮೂಡಿಸುವುದು ಈ ಅಭಿಯಾನದ ಪ್ರಮುಖ ಆಶಯವಾಗಿದೆ.

‘ಇದೇ 25ರಂದು ತುಮಕೂರಿನಲ್ಲಿ ‘ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ ಪಯಣ: ಸಾಮಾಜಿಕ ನೆಲೆಗಳು’ ಎಂಬ ವಿಷಯದ ಮೇಲೆ, 26ರಂದು ರಾಯಚೂರಿನಲ್ಲಿ ‘ಆಧುನಿಕ ಕನ್ನಡ ಸಾಹಿತ್ಯ: ಸಾಮಾಜಿಕ ನಿಲುವಿನ ನಡಿಗೆ’ ಎಂಬ ವಿಷಯದ ಮೇಲೆ ಒಂದು ದಿನದ ವಿಚಾರಸಂಕಿರಣಗಳು ನಡೆಯಲಿವೆ’ ಎಂದು ಸಂಘಟನೆ ಪರವಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ತಿಳಿಸಿದ್ದಾರೆ.

‘ಮೇ 23ರಂದು ಬೆಳಗಾವಿಯಲ್ಲಿ ‘ಕನ್ನಡ ಸಿನಿಮಾ: ಪ್ರಗತಿಪರ ನೆಲೆಗಳ ಸ್ವರೂಪ’ ಎಂಬ ವಿಷಯದ ಮೇಲೆ, ಜೂನ್ ತಿಂಗಳ ಮೊದಲ ವಾರ ಚಿತ್ರದುರ್ಗದಲ್ಲಿ ‘ಸೃಜನಶೀಲತೆ: ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವ’ ವಿಷಯದ ಮೇಲೆ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ’ ಎಂದು ಹೇಳಿದ್ದಾರೆ.

‘ಜೂನ್ ತಿಂಗಳ ಮೂರನೇ ವಾರ ದಾವಣಗೆರೆಯಲ್ಲಿ ಹೊಸತಲೆಮಾರಿನ ಸಾಹಿತಿಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲ ಕಡೆ ಯುವ ಪ್ರತಿಭೆಗಳನ್ನು ಒಳಗೊಂಡ ಕವಿಗೋಷ್ಠಿಗಳು ನಡೆಯಲಿವೆ. ಆಸಕ್ತರು ಭಾಗವಹಿಸಬೇಕು’ ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

‘ಮುಸ್ಲಿಮರಿಗೆ ಕಾಂಗ್ರೆಸ್‌ನ ಅವಶ್ಯಕತೆ ಇಲ್ಲ’

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಮುಸ್ಲಿಂ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಮುಸ್ಲಿಂ ಸಮುದಾಯದ ಧರ್ಮಗುರುಗಳು ದೂರಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮಿಯತ್ ಉಲಮಾ ಬೆಂಗಳೂರು ಘಟಕದ ಅಧ್ಯಕ್ಷ ಮಹಮ್ಮದ್ ಸಲಾಹುದ್ದೀನ್ ಅಯ್ಯೂಬಿ, ಬನ್ನೇರುಘಟ್ಟ ರಸ್ತೆಯ ಬಿಲಾಲ್ ಮಸೀದಿಯ ಮಹಮ್ಮದ್ ಶಾಕೀರುಲ್ಲಾ ರಶಾದಿ, ‘ದಾವಣಗೆರೆಯ ಉಪ ಚುನಾವಣೆಯ ನಂತರ ಯಾವುದೇ ನೋಟಿಸ್ ನೀಡದೇ ನಮ್ಮ ಮುಖಂಡರಾದ ಅಬ್ದುಲ್ ಜಬ್ಬಾರ್ ಹಾಗೂ ನಸೀರ್ ಅಹಮದ್ ಅವರ ವಿರುದ್ಧ ಕಾಂಗ್ರೆಸ್ ಕೈಗೊಂಡಿರುವ ಶಿಸ್ತು ಕ್ರಮ ಖಂಡನೀಯ. ಇದನ್ನು ಕೂಡಲೇ ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

‘ಕಾಂಗ್ರೆಸ್‌ಗೆ ಮುಸ್ಲಿಮರ ಅವಶ್ಯಕತೆ ಇದೆ. ಮುಸ್ಲಿಮರಿಗೆ ಕಾಂಗ್ರೆಸ್‌ನ ಅವಶ್ಯಕತೆ ಇಲ್ಲ. ನಮ್ಮ ಸಮುದಾಯದವರು 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದಾರೆ.ಈಗ ನಮ್ಮ ಮುಖಂಡರನ್ನು ಪಕ್ಷದಿಂದ ಉಚ್ಚಾಟನೆ ಮಾಡುತ್ತಿರುವುದು ಸರಿಯಲ್ಲ. ನಸೀರ್ ಅಹಮದ್ ಹಾಗೂ ಅಬ್ದುಲ್ ಜಬ್ಬಾರ್ ಸೇರಿದಂತೆ ನಮ್ಮ ಸಮುದಾಯದ ಮುಖಂಡರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕು’ ಎಂದರು.

‘ರಾಜ್ಯದಲ್ಲಿ 65 ಲಕ್ಷ ಮುಸ್ಲಿಂ ಮತದಾರರು ಇದ್ದಾರೆ. ಇವರೆಲ್ಲರೂ ನಿಮ್ಮ ವಿರುದ್ಧ ಹೋದರೆ ಏನಾಗುತ್ತದೆ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಯೋಚಿಸಬೇಕು. ಸಂವಿಧಾನಬದ್ಧವಾಗಿ ನಮಗೆ ಸಿಗುವ ಹಕ್ಕು ಹಾಗೂ ಅಧಿಕಾರವನ್ನು ನೀಡಬೇಕು. ಇಲ್ಲದಿದ್ದರೆ ನಾವು ಅದನ್ನು ಕಸಿದುಕೊಳ್ಳುತ್ತೇವೆ’ ಎಂದರು.

‘ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷವಾದರೂ ಇದುವರೆಗೂ ಹಿಜಾಬ್, ಮೀಸಲಾತಿ ಸಮಸ್ಯೆಗಳಿಗೆ ಪರಿಹಾರ ನೀಡಿಲ್ಲ. ಗೋಹತ್ಯೆ, ಮತಾಂತರ ಕಾಯ್ದೆಗಳ ಕುರಿತು ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ’ ಎಂದರು.

ಮುಸ್ಲಿಂ ಮುಖಂಡ ಅಬ್ದುಲ್ ರಜಾಕ್ ಮಾತನಾಡಿ, ‘ನಮ್ಮ ನಾಯಕರ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮವನ್ನು ಕೂಡಲೇ ಹಿಂಪಡೆಯಬೇಕು. ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ತ್ರಿಬಲ್ ತಲಾಕ್ ನೀಡುತ್ತೇವೆ’ ಎಂದರು.

ಭೂಸ್ವಾಧೀನ: ನೈಸ್‌ಗೆ 'ಸುಪ್ರೀಂ'ನಲ್ಲಿ ಹಿನ್ನಡೆ

ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಕ್ಕೆ ನ್ಯಾಯಪೀಠ ನಕಾರ

• ಕೆಐಎಡಿಬಿಯ ಹೊಸ ಪ್ರಕ್ರಿಯೆಗಳಿಗೆ ತಡೆ ಇಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ (ಬಿಎಂಐಸಿಪಿ) ಭೂಸ್ವಾಧೀನ ಪ್ರಕ್ರಿಯೆಗಳನ್ನು ರದ್ದುಗೊಳಿಸಿದ್ದ ಕರ್ನಾಟಕ ಹೈಕೋರ್ಟ್‌ನ 2017ರ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ವಕೀಲರ ವಾದ ಆಲಿಸಿದ ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ವಿಭಾಗೀಯ ಪೀಠವು, ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ (ನೈಸ್) ಸಲ್ಲಿಸಿದ್ದ ಸಿವಿಲ್ ಮೇಲ್ಮನವಿ ವಜಾಗೊಳಿಸಿತು.

1966ರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ (ಕೆಐಎಡಿಬಿ) ಕಾಯ್ದೆಯ ಸೆಕ್ಷನ್ 28ರ ಉಪ-ಸೆಕ್ಷನ್ (1) ರ ಅಡಿಯಲ್ಲಿ 1999ರ ಜೂನ್ 2ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ, ಉಪ-ಸೆಕ್ಷನ್ (4) ರ ಅಡಿಯಲ್ಲಿ ಯಾವುದೇ ಪ್ರಕ್ರಿಯೆ ನಡೆಸಿಲ್ಲ ಎಂಬ ಅಂಶವನ್ನು ನ್ಯಾಯಪೀಠ ಗಮನಿಸಿತು.

'ಈ ವಿಷಯ ಗಮನದಲ್ಲಿ ಇಟ್ಟುಕೊಂಡು, ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನೀಡಿದ್ದ ಆದೇಶ ಸರಿಯಾಗಿದೆ. ಆದ್ದರಿಂದ, ಹೈಕೋರ್ಟ್ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಮಗೆ ಯಾವುದೇ ಕಾರಣವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಆದಾಗ್ಯೂ, ಈ ಆದೇಶವು ಪ್ರತಿವಾದಿಯ ಭೂಮಿ ಸೇರಿದಂತೆ ಯಾವುದೇ ಭೂಮಿಯ ಸ್ವಾಧೀನಕ್ಕೆ ಕರ್ನಾಟಕ ಸರ್ಕಾರ ಅಥವಾ ಕೆಐಎಡಿಬಿಯ ಹೊಸ ಪ್ರಕ್ರಿಯೆಗಳನ್ನು ಪ್ರಾರಂಭಿಸುವುದಕ್ಕೆ ತಡೆಯಾಗುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಇದು ನೈಸ್‌ನ ಅಗತ್ಯತೆಗೆ ಅನುಗುಣವಾಗಿ, 2013ರ ಭೂಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆ ಹಾಗೂ 1966ರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಕಾಯ್ದೆಯ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು (ತಿದ್ದುಪಡಿ) ನಿಯಮಗಳಿಗನುಸಾರವಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಮತ್ತು ಭೂಮಾಲೀಕರಿಗೆ ಪರಿಹಾರ ನೀಡುವುದನ್ನು ಒಳಗೊಂಡಿದೆ.



ಪ್ರಮುಖ ಪ್ರತಿವಾದಿ ಲಕ್ಷ್ಮಣ್ ಎಂಬುವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಮಲ್ಲಸಂದ್ರ ಗ್ರಾಮದ 1 ಎಕರೆ 35 ಗುಂಟೆ ಜಾಗ ತನಗೆ ಸೇರಿದ್ದು ಎಂದು ಹೇಳಿಕೊಂಡಿದ್ದರು. ಈ ಜಾಗವನ್ನು ಕೃಷಿಯಿಂದ ಕೃಷಿಯೇತರ ಉದ್ದೇಶಕ್ಕೆ ಭೂಪರಿವರ್ತನೆ ಮಾಡಲಾಗಿದೆ ಎಂದೂ ವಾದಿಸಿದ್ದರು.

ನೈಸ್ ಯೋಜನೆಗಾಗಿ ಕೆಐಎಡಿಬಿ ಕಾಯ್ದೆ 1966 ರ ಸೆಕ್ಷನ್ 28(1)ರ ಅಡಿಯಲ್ಲಿ ಅಧಿಸೂಚನೆ ಹೊರಡಿಸಿರುವುದು 2015ರಲ್ಲಿ ತನ್ನ ಗಮನಕ್ಕೆ ಬಂದಿತ್ತು ಎಂದು ಅವರು ಹೇಳಿದ್ದರು. 16 ವರ್ಷಗಳು ಕಳೆದರೂ ಅಂತಿಮ ಅಧಿಸೂಚನೆ ಹೊರಡಿಸುವುದು ಸೇರಿದಂತೆ ಯಾವುದೇ ಪ್ರಕ್ರಿಯೆಗಳು ಪೂರ್ಣಗೊಂಡಿಲ್ಲ ಎಂದು ಆಕ್ಷೇಪಿಸಿ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

'1999 ರಿಂದ ಭೂಸ್ವಾಧೀನ ಪ್ರಕ್ರಿಯೆಗಳು ಪ್ರಗತಿಯಲ್ಲಿಲ್ಲ. ಹೀಗಾಗಿ, ರಾಜ್ಯ ಸರ್ಕಾರವು ಈ ಭೂಮಿಯ ಸ್ವಾಧೀನ ಕೈಬಿಟ್ಟಿದೆ ಮತ್ತು ಭೂಮಾಲೀಕರಿಗೆ ಬಳಕೆಗೆ ಲಭ್ಯವಿರುತ್ತದೆ ಎಂಬುದನ್ನು ಪರಿಗಣಿಸಲಾಗಿದೆ' ಎಂದು ಅಭಿಪ್ರಾಯಪಟ್ಟಿದ್ದ ಹೈಕೋರ್ಟ್‌ನ ಏಕ ಸದಸ್ಯ ಪೀಠವು ರಿಟ್ ಅರ್ಜಿ ಅಂಗೀಕರಿಸಿತ್ತು. ವಿಭಾಗೀಯ ಪೀಠವು ಏಕ ಸದಸ್ಯ ಪೀಠದ ಆದೇಶ ಎತ್ತಿಹಿಡಿದಿತ್ತು.

ನೈಸ್ ಪರ ಹಿರಿಯ ವಕೀಲ ಆತ್ಮಾರಾಮ್ ನಾಡಕರ್ಣಿ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಪರ ಹಿರಿಯ ವಕೀಲ ಕಿರಣ್ ಸೂರಿ, ಕರ್ನಾಟಕ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹ್ಮದ್ ಮತ್ತು ಭೂಮಾಲೀಕರ ಪರ ಹಿರಿಯ ವಕೀಲ ವಿಕಾಸ್ ಸಿಂಗ್ ವಾದ ಮಂಡಿಸಿದರು.

ಟಿಸಿಎಸ್ ವರ್ಲ್ಡ್ 10ಕೆ ಓಟ ಮೆಟ್ರೊ ಸಂಚಾರ ಬೇಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಓಟದಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಏ.26ರಂದು ಮುಂಜಾನೆ 3 ಗಂಟೆಗೆ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ.

ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ 10ಕೆ ಓಟ ಆರಂಭಗೊಳ್ಳಲಿದೆ. ಮೆಟ್ರೊ ಸಂಚಾರವು ಬೊಮ್ಮಸಂದ್ರ ಟರ್ಮಿನಲ್‌ನಿಂದ ಬೆಳಿಗ್ಗೆ 3ಕ್ಕೆ, ಮಾದಾವರ ಟರ್ಮಿನಲ್‌ನಿಂದ 3.20ಕ್ಕೆ, ರೇಷ್ಮೆ ಸಂಸ್ಥೆ ಟರ್ಮಿನಲ್‌ನಿಂದ 3.30ಕ್ಕೆ ಹಾಗೂ ಚಲ್ಲಘಟ್ಟ ಟರ್ಮಿನಲ್‌ನಿಂದ 3.35ಕ್ಕೆ ಆರಂಭಗೊಳ್ಳಲಿದೆ.

ಮುಖ್ಯಾಂಶಗಳು

- ಮುಂಜಾನೆ 3ಕ್ಕೆ ಮೆಟ್ರೊ ಸಂಚಾರ ಆರಂಭ
- ಮೊದಲ ಒಂದು ಗಂಟೆ ಪ್ರತಿ 15 ನಿಮಿಷಕ್ಕೆ ಮೆಟ್ರೊ

ಮೊದಲ ಒಂದು ಗಂಟೆ ಪ್ರತಿ 15 ನಿಮಿಷಕ್ಕೊಂದು ಮೆಟ್ರೊ ಸಂಚರಿಸಲಿದೆ. ಆ ನಂತರ ಬೆಳಿಗ್ಗೆ 7ರವರೆಗೆ ಪ್ರತಿ 30 ನಿಮಿಷಕ್ಕೊಂದು ಟ್ರಿಪ್ ಇರಲಿದೆ. ಬೆಳಿಗ್ಗೆ 7ರಿಂದ ನಿಯಮಿತ ವೇಳಾಪಟ್ಟಿಯಂತೆ ಸಂಚರಿಸಲಿದೆ. ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಸಂಚಾರ ಆರಂಭವಾಗುತ್ತಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

CONNECT ಕ್ಲಾಸಿಫೈಡ್ಸ್

ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಜಕ್ಕೂರು ಗ್ರಾಮದ ಸ.ನಂ. 18/1, 18/6ಬಿ, 18/7 ಮತ್ತು ನಿವೇಶನ ಸಂಖ್ಯೆ: 388ಎ ಮತ್ತು 388ಬಿ ಯಲ್ಲಿ "M/s ಜಕ್ಕೂರು ವೀವ್ಸ್ ಡೆವೆಲಪರ್ಸ್ ಪ್ರೈವೇಟ್ ಲಿಮಿಟೆಡ್" ರವರ 98 KLD ಸಾಮರ್ಥ್ಯದ "ಸೀವೆಜ್ ಟ್ರೀಟ್ಮೆಂಟ್ ಪ್ಲಾಂಟ್"ಗೆ ಪರಿಷ್ಕೃತ ಪರಿಸರ ವಿಮೋಚನಾ ಪತ್ರ (ಇ.ಸಿ.) ವನ್ನು ಕರ್ನಾಟಕ ರಾಜ್ಯ ಪರಿಸರ ವಿಮೋಚನಾ ಪ್ರಾಧಿಕಾರ (SEIAA) ರವರಿಂದ ಅನುಮತಿಯನ್ನು ದಿನಾಂಕ 31/01/2026, ಇ.ಸಿ ಗುರುತಿನ ಸಂಖ್ಯೆ : EC25C3801KA5816375N, ಕಡತ ಸಂಖ್ಯೆ : SEIAA 313 CON 2025, ರಂತೆ ಸ್ವೀಕರಿಸಲಾಗಿದೆ.
ಸದರಿ ಅನುಮತಿ ಪತ್ರವು ಅರಣ್ಯ ಸಚಿವಾಲಯದ, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಇಲಾಖೆಯ (MOEF&CC) ವೆಬ್‌ಸೈಟ್ https://parivesh.nic.in/ ದಲ್ಲಿ ನೋಡಬಹುದಾಗಿದೆ.

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತ್ಯಾಗರಾಜನಗರದ, 2ನೇ ಅಡ್ಡ ರಸ್ತೆಯ, ಸರ್ವೇ ನಂ. 60/1 (ಹಳೆಯ ಸರ್ವೇ ನಂ 36/2). ಪಿ.ಐ.ಡಿ ಸಂಖ್ಯೆ : 51-39-60/1, ವಾರ್ಡ ಸಂಖ್ಯೆ: 154, ರಲ್ಲಿ "M/s ನೆಸ್ಟೆಲ್ಡ್ ಹಾವೆನ್ ರಿಯಾಲ್ಟಿ ಪ್ರೈವೇಟ್ ಲಿಮಿಟೆಡ್" ರವರ 150 KLD ಸಾಮರ್ಥ್ಯದ "ಸೀವೆಜ್ ಟ್ರೀಟ್ಮೆಂಟ್ ಪ್ಲಾಂಟ್"ಗೆ ಪರಿಸರ ವಿಮೋಚನಾ ಪತ್ರ (ಇ.ಸಿ.) ವನ್ನು ಕರ್ನಾಟಕ ರಾಜ್ಯ ಪರಿಸರ ವಿಮೋಚನಾ ಪ್ರಾಧಿಕಾರ (SEIAA) ದಿಂದ ಅನುಮತಿಯ ಪತ್ರದ ದಿನಾಂಕ 14/01/2026, ಇ.ಸಿ ಗುರುತಿನ ಸಂಖ್ಯೆ : EC25C3801KA5745263N, ಕಡತ ಸಂಖ್ಯೆ : SEIAA 281 CON 2025, ರಂತೆ ಸ್ವೀಕರಿಸಲಾಗಿದೆ.
ಸದರಿ ಅನುಮತಿ ಪತ್ರವು ಅರಣ್ಯ ಸಚಿವಾಲಯದ, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಇಲಾಖೆಯ (MOEF&CC) ವೆಬ್‌ಸೈಟ್ https://parivesh.nic.in ದಲ್ಲಿ ನೋಡಬಹುದಾಗಿದೆ.

PUBLIC NOTICE
To Place your Classified Ads Contact
9731810277

JOB OPPORTUNITIES

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

REAL ESTATE SELLING

Industrial & Factory

Tumkur Road

KIADB CONVERTED: Prime Industrial Land for sale. 50,000 sqft in Vasanthanrasapura Industrial area situated in NH4, Tumkur Road, East facing. Rate 2500/- psqft Negotialbe. Serious buyers contact:- Arif Khan:- 9845021260.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Sites

Ramanagar

SALE SITE EAST 30X40 Survey No-192 BANNIKOPPA VILLAGE BIDADI HOBLI TQ: RAMANAGAR Clear Tittles. Call: 9886019240/ 080-26603673

BUSINESS

Business Offers

Machinery & Tools

FURNITURE MANUFACTURING Machineries For Sale Unit is in Tumkur KIADB Shed Contact Owner: 9845048193/ 9972417196

PERSONAL

Change of Name

CHANGE OF NAME
I, **CHERUVU NAGAMANI,** residing at No.20, Laxmi Nivas, 6th Cross, Manorayanapalya, R.T Nagar Post, Bangalore – 560032, have changed my name to **PALERU NAGAMANI** vide affidavit dated 18-04-2026 sworn before notary Sivakumara M N, Bengaluru. Henceforth I shall be called as **PALERU NAGAMANI** only.

I, ANURADHA DIXIT, Residing at building No - 56, 3rd Floor, Post office Road, Channasandra Bengaluru -560067, have changed my Name to ANURADHA SHUKLA, vide Affidavit dated 23-04-2026, sworn before Notary Veena. J, Bengaluru.

Lost

ಕಳೆದಿದೆ
ವನಿತಾ ಪಿ, ಮನೆ ನಂ. 61, 2ನೇ ಕ್ರಾಸ್, ಮಂಜುನಾಥ ಲೇಔಟ್, ರಾಮಮೂರ್ತಿನಗರ, ಬೆಂಗಳೂರು–16, ಇಲ್ಲಿನ ನಿವಾಸಿಯಾಗಿದ್ದು, ನನ್ನ ಮನೆಯ ಮೂಲ ಉಡುಗೊರೆ ದಾಖಲೆ ಪತ್ರ, ದಾಖಲೆ ಸಂಖ್ಯೆ/ ಗುರುತಿನ ಸಂಖ್ಯೆ KRI-1-0424/2014-15, ನಾವು ಮನೆ ಬದಲಿಸುವಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದರೆ ಈ ನಂಬರ್‌ಗೆ ಕರೆ ಮಾಡಿ. 9742831703

ಹೊರವಲಯದಲ್ಲಿ ನೀರಿನ ಸಮಸ್ಯೆ ಉಲ್ಬಣ

ಬಿರು ಬೇಸಿಗೆ ನಡುವೆ ಹೆಚ್ಚಿದ ನೀರಿನ ಬೇಡಿಕೆ • ಮೇ ತಿಂಗಳಲ್ಲಿ ಸಮಸ್ಯೆ ಉಲ್ಬಣದ ಆತಂಕ

2,600 ಎಂಎಲ್‌ಡಿ ಕಾವೇರಿ ನೀರಿನ ಬೇಡಿಕೆ | **1,700** ಎಂಎಲ್‌ಡಿ ಪೂರೈಕೆ ಪ್ರಮಾಣ | **900** ಎಂಎಲ್‌ಡಿ ಕೊರತೆ ಪ್ರಮಾಣ | **600** ಎಂಎಲ್‌ಡಿ ಕೊಳವೆ ಬಾವಿ ನೀರು ಲಭ್ಯ

• ಉಮೇಶಭಟ್ಟ ಪಿ.ಎಚ್

ಬೆಂಗಳೂರು: ಬಿಸಿಲಿನ ಪ್ರಮಾಣ ಏರುತ್ತಿರುವ ನಡುವೆಯೇ ನಗರದ ಹೊರ ವಲಯಗಳಲ್ಲಿ ನೀರಿನ ಬೇಡಿಕೆಯೂ ಹೆಚ್ಚಾಗುತ್ತಿದ್ದು, ಅಗತ್ಯದಷ್ಟು ಕಾವೇರಿ ನೀರು ಜನರಿಗೆ ಲಭ್ಯವಾಗುತ್ತಿಲ್ಲ.

ಕೆಲವು ಬಡಾವಣೆಗಳಲ್ಲಿ ದಿನ ಬಿಟ್ಟು ದಿನ ನೀರು ಹರಿಸಲಾಗುತ್ತಿದ್ದರೆ, ಕೆಲವು ಕಡೆಯಂತೂ ವಾರದಲ್ಲಿ ಎರಡು ದಿನ ಮಾತ್ರ ಕಾವೇರಿ ನೀರು ವಿತರಣೆ ಮಾಡಲಾಗುತ್ತಿದೆ.

110 ಹಳ್ಳಿಗಳನ್ನು ಒಳಗೊಂಡ ಬೆಂಗಳೂರಿನ ಹೊರ ವಲಯದ ಪ್ರದೇಶಗಳನ್ನು ಗುರಿಯಾಗಿಟ್ಟುಕೊಂಡು ರೂಪಿಸಿದ ಕಾವೇರಿ 5ನೇ ಹಂತದ ನೀರಿನ ಯೋಜನೆ ಸಂಪೂರ್ಣ ಜಾರಿಯಾಗದೇ ಇರುವುದರಿಂದ ಹಲವು ಗ್ರಾಮಗಳಲ್ಲಿ ಕೊಳವೆಬಾವಿ ನೀರನ್ನು ಅವಲಂಬಿಸುವ ಸ್ಥಿತಿಯಿದೆ. ಹಲವೆಡೆ ಕೊಳವೆ ಬಾವಿಗಳೂ ಬತ್ತುತ್ತಿರುವುದರಿಂದ ಅನಿವಾರ್ಯವಾಗಿ ಟ್ಯಾಂಕರ್ ನೀರಿಗೆ ಜನ ಮೊರೆ ಹೋಗುತ್ತಿದ್ದಾರೆ.

ಕೃಷ್ಣರಾಜಪುರ, ಮಹದೇವಪುರ ಸಹಿತ ಹಲವು ಭಾಗಗಳಲ್ಲಿ ಖಾಸಗಿ ಟ್ಯಾಂಕರ್‌ಗಳ ಸಂಚಾರ ಹೆಚ್ಚಿದೆ. ಜಲಮಂಡಳಿಯು ಬೇಸಿಗೆ ವೇಳೆ ನೀರಿನ ಕೊರತೆಯಾಗದಂತೆ ಸುಧಾರಣಾ ಕ್ರಮ ಕೈಗೊಂಡಿದ್ದರೂ ಹಲವು ಭಾಗದಲ್ಲಿ ಸಮಸ್ಯೆ ಉಲ್ಬಣವಾಗುತ್ತಲೇ ಇದೆ.

ಸಮಸ್ಯೆಯ ನಾನಾ ರೂಪ: ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವು ಭಾಗಗಳಲ್ಲಿ ನೀರಿನ ಸಮಸ್ಯೆ ಅಧಿಕವಾಗಿದೆ.



ನೀರು ಒದಗಿಸಲು ಸರದಿಯಲ್ಲಿ ನಿಂತ ಖಾಸಗಿ ಟ್ಯಾಂಕರ್‌ಗಳು

ಎ.ನಾರಾಯಣಪುರ ಭಾಗದ ಜನರಂತೂ ಕಾವೇರಿ ನೀರಿಗೆ ಬೇಡಿಕೆ ಇಟ್ಟು ರೋಸಿ ಹೋಗಿದ್ದಾರೆ.

ಪಕ್ಕದಲ್ಲೇ ಜಲಮಂಡಳಿ ನೀರು ಸಂಗ್ರಹಗಾರ ಇದ್ದರೂ ಕಾವೇರಿ ನೀರು ಬಡಾವಣೆಯವರಿಗೆ ಮಾತ್ರ ಸರಿಯಾಗಿ ಸಿಗುತ್ತಿಲ್ಲ. ಸ್ಥಳೀಯ ಶಾಸಕ ಬೈರತಿ ಬಸವರಾಜ ಅವರ ಮೂಲಕ ಹಲವು ಬಾರಿ ಜಲಮಂಡಳಿಗೆ ಮನವಿ ಸಲ್ಲಿಸಿದ್ದರೂ ಸರಿಯಾಗಿ ಕಾವೇರಿ ನೀರು ಸಿಗುತ್ತಿಲ್ಲ ಎನ್ನುವ ಅಸಮಾಧಾನ ಸ್ಥಳೀಯರಲ್ಲಿದೆ.

'ಎರಡು ವರ್ಷದಿಂದ ನಾರಾಯಣಪುರ ನಿವಾಸಿಯಾಗಿದ್ದೇನೆ. ಕಾವೇರಿ ನೀರು ವಾರದಲ್ಲಿ ಎರಡು ದಿನ ಬಂದರೆ ಅದೇ ಹೆಚ್ಚು. ಬೇಸಿಗೆಯಲ್ಲಿ ಇನ್ನೂ ಕಷ್ಟವೇ. ಕೊಳವೆಬಾವಿ ನೀರು ಹೆಚ್ಚು ಲಭ್ಯವಾಗದೇ ಇರುವುದರಿಂದ ಟ್ಯಾಂಕರ್ ನೀರನ್ನು ಅನಿವಾರ್ಯವಾಗಿ ಪಡೆಯುತ್ತಿದ್ದೇವೆ. 1,000 ಲೀಟರ್ ನೀರಿಗೆ ಕನಿಷ್ಠ ₹700 ಪಾವತಿಸುತ್ತಿದ್ದೇವೆ. ಸರ್ಕಾರ ಕೃಷ್ಣರಾಜಪುರ ಭಾಗದ ಜನರಿಗೆ ಕಾವೇರಿ ನೀರು ನಿಯಮಿತವಾಗಿ ಕೊಡಲಿ' ಎಂದು ಸ್ಥಳೀಯ ನಿವಾಸಿ ಬಾಲಗುರುಸ್ವಾಮಿ ಹೇಳಿದರು.

ಕಗ್ಗದಾಸಪುರ, ಮಾರುತಿನಗರ, ವಿಜ್ಞಾನನಗರ, ಐಟಿಐ ಬಡಾವಣೆ, ವೆಂಕಟಪ್ಪ ಬಡಾವಣೆ, ಕೃಷ್ಣಪ್ಪ ಲೇಔಟ್, ವಿಎಸ್‌ಆರ್ ಲೇಔಟ್‌ನಲ್ಲೂ ವಾರದಲ್ಲಿ ಎರಡು ದಿನ ಮಾತ್ರ ಬರುತ್ತದೆ. ಸಮಯ ನೋಡಿಕೊಂಡು ಜನ ನೀರು ಸಂಗ್ರಹಿಸಿಟ್ಟುಕೊಳ್ಳಬೇಕು.

ಬುಧವಾರ ಮಧ್ಯಾಹ್ನ ಕುಡಿಯಲು ನೀರು ಸಂಗ್ರಹಿಸಿಟ್ಟುಕೊಳ್ಳಲು ಕೆಲಸ ಬಿಟ್ಟು ಮಹಿಳೆಯರು, ಕೊಡ, ಕ್ಯಾನ್‌ಗಳೊಂದಿಗೆ ಬಂದರು. ಮತ್ತೆ ನಾಲ್ಕು ದಿನ ಕಾವೇರಿ ನೀರಿಗಾಗಿ ಕಾಯಬೇಕು ಎಂದು ಅವರು ತಿಳಿಸಿದರು.

ಯಲಹಂಕ ಉಪನಗರ ಭಾಗದಲ್ಲೂ ಕಾವೇರಿ ನೀರು ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿಲ್ಲ. ಈ ಭಾಗದಲ್ಲೂ ಕಾವೇರಿ ಸಂಪರ್ಕ ಪಡೆಯದೇ ಜನ ಕೊಳವೆ ಬಾವಿ ನೀರನ್ನೇ ಹೆಚ್ಚು ಅವಲಂಬಿಸಿದ್ದಾರೆ. ಮಹದೇವಪುರ ಭಾಗದಲ್ಲೂ ಇದೇ ಸಮಸ್ಯೆಯಿದೆ. ಮೇ ತಿಂಗಳಲ್ಲಿ ಈ ಭಾಗದಲ್ಲಿ ಇನ್ನೂ ಪರಿಸ್ಥಿತಿ ಬಿಗಡಾಯಿಸುವ ಆತಂಕವಿದೆ.

ಮಧ್ಯರಾತ್ರಿ ನೀರಿಗೆ ಕಾಯುವ ಜನ: ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ ಭಾಗದಲ್ಲೂ ಕಾವೇರಿ ನೀರನ್ನು ದಿನ ಬಿಟ್ಟು ದಿನ ಒದಗಿಸುತ್ತಿದ್ದಾರೆ. ಕೆಲವೊಂದು ಬಾರಿ ರಾತ್ರಿ ಹೊತ್ತು ನಿದ್ದೆ ಬಿಟ್ಟು ನೀರು ತುಂಬಿಸಿಕೊಳ್ಳಬೇಕಾಗುತ್ತದೆ.

'ನಾಯಂಡಹಳ್ಳಿ ಭಾಗದ ಹಲವು ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಇದೆ. ಕಾವೇರಿ ನೀರು ಬಂದರೂ ಕೊಳವೆ ಬಾವಿ ನೀರಿಗೂ ಹೆಚ್ಚು ಜನ ಅವಲಂಬಿತರಾಗಿದ್ದಾರೆ. ಗೋವಿಂದರಾಜನಗರ ಕ್ಷೇತ್ರ ಶಾಸಕ ಪ್ರಿಯ ಕೃಷ್ಣ ಅವರು ಅಗತ್ಯ ಬಿದ್ದಾಗ ಉಚಿತ ನೀರನ್ನು ಈ ಭಾಗಕ್ಕೆ ಒದಗಿಸುವುದರಿಂದ ಟ್ಯಾಂಕರ್ ಹೊರೆ ಹೆಚ್ಚಿಲ್ಲ' ಎಂದು ಸ್ಥಳೀಯರಾದ ರಾಮೇಗೌಡ ಹೇಳಿದರು.

ಲಗ್ಗೆರೆ ಭಾಗದಲ್ಲೂ ವಾರದಲ್ಲಿ ಎರಡೇ ದಿನ ಕಾವೇರಿ ನೀರು ಸರಬರಾಜು ಆಗುತ್ತಿದೆ. ರಾತ್ರಿ ನೀರು ಬರುವುದರಿಂದ ಯಾವಾಗ ನೀರು ಬರುತ್ತೋ ಎಂದು ಕಾಯುವುದೇ ಬೇಸಿಗೆಯಲ್ಲಿ ಕೆಲಸವಾಗಿದೆ ಎಂದು ವೃದ್ಧೆ ಮಣಿ ಹೇಳಿಕೊಂಡರು.

ಕತ್ರಿಗುಪ್ಪೆ ಭಾಗದ ಐಟಿಐ ಕಾಲೊನಿ ಎತ್ತರದ ಪ್ರದೇಶದಲ್ಲಿರುವುದರಿಂದ ಅಲ್ಲಿಯೂ ನೀರಿನ ಸಮಸ್ಯೆ ಬಿಗಡಾಯಿಸಿದೆ. ಬಾಪೂಜಿನಗರದಲ್ಲೂ ಈ ಸಮಸ್ಯೆಯಿದೆ.

ಕೊಳವೆ ಬಾವಿ ಮೇಲೆ ಅವಲಂಬನೆ: ನಗರದಲ್ಲಿ ಕಾವೇರಿ ನೀರಿನ ಜತೆಗೆ ಹೆಚ್ಚಿನ ಜನ ಕೊಳವೆಬಾವಿ ನೀರನ್ನೂ ಅವಲಂಬಿಸಿದ್ದಾರೆ. ನಗರದಲ್ಲಿ 15,800 ಸಾರ್ವಜನಿಕ ಕೊಳವೆ ಬಾವಿಗಳಿದ್ದು, ಇದರಲ್ಲಿ 15 ಸಾವಿರ ನಿರ್ವಹಣೆಯಲ್ಲಿವೆ. ಬೇಸಿಗೆ ಕಾರಣದಿಂದ ಹಲವು ಕೊಳವೆ ಬಾವಿ ಬತ್ತಿವೆ. ಮೇ ನಲ್ಲಿ ಈ ಪ್ರಮಾಣ ಇನ್ನೂ ಹೆಚ್ಚುವ ಅಂದಾಜಿದೆ.

'ಇನ್ನು ಖಾಸಗಿ ವ್ಯಾಪ್ತಿಯಲ್ಲಿ 4 ಲಕ್ಷಕ್ಕೂ ಅಧಿಕ ಕೊಳವೆಬಾವಿಗಳಿವೆ. 2025ರಲ್ಲಿ ಉತ್ತಮ ಮಳೆಯಾಗಿದ್ದರಿಂದ ಕೊಳವೆಬಾವಿ ನೀರಿಗೆ ಹೆಚ್ಚಿನ ಬೇಡಿಕೆ ಇರಲಿಲ್ಲ. ಈ ಬಾರಿ ಬೇಡಿಕೆ ಹೆಚ್ಚಿದ್ದು, ಕೊಳವೆ ಬಾವಿ ನಿರ್ವಹಣೆ ಮೇಲೆ ನಿಗಾ ವಹಿಸಲಾಗಿದೆ' ಎಂದು ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.



ನಮ್ಮ ಬಡಾವಣೆಯಲ್ಲಿ ಕಾವೇರಿ ನೀರು ಬರುವುದೇ ಸಾಹಸ ಎನ್ನುವಂತಾಗಿದೆ. ಮಧ್ಯರಾತ್ರಿ 3 ಗಂಟೆಗೆ ನೀರು ಬಿಡುತ್ತಾರೆ. ಅದು 20 ನಿಮಿಷ ಬಂದರೆ ಹೆಚ್ಚು
ಎನ್.ರವಿ, ಐಟಿಐ ಲೇಔಟ್, ಕತ್ರಿಗುಪ್ಪೆ



ಬೇಸಿಗೆಯಲ್ಲಿ ಸರಿಯಾಗಿ ಕಾವೇರಿ ನೀರು ಬರೋಲ್ಲ. ನೀರು ಬಿಟ್ಟಾಗ ತುಂಬಿಸಿಕೊಳ್ಳುತ್ತಿದ್ದೇವೆ. ಇರೋದರಲ್ಲೇ ನೀರು ಮಿತವಾಗಿ ಬಳಸುತ್ತೇವೆ
ಶಂಕ್ರಮ್ಮ, ವೆಂಕಟಪ್ಪ ಬಡಾವಣೆ ನಿವಾಸಿ, ಕೆ.ಆರ್.ಪುರ

ಬೇಸಿಗೆಯಾಗಿರುವುದರಿಂದ ನೀರಿನ ಬೇಡಿಕೆ ಪ್ರಮಾಣ ಶೇ 25ರಿಂದ 30ರಷ್ಟು ಹೆಚ್ಚಳವಾಗಿದೆ. ಕೆಲವು ಕಡೆ ಸಮಸ್ಯೆಗಳಿದ್ದರೂ ದೂರು ಆಧರಿಸಿ ಕ್ರಮ ಕೈಗೊಳ್ಳುತ್ತಿದ್ದೇವೆ. ಸಂಚಾರಿ ಕಾವೇರಿ ಟ್ಯಾಂಕರ್ ಮೂಲಕವೂ ನೀರು ಒದಗಿಸುತ್ತಿದ್ದೇವೆ
ಬಿ.ಎಸ್.ದಲಾಯತ್, ಪ್ರಧಾನ ಮುಖ್ಯ ಎಂಜಿನಿಯರ್ ಜಲಮಂಡಳಿ

ಟ್ಯಾಂಕರ್ ದರದಲ್ಲಿ ಏರಿಕೆ

ಏಪ್ರಿಲ್‌ನಲ್ಲಿ ಕಾವೇರಿ ನೀರು ಸರಬರಾಜು ಪ್ರಮಾಣದಲ್ಲಿ ಕಡಿಮೆಯಾಗಿ, ಕೊಳವೆಬಾವಿಗಳೂ ಬತ್ತುತ್ತಿರುವ ಕಾರಣಕ್ಕೆ ಹಲವು ಭಾಗದಲ್ಲಿ ಟ್ಯಾಂಕರ್‌ಗಳನ್ನು ಅವಲಂಬಿಸುತ್ತಿದ್ದಾರೆ.

ಏಳು ಸಾವಿರ ಲೀಟರ್‌ನಿಂದ 13 ಸಾವಿರ ಲೀಟರ್ ಟ್ಯಾಂಕರ್ ನೀರಿಗೆ ₹1 ಸಾವಿರದಿಂದ ₹4 ಸಾವಿರದವರೆಗೂ ದರ ನಿಗದಿಪಡಿಸಲಾಗಿದೆ. ಬೇಡಿಕೆ ಹೆಚ್ಚಿದಂತೆ, ಅದಕ್ಕಿಂತ ಹೆಚ್ಚಾಗಿ ಕನಿಷ್ಠ ₹200 ಪಡೆಯುತ್ತಾರೆ.

'ನಾವು ಕೊಳವೆ ಬಾವಿ ಮಾಲೀಕರಿಗೆ ಹಣ ನೀಡಿ, ತಂದು ಮಾರಾಟ ಮಾಡುತ್ತೇವೆ. ಬೇಡಿಕೆ ಹೆಚ್ಚಿರುವುದರಿಂದ ದರದಲ್ಲಿ ಏರಿಕೆಯಾಗಿದೆ. ಈಗ ಟ್ಯಾಂಕರ್ ಬೇಡಿಕೆ ಪ್ರಮಾಣ ಶೇ 30ರಷ್ಟು ಹೆಚ್ಚಳವಾಗಿದೆ' ಎಂದು ಟ್ಯಾಂಕರ್ ಮಾಲೀಕರೊಬ್ಬರು ತಿಳಿಸಿದರು.



ಕೃಷ್ಣರಾಜಪುರ ಸಮೀಪದ ಎ.ನಾರಾಯಣಪುರದಲ್ಲಿ ಕಾವೇರಿ ನೀರು ಸಂಗ್ರಹಿಸಿಕೊಂಡು ಹೊರಟ ಮಹಿಳೆ

ಮಂಡಳಿಗೆ ಹೆಚ್ಚಿದ ಆದಾಯ

ಕಾವೇರಿ ಸಂಪರ್ಕ ಪಡೆಯದ ಅಪಾರ್ಟ್‌ಮೆಂಟ್‌ಗಳ ಜತೆಗೆ ಬೇಡಿಕೆ ಇರುವ ಕಡೆಗೆ ಕಾವೇರಿ ನೀರು ಒದಗಿಸಲು ವರ್ಷದ ಹಿಂದೆ ಆರಂಭಿಸಿದ ಸಂಚಾರಿ ಕಾವೇರಿ ಟ್ಯಾಂಕರ್ ಸೇವೆಯಿಂದ ಜಲಮಂಡಳಿಗೆ ಉತ್ತಮ ಆದಾಯ ಲಭಿಸುತ್ತಿದೆ.

11 ತಿಂಗಳಲ್ಲೇ 47,357 ಟ್ರಿಪ್ ನೀರು ಸರಬರಾಜು ಮಾಡಿದ್ದರಿಂದ ₹4.87 ಕೋಟಿ ಆದಾಯ ಮಂಡಳಿಗೆ ಬಂದಿದೆ. ಇದರಲ್ಲಿ ಅಪಾರ್ಟ್‌ಮೆಂಟ್‌ಗಳ ಬಲ್ಕ್ ಬೇಡಿಕೆ ಹಾಗೂ ಆನ್‌ಲೈನ್ ಮೂಲಕ ಗ್ರಾಹಕರು ನೋಂದಾಯಿಸಿಕೊಂಡು ನೀರು ಪಡೆದಿರುವುದು ಸೇರಿದೆ.

ಫೆಬ್ರುವರಿಯಲ್ಲಿ ಅತಿ ಹೆಚ್ಚು ₹65.40 ಲಕ್ಷ, ಮಾರ್ಚ್‌ನಲ್ಲಿ ₹42.14 ಲಕ್ಷ, ಏಪ್ರಿಲ್‌ನಲ್ಲಿ ಈವರೆಗೂ ₹30.35 ಲಕ್ಷ ಆದಾಯ ಮಂಡಳಿಗೆ ಬಂದಿದೆ.

'220 ಟ್ಯಾಂಕರ್‌ಗಳನ್ನು ಬಳಸಿ, ನಗರದ 90 ನೀರು ಸಂಗ್ರಹ ಸ್ಥಳಗಳಿಂದ ಕಾವೇರಿ ನೀರು ಸರಬರಾಜು ಮಾಡುತ್ತಿದ್ದೇವೆ. ಮೇ ನಲ್ಲಿ ಹೆಚ್ಚಿನ ಬೇಡಿಕೆ ಬರುವ ನಿರೀಕ್ಷೆಯಿದ್ದು, ಇದಕ್ಕೂ ಸಿದ್ದತೆ ಮಾಡಿಕೊಳ್ಳುತ್ತಿದ್ದೇವೆ. ಸಂಚಾರಿ ಕಾವೇರಿ ಟ್ಯಾಂಕರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ಸಂಚಾರಿ ಕಾವೇರಿ'ಯಲ್ಲಿ 4 ಸಾವಿರ ಲೀಟರ್‌ಗೆ ₹660, 6 ಸಾವಿರ ಲೀಟರ್‌ಗೆ ₹750, 12 ಸಾವಿರ ಲೀಟರ್‌ಗೆ ₹1,290 ದರ ನಿಗದಿಪಡಿಸಲಾಗಿದೆ.

ಕರ್ನಾಟಕ ಪ್ರಕಾಶಕರ ಸಂಘದಿಂದ ವಿಶ್ವ ಪುಸ್ತಕ, ಕೃತಿ ಸ್ವಾಮ್ಯ ದಿನಾಚರಣೆ

'ಗ್ರಂಥಾಲಯ ಇಲಾಖೆಗೆ ಚಿಕಿತ್ಸೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಂಥಾಲಯ ಇಲಾಖೆಗೆ ಚಿಕಿತ್ಸೆ ನೀಡುವ ಜತೆಗೆ ಸಮಗ್ರ ಪುಸ್ತಕ ನೀತಿಯನ್ನು ಸರ್ಕಾರ ರೂಪಿಸಬೇಕು' ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಒತ್ತಾಯಿಸಿದರು.

ಕರ್ನಾಟಕ ಪ್ರಕಾಶಕರ ಸಂಘ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಗುರುವಾರ ಆಯೋಜಿಸಿದ್ದ ವಿಶ್ವ ಪುಸ್ತಕ ಹಾಗೂ ಕೃತಿಸ್ವಾಮ್ಯ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಗ್ರಂಥಾಲಯ ಇಲಾಖೆ ನಿರೀಕ್ಷೆಗೆ ಪೂರಕವಾಗಿ ಕೆಲಸ ಮಾಡದೇ ಇರುವುದರಿಂದ ಸಮಗ್ರ ನೀತಿ ತಂದರೆ ಒಳ್ಳೆಯದಾಗಬಹುದು. ಇಲ್ಲದೇ ಇದ್ದರೆ ಇಲಾಖೆ ಖರೀದಿಸಿದ ಪುಸ್ತಕಗಳು ಓದುಗರಿಗೆ ತಲುಪದೇ ಗೋದಾಮುಗಳಲ್ಲಿ ಉಳಿಯಲಿದೆ' ಎಂದು ಹೇಳಿದರು.

'ಇದರ ಜತೆಗೆ ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹ ಮಾಡುತ್ತಿರುವ ಗ್ರಂಥಾಲಯ ಕರವನ್ನು ಪ್ರತ್ಯೇಕ ಶೀರ್ಷಿಕೆಯಡಿ ಸಂಗ್ರಹಿಸಿ ಗ್ರಂಥಾಲಯ, ಪುಸ್ತಕ ಸಂಸ್ಕೃತಿ ಬೆಳೆಸಲು ಬಳಸುವಂತಾಗಬೇಕು. ಶಿಕ್ಷಣ ಇಲಾಖೆಯೂ ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಕಾಲೇಜುಗಳಲ್ಲಿ ಕಡ್ಡಾಯವಾಗಿ ಗ್ರಂಥಾಲಯ ಆರಂಭಿಸಲು ಕ್ರಮ ವಹಿಸಬೇಕು' ಎಂದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ನಿವೃತ್ತ ಐಎಎಸ್ ಅಧಿಕಾರಿ ಐ.ಎಂ.ವಿಠ್ಠಲಮೂರ್ತಿ, 'ಹಿಂದೆಲ್ಲಾ ಓದುವ, ಬರೆಯುವ ವಿದ್ವಾಂಸರಿದ್ದರು. ಪಾಠ ಕೇಳಿಸಿಕೊಂಡು ವಿದ್ಯಾರ್ಥಿಗಳೂ ಪುಸ್ತಕ ಓದುತ್ತಿದ್ದರು. ಈಗ ಕಾಲೇಜುಗಳಲ್ಲಿ ಓದುವ ಸಂಸ್ಕೃತಿ ಕಡಿಮೆಯಾಗಿದೆ. ಪುಸ್ತಕ ಸಂಸ್ಕೃತಿ ಬೆಳೆಸಲು ಕಾಲೇಜುಗಳಲ್ಲಿ ಕಾರ್ಯಕ್ರಮ ರೂಪಿಸಬೇಕು' ಎಂದು ಹೇಳಿದರು.

ಪತ್ರಕರ್ತೆ ಶಾಂತಲಾ ಧರ್ಮರಾಜ್ ಮಾತನಾಡಿ, 'ದಾನಚಿಂತಾಮಣಿ ಅತ್ತಿಮಬ್ಬೆ ಅವರೇ ಕನ್ನಡದ ಮೊದಲ ಪ್ರಕಾಶಕಿ. ಆಗಲೇ ಕೈಯಲ್ಲಿ ಬರೆದು 1 ಸಾವಿರ ಕೃತಿಯನ್ನು ಜನಾರ್ಪಣೆಗೊಳಿಸಿದ ಹಿರಿಮೆ ಅವರದ್ದು. ಅವರ ಹೆಸರಲ್ಲಿ ಪ್ರಕಾಶಕರ ಸಂಘ ಕಾರ್ಯಕ್ರಮ ರೂಪಿಸಬೇಕು' ಎಂದರು.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ಜಿ. ಅರುಣ್ ಕುಮಾರ್ (ಪುಸ್ತಕ ವಿನ್ಯಾಸ ಗೌರವ), ವೈ.ಜಿ. ಮುರುಳೀಧರನ್ (ಪುಸ್ತಕ ಅರಿವಿನ ಗೌರವ), ಎಚ್‌ಎ ಪುರುಷೋತ್ತಮ ರಾವ್ (ಪುಸ್ತಕ ಪರಿಚಾರಿಕೆ ಗೌರವ), ವಿಜಯಲಕ್ಷ್ಮಿ ಕತ್ತಿ (ಪುಸ್ತಕ ಪರಿಚಾರಿಕೆ ಗೌರವ), ಯಮುನಾ ಗಾಂವ್ಕರ್(ನಂಜನಗೂಡು ತಿರುಮಲಾಂಬ ಮಹಿಳಾ ಪ್ರಕಾಶನ ಪ್ರಶಸ್ತಿ), ಕೆ. ವೆಂಕಟೇಶ್ (ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ), ಎಂ. ವೆಂಕಟೇಶ್ (ಮುದ್ರಣ ಗೌರವ) ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಜಿ. ಎನ್ ಮೋಹನ್, ಕೆ. ರಾಜಕುಮಾರ್, ಎನ್ ರವಿಕುಮಾರ್, ಆರ್ ಪೂರ್ಣಿಮಾ, ಐ. ಎಂ. ವಿಠ್ಠಲಮೂರ್ತಿ, ಶಾಂತಲಾ ಧರ್ಮರಾಜ್, ವಸುಂಧರಾ ಭೂಪತಿ, ಯು. ಪ್ರೇಮಚಂದ್ರ, ರವೀಂದ್ರ ಸಿರಿವರ ಮತ್ತು ವಸುಧೇಂದ್ರ ಉಪಸ್ಥಿತರಿದ್ದರು
–ಪ್ರಜಾವಾಣಿ ಚಿತ್ರ

ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ

'ಗ್ರಂಥಾಲಯ ಇಲಾಖೆ ತಮ್ಮ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ' ಎಂದು ಪ್ರಕಾಶಕರ ಸಂಘದ ಪದಾಧಿಕಾರಿಗಳು ಕಪ್ಪು ಪಟ್ಟಿ ಧರಿಸಿ ವಿಶ್ವ ಪುಸ್ತಕ ದಿನದಲ್ಲಿ ಆಕ್ರೋಶ ಹೊರ ಹಾಕಿದರು.

'2020ರಲ್ಲಿ ಖರೀದಿ ಮಾಡಿದ ಪುಸ್ತಕಗಳ ಲೇಖಕರು ಹಾಗೂ ಪ್ರಕಾಶಕರ ಬಾಕಿಯನ್ನೂ ಈವರೆಗೂ ಬಿಡುಗಡೆ ಮಾಡಿಲ್ಲ. 2022ರಲ್ಲಿ ಆಯ್ಕೆ ಮಾಡಿದ ಪಟ್ಟಿ ಬಿಡುಗಡೆ ಮಾಡಿಲ್ಲ. ಗ್ರಂಥಾಲಯ ಇಲಾಖೆ ಕಾರ್ಯವೈಖರಿ ಸರಿಪಡಿಸಿಕೊಳ್ಳುವುದು ಸೇರಿದಂತೆ ಹಲವು ವಿಚಾರವಾಗಿ 180 ಬಾರಿ ಪತ್ರ ಬರೆದರೂ ಒಂದು ಬಾರಿಯೂ ಉತ್ತರ ನೀಡಿಲ್ಲ. ಆಯವ್ಯಯವನ್ನು ಬರೀ 15 ನಿಮಿಷದಲ್ಲಿ ಮಂಡಿಸಿ ಅನುಮತಿ ಪಡೆದರೂ ಬಳಸದೇ ಇರುವುದನ್ನು ವಿರೋಧಿಸಿ ನಮ್ಮ ಪ್ರತಿಭಟನೆ ದಾಖಲಿಸಿದ್ದೇವೆ' ಎಂದು ಸಂಘದ ಕಾರ್ಯದರ್ಶಿ ನ.ರವಿಕುಮಾರ್ ಹೇಳಿದರು.

ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಲು ಜೆಡಿಎಸ್ ಒತ್ತಾಯ

'ತ್ವರಿತವಾಗಿ ಚುನಾವಣೆ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳು, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ತ್ವರಿತವಾಗಿ ನಡೆಸುವಂತೆ ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗದ ಮೇಲೆ ಒತ್ತಡ ಹಾಕಲು ಜೆಡಿಎಸ್ ನಿರ್ಧರಿಸಿದೆ.

ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ತಕ್ಷಣವೇ ಚುನಾವಣೆ ನಡೆಸಿದರೆ ಐದರಲ್ಲೂ ಕಾಂಗ್ರೆಸ್ ಸೋಲುವ ಸಾಧ್ಯತೆ ಇದೆ. ಈ ಕುರಿತು ಆತಂಕಗೊಂಡಿರುವ ರಾಜ್ಯ ಸರ್ಕಾರ ಚುನಾವಣೆ ಮುಂದೂಡುವ ನಾಟಕ ಮಾಡುತ್ತಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಜೂನ್ 30ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗವು ತಕ್ಷಣವೇ ನಿರ್ದೇಶನ ನೀಡಬೇಕು. ಇಲ್ಲದಿದ್ದರೆ ನಿರಂತರ ಹೋರಾಟ ಹಮ್ಮಿಕೊಳ್ಳಬೇಕು ಎಂದು ಎಂ.ಕೃಷ್ಣಾ ರೆಡ್ಡಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಜೆಡಿಎಸ್ ಪ್ರಮುಖರ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಪಾಲಿಕೆಗಳ ಚುನಾವಣೆ ಸೆಪ್ಟೆಂಬರ್‌ಗೆ ಮುಂದೂಡುವಂತೆ ಜಿಬಿಎಯು ಸರ್ಕಾರಕ್ಕೆ ಪತ್ರ ಬರೆದಿದೆ. ಜಿಬಿಎ ಮನವಿಯನ್ನು ಆಯೋಗವು ಪರಿಗಣಿಸಬಾರದು. ಬಿಬಿಎಂಪಿಗೆ ಚುನಾವಣೆ ನಡೆದು 11 ವರ್ಷಗಳಾಗಿವೆ. ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ ಕಾಲಮಿತಿಯ ಒಳಗೆ ಚುನಾವಣೆ ನಡೆಸಬೇಕು. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಅವಧಿ ಮುಗಿದು ಐದು ವರ್ಷಗಳಾದರೂ ಚುನಾವಣೆ ನಡೆಸಿಲ್ಲ. ವಿಳಂಬ ನೀತಿಯಿಂದ ಎಲ್ಲ ಪಕ್ಷದ ಕಾರ್ಯಕರ್ತರಿಗೂ ಅನ್ಯಾಯವಾಗಿದೆ. ಸ್ಥಳೀಯ ಹಂತದಲ್ಲಿ ಪ್ರಜಾಪ್ರಭುತ್ವ ನಾಶ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ಜಿಲ್ಲಾ ಹಂತದಲ್ಲಿ ಹೋರಾಟ ಹಮ್ಮಿಕೊಳ್ಳಲು ಸಮಿತಿಯಲ್ಲಿ ಚರ್ಚಿಸಲಾಗಿದೆ.

ಪ್ರಮುಖರ ಸಮಿತಿ ಸದಸ್ಯರಾದ ನಿಖಿಲ್ ಕುಮಾರಸ್ವಾಮಿ, ಸಿ.ಪುಟ್ಟರಾಜು, ಮಲ್ಲೇಶ್‌ಬಾಬು, ಕೆ.ಬಿ.ಪ್ರಸನ್ನಕುಮಾರ್, ಗೋವಿಂದರಾಜು, ಮಾಗಡಿ ಮಂಜುನಾಥ್, ಸಮೃದ್ಧಿ ಮಂಜುನಾಥ್, ತಿಮ್ಮರಾಯಪ್ಪ, ಸುನೀತಾ ಚೌವ್ಹಾಣ್ ಭಾಗವಹಿಸಿದ್ದರು.

ಜಿಲ್ಲಾವಾರು ಪ್ರವಾಸ



ಎಂ.ಕೃಷ್ಣಾರೆಡ್ಡಿ

ಸ್ಥಳೀಯ ಸಂಸ್ಥೆಗಳ ಚುನಾವಣೆಗಾಗಿ ಜೆಡಿಎಸ್ ಪಕ್ಷವನ್ನು ಬಲಗೊಳಿಸಲಾಗುತ್ತಿದೆ. ಕಾರ್ಯಕರ್ತರನ್ನು ಸಜ್ಜುಗೊಳಿಸಲಾಗುತ್ತಿದೆ. ಎಲ್ಲ ಜಿಲ್ಲೆಗಳಿಗೂ ಭೇಟಿ ನೀಡಿ, ಜಿಲ್ಲಾ ಅಧ್ಯಕ್ಷರು, ಪದಾಧಿಕಾರಿಗಳ ಜತೆ ಚರ್ಚೆ ನಡೆಸಲಾಗುವುದು. ಪಕ್ಷಕ್ಕಾಗಿ ದುಡಿಯುವವರಿಗೆ ಮನ್ನಣೆ, ಆದ್ಯತೆ ನೀಡಲಾಗುವುದು ಎಂದು ಸಮಿತಿಯ ಸಭೆಯ ನಂತರ ಕೃಷ್ಣಾರೆಡ್ಡಿ ಮಾಹಿತಿ ನೀಡಿದರು.

ಪಕ್ಷದ ಬೆಳ್ಳಿ ಮಹೋತ್ಸವ ಸಮಾರಂಭವನ್ನು ಜುಲೈ ಒಳಗೆ ಬಾಕಿ ಇರುವ ಎಲ್ಲ ಜಿಲ್ಲೆ, ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಬೇಕು ಎಂದು ಎಲ್ಲ ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಅಧ್ಯಕ್ಷರಿಗೆ ಸೂಚಿಸಲಾಗಿದೆ ಎಂದರು.

ಅಭ್ಯರ್ಥಿ ಘೋಷಣೆ: ಬಿಜೆಪಿ ನಡೆಗೆ ನಿಖಿಲ್ ಅಸಮಾಧಾನ

ಪ್ರಸಕ್ತ ವರ್ಷದ ಕೊನೆಗೆ ನಡೆಯಲಿರುವ ವಿಧಾನಪರಿಷತ್ ಚುನಾವಣೆಗೆ ಏಕಪಕ್ಷೀಯವಾಗಿ ಅಭ್ಯರ್ಥಿಗಳನ್ನು ಘೋಷಿಸಿದ ಬಿಜೆಪಿ ನಿರ್ಧಾರಕ್ಕೆ ಯುವ ಜೆಡಿಎಸ್ ಅಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಮಿತ್ರ ಪಕ್ಷ ಬಿಜೆಪಿ ಈಗಾಗಲೇ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ. ಈ ವಿಷಯವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ವರಿಷ್ಠರ ಗಮನಕ್ಕೆ ತಂದಿದ್ದಾರೆ ಎಂದರು.

ಪಾಲಿಕೆ ಹೆಸರಿನಲ್ಲಿ ವಂಚನೆ ಯತ್ನ: ಜಾಗ್ರತೆಗೆ ಮನವಿ

ಬೆಂಗಳೂರು: ಜಿಬಿಎ ಮುಖ್ಯ ಆಯುಕ್ತ ಹಾಗೂ ನಗರ ಪಾಲಿಕೆಗಳ ಆಯುಕ್ತರ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ನಕಲಿ ಖಾತೆ ಸೃಷ್ಟಿಸಿ, ನಾಗರಿಕರನ್ನು ವಂಚಿಸುವ ಯತ್ನ ನಡೆಯುತ್ತಿದೆ. ನಾಗರಿಕರು ಜಾಗ್ರತೆ ವಹಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತರು ಮನವಿ ಮಾಡಿದ್ದಾರೆ.

ಜಿಬಿಎ ಮುಖ್ಯ ಆಯುಕ್ತರು ಹಾಗೂ ನಗರ ಪಾಲಿಕೆಗಳ ಆಯುಕ್ತರ ಹೆಸರು, ಹುದ್ದೆ ಮತ್ತು ಭಾವಚಿತ್ರಗಳನ್ನು ದುರುಪಯೋಗಪಡಿಸಿಕೊಂಡು ವಾಟ್ಸ್‌ಆ್ಯಪ್ ವಂಚನೆ ಯತ್ನಗಳು ನಡೆಯುತ್ತಿದೆ. ಈ ಖಾತೆಗಳ ಮೂಲಕ ಅಧಿಕಾರಿಗಳಿಗೆ ನಾನಾ ರೀತಿಯಲ್ಲಿ ಸಂದೇಶಗಳನ್ನು ಕಳುಹಿಸಿ ಹಣಕಾಸು ಸಹಾಯ ಕೇಳುತ್ತಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಸೈಬರ್ ಅಪರಾಧ ಪೊಲೀಸ್ ಠಾಣೆಗಳಲ್ಲಿ ತಕ್ಷಣ ದೂರು ದಾಖಲಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ಅಂತರರಾಷ್ಟ್ರೀಯ ಸಂಖ್ಯೆಗಳಿಂದ ಸಂದೇಶಗಳು ಕಳುಹಿಸಿರುವುದು ಕಂಡುಬಂದಿದೆ. ಜಿಬಿಎ ಹಾಗೂ ನಗರ ಪಾಲಿಕೆಗಳ ಅಧಿಕಾರಿಗಳು/ಸಿಬ್ಬಂದಿ ಮತ್ತು ಸಾರ್ವಜನಿಕರಿಗೆ ಅನಧಿಕೃತ ಸಂಖ್ಯೆಗಳಿಂದ ವಾಟ್ಸ್‌ಆ್ಯಪ್ ಸಂದೇಶಗಳು ಬಂದಲ್ಲಿ ತಕ್ಷಣವೇ ಹತ್ತಿರದ ಪೊಲೀಸ್ ಠಾಣೆಗಳಿಗೆ ದೂರು ಸಲ್ಲಿಸಬೇಕು.

ವಾಟ್ಸ್‌ಆ್ಯಪ್ ಅಥವಾ ಯಾವುದೇ ಸಾಮಾಜಿಕ ಜಾಲತಾಣಗಳಿಂದ ಅನುಮಾನಾಸ್ಪದ ಕರೆಗಳು ಅಥವಾ ಸಂದೇಶಗಳು ಬಂದಲ್ಲಿ ಜಿಬಿಎ ಸಹಾಯವಾಣಿ 1533ಕ್ಕೆ ಕರೆ ಮಾಡಿ ಮಾಹಿತಿ ನೀಡಲು ಕೋರಲಾಗಿದೆ.

ನೋಡಿ, ಇಲ್ಲಿದೆ ಕಸ!



ಹೊಸಕೆರೆಹಳ್ಳಿಯ ಸಪ್ತಗಿರಿ ನಗರಕ್ಕೆ ನಿಯಮಿತವಾಗಿ ಕಸ ಸಂಗ್ರಹದ ವಾಹನ ಬಾರದ ಕಾರಣ ಈ ಪ್ರದೇಶಕ್ಕೆ ಸಂಪರ್ಕಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಕಸದ ರಾಶಿ ಬಿದ್ದಿರುವುದು




ಹೊಂಗಸಂದ್ರದ ಮೈಕೊ ಲೇಔಟ್‌ನ 20ನೇ ಮೇನ್‌ನ ರಸ್ತೆಯ ಬದಿಯಲ್ಲಿ ಬಿದ್ದಿರುವ ಕಸದ ರಾಶಿಯಲ್ಲಿ ಬೀಡಾಡಿ ದನಗಳು ಆಹಾರ ಹುಡುಕುತ್ತಿವೆ

ನಿಮ್ಮ ಬಡಾವಣೆಯಲ್ಲಿ ಕಸ ವಿಲೇವಾರಿಯಾಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ 'ಪ್ರಜಾವಾಣಿ'ಗೆ ಕಳುಹಿಸಿ.
9606038256



ಇಂದಿರಾನಗರದ ಎಚ್‌ಎಎಲ್ 15ನೇ ಮೇನ್ ಎರಡನೇ ಕ್ರಾಸ್‌ನ ರಸ್ತೆಯಲ್ಲಿ ಕಸ ಬಿದ್ದಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ



ನಾಗರಬಾವಿ ಎರಡನೇ ಹಂತದ ಅರುಣಜ್ಯೋತಿ ಎಂಟನೇ ಬ್ಲಾಕ್‌ನ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದೆ

ನಗರದಲ್ಲಿ ಇಂದು

ನಿಮಿಷಾಂಬಾದೇವಿ ಜಯಂತಿ: ಬೆಳಿಗ್ಗೆ 7.30ಕ್ಕೆ ನಿಮಿಷಾಂಬಾದೇವಿಗೆ ಅಭಿಷೇಕ, ಪುಷ್ಪಾಲಂಕಾರ, 8.30ಕ್ಕೆ ಗಣಪತಿ ಪೂಜೆ, ಕಳಶಾರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 7ಕ್ಕೆ ಸಹಸ್ರನಾಮ ಪಾರಾಯಣ, ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾದೇವಿ ದೇವಸ್ಥಾನ, ಒಟಿಸಿ ರಸ್ತೆ, ಕಾಟನ್‌ಪೇಟೆ

ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾ ಅಧಿವೇಶನ: ಉದ್ಘಾಟನೆ: ಪುಟ್ಟಣ್ಣ, ಆಶಯ ನುಡಿ: ಜಾನಕಿ ನಾಯರ್, ಅತಿಥಿಗಳು: ರಾಮೋಜಿಗೌಡ, ಡಿ.ಟಿ. ಶ್ರೀನಿವಾಸ, ಎನ್. ಮಂಜುಶ್ರೀ, ಎಸ್.ಎಂ. ಜಯಕರ, ಬಿ.ಸಿ. ನಾಗೇಂದ್ರಕುಮಾರ್, ಟಿ.ಎಂ. ಮಂಜುನಾಥ, ಆರ್. ರಾಜಣ್ಣ, ಐ.ಕೆ. ಪತ್ತಾರ, ಗವಿಸಿದ್ಧಯ್ಯ, ಸಮ್ಮೇಳನದ ಸರ್ವಾಧ್ಯಕ್ಷ: ಎನ್. ಶೇಕ್ ಮಸ್ತಾನ, ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತು, ಕರ್ನಾಟಕ ರಾಜ್ಯ ಪತ್ರಾಗಾರ ಮತ್ತು ಗೆಜೆಟಿಯರ್ ಇಲಾಖೆ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10

ಬೆಂಮಸಾ ಸಂಸ್ಥೆಯ ಕ್ರೀಡಾ–ಸಾಂಸ್ಕೃತಿಕ ಉತ್ಸವದಲ್ಲಿ ವಿಜೇತರಿಗೆ ಪ್ರಶಸ್ತಿ, ಪಾರಿತೋಷಕ, ವಿಮಾ ಪರಿಹಾರ ಹಾಗೂ ವಿದ್ಯಾ ಸಹಾಯನಿಧಿ ವಿತರಣೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ವಿ.ಎಸ್. ಆರಾಧ್ಯ, ಅತಿಥಿ: ನಿಕೇತ್ ರಾಜ್ ಎಂ., ಆಯೋಜನೆ: ಬಿಎಂಟಿಸಿ, ಸ್ಥಳ: ಶ್ರೀ ವೆಂಕಟಾದ್ರಿ ಕಲ್ಯಾಣ ಮಂಟಪ, ಕತ್ರಿಗುಪ್ಪೆ, ಬೆಳಿಗ್ಗೆ 10.30

ರಾಷ್ಟ್ರೀಯ ಮಹಿಳಾ ಮತ್ತು ಯುವ ವಿಭಾಗಗಳ ಪದಗ್ರಹಣ ಸಮಾರಂಭ: ಸಾನ್ನಿಧ್ಯ: ಮಲಯಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ: ಜಗದೀಶ್ ಶೆಟ್ಟರ್, ಅಧ್ಯಕ್ಷತೆ: ಈಶ್ವರ ಬಿ. ಖಂಡ್ರೆ, ಅತಿಥಿ: ಬಸವರಾಜ ಹೊರಟ್ಟಿ, ಆಶಯ ನುಡಿ: ಶಂಕರ ಬಿದರಿ, ಆಯೋಜನೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಸಭಾ, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಮಾವು ಮತ್ತು ಹಲಸು ಮೇಳ–2026: ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ಅತಿಥಿಗಳು: ರಾಮಲಿಂಗಾರೆಡ್ಡಿ, ತೇಜಸ್ವಿ ಸೂರ್ಯ, ಬಿ.ಸಿ. ಮುದ್ದುಗಂಗಾಧರ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ (ಹಾಪ್‌ಕಾಮ್ಸ್), ಸ್ಥಳ: ಹಾಪ್‌ಕಾಮ್ಸ್ ಕೇಂದ್ರ ಕಚೇರಿಯ ಆವರಣ, ಲಾಲ್‌ಬಾಗ್, ಎಂ.ಎಸ್. ಮರೀಗೌಡ ರಸ್ತೆ, ಬೆಳಿಗ್ಗೆ 11



ಎಸ್.ಎಸ್. ಮಲ್ಲಿಕಾರ್ಜುನ್

ರಾಜ್‌ಕುಮಾರ್ ಅವರ 97ನೇ ಜನ್ಮದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಕೆ. ಗೋಪಾಲಯ್ಯ, ಅತಿಥಿಗಳು: ಕೆ.ವಿ. ಪ್ರಭಾಕರ್, ಮಹಬೂಬ್ ಪಾಷಾ, ಸಾಧು ಕೋಕಿಲ, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, 'ಡಾ. ರಾಜ್‌ಕುಮಾರ್ ಬದುಕು-ಸಾಧನೆ' ಕುರಿತು ಉಪನ್ಯಾಸ: ದೊಡ್ಡಹುಲ್ಲೂರು ರುಕ್ಕೋಜಿ, ಡಾ. ರಾಜ್‌ಕುಮಾರ್ ಗೀತೆಗಳ ಗಾಯನ: ವಿಕಾಸ್ ವಸಿಷ್ಠ, ಸ್ಪರ್ಶ ಆರ್.ಕೆ ಹಾಗೂ ತಂಡ, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ರಾಜ್‌ಕುಮಾರ್ ಪ್ರತಿಷ್ಠಾನ, ಸ್ಥಳ: ಡಾ. ರಾಜ್‌ಕುಮಾರ್ ಪುಣ್ಯಭೂಮಿ, ಕಂಠೀರವ ಸ್ಟುಡಿಯೋ ಆವರಣ,ಬೆಳಿಗ್ಗೆ 10.30




ರಾಜ್‌ಕುಮಾರ್

ವಧು–ವರರ ರಾಜ್ಯಮಟ್ಟದ ಮೂರನೇ ಸಮಾವೇಶ: ಉದ್ಘಾಟನೆ: ಜಿ.ಸಿ. ಚಂದ್ರಶೇಖರ್, ಅತಿಥಿ: ಚನ್ನೇಗೌಡ, ಪ್ರಾಸ್ತಾವಿಕ ನುಡಿ: ಕೆ.ಪಿ. ನಂಜುಂಡಿ ವಿಶ್ವಕರ್ಮ, ಅಧ್ಯಕ್ಷತೆ: ಬಸವರಾಜು, ಆಯೋಜನೆ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ, ಸ್ಥಳ: ಗುರುರಾಜ ಕಲ್ಯಾಣ ಮಂಟಪ, ಚಲನಚಿತ್ರ ವಾಣಿಜ್ಯ ಮಂಡಳಿ ಪಕ್ಕ, ರೇಸ್‌ಕೋರ್ಸ್ ರಸ್ತೆ, ಶಿವಾನಂದ ವೃತ್ತ, ಬೆಳಿಗ್ಗೆ 11.30

'ಮಹಿಳಾ ಮೀಸಲಾತಿ ಮಸೂದೆ ಮೂರು ದಶಕಗಳ–ಅವಲೋಕನ': ವಿಷಯ ಮಂಡನೆ: ಎನ್. ಗಾಯತ್ರಿ, ಸಿ.ಜಿ. ಮಂಜುಳಾ, ಸಿಂಥಿಯಾ ಸ್ಟೀಫನ್, ಆಯೋಜನೆ: ಜನಶಕ್ತಿ ಮೀಡಿಯಾ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4

'ಮದುಮಗಳೊಂದಿಗೆ ಸಹಪಯಣ' ತಿಂಗಳ ಉಪನ್ಯಾಸ: ವನಮಾಲಾ ವಿಶ್ವನಾಥ್, ಪ್ರಾಸ್ತಾವಿಕ ನುಡಿ: ನಾರಾಯಣ ಘಟ್ಟ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಚೇರಿ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

'ರಾಜ್‌ಕುಮಾರ್ ಅವರ ಕಂಚಿನ ಪುತ್ಥಳಿ ಅನಾವರಣ' ಸಮಾರಂಭ: ಉದ್ಘಾಟನೆ: ಶಿವರಾಜ್‌ಕುಮಾರ್, ಗೀತಾ ಶಿವರಾಜ್‌ಕುಮಾರ್, ಅತಿಥಿಗಳು: ರಾಮಲಿಂಗಾರೆಡ್ಡಿ, ಸೌಮ್ಯಾ ರೆಡ್ಡಿ, ಅಧ್ಯಕ್ಷತೆ: ಎನ್. ನಾಗರಾಜು, ಆಯೋಜನೆ: ಡಾ. ರಾಜ್‌ಕುಮಾರ್ ಸಮಿತಿ, ಸ್ಥಳ: 30ನೇ ಅಡ್ಡರಸ್ತೆ, ಮಯ್ಯಾಸ್ ಹೋಟೆಲ್ ಎದುರು, ಗಣೇಶ ದೇವಸ್ಥಾನದ ಹತ್ತಿರ, ನಾಲ್ಕನೇ ಬಡಾವಣೆ, ಜಯನಗರ, ಸಂಜೆ 5



ಶಿವರಾಜ್ ಕುಮಾರ್

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026: 'ಮಾಯಾದ್ವೀಪ' ನಾಟಕ ಪ್ರದರ್ಶನ: ಪ್ರಸ್ತುತಿ: ನೆನಪು, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



ದಿಗಂತ್, ಹೆಬಾ

ಕಾಲಿವುಡ್‌ನಲ್ಲೂ ಪಾಯಲ್ ಸದ್ದು

ಕಿರುಚಿತ್ರಗಳ ಮೂಲಕವೇ ಖ್ಯಾತಿ ಪಡೆದ ನಟಿ ಪಾಯಲ್ ಚಂಗಪ್ಪ ಚಟಪಟ ಮಾತನಾಡುವ ಕಲೆಯುಳ್ಳವರು. ಸಿನಿಮಾ ಮಾತ್ರವಲ್ಲ ವೆಬ್‌ಸರಣಿಯಲ್ಲೂ ಮಿಂಚಿದವರು. ಇಂದು (ಏ.24) ಅವರು ನಟಿಸಿರುವ, ಶ್ರೀನಿಧಿ ಬೆಂಗಳೂರು ನಿರ್ದೇಶನದ 'ಜೆರಾಕ್ಸ್' ವೆಬ್‌ಸರಣಿ ಜೀ5ನಲ್ಲಿ ಬಿಡುಗಡೆಯಾಗಿದೆ. ತೆಲುಗು ಚಿತ್ರರಂಗದಲ್ಲೂ ಗುರುತಿಸಿಕೊಂಡಿರುವ ಪಾಯಲ್ ಮಾತಿಗಿಳಿದಾಗ...

• ಅಭಿಲಾಷ್ ಪಿ.ಎಸ್.

• ನಿಮ್ಮ ಹಿನ್ನೆಲೆ ಹಾಗೂ ಬಣ್ಣದ ಪಯಣದ ಬಗ್ಗೆ...

ಕೊಡಗಿನ ಗೋಣಿಕೊಪ್ಪಲು ಸಮೀಪದ ಹುದಿಕೇರಿ ನಮ್ಮೂರು. ನಾನು ಓದಿ, ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲೇ. ಮೊದಲ ಕಿರುಚಿತ್ರ ಮಾಡಿದಾಗ ನಾನಿನ್ನೂ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಓದುತ್ತಿದ್ದೆ. ಸಿನಿಮಾ ಹಿನ್ನೆಲೆ ನನಗಿರಲಿಲ್ಲ. ಸಿನಿಮಾ ಕ್ಷೇತ್ರಕ್ಕೆ ಪ್ರವೇಶಿಸಬೇಕು ಎನ್ನುವ ಕನಸು ಮೊದಲಿನಿಂದಲೇ ಇತ್ತು. ನನ್ನ ಮೊದಲ ಕಿರುಚಿತ್ರವೇ ಬಹಳ ವೈರಲ್ ಆಯ್ತು. ಕೋವಿಡ್ ಸಂದರ್ಭದಲ್ಲೇ 'ಅಮೃತಾಂಜನ್' ತೆರೆಕಂಡ ಕಾರಣ ಸುಮಾರು 2.2 ಕೋಟಿ ವೀಕ್ಷಣೆ ಪಡೆಯಿತು. ಲಾಕ್‌ಡೌನ್‌ನಿಂದ ಕಂಗೆಟ್ಟಿದ್ದ ಜನಕ್ಕೆ ನಮ್ಮ ಕಿರುಚಿತ್ರ ಮನರಂಜನೆ ನೀಡಿತ್ತು. ಕನ್ನಡದಲ್ಲಿ ಇಷ್ಟು ವೀಕ್ಷಣೆ ಪಡೆದ ಮೊದಲ ಕಿರುಚಿತ್ರ ಇದಾಯಿತು. 2020ರಿಂದ ಅದೇ ತಂಡದ ಜೊತೆ ನಿರಂತರವಾಗಿ ಕಿರುಚಿತ್ರಗಳನ್ನು ಮಾಡುತ್ತಲೇ ಬಂದಿದ್ದೇನೆ. ಎಲ್ಲವೂ ಯಶಸ್ವಿಯಾದವು. 'ಜುಗ್ಗ ನನ್ ಗಂಡ' ಕಿರುಚಿತ್ರ ತೆಲುಗಿಗೂ ಡಬ್ ಆಗಿ ಮೆಚ್ಚುಗೆ ಪಡೆಯಿತು. ಜನರು ನನ್ನನ್ನು ಗುರುತಿಸಿದರು. ಇದರ ಬೆನ್ನಲ್ಲೇ ಸಿನಿಮಾ, ಧಾರಾವಾಹಿಗಳ ಅವಕಾಶವೂ ಬಂತು.

ಧಾರಾವಾಹಿಗಳೆಂದರೆ ಎರಡು ಮೂರು ವರ್ಷಗಳ ನಿರಂತರ ಪಯಣ. ಹೀಗಾಗಿ ಒಪ್ಪಿಕೊಳ್ಳಲಿಲ್ಲ. ನಾನು ಸಿನಿಮಾಗಾಗಿಯೇ ಈ ಪಯಣ ಆರಂಭಿಸಿದ್ದೆ. ಈ ಕ್ಷೇತ್ರಕ್ಕೆ ಬರುವ ಉದ್ದೇಶದಿಂದ ನನ್ನ ನಟನೆಯ ಪರಿಚಯ ಮಾಡಿಕೊಡಲು ಕಿರುಚಿತ್ರಗಳ ವೇದಿಕೆ ಬಳಸಿಕೊಂಡೆ. ಸಿನಿಮಾದಲ್ಲಿ ಹೊಸಬರಿಗೆ ಅವಕಾಶ ಸಿಗುವುದೇ ವಿರಳ. ಆರಂಭದಲ್ಲಿ ಸಿನಿಮಾಗಳ ಅವಕಾಶ ಬಂದರೂ ಸಣ್ಣ ಅಳುಕಿತ್ತು. ಜನ ನನ್ನನ್ನು ದೊಡ್ಡ ಪರದೆಯಲ್ಲಿ ಒಪ್ಪಿಕೊಳ್ಳುತ್ತಾರಾ ಎನ್ನುವ ಭಯವಿತ್ತು. ಜೊತೆಗೆ ಓವರ್ ಬೋಲ್ಡ್ ದೃಶ್ಯಗಳನ್ನು ಮಾಡಲು ಇಷ್ಟವಿರಲಿಲ್ಲ. ಹೀಗಾಗಿ ಕೆಲ ಕಥೆಗಳನ್ನು ತಿರಸ್ಕರಿಸಿದೆ. ಆಯ್ಕೆಯಲ್ಲಿ ನನ್ನ ನಿರ್ಧಾರ ಕಠಿಣವಾಗಿತ್ತು. ಇದರಿಂದಾಗಿ ಸಿನಿಮಾಗೆ ಬರುವುದು ವಿಳಂಬವಾಯಿತು. ಸಿನಿಮಾ ಎಂದರೆ ನನಗೆ ಭಕ್ತಿ, ಶ್ರದ್ಧೆ ಕೊಂಚ ಜಾಸ್ತಿಯೇ ಇದೆ.

• ವೆಬ್‌ಸರಣಿಯ ಯಾನ...

2025ರ ಸೆಪ್ಟೆಂಬರ್‌ನಲ್ಲಿ ಜಿಯೊ ಹಾಟ್‌ಸ್ಟಾರ್‌ನಲ್ಲಿ ತೆಲುಗಿನ 'ರ್‍ಯಾಂಬೊ ಇನ್ ಲವ್' ವೆಬ್‌ಸರಣಿ ಆರಂಭವಾಯಿತು. ಇದರಲ್ಲಿ 'ಸುಕನ್ಯಾ' ಎಂಬ ಪಾತ್ರ ಮಾಡಿದೆ. ಕಿರುಚಿತ್ರಗಳೆಲ್ಲವುದರಲ್ಲೂ ನಾನು ಸಾಮಾನ್ಯ ಹುಡುಗಿಯಂತೆ ಕಾಣಿಸಿಕೊಂಡಿದ್ದೆ. ಈ ವೆಬ್‌ಸರಣಿಯಲ್ಲಿ ನಾನು ಕಾರ್ಪೊರೇಟ್ ಹುಡುಗಿಯ ಪಾತ್ರ ಮಾಡಿದೆ. ಇದರ ಒಂದು ಆವೃತ್ತಿ ಪೂರ್ಣಗೊಂಡಿದೆ.



ಪಾಯಲ್

ಸದ್ಯ ಜೀ5ನಲ್ಲಿ ಕನ್ನಡದ 'ಜೆರಾಕ್ಸ್' ವೆಬ್‌ಸರಣಿ ಬಿಡುಗಡೆಗೊಂಡಿದೆ. ಇದರಲ್ಲಿ 'ಸೂಜಿ' ಎಂಬ ಪಾತ್ರ ಮಾಡಿದ್ದೇನೆ. ಕಾಲೇಜಿಗೆ ಹೋಗುವ ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಬಹಳ ಮುಗ್ಧ ಈಕೆ. 'ಪ್ರಕಾಶ' ಎನ್ನುವ ಹುಡುಗನನ್ನು ಇಷ್ಟಪಡುತ್ತಾಳೆ. ಅವಳು ಮಾಡದೇ ಇರುವ ತಪ್ಪಿನಲ್ಲಿ ಸಿಲುಕಿಕೊಂಡಾಗ ಯಾರು, ಹೇಗೆ ಕಾಪಾಡುತ್ತಾರೆ ಎನ್ನುವುದೇ ಈ ಸರಣಿಯ ಕಥೆ.

• ಕಿರುಚಿತ್ರಗಳನ್ನು ಮಾಡುವವರಿಗೆ ನಿಮ್ಮ ಸಲಹೆ ಏನು?

ಸಣ್ಣವೇದಿಕೆ, ದೊಡ್ಡವೇದಿಕೆ ಅಥವಾ ಚಿಕ್ಕ ಸಿನಿಮಾ, ದೊಡ್ಡ ಸಿನಿಮಾ ಎನ್ನುವ ವ್ಯತ್ಯಾಸ ಈಗಿಲ್ಲ. ಹೊಸಬರ ಸಿನಿಮಾವನ್ನು, ಪ್ರಯತ್ನಗಳನ್ನು ಜನರು ಗೆಲ್ಲಿಸಿದ ಉದಾಹರಣೆಗಳು ಇವೆ. ನಟನೆ ವಿಷಯದಲ್ಲಿ ಎಲ್ಲಾ ಕಥೆಗೂ ಅಷ್ಟೇ ಪ್ರಯತ್ನ ಹಾಕಬೇಕು. ನಟ ಧನಂಜಯ ಅವರೂ ಕಿರುಚಿತ್ರದ ಮೂಲಕವೇ ಬೆಳ್ಳಿತೆರೆಗೆ ಬಂದವರು. ನಟ ಯಶ್ ಅವರು, ನಟಿ ರಾಧಿಕಾ ಅವರು ಧಾರಾವಾಹಿಗಳ ಮೂಲಕವೇ ಸಿನಿಮಾಗೆ ಬಂದವರು. ಪರದೆಯಲ್ಲಿ ಚಿಕ್ಕದು–ದೊಡ್ಡದು ಎನ್ನುವ ವಿಭಾಗ ಈಗ ಮರೆಯಾಗುತ್ತಿದೆ. ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಯಶಸ್ಸು ಸಿಕ್ಕೇ ಸಿಗುತ್ತದೆ. ಕಿರುಚಿತ್ರಗಳಿಂದಾಗಿಯೇ ನನಗೆ ಹಲವು ಜಾಹೀರಾತುಗಳು, ವೆಬ್‌ಸರಣಿಗಳು ಬರುತ್ತಿವೆ. ಆರ್ಥಿಕವಾಗಿಯೂ ತೃಪ್ತಿಕರವಾಗಿದೆ.

• ಹೊಸ ಸಿನಿಮಾಗಳು...

'ಅಮೃತಅಂಜನ್' ಸಿನಿಮಾ ಬಿಡುಗಡೆಗೂ ಮೊದಲೇ ತೆಲುಗಿನಲ್ಲಿ ನನ್ನದೊಂದು ಸಿನಿಮಾ ಬಿಡುಗಡೆಯಾಗಿತ್ತು. ಡಾರ್ಲಿಂಗ್ ಕೃಷ್ಣ ಅವರ ಜೊತೆ 'ಬ್ರ್ಯಾಟ್' ಸಿನಿಮಾದಲ್ಲೂ ಪಾತ್ರವೊಂದನ್ನು ಮಾಡಿದ್ದೆ. ಸದ್ಯ ತೆಲುಗಿನಲ್ಲಿ 'ಮಯೂಖ' ಎನ್ನುವ ಸಿನಿಮಾ ಮಾಡಿದ್ದೇನೆ. ಇದು ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಕನ್ನಡದಲ್ಲಿ 'ಮುದ್ದು ಗುಮ್ಮ' ಸಿನಿಮಾದ ಚಿತ್ರೀಕರಣ ನಡೆಯುತ್ತಿದೆ. ತೆಲುಗಿನಿಂದ ಹೆಚ್ಚಿನ ಅವಕಾಶಗಳಿವೆ. ಕನ್ನಡ ಹಾಗೂ ತೆಲುಗಿನಲ್ಲಿ ತಲಾ ಒಂದು ಸಿನಿಮಾ ಮಾತುಕತೆ ಹಂತದಲ್ಲಿದೆ. ❖

ಮತ್ತೆ ಕನ್ನಡಕ್ಕೆ 'ಅಧ್ಯಕ್ಷ'ನ ರಾಣಿ

ಶರಣ್ ನಟನೆಯ 'ಅಧ್ಯಕ್ಷ' ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಹೆಬಾ ಪಟೇಲ್, ಬಿ.ಎಂ. ಗಿರಿರಾಜ್ ನಿರ್ದೇಶನದ 'ರಾಮರಸ' ಸಿನಿಮಾ ಮೂಲಕ ಕನ್ನಡಕ್ಕೆ ಮರಳಿದ್ದರು. ಈ ಸಿನಿಮಾ ಇನ್ನಷ್ಟೇ ಬಿಡುಗಡೆಯಾಗಬೇಕಿದ್ದು, ಈ ಸಂದರ್ಭದಲ್ಲೇ ಮತ್ತೊಂದು ಕನ್ನಡ ಸಿನಿಮಾ ಒಪ್ಪಿಕೊಂಡಿದ್ದಾರೆ.

ಗೋಪಿ ನಿರ್ದೇಶಿಸುತ್ತಿರುವ 'ರುದ್ರ ಕಾಲ' ಸಿನಿಮಾದಲ್ಲಿ ಹೆಬಾ, ದಿಗಂತ್ ಅವರಿಗೆ ಜೋಡಿಯಾಗಿ ನಟಿಸುತ್ತಿದ್ದಾರೆ. ಇತ್ತೀಚೆಗೆ ಚಿತ್ರದ ಮುಹೂರ್ತ ನಡೆದಿದ್ದು, ಚಿತ್ರದ ಮೊದಲ ದೃಶ್ಯಕ್ಕೆ ನಿರ್ದೇಶಕ ಯೋಗರಾಜ ಭಟ್ ಕ್ಲ್ಯಾಪ್ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೆಬಾ, 'ನಾನು ಸಿನಿಪಯಣವನ್ನು ಆರಂಭಿಸಿದ್ದೇ ಕನ್ನಡದಲ್ಲಿ. ಸುಮಾರು ಹತ್ತು ವರ್ಷಗಳ ಬಳಿಕ ಮತ್ತೆ ಮರಳಿದ್ದೇನೆ. ಮತ್ತೆ ಮನೆಗೆ ಬಂದಿದ್ದೇನೆ ಎನ್ನುವ ಭಾವ. 'ಅಧ್ಯಕ್ಷ' ಸಿನಿಮಾಗೆ ಕನ್ನಡ ಜನತೆ ನೀಡಿದ ಪ್ರೀತಿ ಇಂದಿಗೂ ಅನುಭವಕ್ಕೆ ಬರುತ್ತಿದೆ. ದಿಗಂತ್ ಅವರ ಜೊತೆ ನಟಿಸುವ ಆಸೆ ಇತ್ತು. ಇದು ಈಗ ನನಸಾಗಿದೆ' ಎಂದಿದ್ದಾರೆ.

ದಿಗಂತ್ ಮಾತನಾಡಿ, 'ಈ ವರ್ಷಕ್ಕಾಗಿ ಕಳೆದ ವರ್ಷ ಎರಡು ಸಿನಿಮಾಗಳನ್ನು ಸಹಿ ಮಾಡಿದ್ದೆ. ಆದರೆ ನಂತರದಲ್ಲಿ ನಿರ್ಮಾಪಕರು 'ಸದ್ಯದ ಪರಿಸ್ಥಿತಿ ಗೊತ್ತಲ್ವಾ' ಎಂಬಂತೆ ಮಾತನಾಡತೊಡಗಿದರು. ಇಂತಹ ಸ್ಥಿತಿಯ ಮಧ್ಯೆ ರಮೇಶ್ ಅವರು ಸಿನಿಮಾ ಮಾಡಲು ಮುಂದಾಗಿದ್ದಾರೆ. ಕಥೆ ಕೇಳಿದ ತಕ್ಷಣ ನಟಿಸಲು ಒಪ್ಪಿಕೊಂಡೆ. ಒಳ್ಳೆಯ ಸಿನಿಮಾ ಆಗುವ ನಿರೀಕ್ಷೆ ಇದೆ. ಮೈಥಾಲಜಿ ಜಾನರ್‌ನಲ್ಲಿ ಚಿತ್ರವಿದೆ. ಇತ್ತೀಚೆಗೆ ಒಂದು ತೆಲುಗು ಸಿನಿಮಾ ಪೂರ್ಣಗೊಳಿಸಿ ಮರಳಿದ್ದೇನೆ. ಅಲ್ಲಿಯವರಿಗೆ ಒಟಿಟಿ, ಸಾಮಾಜಿಕ ಮಾಧ್ಯಮಗಳ ತೊಂದರೆಯೇ ಆಗಿಲ್ಲ. ಪ್ರತಿ ವಾರ ನಾಲ್ಕೈದು ಸಿನಿಮಾಗಳು ತೆರೆಕಾಣುತ್ತಿವೆ. ಅವುಗಳಲ್ಲಿ ಹಲವು ಯಶಸ್ಸು ಪಡೆಯುತ್ತಿವೆ. ಅಲ್ಲಿನ ಸಿನಿಮಾ ಸಂಸ್ಕೃತಿಯನ್ನು ನೋಡಿ, ನಮ್ಮಲ್ಲಿ ಯಾಕೆ ಹೀಗೆ ಆಗುತ್ತಿಲ್ಲ ಎಂದು ದುಃಖವಾಯಿತು' ಎಂದರು.

'ಈ ಸಿನಿಮಾದ ಕಥೆಗೆ ಕನ್ನಡದ ಕುಟುಂಬಗಳಿಗೆ ಹತ್ತಿರವಾಗುವ, ಅವರನ್ನು ಮನರಂಜಿಸುವ ನಾಯಕ ಬೇಕಿತ್ತು. ಕಥೆ ಕೇಳಿದಾಗಲೇ ದಿಗಂತ್ ಅವರನ್ನು ನೆನಪಿಸಿಕೊಂಡೆ. ಕಥೆಯ ಪಾತ್ರಕ್ಕೂ ಅವರು ಸೂಕ್ತವಾಗುವ ಕಾರಣ ಆಯ್ಕೆ ಮಾಡಿದೆವು' ಎಂದರು ನಿರ್ಮಾಪಕ ರಮೇಶ್ ನಾಯ್ಕ್.

ರಮೇಶ್ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಚಿತ್ರದ ಚಿತ್ರೀಕರಣ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಏಕಕಾಲಕ್ಕೆ ನಡೆಯಲಿದೆ. ಮೇ ತಿಂಗಳಿನಿಂದ ಶೂಟಿಂಗ್ ಆರಂಭಿಸಿ, ಒಂದೇ ಹಂತದ ಚಿತ್ರೀಕರಣ ನಡೆಸಿ ಆದಷ್ಟು ಬೇಗ ಸಿನಿಮಾವನ್ನು ತೆರೆಗೆ ತರುವ ಯೋಜನೆಯಲ್ಲಿದೆ ಚಿತ್ರತಂಡ. ಕ್ರಿಸ್ಟೋಫರ್ ಜೋಸೆಫ್ ಛಾಯಾಚಿತ್ರಗ್ರಹಣ ಸಿನಿಮಾಗಿರಲಿದೆ. ❖

KD ಸಿನಿಮಾವೇ ಟ್ರೇಲರ್: ಪ್ರೇಮ್

ಪ್ರೇಮ್ ನಿರ್ದೇಶನದ 'KD' ಚಿತ್ರದ ಟ್ರೇಲರ್ ಅನ್ನು ಹಿರಿಯ ನಟ ದತ್ತಣ್ಣ ಬುಧವಾರ (ಏ.22) ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿರುವ ಪ್ರೇಮ್ 'ಇಡೀ ಸಿನಿಮಾವೇ ಟ್ರೇಲರ್' ಎನ್ನುವ ಮೂಲಕ ಕುತೂಹಲ ಹುಟ್ಟಿಸಿದ್ದಾರೆ.

'ಸಿನಿಮಾ ಏ.30ಕ್ಕೆ ಬಿಡುಗಡೆಯಾಗುತ್ತಿದೆ. ನನ್ನ ಸಿನಿಮಾಗಳಿಗೆ ಸಂಗೀತ ನಿರ್ದೇಶಕರೇ ಹೀರೊ ಎನ್ನುತ್ತಿದ್ದೆ. ಈ ಸಿನಿಮಾಗೆ ನಿರ್ಮಾಪಕರೇ ಹೀರೊ. ಏಕೆಂದರೆ ನಿರ್ಮಾಪಕರಾದವರು ಒಂದು ಬಜೆಟ್‌ನಲ್ಲಿ, ಸಮಯಮಿತಿಯಲ್ಲಿ ಸಿನಿಮಾ ಮಾಡುತ್ತಾರೆ. ಆದರೆ ಕೆ.ವೆಂಕಟ್‌ನಾರಾಯಣ್ ಅವರು ಬಹಳ ಇಷ್ಟಪಟ್ಟು ಸಿನಿಮಾ ನಿರ್ಮಾಣ ಮಾಡುತ್ತಾರೆ. ನಿರಂತರವಾಗಿ ಸಲಹೆ ನೀಡುತ್ತಾರೆ. ಭಾರತೀಯ ಚಿತ್ರರಂಗಕ್ಕೆ ಕೆವಿಎನ್ ಸಂಸ್ಥೆ ಬಹಳ ಮುಖ್ಯ' ಎಂದರು ಪ್ರೇಮ್.

'ಮುಂಬೈನ ಸೆನ್ಸಾರ್ ಅಧಿಕಾರಿಗಳು ಸಿನಿಮಾ ನೋಡಿ ಧ್ರುವ ಅವರ ನಟನೆಯನ್ನು ಮೆಚ್ಚಿದ್ದಾರೆ. ಪ್ರೇಮ್ ಎಂದರೆ 'ಬಜೆಟ್ ಜಾಸ್ತಿ ಮಾಡುತ್ತಾನೆ, ವರ್ಷಾನುಗಟ್ಟಲೆ ಎಳೆಯುತ್ತಾನೆ' ಎನ್ನುತ್ತಾರೆ. ಅದರ ನಡುವೆ ನಮ್ಮನ್ನು ನಿರ್ಮಾಪಕರು ಸಾಕಿದ್ದಾರೆ. ಇಡೀ 'KD' ಸಿನಿಮಾವೇ ಟ್ರೇಲರ್. ಪಾತ್ರಗಳು ಹುಟ್ಟುತ್ತವೆ, ಆದರೆ ಕೊನೆ ಇರುವುದಿಲ್ಲ. ಅಂತ್ಯ ಯಾವಾಗ ಆಗುತ್ತವೆ ಎಂದು ಸಿನಿಮಾ ನೋಡಿದಾಗ ಅರ್ಥ ಮಾಡಿಕೊಳ್ಳುತ್ತೀರಿ' ಎನ್ನುತ್ತಾ ಎರಡನೇ ಭಾಗದ ಸುಳಿವು ನೀಡಿದ್ದಾರೆ ಪ್ರೇಮ್.



ವಿಲಿಯಂ ಡೇವಿಡ್, ರಕ್ಷಿತಾ, ರಮೇಶ್ ಅರವಿಂದ್, ಕೆ.ವೆಂಕಟ್‌ನಾರಾಯಣ್, ರೀಷ್ಮಾ, ಪ್ರೇಮ್, ಧ್ರುವ, ಸುಪ್ರೀತ್

'ಇಷ್ಟು ವರ್ಷ ಕನ್ನಡ ಚಿತ್ರರಸಿಕರು ಕೈಹಿಡಿದಿರುವುದಕ್ಕೇ ಕನ್ನಡ ಚಿತ್ರರಂಗಕ್ಕೆ 93 ವರ್ಷ ಆಗಿದೆ' ಎನ್ನುತ್ತಾ ಮಾತು ಆರಂಭಿಸಿದ ಧ್ರುವ ಸರ್ಜಾ, 'ನನ್ನ ಮನವಿ ಏನೆಂದರೆ ದಯವಿಟ್ಟು ನಮಗಾಗಿ ನಿಮ್ಮ ಎರಡು ಗಂಟೆ ಇಪ್ಪತ್ತು ನಿಮಿಷ ನೀಡಿ. ಸಾಕಷ್ಟು ಅಡೆತಡೆಗಳು, ವಿಘ್ನಗಳನ್ನು ದಾಟಿಕೊಂಡು ಬಂದಿದ್ದೇವೆ. ಇದು ಕೌಟುಂಬಿಕ ಸಿನಿಮಾವಾಗಿದ್ದು, ಮಕ್ಕಳೂ ನೋಡಬಹುದು. ಆದರೆ ಕೊಂಚ ಹಿಂಸಾತ್ಮಕ ದೃಶ್ಯಗಳು ಇವೆ' ಎಂದರು.

1970-75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಚಿತ್ರಲ್ಲಿದ್ದು, ಆರು ಹಾಡುಗಳಿವೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

> **ಟ್ರೇಲರ್ ನೋಡಿ ಈ ಸಿನಿಮಾದ ಮೂರ್ನಾಲ್ಕು ವರ್ಷಗಳ ಪಯಣ ನೆನಪಿಗೆ ಬಂತು. ಈ ಯಾನ ಬಹಳ ವಿಶೇಷ. 'ಮಚ್‌ಲಕ್ಷ್ಮಿ' ಪಾತ್ರದ ಬರವಣಿಗೆ ಕೇಳಿ ಭಯಪಟ್ಟಿದ್ದೆ. ಆಕೆ ಬಹಳ ಖಡಕ್, ಯಾರಿಗೂ ಹೆದರುವುದೇ ಇಲ್ಲ. ಆದರೂ ಭಾವನಾತ್ಮಕ ಜೀವಿ. ಆಕೆ ಎಲ್ಲಾ ಭಾವನೆಗಳ ಮಿಶ್ರಣ. ನಟನೆಯ ಸಾಮರ್ಥ್ಯ ಪ್ರದರ್ಶಿಸಲು ಇದರಲ್ಲಿ ಅವಕಾಶ ಸಿಕ್ಕಿದೆ. ಮುಂದೆ ಯಾವ ಪಾತ್ರಗಳು ಬಂದರೂ ಮಾಡುವ ಧೈರ್ಯವನ್ನು ಈ ಪಾತ್ರ ನೀಡಿದೆ.**
> **ರೀಷ್ಮಾ ನಾಣಯ್ಯ,** ನಟಿ

> **ಚಿತ್ರದಲ್ಲಿ 'ಕಾಳಿದಾಸ'ನಾಗಿ ಧ್ರುವ ಕಾಣಿಸಿಕೊಂಡಿದ್ದು. ನಾನು 'ಧರ್ಮ'ನಾಗಿ ನಟಿಸಿದ್ದೇನೆ. ಹೆಸರು ಮತ್ತು ಗುಣಕ್ಕೆ ತದ್ವಿರುದ್ಧವಾದ ಪಾತ್ರಗಳು ಇಲ್ಲಿವೆ. ಪ್ರೇಮ್ ಅವರ ತಾಳ್ಮೆಯನ್ನು ಈ ಸಿನಿಮಾದಲ್ಲಿ ಗಮನಿಸಿದ್ದೇನೆ. ಒಂದು ತಂಡವನ್ನು ಮೂರ್ನಾಲ್ಕು ವರ್ಷ ಜೊತೆಗಿಟ್ಟುಕೊಂಡಿದ್ದಾರೆ.**
> **ರಮೇಶ್ ಅರವಿಂದ್,** ನಟ

ಶೇರ್ ಆಗಿ ಬಂದ ಕಿರಣ್ ರಾಜ್



ಸುರೇಖಾ, ಕಿರಣ್ ರಾಜ್

ಚಂದನವನದಲ್ಲಿ 'ಬಡ್ಡೀಸ್' ಸಿನಿಮಾ ಮೂಲಕ ಮಿಂಚಿದ ಕಿರಣ್ ರಾಜ್, 'ಕನ್ನಡತಿ' ಧಾರಾವಾಹಿ ಮೂಲಕ ಮನೆಮಾತಾದವರು. ಅವರ ನಟನೆಯ 'ಶೇರ್' ಸಿನಿಮಾ ಮೇ 15 ರಂದು ತೆರೆಗೆ ಬರಲಿದೆ.

ಪ್ರಸಿದ್ಧ್ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಇತ್ತೀಚೆಗೆ ಸಿನಿಮಾದ ಟ್ರೇಲರ್ ಬಿಡುಗಡೆಯಾಯಿತು. ಗ್ರೇಸ್ ರಾಜ್ ಪ್ರೊಡಕ್ಷನ್ ಲಾಂಛನದಲ್ಲಿ ಸುದರ್ಶನ್ ಸುಂದರರಾಜ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

'ಇದು ನನ್ನ ಮೂರನೇ ಸಿನಿಮಾ' ಎಂದು ಮಾತು ಆರಂಭಿಸಿದ ಪ್ರಸಿದ್ಧ್, 'ಕಿರಣ್ ರಾಜ್ ಅವರು ಈವರೆಗೂ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕ್ರೈಂ ಸಸ್ಪೆನ್ಸ್ ಜಾನರ್‌ನಲ್ಲಿ ಸಿನಿಮಾವಿದೆ. ಅನಾಥ ಮಕ್ಕಳ ಜೀವನದಲ್ಲಿ ಏನೇನೆಲ್ಲಾ ಆಗುತ್ತದೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ನಿರ್ಮಾಪಕರ ಪುತ್ರ ಕ್ರಿಶ್ ರಾಡ್ರಿಗ್ ವಿಲನ್ ಪಾತ್ರದಲ್ಲಿ ನಟಿಸಿದ್ದಾರೆ. ತನಿಷಾ ಕುಪ್ಪಂಡ ಅವರು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಸೆನ್ಸಾರ್ ಮಂಡಳಿಯು ಚಿತ್ರಕ್ಕೆ 'ಎ' ಪ್ರಮಾಣಪತ್ರ ನೀಡಿದೆ' ಎಂದರು.

'ನಿರ್ದೇಶಕ ಪ್ರಸಿದ್ಧ್ ಅವರು ನನ್ನನ್ನು ಆ್ಯಕ್ಷನ್ ಹೀರೊ ಆಗಿ ಪರಿಚಯ ಮಾಡಿಸಿದ್ದರು. ಈ ಚಿತ್ರದಲ್ಲಿ ಅನಾಥ ಹುಡುಗನಾಗಿ ನಟಿಸಿದ್ದೇನೆ. ಇದೊಂದು ಕ್ರೈಮ್ ಆ್ಯಕ್ಷನ್ ಥ್ರಿಲ್ಲರ್ ಚಿತ್ರ' ಎಂದರು ಕಿರಣ್ ರಾಜ್.

ಕೆ.ಆರ್.ಜಿ. ಫಿಲಂಸ್ ಈ ಚಿತ್ರವನ್ನು ವಿತರಣೆ ಮಾಡಲಿದೆ. 'ಭರ್ಜರಿ ಗಂಡು' ಬಳಿಕ ಸುರೇಖಾ ನಾಯಕಿಯಾಗಿ ನಟಿಸುತ್ತಿರುವ ಎರಡನೇ ಸಿನಿಮಾ ಇದಾಗಿದೆ. ಕಿಟ್ಟಿ ಕೌಶಿಕ್ ಛಾಯಾಚಿತ್ರಗ್ರಹಣ, ವಿಜಯ್ ಗುಮ್ಮಿನೇನಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖

ತಿಳಿಹಾಸ್ಯದ ಕೊರತೆ: ಸುಜಯ್ ಶಾಸ್ತ್ರಿ

• ಎಪಿಎಸ್

'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಸಿನಿಮಾ ಎಂದಾಕ್ಷಣ ರಾಜ್ ಬಿ.ಶೆಟ್ಟಿ ಹೆಸರು ಕೇಳಿಬರುತ್ತದೆ. ಆದರೆ ಈ ಸಿನಿಮಾವನ್ನು ನಿರ್ದೇಶಿಸಿದ್ದು ಸುಜಯ್ ಶಾಸ್ತ್ರಿ ಎಂದರೆ 'ಹೌದಾ' ಎಂಬ ಉದ್ಗಾರ ಕೇಳಿಬರುತ್ತದೆ. ಯುಟ್ಯೂಬ್‌ನಲ್ಲಿ 'ನೊಂದ ನಾಣಿ'ಯಾಗಿಯೂ ವೀಕ್ಷಕರನ್ನು ನಗಿಸಿದ ನಟ, ನಿರ್ದೇಶಕ ಸುಜಯ್ ಶಾಸ್ತ್ರಿ ನಿರ್ದೇಶನದ 'ಎಲ್ರ ಕಾಲೆಳೆಯುತ್ತೆ ಕಾಲ' ಇಂದು (ಏ.24) ತೆರೆಕಂಡಿದೆ. ಈ ಸಂದರ್ಭದಲ್ಲಿ ತಮ್ಮ ಸಿನಿಮಾ, ಹಾಸ್ಯ ಪ್ರಧಾನ ಸಿನಿಮಾಗಳ ಕೊರತೆ ಬಗ್ಗೆ ಅವರು ಮಾತನಾಡಿದರು.

'ಇತ್ತೀಚೆಗೆ ಯಾವ ಸಿನಿಮಾ ನೋಡಿದಿರಿ ಎಂದು ಕೇಳಿದರೆ, ಹೆಚ್ಚಿನವರು 'ಧುರಂಧರ್' ಎನ್ನುತ್ತಾರೆ. ಆದರೆ ಇಂತಹ ಸಿನಿಮಾಗಳು ಇರುವುದು ಒಂದು ವರ್ಗದ ಪ್ರೇಕ್ಷಕರಿಗೆ. ನಮ್ಮಲ್ಲಿ ಹೆಚ್ಚಿನ ಪ್ರೇಕ್ಷಕರು ಇಷ್ಟಪಡುವುದು ಹಾಸ್ಯ ಪ್ರಧಾನ ಕೌಟುಂಬಿಕ ಸಿನಿಮಾಗಳನ್ನು. ಇಂತಹ ಸಿನಿಮಾಗಳು ಗೆದ್ದ ಉದಾಹರಣೆಗಳೂ ಸಾಕಷ್ಟಿವೆ. 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಸಿನಿಮಾವನ್ನು ನಾನು ನಿರ್ದೇಶಿಸಿದ್ದೇನೆ ಎನ್ನುವುದು ಸಾಕಷ್ಟು ಜನರಿಗೆ ಗೊತ್ತಿಲ್ಲದಿದ್ದರೂ ನಾನು ಅದರಲ್ಲಿ ನಟಿಸಿದ್ದೆ ಎನ್ನುವುದು ಗೊತ್ತು. ಎಷ್ಟೋ ಜನ ರಾಜ್ ಅವರೇ ಈ ಸಿನಿಮಾ ನಿರ್ದೇಶಿಸಿದ್ದಾರೆ ಎಂದುಕೊಂಡಿದ್ದಾರೆ. ಈ ಪ್ರೇಕ್ಷಕ ವರ್ಗಕ್ಕೆ ಇಂತಹ ಫೀಲ್‌ಗುಡ್ ಹಾಸ್ಯ ಸಿನಿಮಾಗಳ ಹರಿವು ಮುಖ್ಯವಾಗಿದೆ' ಎನ್ನುತ್ತಾರೆ ಸುಜಯ್.

'ಹಿಂದೆ ಹಾಸ್ಯ ಪ್ರಧಾನ ಚಿತ್ರಗಳು, ಪಾತ್ರಗಳನ್ನು ಮಾಡಲು ಒಂದು ಕಲಾವಿದರ ತಂಡವೇ ಇತ್ತು. ಸದ್ಯದ ಬೆಳವಣಿಗೆಯಲ್ಲಿ ಕಲಾವಿದರು ನಾಲ್ಕೈದು ಸಿನಿಮಾಗಳ ಬಳಿಕ ನಾಯಕರಾಗುತ್ತಿದ್ದಾರೆ, ನಿರ್ದೇಶನಕ್ಕೂ ಇಳಿಯುತ್ತಿದ್ದಾರೆ! ಪ್ರಸ್ತುತ ನಿಜವಾದ ತಿಳಿಹಾಸ್ಯ ಮರೆಯಾಗುತ್ತಿದೆ. ಇಂತಹ ಹಾಸ್ಯವೇ ಜನರ ಮನಸ್ಸಿನಲ್ಲಿ ಸದಾ ಅಚ್ಚೊತ್ತಿರುತ್ತದೆ. ಉದಾಹರಣೆಗೆ ಇಂದಿಗೂ ಜನ ನನ್ನನ್ನು 'ಉಪ್ಪಿಟ್ಟು ಫೋರ್ಕ್' ಎಂದೇ ಕೇಳುತ್ತಾರೆ. ಈ ರೀತಿಯ ತಿಳಿಹಾಸ್ಯದ ಬರವಣಿಗೆಯೂ ಕಡಿಮೆಯಾಗಿದೆ. ಸೌಂದರ್ಯದ ಅವಹೇಳನ, ಹೆಣ್ಣಿಗೆ ಅಗೌರವ, ಮದ್ಯದ ಪ್ರಚೋದನೆ ಆಗುವಂತಹ ಅಂಶಗಳು ನನ್ನ ಸಿನಿಮಾಗಳಲ್ಲಿ ಇರುವುದಿಲ್ಲ' ಎಂದರು.

'ನಾಣಿ'ಗೇನಾಯಿತು?

'ನಿಮ್ಮ 'ನೊಂದ ನಾಣಿ' ಯುಟ್ಯೂಬ್ ವಿಡಿಯೊ ಸರಣಿ ನಿಲ್ಲಿಸಿದ್ದೇಕೆ' ಎನ್ನುವ ಪ್ರಶ್ನೆಗೆ, 'ಆರಂಭದಲ್ಲಿ ನನ್ನ 'ನೊಂದ ನಾಣಿ' ವೇಷ ನೋಡಿ ಮನೆಯಲ್ಲೇ ವಿರೋಧ ಬಂತು. ನಂತರದಲ್ಲಿ ನನ್ನ ಅಪ್ಪ–ಅಮ್ಮನೇ ದಯವಿಟ್ಟು ವಿಡಿಯೊ ಮಾಡು ಎಂದರು.



ಸುಜಯ್ ಶಾಸ್ತ್ರಿ

ನಾನು ಮಾಡಿದ ವಿಡಿಯೊಗಳನ್ನು ಹಲವರು ನಕಲು ಮಾಡಿ ತಮ್ಮ ತಮ್ಮ ಪೇಜ್‌ಗಳಲ್ಲಿ ಹಾಕಿಕೊಳ್ಳುತ್ತಿದ್ದರು. ನನಗೆ 1–2 ಲಕ್ಷ ವ್ಯೂವ್ಸ್ ಬಂದರೆ ಅವರ ಪೇಜ್‌ಗಳಲ್ಲಿ ಕೋಟ್ಯಂತರ ವ್ಯೂವ್ಸ್ ಬರುತ್ತಿತ್ತು. ಈ ರೀತಿ ಕೃತಿಚೌರ್ಯವಾದಾಗ ಬೇಸರವಾಯಿತು. ಹೀಗಾಗಿ ನಿಲ್ಲಿಸಿದೆ' ಎಂದರು.

ಹಾಸ್ಯ ಸಾರ್ವಕಾಲಿಕ

'ಹಾಸ್ಯ ಎನ್ನುವುದು ಸಾರ್ವಕಾಲಿಕ. ಹಾಸ್ಯ ಪುಸ್ತಕಗಳು, ಸಿನಿಮಾಗಳು, ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ಪ್ರಚಲಿತದಲ್ಲಿರಬೇಕು. ಹಾಸ್ಯದ ಹೆಸರಿನಲ್ಲಿ ಚೇಷ್ಟೆ ಮಾಡಿದರೆ ಆಗುವುದಿಲ್ಲ. ಸಮಯಕ್ಕೆ ನೀವು ಗೌರವ ಕೊಡದೇ ಇದ್ದರೆ ಸಮಯವೂ ಗೌರವ ಕೊಡುವುದಿಲ್ಲ ಎನ್ನುವುದನ್ನು 'ಎಲ್ರ ಕಾಲೆಳೆಯುತ್ತೆ ಕಾಲ' ಸಿನಿಮಾದಲ್ಲಿ ಹೇಳಿದ್ದೇವೆ. ನಿಜವಾದ ಹಾಸ್ಯಕ್ಕೆ ಗೌರವ ಕೊಡದೇ ಇದ್ದರೆ ಹಾಸ್ಯವು ನಿಮ್ಮನ್ನು ಅಚ್ಚುಕಟ್ಟಾಗಿ ತಿರಸ್ಕಾರ ಮಾಡುತ್ತದೆ. 'ಎಲ್ರ ಕಾಲೆಳೆಯುತ್ತೆ ಕಾಲ' ಸಿನಿಮಾ ಸೆಟ್ಟೇರಿದ್ದು ನಾಲ್ಕು ವರ್ಷಗಳ ಹಿಂದೆ. ಈ ಅವಧಿಯು ಸಾಕಷ್ಟು ಅನುಭವ ನೀಡಿದೆ. ರೆಟ್ರೊ ಶೈಲಿಯಲ್ಲಿ ಈ ಸಿನಿಮಾವಿದ್ದು, ಸಾಂದರ್ಭಿಕವಾಗಿ ಹಾಸ್ಯ ಹುಟ್ಟುಹಾಕುವ ಸಾಮರ್ಥ್ಯ ಕಥೆಗಿದೆ. ಚಿತ್ರವು 90ರ ಕಾಲಘಟ್ಟದ ರೆಟ್ರೊ ಶೈಲಿಯಲ್ಲಿದೆ. ಕಾಲದ ಮಹತ್ವ ಸಾರುವ ಕಥೆ ಸಿನಿಮಾದಲ್ಲಿದೆ. ರಿಯಾಲಿಟಿ ಶೋವೊಂದರಲ್ಲಿ ಚಂದನ್ ಶೆಟ್ಟಿ ಅವರನ್ನು ನೋಡಿದಾಗ ನಮ್ಮ ಕಥೆಗೆ ಇವರೇ ಸೂಕ್ತ ನಾಯಕ ಎನಿಸಿತು. ಗೆಳೆಯ ರಾಜಗುರು ಹೊಸಕೋಟೆ ಈ ಸಿನಿಮಾಗೆ ಕಥೆ ಬರೆದಿದ್ದಾರೆ. ನಾನೂ ಹಳ್ಳಿಯ ಓರ್ವ ಸದಸ್ಯನಾಗಿ ಬಣ್ಣಹಚ್ಚಿದ್ದೇನೆ' ಎನ್ನುತ್ತಾರೆ ಸುಜಯ್.

'8' ಸಿನಿಮಾ ಪೂರ್ಣ

'ನಾನು ಹಾಸ್ಯ ನಟನಾಗಿ ಬೆರಳೆಣಿಕೆಯಷ್ಟೇ ಸಿನಿಮಾ ಮಾಡಿದ್ದೇನೆ. ಕನ್ನಡವನ್ನು ಬಿಟ್ಟು ಬೇರೆ ಎಲ್ಲೂ ಹೋಗಲ್ಲ ಎನ್ನುತ್ತಿದ್ದೆ. ಸದ್ಯ ಗೂಡಿನಿಂದ ಹಾರಿಹೋಗುವ ಪಕ್ಷಿಯ ರೀತಿ ಇದ್ದೇನೆ. ಯಾವುದೇ ಹೊಸಕಥೆ ಬರೆದಿಲ್ಲ. ನಾನು ನಿರ್ದೇಶಿಸಿರುವ, ನಿರ್ದೇಶಕ ಅನುರಾಗ್ ಕಶ್ಯಪ್ ನಟನೆಯ '8' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದೆ. ಇದು ಫುಟ್‌ಬಾಲ್ ಆಟದ ಸುತ್ತ ನಡೆಯುವ ಕಥೆ ಹೊಂದಿದೆ. ಭಾವನಾತ್ಮಕ ಅಂಶಗಳು ಇದರಲ್ಲಿವೆ. ಜೀವನದಲ್ಲಿ ಸಿಗುವ ಎರಡನೇ ಅವಕಾಶದ ಕುರಿತಾಗಿ ಈ ಸಿನಿಮಾವಿದೆ. ಸಿನಿಮಾದ ಸಂಕಲನ ನಡೆಯುತ್ತಿದೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು. ❖

ಮೂರು ಸಿನಿಮಾಗಳು ತೆರೆಗೆ

ಚಂದನವನದ ತೆರೆಗಳಲ್ಲಿ ಇಂದು (ಏ.24) ಮೂರು ಸಿನಿಮಾಗಳು ತೆರೆಕಾಣುತ್ತಿವೆ.

ಎಲ್ರ ಕಾಲೆಳೆಯುತ್ತೆ ಕಾಲ



ಚಂದನ್ ಶೆಟ್ಟಿ, ಅರ್ಚನಾ ಕೊಟ್ಟಿಗೆ


ಸುಜಯ್ ಶಾಸ್ತ್ರಿ ನಿರ್ದೇಶನದ ಈ ಚಿತ್ರದಲ್ಲಿ ಚಂದನ್ ಶೆಟ್ಟಿ ಮುಖ್ಯಭೂಮಿಕೆಯಲ್ಲಿದ್ದಾರೆ. 90ರ ಕಾಲಘಟ್ಟದ ಕಥಾಹಂದರ ಹೊಂದಿರುವ ಈ ಚಿತ್ರವನ್ನು ಗೋಕುಲ ಎಂಟರ್‌ಟೇನರ್ಸ್ ಲಾಂಛನದಲ್ಲಿ ಗೋವಿಂದರಾಜು ನಿರ್ಮಿಸಿದ್ದಾರೆ. ಕಳೆದ ವಾರವೇ ಬಿಡುಗಡೆಯಾಗಬೇಕಿದ್ದ ಈ ಸಿನಿಮಾ ಕಾರಣಾಂತರಗಳಿಂದ ಏ.24ಕ್ಕೆ ಬಿಡುಗಡೆಯಾಗುತ್ತಿದೆ. ತಾರಾ ಅನುರಾಧ, ಸುಜಯ್ ಶಾಸ್ತ್ರಿ, ಅರ್ಚನಾ ಕೊಟ್ಟಿಗೆ ಚಿತ್ರದಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪ್ರವೀಣ್, ಪ್ರದೀಪ್ ಸಂಗೀತ ನಿರ್ದೇಶನ ಹಾಗೂ ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಸಿನಿಮಾದ ಕಥೆಯನ್ನು ರಾಜ್‌ಗುರು ಹೊಸಕೋಟೆ ಬರೆದಿದ್ದಾರೆ.



ಪುನೀತ್ ನಿವಾಸ

ಶ್ರೀ ಪಂಚಮಿ ಸಿನಿ ಕ್ರಿಯೇಷನ್ಸ್ ಮೂಲಕ ಎಸ್. ಮೋಹನ್ ನಿರ್ಮಿಸಿರುವ, ನಾಗೇಂದ್ರಪ್ರಸಾದ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿರುವ ಸಿನಿಮಾವಿದು. 'ಪುನೀತ್ ರಾಜ್‌ಕುಮಾರ್ ಅವರ ಆದರ್ಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು 'ಪುನೀತ್ ನಿವಾಸ' ಕಟ್ಟಿದ 'ಮಲ್ಲು' ಎಂಬ ಬಡ ಅಭಿಮಾನಿಯೊಬ್ಬನ ಕಥೆ ಇದಾಗಿದೆ' ಎಂದಿದೆ ಚಿತ್ರತಂಡ. ಚಿತ್ರದ ಪ್ರಮುಖ ಪಾತ್ರದಲ್ಲಿ ಹಿರಿಯ ನಟ ಅಭಿಜಿತ್ ನಟಿಸಿದ್ದಾರೆ. 'ಮಲ್ಲು' ಪಾತ್ರದಲ್ಲಿ ಮಾಸ್ಟರ್ ವಿಠ್ಠಲ್, ಶಂಕರ್ ಭಟ್, ಗಂಡಸಿ ಸದಾನಂದಸ್ವಾಮಿ, ಕರಿಸುಬ್ಬು, ಶ್ರೇಯಸ್, ಐಶ್ವರ್ಯ, ಎಂ.ಎಸ್.ಉಮೇಶ್, ಡಿಂಗ್ರಿ ನಾಗರಾಜ್, ಟೆನ್ನಿಸ್ ಕೃಷ್ಣ, ರೇಖಾದಾಸ್, ಗಣೇಶ್‌ರಾವ್ ಕೇಸರ್‌ಕರ್ ತಾರಾಬಳಗದಲ್ಲಿದ್ದಾರೆ. ಎಸ್. ಬಾಲು ಛಾಯಾಚಿತ್ರಗ್ರಹಣ, ಎಂ.ಎನ್. ಕೃಪಾಕರ್ ಸಂಗೀತ ನಿರ್ದೇಶನ, ಶಿವು ಸಂಭಾಷಣೆ, ಮುತ್ತುರಾಜ್ ಸಂಕಲನ ಚಿತ್ರಕ್ಕಿದೆ.

ಡಿ.ಯೋಗರಾಜ್ ನಿರ್ದೇಶನದ 'ಲುಡೋ' ಸಿನಿಮಾವೂ ತೆರೆಕಂಡಿದೆ. ❖



ವಿನೋದ್ ಪ್ರಭಾಕರ್

ಏಪ್ರಿಲ್ 24ಕ್ಕೆ ಬಲರಾಮನ ದಿನಗಳು ಟೀಸರ್

ಕೆ.ಎಂ.ಚೈತನ್ಯ ನಿರ್ದೇಶನದ, ವಿನೋದ್ ಪ್ರಭಾಕರ್ ನಟನೆಯ 'ಬಲರಾಮನ ದಿನಗಳು' ಚಿತ್ರದ ಟೀಸರ್ ಏ.27ರಂದು ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಪದ್ಮಾವತಿ ಫಿಲಂಸ್ ಬ್ಯಾನರ್‌ನಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ನಿರ್ಮಾಣ ಮಾಡಿರುವ ಈ ಚಿತ್ರದಲ್ಲಿ 80ರ ದಶಕದ ಕಥೆ ಇದೆ. 'ಬಲರಾಮ'ನಾಗಿ ವಿನೋದ್ ಕಾಣಿಸಿಕೊಂಡಿದ್ದು, ನಾಯಕಿಯಾಗಿ ಪ್ರಿಯಾ ಆನಂದ್ ಅಭಿನಯಿಸಿದ್ದಾರೆ. 'ಆ ದಿನಗಳು' ಚಿತ್ರದ ಪಾತ್ರಗಳು ಇಲ್ಲೂ ಮುಂದುವರಿದಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶಿಶ್ ವಿದ್ಯಾರ್ಥಿ, ಅವಿನಾಶ್, ಡ್ರ್ಯಾಗನ್ ಮಂಜು, 'ಬಿಗ್‌ಬಾಸ್' ಖ್ಯಾತಿಯ ವಿನಯ್ ಗೌಡ, ಆದಿತ್ಯ ಆಶ್ರೀ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ಚಿತ್ರಕ್ಕೆ ಸಂತೋಷ್ ನಾರಾಯಣನ್ ಸಂಗೀತ ನಿರ್ದೇಶನ, ವೇಣು ಛಾಯಾಚಿತ್ರಗ್ರಹಣವಿದೆ. ❖

39 ಸರ್ಕಾರಿ ಆಸ್ಪತ್ರೆಯಲ್ಲಿ 'ಕೀಲು ಬದಲಿ' ಚಿಕಿತ್ಸೆ

ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ತಡೆಯಲು ಸರ್ಕಾರಿ ಶಸ್ತ್ರಚಿಕಿತ್ಸಕರಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ನಡೆಸುವ ಸರ್ಕಾರಿ ಆಸ್ಪತ್ರೆಗಳ ಸಂಖ್ಯೆಯನ್ನು ಆರೋಗ್ಯ ಇಲಾಖೆಯು 17ರಿಂದ 39ಕ್ಕೆ ಹೆಚ್ಚಿಸಿದೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಆಗುವ ಪ್ರಕರಣಗಳ ಪ್ರಮಾಣ ಗಣನೀಯವಾಗಿ ತಗ್ಗಿದೆ.


ದಿನೇಶ್ ಗುಂಡೂರಾವ್

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಈ ಕುರಿತ ವಿವರ ನೀಡಿದರು.

'2023–24ನೇ ಸಾಲಿನಲ್ಲಿ ನಡೆಸಲಾದ 1,709 ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ಪ್ರಕ್ರಿಯೆಗಳಲ್ಲಿ, 601 ಪ್ರಕ್ರಿಯೆಗಳನ್ನು (ಶೇ 35 ರಷ್ಟು) ಮಾತ್ರ ಸರ್ಕಾರಿ ವ್ಯವಸ್ಥೆಯಡಿ ನಡೆಸಲಾಗಿತ್ತು. ಶೇ 65ರಷ್ಟು ಪ್ರಕ್ರಿಯೆಗಳು (1,108) ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಆಗಿದ್ದವು. ಖಾಸಗಿ ಆಸ್ಪತ್ರೆಗಳ ಮೇಲಿನ ಅವಲಂಬನೆ ತಗ್ಗಿಸಲು, ಸರ್ಕಾರಿ ಆಸ್ಪತ್ರೆಗಳ ಮೂಲಸೌಕರ್ಯವನ್ನು ಹೆಚ್ಚಿಸಲಾಗಿದೆ. ಅನಗತ್ಯ ಶಸ್ತ್ರಚಿಕಿತ್ಸೆ ತಪ್ಪಿಸಲು ಪ್ರಕರಣಗಳನ್ನು ತಾಂತ್ರಿಕ ಸಮಿತಿಗೆ ಶಿಫಾರಸು ಮಾಡಿ, ಹತ್ತಿರದ ಸರ್ಕಾರಿ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ' ಎಂದರು.

'ಮಾರ್ಗದರ್ಶನ ಕಾರ್ಯಕ್ರಮದಡಿ ಪರಿಣತ ಮೂಳೆ ಶಸ್ತ್ರಚಿಕಿತ್ಸಕರನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗೆ ನಿಯೋಜಿಸಿ, ಅಲ್ಲಿನ ವೈದ್ಯರಿಗೆ ಮಾರ್ಗದರ್ಶನ ಮಾಡಲು ನಿಯೋಜಿಸಲಾಗಿದೆ. ತರಬೇತಿ ಪಡೆದ ವೈದ್ಯರು ಈಗ ಸ್ವತಂತ್ರವಾಗಿ ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದಾರೆ. ಈ ಶಸ್ತ್ರಚಿಕಿತ್ಸೆಗೆ ಹಿಂದೆ ಸರ್ಕಾರಿ ಆಸ್ಪತ್ರೆಗಳಿಗೆ ಶೇ 75ರಷ್ಟು ಚಿಕಿತ್ಸಾ ವೆಚ್ಚವನ್ನು ಪಾವತಿಸಲಾಗುತ್ತಿತ್ತು. ಅದನ್ನು ಶೇ 100ಕ್ಕೆ ಏರಿಕೆ ಮಾಡಲಾಗಿದೆ. ಇದರಿಂದ ಇಂಪ್ಲಾಂಟ್ ಮತ್ತು ಉಪಕರಣಗಳಲ್ಲಿಯೂ ಸುಧಾರಣೆಯಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ' ಎಂದು ಹೇಳಿದರು.

'ಈ ಕ್ರಮದಿಂದ 2025–26ನೇ ಸಾಲಿನಲ್ಲಿ 1,119 ಶಸ್ತ್ರಚಿಕಿತ್ಸಾ ಪ್ರಕ್ರಿಯೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ, 14 ಪ್ರಕ್ರಿಯೆಗಳನ್ನು ಮಾತ್ರ ಖಾಸಗಿ ಆಸ್ಪತ್ರೆಗಳಲ್ಲಿ ನಡೆಸಲಾಗಿದೆ. ಶಸ್ತ್ರಚಿಕಿತ್ಸೆ ನಡೆಸುತ್ತಿರುವ ಆಸ್ಪತ್ರೆಗಳ ಪಟ್ಟಿಯಲ್ಲಿ 13 ಜಿಲ್ಲಾ ಆಸ್ಪತ್ರೆಗಳು, 8 ತಾಲ್ಲೂಕು ಆಸ್ಪತ್ರೆಗಳೂ ಸೇರಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯ ಪಾಲು ಶೇ 35ರಿಂದ ಶೇ 99ಕ್ಕೆ ಏರಿಕೆಯಾಗಿದೆ. ಈ ಹಿಂದೆ ಶಸ್ತ್ರಚಿಕಿತ್ಸೆಗೆ 300 ಕಿ.ಮೀ.ಯಿಂದ 500 ಕಿ.ಮೀ. ಪ್ರಯಾಣಿಸುತ್ತಿದ್ದ ರೋಗಿಗಳು, ಮನೆಯ ಹತ್ತಿರವೇ ಚಿಕಿತ್ಸೆ ಪಡೆಯಬಹುದಾಗಿದೆ' ಎಂದು ಹೇಳಿದರು.

ಎರಡನೇ ಅಭಿಪ್ರಾಯಕ್ಕೆ ಸಹಾಯವಾಣಿ

ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗೆ ಎರಡನೇ ಅಭಿಪ್ರಾಯ ಪಡೆಯಲು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಉಚಿತ ಸಹಾಯವಾಣಿ (1800 425 8330) ಸೇವೆ ಒದಗಿಸುತ್ತಿದೆ. 2024ರಲ್ಲಿ ಪರಿಚಯಿಸಲಾಗಿದ್ದ ಈ ಸೇವೆಯಡಿ, ತಜ್ಞ ವೈದ್ಯರು ಅಗತ್ಯ ಮಾರ್ಗದರ್ಶನ ಒದಗಿಸಲಿದ್ದಾರೆ.

'ಈ ಸೇವೆಯಡಿ ಹಿಂದೆ 90ಕ್ಕೂ ಅಧಿಕ ಮಂದಿ ಪ್ರಯೋಜನ ಪಡೆದುಕೊಂಡಿದ್ದರು. ಬಳಿಕ ಮಾಹಿತಿ ಕೊರತೆಯಿಂದ ಜನರು ಕರೆ ಮಾಡಿರಲಿಲ್ಲ. ಮೊಣಕಾಲು ಹಾಗೂ ಸೊಂಟದ ಕೀಲು ಬದಲಿ ಶಸ್ತ್ರಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳಿಗೆ ತೆರಳಿರುವವರೂ, ಎರಡನೇ ಅಭಿಪ್ರಾಯಕ್ಕೆ ಈ ಸಹಾಯವಾಣಿಗೆ ಕರೆ ಮಾಡಿ ತಜ್ಞ ವೈದ್ಯರಿಂದ ಅಗತ್ಯ ಸಲಹೆ ಪಡೆದುಕೊಳ್ಳಬಹುದು. ಕೆಲ ಪ್ರಕರಣಗಳಲ್ಲಿ ಶಸ್ತ್ರಚಿಕಿತ್ಸೆ ಅಗತ್ಯವಿರುವುದಿಲ್ಲ. ಪರ್ಯಾಯ ಆಯ್ಕೆಯ ಬಗ್ಗೆಯೂ ಮಾಹಿತಿ ದೊರೆಯುತ್ತದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಶಾಖಾಘಾತ ಪ್ರಕರಣಗಳ ನಿರ್ವಹಣೆ

'ಬಿಸಿ ಗಾಳಿ ಪ್ರಕರಣಗಳ ನಿರ್ವಹಣೆಗೆ ಆರೋಗ್ಯ ಕೇಂದ್ರಗಳಲ್ಲಿ ಪ್ರತ್ಯೇಕ ಕೊಠಡಿಗಳ ವ್ಯವಸ್ಥೆ ಮಾಡಲಾಗಿದೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ ಎರಡು ಹಾಸಿಗೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 5 ಹಾಸಿಗೆ ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ 10 ಹಾಸಿಗೆಗಳನ್ನು ಮೀಸಲಿಡಲು ಸೂಚಿಸಲಾಗಿದೆ. ಪ್ರಕರಣಗಳ ನಿರ್ವಹಣೆ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ತುಟ್ಟಿಭತ್ಯೆ ಮಂಜೂರಾತಿಗೆ ಒತ್ತಾಯ


ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ನಿವೃತ್ತ ನೌಕರರಿಗೆ ಮತ್ತು ಪಿಂಚಣಿದಾರರಿಗೆ ತುಟ್ಟಿಭತ್ಯೆಯನ್ನು ಮಂಜೂರು ಮಾಡಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಲ್.ಭೈರಪ್ಪ ಒತ್ತಾಯಿಸಿದ್ದಾರೆ.

'2026ರ ಜನವರಿ 1ರಿಂದ ಪೂರ್ವಾನ್ವಯವಾಗುವಂತೆ ಕೇಂದ್ರ ಸರ್ಕಾರವು ತನ್ನ ನಿವೃತ್ತ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಶೇ 2ರಷ್ಟು ತುಟ್ಟಿಭತ್ಯೆಯನ್ನು ಮಂಜೂರು ಮಾಡಿ ಆದೇಶಿಸಿದೆ. ಅದೇ ರೀತಿ ಜನವರಿ ಒಂದರಿಂದ ರಾಜ್ಯ ಸರ್ಕಾರದ ನಿವೃತ್ತ ನೌಕರರು ಮತ್ತು ಪಿಂಚಣಿದಾರರಿಗೆ ತುಟ್ಟಿಭತ್ಯೆ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಪಾರ್ತಿಸುಬ್ಬ ಪ್ರಶಸ್ತಿಗೆ ರಾಘವ ನಂಬಿಯಾರ್ ಆಯ್ಕೆ

ಉಡುಪಿ: ಕರ್ನಾಟಕ ಯಕ್ಷಗಾನ ಅಕಾಡೆಮಿಯ 2025ನೇ ಸಾಲಿನ ಪಾರ್ತಿಸುಬ್ಬ ಪ್ರಶಸ್ತಿಗೆ ಉಡುಪಿಯ ಯಕ್ಷಗಾನ ಸಂಶೋಧಕ ಕೆ.ಎಂ. ರಾಘವ ನಂಬಿಯಾರ್ ಆಯ್ಕೆಯಾಗಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ ತಿಳಿಸಿದ್ದಾರೆ.


ಕೆ.ಎಂ. ರಾಘವ ನಂಬಿಯಾರ್

ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ. ಮೇ 3 ರಂದು ಉಡುಪಿಯ ಅಂಬಲಪಾಡಿ ಶ್ರೀ ಜನಾರ್ದನ ಮತ್ತು ಮಹಾಕಾಳಿ ದೇವಸ್ಥಾನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಚ್.ಡಿ. ದೇವೇಗೌಡಗೆ 'ಬಸವಶ್ರೀ' ಗುರುರಾಜಗೆ 'ವಚನ ಸಾಹಿತ್ಯಶ್ರೀ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಎಚ್.ಡಿ. ದೇವೇಗೌಡ


ಗುರುರಾಜ ಕರಜಗಿ

ಬೆಂಗಳೂರು: ಬಸವ ವೇದಿಕೆ ವತಿಯಿಂದ ನೀಡುವ 2026ನೇ ಸಾಲಿನ 'ಬಸವಶ್ರೀ ಪ್ರಶಸ್ತಿ'ಗೆ ಜೆಡಿಎಸ್ ವರಿಷ್ಠರೂ ಆಗಿರುವ ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ, 'ವಚನ ಸಾಹಿತ್ಯಶ್ರೀ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಬಸವ ವೇದಿಕೆಯ ಅಧ್ಯಕ್ಷ ಸಿ. ಸೋಮಶೇಖರ್ 'ಬಸವಶ್ರೀ ಪ್ರಶಸ್ತಿಯು ಬಸವಣ್ಣನ ಪುತ್ಥಳಿ, ಸ್ಮರಣಿಕೆ ಒಳಗೊಂಡಿದೆ. ವಚನ ಸಾಹಿತ್ಯಶ್ರೀ ಪ್ರಶಸ್ತಿಯು ₹10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ' ಎಂದು ತಿಳಿಸಿದರು.

'ಏ. 27ರಂದು ಸಂಜೆ 5.30ಕ್ಕೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಸುತ್ತೂರು ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಕೇಂದ್ರ ಸಚಿವ ವಿ. ಸೋಮಣ್ಣ ಸಮಾರಂಭ ಉದ್ಘಾಟಿಸಲಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ, ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರು ಬಸವಜ್ಯೋತಿ ವಿಶೇಷ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ' ಎಂದು ಮಾಹಿತಿ ನೀಡಿದರು.

ಮೇ 9ಕ್ಕೆ ಯಡಿಯೂರಪ್ಪ ಅಭಿಮಾನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯಕ್ಕೆ ಕಾಲಿಟ್ಟು 50 ವರ್ಷ ತುಂಬಿರುವ ಸಂಭ್ರಮದಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿ 'ಯಡಿಯೂರಪ್ಪ ಅಭಿಮಾನೋತ್ಸವ' ಆಯೋಜಿಸಲಾಗಿದೆ' ಎಂದು ಬಿಜೆಪಿ ಸಂಸದ ಗೋವಿಂದ ಕಾರಜೋಳ ತಿಳಿಸಿದರು.

ಉತ್ಸವದ ಲೋಗೊ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಡಿಯೂರಪ್ಪ ಅವರು ರಾಜ್ಯದ ರೈತರು, ಬಡವರು, ದಲಿತರ ಪರವಾಗಿ ಹೋರಾಡಿದ್ದಾರೆ. ಸಾಮಾಜಿಕ ನ್ಯಾಯಕ್ಕಾಗಿ ದುಡಿದಿದ್ದಾರೆ. ಅವರ ಈ 50 ವರ್ಷಗಳ ಸಾರ್ಥಕ ರಾಜಕೀಯ ಜೀವನಕ್ಕೆ ಗೌರವ ಸಲ್ಲಿಸುವ ಸಲುವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು.

'ಚಿತ್ರದುರ್ಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಇದಕ್ಕಾಗಿ ಏಪ್ರಿಲ್ 26ರಿಂದ ಸಿದ್ಧತಾಕಾರ್ಯಗಳು ಆರಂಭವಾಗಲಿವೆ. ಮೇ 8ರಂದು ಯಡಿಯೂರಪ್ಪ ಅವರ ಪುರಪ್ರವೇಶ ನಡೆಯಲಿದೆ. 9ರಂದು ನಡೆಯಲಿರುವ ಅಭಿಮಾನೋತ್ಸವದಲ್ಲಿ ವಿವಿಧ ಮಠಗಳ ಮಠಾಧೀಶರು, ರಾಜಕೀಯ ನಾಯಕರು ಸೇರಿ 10 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, 'ಚಿತ್ರದುರ್ಗವು ಕರ್ನಾಟಕದ ಕೇಂದ್ರಬಿಂದು. ಹೀಗಾಗಿ ಕಾರ್ಯಕ್ರಮ ಆಯೋಜನೆಗೆ ಆ ಊರನ್ನೆ ಆಯ್ಕೆ ಮಾಡಿಕೊಳ್ಳಲಾಯಿತು. ರಾಜ್ಯದ ಮೂಲೆ–ಮೂಲೆಯಿಂದಲೂ ಯಡಿಯೂರಪ್ಪ ಅವರ ಅಭಿಮಾನಿಗಳು ಕಾರ್ಯಕ್ರಮಕ್ಕೆ ಬರಲಿದ್ದಾರೆ' ಎಂದರು.

ವಿ. ವಿ ಪಿಂಚಣಿ: ಶೇ 70 ಅನುದಾನ ನೀಡಲು ಕ್ರಮ– ಸಚಿವ ಸುಧಾಕರ

ಧಾರವಾಡ: 'ವಿಶ್ವವಿದ್ಯಾಲಯಗಳ ಪಿಂಚಣಿ ಬಾಬ್ತಿಗೆ ಶೇ 70ರಷ್ಟು ಅನುದಾನವನ್ನು ಸರ್ಕಾರದಿಂದ ಒದಗಿಸಲು ಕ್ರಮ ವಹಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ ಹೇಳಿದರು.

ಇಲ್ಲಿ ಗುರುವಾರ ನಡೆದ ಕರ್ನಾಟಕ ವಿಶ್ವವಿದ್ಯಾಲಯದ 75ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 'ಪಿಂಚಣಿಗೆ ಶೇ 30ರಷ್ಟನ್ನು ವಿಶ್ವವಿದ್ಯಾಲಯ ಆಂತರಿಕ ಸಂಪನ್ಮೂಲದಿಂದ ಸಂಗ್ರಹಿಸಬೇಕು. ಪಿಂಚಣಿ ನಿರ್ವಹಿಸಬೇಕು' ಎಂದರು.

'ಉನ್ನತ ಶಿಕ್ಷಣದಲ್ಲಿ ಹಲವಾರು ಬದಲಾವಣೆ ತರಲು ಪ್ರಯತ್ನ ನಡೆದಿದೆ. ವಿದ್ಯಾರ್ಥಿಗಳಿಗೆ ವಿದೇಶಿ ವಿಶ್ವವಿದ್ಯಾಲಯಗಳ ಅನುಭವ ಕಲ್ಪಿಸಲು ವ್ಯವಸ್ಥೆ ಮಾಡಲಾಗಿದೆ. ಸೌಟ್ ಕಾರ್ಯಕ್ರಮದಡಿ ಆಯ್ದ ಆರು ವಿಶ್ವವಿದ್ಯಾಲಯಗಳ 30 ವಿದ್ಯಾರ್ಥಿಗಳು ಈಸ್ಟ್ ಲಂಡನ್‌ನಲ್ಲಿ 15 ದಿನ ಶೈಕ್ಷಣಿಕ ಅಧ್ಯಯನ ಮಾಡಿದ್ದಾರೆ' ಎಂದರು.

ಒಳಮೀಸಲಿಗೆ ಸೂತ್ರ ಸಂಪುಟ ಸಭೆ ಇಂದು

ಒಂದನೇ ಪುಟದಿಂದ...

ಒಳಮೀಸಲು ಕುರಿತು ಚರ್ಚಿಸಲು ಮಾರ್ಚ್ 27ರಂದೇ ವಿಶೇಷ ಸಂಪುಟ ಸಭೆ ನಿಗದಿಯಾಗಿತ್ತು. ಆದರೆ, ಎರಡು ಕ್ಷೇತ್ರಗಳ ಉಪ ಚುನಾವಣೆ ಕಾರಣ ಆ ಸಭೆಯನ್ನು ಮುಂದೂಡಲಾಗಿತ್ತು.

ಏ. 16ರಂದು ನಡೆದಿದ್ದ ಸಂಪುಟ ಸಭೆಯಲ್ಲೂ ಒಳಮೀಸಲು ವಿಚಾರ ಚರ್ಚೆಯಾಗಿತ್ತು. ಒಳಮೀಸಲು ಹಂಚಿಕೆಗೆ ಕ್ರಮ ತೆಗೆದುಕೊಳ್ಳಬೇಕೆಂದು ಪರಿಶಿಷ್ಟ ಜಾತಿಯ ಎಡಗೈ ಸಮುದಾಯದ ಸಚಿವರು ಅಂದಿನ ಸಭೆಯಲ್ಲಿ ಒತ್ತಾಯಿಸಿದ್ದರು. ಹೀಗಾಗಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೇತೃತ್ವದಲ್ಲಿ ತಾಂತ್ರಿಕ ಮತ್ತು ಕಾನೂನಾತ್ಮಕ ಅಂಶಗಳ ಪರಾಮರ್ಶೆಗೆ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಕಾನೂನು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಅಡ್ವೊಕೇಟ್ ಜನರಲ್ ಈ ಸಮಿತಿಯಲ್ಲಿದ್ದರು. ಸಮಿಯ ವರದಿ ಶುಕ್ರವಾರದ ಸಂಪುಟ ಸಭೆಯಲ್ಲಿ ಚರ್ಚೆಗೆ ಬರಲಿದೆ.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳ ಪೈಕಿ, ಅವಕಾಶ ವಂಚಿತ ಉಪ ಜಾತಿಗಳಿಗೆ ಒಳಮೀಸಲು ಕಲ್ಪಿಸಬೇಕೆಂಬ ಸುಮಾರು ಮೂರು ದಶಕಗಳ ಹಕ್ಕೊತ್ತಾಯ ಹಾಗೂ ಹೋರಾಟ ಅಂತಿಮ ಘಟ್ಟ ತಲುಪಿದ್ದು, ಸಂಪುಟ ಸಭೆ ತೆಗೆದುಕೊಳ್ಳಲಿರುವ ತೀರ್ಮಾನವನ್ನು ಇಡೀ ಸಮುದಾಯ ಎದುರು ನೋಡುತ್ತಿದೆ.

ಚಿಟಿಕೆ ಸುದ್ದಿ

ಭಕ್ತರಿಗೆ ತೆರೆದ ಬದ್ರಿನಾಥ ದೇವಸ್ಥಾನ



ಡೆಹರಾಡೂನ್ (ಪಿಟಿಐ): ಆರು ತಿಂಗಳ ಚಳಿಗಾಲದ ಬಳಿಕ ಉತ್ತರಾಖಂಡದ ಪ್ರಸಿದ್ಧ ಬದ್ರಿನಾಥ ದೇವಸ್ಥಾನವನ್ನು ಗುರುವಾರ ಭಕ್ತರಿಗಾಗಿ ಪ್ರವೇಶ ತೆರೆದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ಮೊದಲ ಪೂಜೆಯನ್ನು ನೆರವೇರಿಸಲಾಗಿದೆ.

ದೇಶದ ನಾನಾ ಭಾಗಗಳಿಂದ ಮತ್ತು ವಿದೇಶಗಳಿಂದಲೂ ಸುಮಾರು 15 ಸಾವಿರ ಯಾತ್ರಿಕರು ದೇವರ ದರ್ಶನಕ್ಕೆ ಬಂದಿದ್ದರು. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮಹೇಂದ್ರ ಭಟ್ ಕೂಡ ಈ ವೇಳೆ ಹಾಜರಿದ್ದರು. ಸರ್ಕಾರದ ನಿರ್ವಹಣೆ ಕುರಿತು ಭಕ್ತರಿಂದ ಅಭಿಪ್ರಾಯ ಕೇಳಿದರು.

ಆರು ಬಂಕರ್ ನಾಶ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿದ್ದ ಆರು ಬಂಕರ್‌ಗಳನ್ನು ನಾಶಪಡಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದರು.

ತೆಂಗ್ನೌಪಾಲ್ ಗ್ರಾಮದಲ್ಲಿ ಎರಡು, ಲೆಫ್ಸನ್‌ನಲ್ಲಿ ಒಂದು ಹಾಗೂ ಲಂಗ್ಸರ್ ಹಿಲ್‌ನಲ್ಲಿ ಮೂರು ಬಂಕರ್‌ಗಳನ್ನು ನಾಶಪಡಿಸಲಾಗಿದೆ.

ಭಾರತ– ಮ್ಯಾನ್ಮಾರ್ ಗಡಿಯಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಸ್ಫೋಟಕಗಳು ಮತ್ತು ಶಸ್ತ್ರಾಸ್ತ್ರಗಳನ್ನು ಭದ್ರತಾ ಪಡೆ ವಶಪಡಿಸಿಕೊಂಡಿದೆ.

ತ್ರಿಶ್ಶೂರ್ ಪೂರಂ: ಪಟಾಕಿ ನಿಷೇಧ

14 ಜನರ ಸಾವಿಗೆ ಕಾರಣವಾದ ಮುಂಡತ್ತಿಕೋಡ್ ಪಟಾಕಿ ದುರಂತ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಮುಂಡತ್ತಿಕೋಡ್ ಪಟಾಕಿ ದುರಂತದಲ್ಲಿ 14 ಜನರು ಮೃತಪಟ್ಟ ಘಟನೆಯಿಂದ ಬಾರಿ ತ್ರಿಶ್ಶೂರ್ ಪೂರಂ (ಉತ್ಸವ) ಆಚರಣೆಯಲ್ಲಿ ಸಿಡಿಮದ್ದು ಪ್ರದರ್ಶನ (ವೆಡಿಕೆಟ್) ರದ್ದುಗೊಳಿಸಲಾಗಿದೆ.

ಏಪ್ರಿಲ್ 24ರಂದು ಸಣ್ಣ ಪ್ರಮಾಣದ 'ಮಾದರಿ ಸಿಡಿಮದ್ದು ಪ್ರದರ್ಶನ' ನಡೆಯಲಿದೆ. ಆದರೆ, ಏಪ್ರಿಲ್ 27ರ ತಡರಾತ್ರಿ ನಡೆಯಬೇಕಿದ್ದ ಭಾರಿ ಪ್ರಮಾಣದ ಸಿಡಿಮದ್ದು ಪ್ರದರ್ಶನವನ್ನು ಕೈಬಿಡಲಾಗಿದೆ ಎಂದು ತ್ರಿಶ್ಶೂರ್ ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ಏ.26ರಂದು ನಡೆಯುವ ಆನೆಗಳ ಮೇಲೆ ಕುಳಿತು ಅಲಂಕೃತ ಕೊಡೆಗಳನ್ನು ವಿನಿಮಯ ಮಾಡಿಕೊಳ್ಳುವ 'ಕೊಡಮಾಟಂ' ಆಚರಣೆಯ ಸಮಯವನ್ನು 15 ನಿಮಿಷಗಳಿಗೆ ತಗ್ಗಿಸಲಾಗಿದೆ.

ತ್ರಿಶ್ಶೂರ್ ಪೂರಂ ಆಯೋಜಕರಾದ ವಡಕ್ಕುನಾಥನ್ ದೇವಸ್ಥಾನ, ತಿರುವಂಬಾಡಿ ಮತ್ತು ಪರಮೆಕ್ಕಾವು ದೇವಸ್ವಂ ಪ್ರತಿನಿಧಿಗಳೊಂದಿಗೆ ಸರ್ಕಾರ ಗುರುವಾರ ನಡೆಸಿದ ಮಾತುಕತೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

'ಉತ್ಸವಕ್ಕೆ ಸಂಬಂಧಿಸಿದ ಮೂಲ ಆಚರಣೆಗಳು ನಡೆಯಲಿವೆ. ಸಿಡಿಮದ್ದು ಪ್ರದರ್ಶನಕ್ಕೆ ಮಾತ್ರ ನಿರ್ಬಂಧ ಹೇರಲಾಗಿದೆ' ಎಂದು ದೇವಸ್ವಂ ಸಚಿವ ವಿ.ಎನ್ ವಾಸವನ್ ಸುದ್ದಿಗಾರರಿಗೆ ತಿಳಿಸಿದರು.

ದುರಂತ ನಡೆದ ಸ್ಥಳಕ್ಕೆ ಭೇಟಿ ನೀಡಿದ ವಿಧಿವಿಜ್ಞಾನ ತಂಡ ನಿಷೇಧಿತ ರಾಸಾಯನಿಕಗಳನ್ನು ಪಟಾಕಿ ತಯಾರಿಕೆಯಲ್ಲಿ ಬಳಸಲಾಗಿದೆಯೇ ಎನ್ನುವುದನ್ನು ಪರಿಶೀಲಿಸಿತು.

ತಲಾ ₹ 5 ಲಕ್ಷ ಪರಿಹಾರ ಘೋಷಣೆ

ಪಟಾಕಿ ಸ್ಫೋಟದ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಕಲ್ಯಾಣ್ ಜ್ಯುವೆಲ್ಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಟಿ.ಎಸ್. ಕಲ್ಯಾಣರಾಮನ್ ಅವರು ತಲಾ ₹ 5 ಲಕ್ಷ ಪರಿಹಾರ ಘೋಷಿಸಿದ್ದಾರೆ.



ಸುದ್ದಿ 2 ನಿಮಿಷ

'ಮಹಿಳಾ ಮೀಸಲಾತಿಯಲ್ಲಿ ಒಬಿಸಿ ಕೋಟಾಕ್ಕೆ ಬೆಂಬಲಿಸಿ'

ಹೈದರಾಬಾದ್ (ಪಿಟಿಐ): ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಸಂದರ್ಭದಲ್ಲಿ ಹಿಂದುಳಿದ ವರ್ಗಗಳಿಗೆ (ಒಬಿಸಿ) ಪ್ರತ್ಯೇಕ ಒಳಮೀಸಲಾತಿ ನೀಡುವುದನ್ನು ಬೆಂಬಲಿಸಬೇಕು ಎಂದು ಪಕ್ಷದ ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿಯು ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಗುರುವಾರ ಒತ್ತಾಯಿಸಿದೆ.

ದೆಹಲಿಯಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ನಡೆದ ಸಭೆಯಲ್ಲಿ, ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಮಹೇಶಕುಮಾರ್ ಗೌಡ್ ಈ ಒತ್ತಾಯ ಮಾಡಿದರು. ಈ ಸಂಬಂಧ ಚರ್ಚಿಸುವುದಕ್ಕಾಗಿ ಎಐಸಿಸಿಯು ಒಬಿಸಿ ಸಲಹಾ ಮಂಡಳಿಯ ಸಭೆ ಕರೆಯುವಂತೆಯೂ ಕೋರಿದರು. ಈ ಮನವಿಗೆ ರಾಹುಲ್ ಗಾಂಧಿ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾಗಿ ಮೂಲಗಳು ಹೇಳಿವೆ.



ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ 2024–25ರಲ್ಲಿ ನಡೆಸಿದ್ದ ಜಾತಿ ಗಣತಿಯ ವಿವರಗಳನ್ನು ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ ಎಂಬ ಮಾಹಿತಿಯನ್ನು ಮಹೇಶಕುಮಾರ್ ಗೌಡ್ ಇದೇ ವೇಳೆ ರಾಹುಲ್ ಅವರ ಗಮನಕ್ಕೆ ತಂದರು ಎಂದು ಇವೇ ಮೂಲಗಳು ಹೇಳಿವೆ.



ಆನೆಗೆ ಕೂಲರ್

ಪಿಟಿಐ ಚಿತ್ರ

ರಾಜಸ್ಥಾನದ ಜೈಪುರದಲ್ಲಿರುವ 'ಆನೆ ಗ್ರಾಮ'ದಲ್ಲಿ ಬಿಸಿಲ ಬೇಗೆಯಿಂದ ತತ್ತರಿಸಿದ್ದ ಆನೆಗಳಿಗೆ ಕೂಲರ್ ವ್ಯವಸ್ಥೆ ಕಲ್ಪಿಸಲಾಗಿದೆ

'ಹದಗೆಟ್ಟ ಕಾನೂನು ಸುವ್ಯವಸ್ಥೆ'

ಐಪ್ಯಾಕ್: ಸುಪ್ರೀಂ ಕೋರ್ಟ್‌ಗೆ ಸಾಲಿಸಿಟರ್ ಜನರಲ್ ಹೇಳಿಕೆ

ನವದೆಹಲಿ (ಪಿಟಿಐ): 'ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ರಾಜ್ಯದ ಆಡಳಿತ ಯಂತ್ರವನ್ನು ಐ–ಪ್ಯಾಕ್ ಪ್ರಕರಣದ ತನಿಖೆಗೆ ತಡೆಯೊಡ್ಡಲು ಬಳಸಿದ್ದಾರೆ' ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಇ.ಡಿ ಮತ್ತು ಇ.ಡಿ ಅಧಿಕಾರಿ ರಾಬಿನ್ ಬನ್ಸಾಲ್ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ ರಾಜು ಅವರು ಸಲ್ಲಿಸಿದ ಮನವಿಯನ್ನು ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಎನ್.ವಿ ಅಂಜಾರಿಯಾ ಅವರ ಪೀಠವು ಆಲಿಸಿತು.

'ಐ–ಪ್ಯಾಕ್ ಪ್ರಕರಣದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶಿಸುವಂತೆ' ಇ.ಡಿ ಸುಪ್ರೀಂಕೋರ್ಟ್‌ಗೆ ಮನವಿ ಮಾಡಿದೆ.

ಚುನಾವಣಾ ಸಲಹಾ ಸಂಸ್ಥೆ ಐ–ಪ್ಯಾಕ್‌ನ ಕೋಲ್ಕತ್ತ ಕಚೇರಿಯಲ್ಲಿ ಶೋಧ ಕೈಗೊಂಡಿದ್ದ ವೇಳೆ, ಮಮತಾ ಬ್ಯಾನರ್ಜಿ ಅವರು ತನಿಖೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಅಧಿಕಾರಿಗಳು ಸಂಗ್ರಹಿಸಿದ ದಾಖಲೆಗಳನ್ನು ಸ್ಥಳದಿಂದ ಕೊಂಡೊಯ್ಯಲು ಅಡ್ಡಿಪಡಿಸಿದ್ದಾರೆ ಎಂದು ಇ.ಡಿ ಆರೋಪಿಸಿದೆ.

ಅಧಿಕಾರಿಶಾಹಿಯ ಧೋರಣೆ: 'ರಾಜಕೀಯ ಪ್ರಚಾರದಲ್ಲಿ ಸಾಮಾಜಿಕ ಜಾಲತಾಣವನ್ನು ಅಸ್ತ್ರವನ್ನಾಗಿ ಬಳಸುವಂತೆ ಇ.ಡಿ ನ್ಯಾಯಾಲಯದ ಕಲಾಪವನ್ನು ಬಳಸುತ್ತಿದೆ. ಸಾಲಿಸಿಟರ್ ಜನರಲ್‌ಗಳ ವಾದದಲ್ಲಿ, 'ಚುನಾಯಿತವಾಗದ ಅಧಿಕಾರಿಶಾಹಿಯ ಧೋರಣೆ ಕಾಣಿಸುತ್ತಿದೆ' ಎಂದು ಮಮತಾ ಬ್ಯಾನರ್ಜಿ ಪರವಾಗಿ ಹಾಜರಾದ ವಕೀಲೆ ಮೇನಕಾ ಗುರುಸ್ವಾಮಿ ದೂರಿದರು.

'ನಾನು ಬೀದಿ ಜಗಳಗಂಟನಂತೆ ವರ್ತಿಸುವುದಿಲ್ಲ, ಘನತೆಯ ಮೌನವನ್ನು ಕಾಪಾಡಿಕೊಳ್ಳುತ್ತೇನೆ' ಎಂದು ಸಾಲಿಸಿಟರ್ ಜನರಲ್ ಉತ್ತರ ನೀಡಿದರು.

ಇ.ಡಿ ಸಮರ್ಥನೆಯನ್ನು ಒಪ್ಪಲು ಸಾಧ್ಯವಿಲ್ಲ ಎಂಬ ಮೇನಕಾ ವಾದವನ್ನು ಸಾಲಿಸಿಟರ್ ಜನರಲ್ ಅಲ್ಲಗಳೆದರು. 'ಪೊಲೀಸ್ ಅಧಿಕಾರಿಗಳೊಂದಿಗೆ ನೇರವಾಗಿ ಐ–ಪ್ಯಾಕ್ ಕಚೇರಿಗೆ ಬಂದ ಮುಖ್ಯಮಂತ್ರಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ. ಇದು ತನಿಖಾಧಿಕಾರಿಗಳ, ನಾಗರಿಕರ ಮೂಲ ಹಕ್ಕಿನ ಉಲ್ಲಂಘನೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಪೂರ್ಣ ವಿಫಲವಾಗಿದೆ ಎನ್ನುವುದಕ್ಕೆ ಇದು ಸ್ಪಷ್ಟ ನಿದರ್ಶನ' ಎಂದು ಅವರು ಹೇಳಿದರು.

'ರಾಹುಲ್ ಅಪಕ್ವ ರಾಜಕಾರಣಿ'

ನವದೆಹಲಿ (ಪಿಟಿಐ): 'ರಾಹುಲ್ ಗಾಂಧಿ ಒಬ್ಬ ಅಪಕ್ವ ರಾಜಕಾರಣಿ. ಆತ ವರ್ತಿಸುವುದನ್ನು ಮತ್ತು ಮಾತನಾಡುವುದನ್ನು ನೋಡಿದರೆ, ಆತನ ರಾಜಕೀಯದ ತಿಳಿವಳಿಕೆ ಸರಿಯಾಗಿ ಇಲ್ಲ ಎಂಬುದು ತಿಳಿಯುತ್ತದೆ' ಎಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಗುರುವಾರ ಟೀಕಿಸಿದರು.

ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ರಾಹುಲ್ ಅವರು ಅರಾಜಕತೆ ಸೃಷ್ಟಿಸುವ ಮನಃಸ್ಥಿತಿ ಹೊಂದಿರುವವರೊಂದಿಗೆ ಇರುತ್ತಾರೆ. ಯಾವುದೇ ವಿಚಾರದ ಗಾಂಭೀರ್ಯ ಅವರಿಗೆ ತಿಳಿಯುವುದಿಲ್ಲ' ಎಂದರು.

'ಲೋಕಸಭೆ ವಿರೋಧ ಪಕ್ಷದ ನಾಯಕನು ಸರ್ಕಾರದ ಭಾಗ. ಆದರೆ, ರಾಹುಲ್ ಅವರ ಚಟುವಟಿಕೆ, ಕಾರ್ಯವಿಧಾನ ಮತ್ತು ಭಾಷೆಯನ್ನು ಗಮನಿಸಿ. ಅದು ಸಂಸತ್ತಿನ ಹೊರಗೆ ಇರಲಿ ಅಥವಾ ಒಳಗೆ ಇರಲಿ. ಒಂದು ರಾಷ್ಟ್ರೀಯ ಪಕ್ಷದಿಂದ ಬಂದ ವಿರೋಧ ಪಕ್ಷದ ನಾಯಕನೊಬ್ಬ ಮಾತನಾಡುವ ರೀತಿಯೇ ಇದು?' ಎಂದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ಮೋದಿ ಅವರನ್ನು 'ಭಯೋತ್ಪಾದಕ' ಎಂದು ಕರೆದಿದ್ದರ ಕುರಿತ ಪ್ರಶ್ನೆಗೆ ಉತ್ತರಿಸಿ, 'ರಾಹುಲ್ ಅವರಿಗೆ ತೀರಾ ಹತ್ತಿರದವರು ಮತ್ತು ಅವರ ಪಿಆರ್ ಏಜೆನ್ಸಿ ಅವರು ಹೇಳಿಕೊಟ್ಟಂತೆ ಅಸಹಾಯಕ ಖರ್ಗೆ ಅವರು ಹೇಳುತ್ತಾರೆ' ಎಂದರು.

24 ಗಂಟೆಗಳೊಳಗೆ ಇಬ್ಬರ ಮೇಲೆ ಅತ್ಯಾಚಾರ

ನವದೆಹಲಿ (ಪಿಟಿಐ): ರಾಜಸ್ಥಾನದ ಅಲವಾರ ನಗರದಲ್ಲಿ ತನಗೆ ಪರಿಚಯವಿರುವ ವ್ಯಕ್ತಿಯ ಪತ್ನಿ ಮೇಲೆ ರಾತ್ರಿ ಅತ್ಯಾಚಾರ ಎಸಗಿದ 19 ವರ್ಷದ ಯುವಕ, ಮರುದಿನ ಬೆಳಿಗ್ಗೆ ದೆಹಲಿಗೆ ತೆರಳಿ, ತಾನು ಹಿಂದೆ ಕೆಲಸ ಮಾಡಿದ್ದ ಮನೆಗೆ ನುಗ್ಗಿ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿದ್ದಾನೆ.

ದಕ್ಷಿಣ ದೆಹಲಿಯ ಪ್ರತಿಷ್ಠಿತ ಕೈಲಾಶ್ ಹಿಲ್ಸ್‌ನಲ್ಲಿ ಭಾರತೀಯ ಕಂದಾಯ ಸೇವೆ (ಐಆರ್‌ಎಸ್) ಅಧಿಕಾರಿಯ 22 ವರ್ಷದ ಪುತ್ರಿಯ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಪ್ರಾಥಮಿಕ ತನಿಖೆ ಬಳಿಕ ಈ ಭೀಕರ ಕೊಲೆಯ ವಿವರಗಳು ಗೊತ್ತಾಗಿವೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

'ರಾಹುಲ್ ಮೀನಾ ಎಂಬಾತ ಬುಧವಾರ ಮುಂಜಾನೆ ಈ ಕೊಲೆ ಮಾಡಿದ್ದಾನೆ. ಈತ ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ್ದು, ಅವರಲ್ಲಿ ಒಬ್ಬರನ್ನು ಅತ್ಯಂತ ಕ್ರೂರವಾಗಿ ಕೊಂದಿದ್ದಾನೆ. ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ಗುರುವಾರ ಹಾಜರುಪಡಿಸಲಾಯಿತು. ಆದರೆ, ಆತನಲ್ಲಿ ಪಶ್ಚಾತ್ತಾಪದ ಯಾವ ಲಕ್ಷಣವೂ ಕಂಡುಬರಲಿಲ್ಲ. ತನ್ನ ಹೇಳಿಕೆಯನ್ನು ಪದೇ ಪದೇ ಬದಲಿಸುತ್ತಿದ್ದಾನೆ' ಎಂದು ಪೊಲೀಸರು ಹೇಳಿದ್ದಾರೆ.

ದೆಹಲಿ ಪೊಲೀಸರು ಆತನನ್ನು ನಾಲ್ಕು ದಿನಗಳವರೆಗೆ ಕಸ್ಟಡಿಗೆ ನೀಡುವಂತೆ ಸಲ್ಲಿಸಿದ ಮನವಿಯನ್ನು ಮ್ಯಾಜಿಸ್ಟ್ರೇಟ್ ಪುರಸ್ಕರಿಸಿದ್ದಾರೆ.

ಮೀನಾ ಐಆರ್‌ಎಸ್ ಅಧಿಕಾರಿಯ ಮನೆಯಲ್ಲಿ ಎಂಟು ತಿಂಗಳು ಕೆಲಸ ಮಾಡಿದ್ದ. ಹಣಕಾಸಿನ ಅವ್ಯವಹಾರದ ಕಾರಣಕ್ಕಾಗಿ ಒಂದು ತಿಂಗಳ ಹಿಂದಷ್ಟೇ ಆತನನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು.

'ಆರೋಪಿಯು ಸಂತ್ರಸ್ತೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ ಅತ್ಯಾಚಾರ ಎಸಗಿದ್ದಾನೆ. ಮೊಬೈಲ್ ಫೋನ್ ಚಾರ್ಜಿಂಗ್ ಕೇಬಲ್‌ನಿಂದ ಉಸಿರುಗಟ್ಟಿಸಿ ಕೊಂದಿದ್ದಾನೆ. ನಂತರ ಶವವನ್ನು ಲಾಕರ್ ಇದ್ದ ಮತ್ತೊಂದು ಕೋಣೆಗೆ ಎಳೆದುಕೊಂಡು ಹೋಗಿ, ಆಕೆಯ ಬೆರಳಚ್ಚು ಬಳಸಿ ಬಯೋಮೆಟ್ರಿಕ್ ಲಾಕ್ ತೆರೆಯಲು ಪ್ರಯತ್ನಿಸಿದ್ದಾನೆ. ಆದರೆ ಅದು ತೆರೆದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಂತರ ಲಾಕರ್ ಮುರಿದು, ನಗದು ಮತ್ತು ಚಿನ್ನಾಭರಣಗಳನ್ನು ತೆಗೆದುಕೊಂಡು ಸಂತ್ರಸ್ತೆಯ ಪೋಷಕರು ಮನೆಗೆ ಬರುವ ಸುಮಾರು 30 ನಿಮಿಷಗಳ ಮೊದಲು ಸ್ಥಳದಿಂದ ಪರಾರಿಯಾಗಿದ್ದಾನೆ. ಆತ ಸುಮಾರು 30 ನಿಮಿಷಗಳ ಕಾಲ ಮನೆ ಒಳಗಿದ್ದ' ಎಂದು ಮಾಹಿತಿ ನೀಡಿದ್ದಾರೆ.

ವಿಶೇಷ ತಂಡ ರಚನೆ

'ರಾಜಸ್ಥಾನದ ಅಲವಾರ ನಗರದ ಮಹಿಳೆ ಮೇಲೆ ನಡೆದ ಅತ್ಯಾಚಾರ ಪ್ರಕರಣದ ತನಿಖೆಗಾಗಿ ವಿಶೇಷ ತಂಡವನ್ನು ರಚಿಸಲಾಗಿದೆ. ಆರೋಪಿ ಮೀನಾ ಸಂತ್ರಸ್ತೆಗೆ ಪರಿಚಿತನಾಗಿದ್ದ. ಅವರ ಪತಿಯೊಂದಿಗೆ ಆನ್‌ಲೈನ್‌ನಲ್ಲಿ ಲುಡೋ ಆಡುತ್ತಿದ್ದ. ಮಂಗಳವಾರ ರಾತ್ರಿ ಆ ಮಹಿಳೆ ಮೇಲೆ ಅತ್ಯಾಚಾರ ಎಸಗಿದ್ದಾನೆ. ಈ ವಿಷಯ ಯಾರಿಗಾದರೂ ತಿಳಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಧೀರ್ ಚೌಧರಿ ತಿಳಿಸಿದ್ದಾರೆ.

ಖರ್ಗೆ ವಿರುದ್ಧ ಬಿಜೆಪಿ ದೂರು

ಶಿಮ್ಲಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ 'ಭಯೋತ್ಪಾದಕ' ಎಂಬ ಪದ ಬಳಕೆ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಹಿಮಾಚಲ ಪ್ರದೇಶ ಬಿಜೆಪಿ ಘಟಕ ಗುರುವಾರ ದೂರು ದಾಖಲಿಸಿದೆ.

ಬಿಜೆಪಿ ಮಾಧ್ಯಮ ಸಹ ಉಸ್ತುವಾರಿ ವಿಶ್ವಚಾಕ್ಷು ಅವರು ಧರ್ಮಶಾಲ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

'ಪ್ರಧಾನಿ ವಿರುದ್ಧ ಖರ್ಗೆ ಅವರು ಅತಿರೇಕದ ಪದ ಬಳಸಿದ್ದಾರೆ. ಇದು 140 ಕೋಟಿ ಭಾರತೀಯರಿಗೆ ಮಾಡಿದ ಅಪಮಾನ' ಎಂದಿದ್ದಾರೆ.

'ದ್ವೇಷ ಮತ್ತು ಹಗೆತನ ಮೂಡಿಸುವ ಹೇಳಿಕೆಗಳು ಸಮಾಜದಲ್ಲಿ ಅರಾಜಕತೆ ಸೃಷ್ಟಿಸಿ, ಕಾನೂನು ಸುವ್ಯವಸ್ಥೆಗೆ ಭಂಗ ತರಲಿವೆ. ಭವಿಷ್ಯದಲ್ಲಿ ಪ್ರಧಾನಿ ವಿರುದ್ಧ ಯಾರೂ ಇಂತಹ ಹೇಳಿಕೆ ನೀಡಬಾರದು. ಹೀಗಾಗಿ ಕಠಿಣ ಶಿಕ್ಷೆಯನ್ನು ವಿಧಿಸಬೇಕು' ಎಂದು ವಿಶ್ವಚಾಕ್ಷು ಮನವಿ ಮಾಡಿದ್ದಾರೆ.

ಅಜರುದ್ದೀನ್ ಸಚಿವ ಸ್ಥಾನದ ಭವಿಷ್ಯ ಅತಂತ್ರ

ಹೈದರಾಬಾದ್: ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರ ಸಂಪುಟದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಉದ್ಯಮಗಳ ಖಾತೆ ಸಚಿವರಾಗಿರುವ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಅವರ ಸಚಿವ ಸ್ಥಾನದ ಭವಿಷ್ಯವು ಸಾಂವಿಧಾನಿಕ ಕಾರಣಗಳಿಂದ ಅತಂತ್ರ ಸ್ಥಿತಿಯಲ್ಲಿದೆ.



ಅಜರುದ್ದೀನ್

ಅಜರುದ್ದೀನ್ ಅವರು 2025ರ ಅಕ್ಟೋಬರ್ 31ರಂದು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಆದರೆ, ಇವರು ವಿಧಾನಸಭೆ ಅಥವಾ ವಿಧಾನಪರಿಷತ್ತಿನ ಸದಸ್ಯರಾಗಿಲ್ಲ. ಸಚಿವರಾಗಿ ಆರು ತಿಂಗಳ ಒಳಗೆ, ಇವರು ಶಾಸಕರಾಗಿ ಒಂದೋ ಜನರಿಂದ ಆಯ್ಕೆಯಾಗಬೇಕಿತ್ತು ಅಥವಾ ಪರಿಷತ್ತಿನ ಸದಸ್ಯರಾಗಿ ಆಯ್ಕೆ ಇಲ್ಲವೇ ನಾಮನಿರ್ದೇಶನಗೊಳ್ಳಬೇಕಿತ್ತು.

ಇವರ ಈ ಆರು ತಿಂಗಳ ಅವಧಿಯು ಈಗ ಏಪ್ರಿಲ್ 30ಕ್ಕೆ ಕೊನೆಗೊಳ್ಳಲಿದೆ. ಏ.30ರೊಳಗೆ ರಾಜ್ಯಪಾಲರು ನಾಮನಿರ್ದೇಶನ ಮಾಡದಿದ್ದರೆ, ಅಜರುದ್ದೀನ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗುತ್ತದೆ.

ಸಿಬಿಎಸ್‌ಇ: 2ನೇ ಬೋರ್ಡ್ ಪರೀಕ್ಷೆ ವೇಳಾಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) 10ನೇ ತರಗತಿಯ ಎರಡನೇ ಬೋರ್ಡ್ ಪರೀಕ್ಷೆಯ ವೇಳಾಪಟ್ಟಿಯನ್ನು ಗುರುವಾರ ಪ್ರಕಟಿಸಿದೆ. ಮೇ15ರಿಂದ ಮೇ21ರವರೆಗೆ ಪರೀಕ್ಷೆಗಳು ನಡೆಯಲಿವೆ.



2026ನೇ ಶೈಕ್ಷಣಿಕ ಸಾಲಿನಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಸಿಬಿಎಸ್‌ಇಯು ಎರಡು ಬಾರಿ ಬೋರ್ಡ್ ಪರೀಕ್ಷೆ ನಡೆಸುತ್ತಿದೆ.

ಫೆಬ್ರುವರಿಯಲ್ಲಿ ಮೊದಲ ಕಡ್ಡಾಯ ಬೋರ್ಡ್ ಪರೀಕ್ಷೆ ನಡೆದಿದ್ದು, ಈಗಾಗಲೇ ಫಲಿತಾಂಶವೂ ಪ್ರಕಟಗೊಂಡಿದೆ. ಎರಡನೇ ಹಂತದ ಪರೀಕ್ಷೆ ಐಚ್ಛಿಕವಾಗಿದೆ.

ಖರ್ಗೆ ವಿರುದ್ಧ ಬಿಜೆಪಿ ಪ್ರತಿಭಟನೆ

ಪ್ರಧಾನಿ ಮೋದಿ ಬಗ್ಗೆ ಟೀಕೆಗೆ ಆಕ್ಷೇಪ ಕ್ಷಮೆಯಾಚನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಖರ್ಗೆ ಹೇಳಿಕೆಯನ್ನು ಇಡೀ ದೇಶ ಖಂಡಿಸುತ್ತದೆ: ಬಿ.ವೈ. ವಿಜಯೇಂದ್ರ
- ಭಯೋತ್ಪಾದಕ ದಾಳಿ ವೇಳೆ ಕಾಂಗ್ರೆಸಿಗರು ಕೈಕಟ್ಟಿ ಕುಳಿತಿದ್ದರು: ಆರ್. ಅಶೋಕ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ದೇಶದ ಜನರ ಕ್ಷಮೆ ಕೇಳಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆ ಖಂಡಿಸಿ, ವಿಧಾನಸೌಧ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆ ಎದುರು ಬಿಜೆಪಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಗುರುವಾರ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ವಿಜಯೇಂದ್ರ, 'ವಿಶ್ವದ 25 ರಾಷ್ಟ್ರಗಳು ಮೋದಿ ಅವರಿಗೆ ಅತ್ಯುತ್ತಮ ನಾಗರಿಕ ಪ್ರಶಸ್ತಿ ನೀಡಿ ಗೌರವಿಸಿವೆ. ಇಡೀ ವಿಶ್ವವೇ ಮೋದಿ ಅವರ ನಾಯಕತ್ವವನ್ನು ಒಪ್ಪಿಕೊಂಡಿರುವಾಗ ಖರ್ಗೆ ಅವರು, 'ಮೋದಿ ಭಯೋತ್ಪಾದಕ' ಎಂದಿದ್ದಾರೆ. ಇದನ್ನು ಇಡೀ ದೇಶ ಖಂಡಿಸುತ್ತದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಖರ್ಗೆ ಅವರ ಮಾತು ಅಕ್ಷಮ್ಯ. ಮುಂಬೈನಲ್ಲಿ ಹೋಟೆಲ್ ಮೇಲೆ ಭಯೋತ್ಪಾದಕರು ದಾಳಿ ನಡೆಸಿದಾಗ ಕಾಂಗ್ರೆಸ್ ನಾಯಕರು ಕೈಕಟ್ಟಿ ಕೂತಿದ್ದರು. ಅಂತಹವರು ಇತರರನ್ನು ಭಯೋತ್ಪಾದಕರು ಎನ್ನುತ್ತಾರೆ' ಎಂದು ಟೀಕಿಸಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, 'ಪ್ರಧಾನಿ ಅವರನ್ನು ಭಯೋತ್ಪಾದಕ ಎಂದಿದ್ದು ಖರ್ಗೆ ಅವರ ಸ್ವಂತ ಮಾತೇ ಅಥವಾ ಸೋನಿಯಾ ಮತ್ತು ರಾಹುಲ್ ಗಾಂಧಿ ಅವರು ತಮ್ಮ ಮಾತನ್ನು ಖರ್ಗೆ ಅವರ ಮೂಲಕ ಹೇಳಿಸಿದರೇ' ಎಂದು ಪ್ರಶ್ನಿಸಿದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, 'ರಾಹುಲ್ ಗಾಂಧಿ ಅವರು ವಿದೇಶಗಳಲ್ಲಿದ್ದಾಗ ದೇಶ ವಿರೋಧಿ ಹೇಳಿಕೆ ನೀಡುತ್ತಾರೆ. ಈಗ ಖರ್ಗೆ ಅವರು ಭಾರತದಲ್ಲಿ ಅದನ್ನು ಅನುಸರಿಸುತ್ತಿದ್ದಾರೆ. ಅವರು ಜಾರ್ಜ್ ಸೋರೋಸ್‌ನ ಏಜೆಂಟರು. ಅವರ ತಾಳಕ್ಕೆ ತಕ್ಕಂತೆ ಕಾಂಗ್ರೆಸಿಗರು ಕುಣಿಯುತ್ತಾರೆ' ಎಂದರು.



ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಬಿಜೆಪಿ ಶಾಸಕರು ಮತ್ತು ಸಂಸದರು ವಿಧಾನಸೌಧದ ಗಾಂಧೀಜಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಕಾಂಗ್ರೆಸ್ ಭವನಕ್ಕೆ ನಿವೇಶನ: ಹೋರಾಟ'

ಬೆಂಗಳೂರು: 'ರಾಜ್ಯದ ಹಲವೆಡೆ ಕಾಂಗ್ರೆಸ್ ಭವನಗಳನ್ನು ನಿರ್ಮಿಸಲು ಕಾನೂನುಬಾಹಿರವಾಗಿ ನಾಗರಿಕ ಸೌಲಭ್ಯ (ಸಿಎ) ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರ ವಿರುದ್ಧ ಹೋರಾಟ ನಡೆಸುತ್ತೇವೆ' ಎಂದು ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಹೇಳಿದರು.


ಡಿ.ಎಸ್. ಅರುಣ್

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅರುಣ್, 'ರಾಜಕೀಯ ಪಕ್ಷಗಳಿಗೆ ಸಿಎ ನಿವೇಶನಗಳನ್ನು ನೀಡಬಾರದು ಎಂಬ ನಿಯಮವಿದೆ. ಹೀಗಿದ್ದೂ ಕಾಂಗ್ರೆಸ್ ತನಗೆ ತಾನೇ ನಿವೇಶನಗಳನ್ನು ಹಂಚಿಕೆ ಮಾಡಿಕೊಂಡಿದೆ' ಎಂದರು.

'ಅಧಿಕಾರಿಗಳ ವಿರೋಧವಿದ್ದರೂ ಮಾರ್ಗಸೂಚಿ ದರದ ಶೇ 5ರಷ್ಟು ಹಣ ಪಡೆದು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟುಮಾಡಲಾಗಿದೆ. ಈ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಕೇಳಿದ್ದ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹಾರಿಕೆ ಉತ್ತರ ನೀಡಿದ್ದರು. ಆದರೆ, ಸರ್ಕಾರದ ನಡೆಗೆ ಈಗ ಹೈಕೋರ್ಟ್ ಛೀಮಾರಿ ಹಾಕಿದೆ' ಎಂದರು.

ರೂಫ್ ಇಂಡಿಯಾ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 23ನೇ ಆವೃತ್ತಿಯ 'ರೂಫ್ ಇಂಡಿಯಾ 2026' ಮೇಳ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆರಂಭಗೊಂಡಿದೆ.

'ಇನ್ಫ್ರಾರ್ ಮಾರ್ಕೆಟ್ಸ್ ಇನ್ ಇಂಡಿಯಾ' ಆಯೋಜಿಸಿರುವ ಈ ಬೃಹತ್ ಪ್ರದರ್ಶನದಲ್ಲಿ ಏಷ್ಯಾದಲ್ಲೇ ಅತ್ಯಂತ ಪ್ರತಿಷ್ಠಿತ ಎನಿಸಿಕೊಂಡಿರುವ ನಿರ್ಮಾಣ ಕ್ಷೇತ್ರದ ದಿಗ್ಗಜರು ಭಾಗವಹಿಸಲಿದ್ದಾರೆ. ಭಾರತ ಸೇರಿದಂತೆ ವಿವಿಧ ದೇಶಗಳ 150ಕ್ಕೂ ಹೆಚ್ಚು ಮುಂಚೂಣಿ ಬ್ರ್ಯಾಂಡ್‌ಗಳು ತಮ್ಮ ನೂತನ ಉತ್ಪನ್ನಗಳನ್ನು ಪ್ರದರ್ಶಿಸಲಿವೆ. ಆಧುನಿಕ ಮೇಲ್ಛಾವಣಿ, ಸುಸ್ಥಿರ ನಿರ್ಮಾಣ ಮಾದರಿ, ಉತ್ಕೃಷ್ಟ ದರ್ಜೆಯ ತಂತ್ರಜ್ಞಾನವನ್ನು ಇಲ್ಲಿ ಪರಿಚಯಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಬಮೂಲ್: ಗುಂಪು ರಾಸು ವಿಮೆ ಯೋಜನೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಹಕಾರ ಹಾಲು ಒಕ್ಕೂಟದಿಂದ(ಬಮೂಲ್) ನೂತನವಾಗಿ ಆರಂಭಿಸಿರುವ ಗುಂಪು ರಾಸು ವಿಮೆ ಯೋಜನೆಗೆ ಯಲಹಂಕ ಕ್ಷೇತ್ರದ ಹನಿಯೂರು ಗ್ರಾಮದಲ್ಲಿ ಗೋ ಪೂಜೆ ಮಾಡುವ ಮೂಲಕ ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸತೀಶ್ ಕಡತನಮಲೆ ಗುರುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಈ ಯೋಜನೆಯಲ್ಲಿ ವಿಮೆಯ ಕಂತಿನಲ್ಲಿ ಶೇಕಡ 50ರಷ್ಟು ರಿಯಾಯಿತಿ ನೀಡಲಾಗುವುದು. ರಾಸುಗಳ ವಯೋಮಾನ, ಆರೋಗ್ಯದ ಗುಣಮಟ್ಟ ಮತ್ತು ಇನ್ನಿತರ ಅಂಶಗಳಿಗೆ ಅನುಗುಣವಾಗಿ ಗರಿಷ್ಠ ₹1.20 ಲಕ್ಷದವರೆಗೆ ವಿಮೆ ಹಣ ನೀಡಲಾಗುತ್ತದೆ. 2026–27ನೇ ಸಾಲಿನಲ್ಲಿ ಬಮೂಲ್ ವ್ಯಾಪ್ತಿಯ 3.5 ಲಕ್ಷ ರಾಸುಗಳಿಗೆ ಗುಂಪು ರಾಸು ವಿಮೆ ಮಾಡಿಸುವ ಗುರಿ ಇದೆ. ಹಾಲು ಉತ್ಪಾದಕ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು' ಎಂದರು.

ಇದೇ ಸಂದರ್ಭದಲ್ಲಿ ಹಾಲು ಉತ್ಪಾದಕ ಸದಸ್ಯರ ವೈದ್ಯಕೀಯ ವೆಚ್ಚದ ಮರುಪಾವತಿ ಚೆಕ್ ವಿತರಿಸಲಾಯಿತು.

ರಾಜಾನುಕುಂಟೆ ಶಿಬಿರ ಕಚೇರಿಯ ಉಪ ವ್ಯವಸ್ಥಾಪಕ ಪ್ರಸನ್ನ ವಿ.ಪಿ., ಪಶು ವೈದ್ಯರಾದ ಡಾ. ಶ್ರೀಲಕ್ಷ್ಮಿ, ಡಾ. ಹರೀಶ್, ವಿಸ್ತರಣಾಧಿಕಾರಿಗಳಾದ ನಾಗರಾಜಪ್ಪ, ಪ್ರಭು, ಅಕ್ಷಯ್, ರಮೇಶ್, ಅನಿಲ್, ಹನಿಯೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಹಾಲು ಉತ್ಪಾದಕರ ಸಂಘದ ಸದಸ್ಯರಿಗೆ ವೈದ್ಯಕೀಯ ವೆಚ್ಚದ ಮರುಪಾವತಿ ಚೆಕ್ ವಿತರಿಸಲಾಯಿತು

'ಮದ್ಯದಂಗಡಿ: ಸಮಯ ಪಾಲಿಸಿ'

ಮುಖ್ಯಮಂತ್ರಿಗೆ ಶಾಸಕ ಸುರೇಶ್ ಕುಮಾರ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಮದ್ಯದಂಗಡಿಗಳ ಕಾರ್ಯನಿರ್ವಹಣಾ ಅವಧಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ' ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.


ಎಸ್‌.ಸುರೇಶ್ ಕುಮಾರ್

ಈ ಬಗ್ಗೆ ಪತ್ರ ಬರೆದಿರುವ ಅವರು, 'ರಾಜ್ಯದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಎಂಆರ್‌ಪಿ ಮಾರಾಟ ಮಳಿಗೆಗಳು ಸೇರಿ ಹಲವು ಸ್ವರೂಪದ ಮದ್ಯದಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಯಾವ ಮದ್ಯದಂಗಡಿಗಳೂ ಬೆಳಿಗ್ಗೆ 10ಕ್ಕೆ ಮೊದಲು ತೆರೆಯುವಂತಿಲ್ಲ ಮತ್ತು ರಾತ್ರಿ ನಿಗದಿಪಡಿಸಿದ ಸಮಯಕ್ಕೆ ಬಾಗಿಲು ಹಾಕಬೇಕು ಎಂಬ ನಿಯಮವಿದೆ' ಎಂದಿದ್ದಾರೆ.

'ನಾನು ನನ್ನ ವಿಧಾನಸಭಾ ಕ್ಷೇತ್ರದಲ್ಲಿನ ಪ್ರತಿ ವಾರ್ಡ್‌ಗೆ ಭೇಟಿ ಕೊಟ್ಟು, ಜನರೊಂದಿಗೆ ಮಾತನಾಡುತ್ತೇನೆ. ಕಾರ್ಯನಿರ್ವಹಣಾ ಅವಧಿಯನ್ನು ಉಲ್ಲಂಘಿಸಿ ಮದ್ಯದಂಗಡಿಗಳು ವ್ಯಾಪಾರ ನಡೆಸುತ್ತಿರುವುದು ಈ ವೇಳೆ ನನ್ನ ಗಮನಕ್ಕೆ ಬಂದಿದೆ. ಹಲವು ಮದ್ಯದಂಗಡಿಗಳು ಬೆಳಿಗ್ಗೆ 6ರ ಹೊತ್ತಿಗೇ ತೆರೆದಿರುತ್ತವೆ. ಅವಧಿ ಮೀರಿ ತಡರಾತ್ರಿಯಲ್ಲೂ ವ್ಯಾಪಾರ ನಡೆಸುತ್ತವೆ' ಎಂದು ಆರೋಪಿಸಿದ್ದಾರೆ.

'ರಾಜ್ಯದ ತೆರಿಗೆ ಆದಾಯಕ್ಕೆ ಮದ್ಯದಂಗಡಿಗಳು ಮಹತ್ವದ ಕೊಡುಗೆ ನೀಡುತ್ತವೆ ಎಂಬುದು ಸತ್ಯ. ಆದರೆ ಜನರ ಆರೋಗ್ಯ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನೂ ಕಾಪಾಡಿಕೊಳ್ಳುವುದು ಸರ್ಕಾರದ ಹೊಣೆಗಾರಿಕೆ. ಕೇವಲ ಹೆಸರಿಗೆಂದು 'ಮದ್ಯಪಾನ ಸಂಯಮ ಮಂಡಳಿ' ಸ್ಥಾಪಿಸಿದರೆ ಸಾಲದು. ಮದ್ಯದಂಗಡಿಗಳ ಕಾರ್ಯನಿರ್ವಹಣಾ ಅವಧಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ. ಇಲ್ಲವೇ 'ರಾಜ್ಯದಲ್ಲಿ ಮದ್ಯದಂಗಡಿಗಳು ದಿನದ 24 ಗಂಟೆಯೂ ತೆರೆದಿರಬಹುದು' ಎಂದು ಫರ್ಮಾನು ಹೊರಡಿಸಿ' ಎಂದು ಸವಾಲು ಹಾಕಿದ್ದಾರೆ.

ಜಲಮಂಡಳಿ ಫೋನ್‌ಇನ್ ಇಂದು

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಏ.24ರಂದು ಬೆಳಿಗ್ಗೆ 09.30 ರಿಂದ 10.30 ರವರೆಗೆ ನೇರ ಫೋನ್‌ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ: 080-22945119, 080-22229639.

ಬನ್ನೇರುಘಟ್ಟ, ಮುತ್ಯಾಲಮಡುವಿಗೆ ಪ್ರವಾಸಿ ಬಸ್ ಆರಂಭ: ನಿಗಮ

ಬೆಂಗಳೂರು: ಬೇಸಿಗೆ ರಜೆಯಲ್ಲಿ ಬನ್ನೇರುಘಟ್ಟ, ಮುತ್ಯಾಲಮಡುವು ಪ್ರವಾಸಿ ತಾಣಗಳನ್ನು ವೀಕ್ಷಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಪ್ರವಾಸ ಆಯೋಜನೆ ಮಾಡಿದೆ.

ಹವಾನಿಯಂತ್ರಿತ ಸೌಲಭ್ಯದ ಬಸ್ ಯಶವಂತಪುರದಿಂದ ಮಂಗಳವಾರ ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 7.15ಕ್ಕೆ ಹೊರಡಲಿದೆ. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 7.30ಕ್ಕೆ, ಶಾಂತಿನಗರ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 7.45ಕ್ಕೆ ಮತ್ತು ಜಯನಗರ ಬಸ್ ನಿಲ್ದಾಣದಲ್ಲಿ ಬೆಳಿಗ್ಗೆ 8ಕ್ಕೆ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲಿದೆ.

ಪ್ರವಾಸವು ಬನ್ನೇರುಘಟ್ಟ ಮೃಗಾಲಯ - ಸಫಾರಿ – ಚಿಟ್ಟೆ ಉದ್ಯಾನ –ಮುತ್ಯಾಲಮಡುವು– ಬೋಟಿಂಗ್ ಸೂರ್ಯಾಸ್ತ ವೀಕ್ಷಣೆಯನ್ನು ಒಳಗೊಂಡಿದೆ. ಪ್ರವಾಸಕ್ಕೆ ಒಬ್ಬರಿಗೆ ₹1,680 ನಿಗದಿಪಡಿಸಲಾಗಿದೆ. ಈ ದರವು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಮೃಗಾಲಯ ವೀಕ್ಷಣೆ, ಸಫಾರಿ ಸೇವೆ, ಚಿಟ್ಟೆ ಉದ್ಯಾನದ ಪ್ರವೇಶ ಶುಲ್ಕಗಳನ್ನು, ಮುತ್ಯಾಲಮಡುವಿನಲ್ಲಿ ಕೈಗೊಳ್ಳಲಾಗುವ ಬೋಟಿಂಗ್ ಶುಲ್ಕ, ಬೆಳಿಗ್ಗಿನ ಉಪಾಹಾರ, ಮಧ್ಯಾಹ್ನದ ಭೋಜನ ಹಾಗೂ ಸಂಜೆಯ ಲಘು ಉಪಾಹಾರ ಶುಲ್ಕವನ್ನು ಒಳಗೊಂಡಿದೆ.

ಬನ್ನೇರುಘಟ್ಟ ಉದ್ಯಾನದ ಎಲ್ಲ ಪ್ರವೇಶದ್ವಾರಗಳಲ್ಲಿ ಯಾವುದೇ ವಿಳಂಬವಿಲ್ಲದೆ ನೇರವಾಗಿ ಪ್ರವೇಶಿಸಲು ಅನುಕೂಲ ಕಲ್ಪಿಸಲಾಗಿದೆ. ಆಸಕ್ತರು ನಿಗಮದ ಯಶವಂತಪುರ ಬುಕ್ಕಿಂಗ್ ಕೌಂಟರ್, ನಿಗಮ ಅಧಿಕೃತ ಟ್ರಾವೆಲ್ ಏಜೆಂಟ್‌ಗಳು ಹಾಗೂ ನಿಗಮದ ವೆಬ್‌ಸೈಟ್ ಮೂಲಕ ಮುಂಗಡವಾಗಿ ಕಾಯ್ದಿರಿಸಬಹುದು. ಮಾಹಿತಿಗಾಗಿ ನಿಗಮದ ಜಾಲತಾಣ www.kstdc.co ಅಥವಾ ದೂರವಾಣಿ ಸಂಖ್ಯೆ 080 4334 4334/35, ಮೊಬೈಲ್ 8970650070/75/21 ಸಂಪರ್ಕಿಸಬಹುದು ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಇಂದಿನಿಂದ ಇತಿಹಾಸ ಮಹಾಧಿವೇಶನ

ಬೆಂಗಳೂರು: ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾಧಿವೇಶನ ನಗರದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಇರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏಪ್ರಿಲ್ 24ರಿಂದ ಮೂರು ದಿನ ನಡೆಯಲಿದೆ.

ಡಾ. ಮನಮೋಹನ್ ಸಿಂಗ್ ನಗರ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗ, ಸರ್ಕಾರಿ ಕಲಾ ಕಾಲೇಜು, ಕರ್ನಾಟಕ ಪತ್ರಾಗಾರ ಮತ್ತು ಗೆಜಿಟಿಯರ್ ಇಲಾಖೆ ಹಾಗೂ ನವದೆಹಲಿಯ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ ಸಹಯೋಗದಲ್ಲಿ ಆಯೋಜಿಸಿರುವ ಈ ಮಹಾಧಿವೇಶನವನ್ನು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಏ 24ರ ಬೆಳಿಗ್ಗೆ 10 ಗಂಟೆಗೆ ಉದ್ಘಾಟಿಸುವರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕಿ ಜಾನಕಿ ನಾಯರ್ ಆಶಯ ನುಡಿಗಳನ್ನಾಡುವರು. ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಎಸ್.ಶೇಕ್ ಮಸ್ತಾನ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವರು. ಕುಲಪತಿ ರಮೇಶ್.ಬಿ. ಅಧ್ಯಕ್ಷತೆ ವಹಿಸುವರು.

ಉದ್ಯಮಿಗೆ ಬ್ಲ್ಯಾಕ್‌ಮೇಲ್: ₹1.5 ಕೋಟಿಗೆ ಬೇಡಿಕೆ

ಯುವತಿ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು • ಆತ್ಮೀಯ ಕ್ಷಣಗಳನ್ನು ಸೆರೆ ಹಿಡಿದಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯ ಜತೆಗೆ ಸಲುಗೆಯಿಂದ ಇರುವ ವಿಡಿಯೊಗಳನ್ನು ಸೆರೆ ಹಿಡಿದು ₹1.50 ಕೋಟಿ ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡಿದ್ದ ಯುವತಿ ವಿರುದ್ಧ ಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಂಗಳೂರಿನ ಸಾಧನಾ ಶೆಟ್ಟಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಜಯನಗರದ ನಾಲ್ಕನೇ ಬ್ಲಾಕ್‌ನಲ್ಲಿ ದೂರುದಾರರು, ಉದ್ಯಮವೊಂದನ್ನು ನಡೆಸುತ್ತಿದ್ದಾರೆ. ಉದ್ಯಮದ ಪ್ರಚಾರಕ್ಕೆ ಸಂಬಂಧಿಸಿದ ವಿಡಿಯೊಗಳನ್ನು ಮಾಡಲು ಇನ್‌ಸ್ಟಾಗ್ರಾಂನಲ್ಲಿ ಹುಡುಕಾಟ ನಡೆಸುತ್ತಿದ್ದರು. ಆಗ ಸಾಧನಾ ಶೆಟ್ಟಿ ಐ.ಡಿ ಸಿಕ್ಕಿತ್ತು. ಯುವತಿ ಹಲವು ಪ್ರಮೋಷನಲ್ ವಿಡಿಯೊಗಳನ್ನು ಮಾಡಿದ್ದರಿಂದ ಜಯನಗರದ ಕೆಫೆಯೊಂದಕ್ಕೆ ಮಾತುಕತೆಗೆ ಉದ್ಯಮಿ ಆಹ್ವಾನಿಸಿದ್ದರು. ಇಬ್ಬರೂ ಪರಸ್ಪರ ಪರಿಚಯ ಮಾಡಿಕೊಂಡಿದ್ದರು. ಅದಾದ ಮೇಲೆ ದೂರುದಾರರ ಜತೆಗೆ ಯುವತಿ ತುಂಬಾ ಸಲುಗೆಯಿಂದ ವರ್ತಿಸಿದ್ದರು. ದೂರುದಾರರ ಸಂಭಾಷಣೆಗಳು, ಆತ್ಮೀಯವಾಗಿದ್ದ ಫೋಟೊ ಹಾಗೂ ವಿಡಿಯೊಗಳನ್ನು ಯುವತಿ ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿದುಕೊಂಡಿದ್ದರು. ಬಳಿಕ ಆ ವಿಡಿಯೊ ಹಾಗೂ ಫೋಟೊಗಳನ್ನು ದೂರುದಾರ ಪತ್ನಿ ಹಾಗೂ ಕುಟುಂಬದ ಸದಸ್ಯರಿಗೆ ಕಳುಹಿಸುವುದಾಗಿ ಬೆದರಿಸಿ ₹1.50 ಕೋಟಿಗೆ ಬೇಡಿಕೆ ಇಟ್ಟಿದ್ದರು. ಹಣ ನೀಡಿದರೆ ವಿಡಿಯೊಗಳನ್ನು ಯಾರಿಗೂ ಕಳುಹಿಸುವುದಿಲ್ಲ ಎಂಬುದಾಗಿ ಯುವತಿ ಹೇಳಿದ್ದರು' ಎಂದು ಪೊಲೀಸರು ಹೇಳಿದರು.

'ಯುವತಿಯು ಬೆದರಿಕೆಯಿಂದ ಆತಂಕಗೊಂಡಿದ್ದ ಉದ್ಯಮಿ, ಗೂಗಲ್ ಹಾಗೂ ಫೋನ್ ಪೇ ಮೂಲಕ ಹಂತಹಂತವಾಗಿ ₹5 ಲಕ್ಷ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ನಗದು ರೂಪದಲ್ಲಿ ₹5 ಲಕ್ಷ ನೀಡಿದ್ದರು. ₹35 ಸಾವಿರ ಮೌಲ್ಯದ ಚಿನ್ನದ ಉಂಗುರ, ₹ 70 ಸಾವಿರ ಮೌಲ್ಯದ ಚಿನ್ನದ ಸರ, ₹1.50 ಲಕ್ಷ ಮೌಲ್ಯದ ಐ-ಫೋನ್ ನೀಡಿದ್ದರು. ಅದಾದ ಮೇಲೂ ₹1.50 ಕೋಟಿ ನೀಡಿದರಷ್ಟೇ ವಿಡಿಯೊಗಳನ್ನು ಡಿಲೀಟ್ ಮಾಡುವುದಾಗಿ ಯುವತಿ ಹೇಳಿದ್ದರು. ಹಣ ನೀಡಲು ಸಾಧ್ಯವಿಲ್ಲ ಎಂದಾಗ, ದೂರುದಾರರ ಪತ್ನಿ ಹಾಗೂ ಕುಟುಂಬಸ್ಥರಿಗೆ ವಿಡಿಯೊ ಕಳುಹಿಸಿದ್ದರು. ವಿಡಿಯೊ ವೀಕ್ಷಿಸಿದ ಬಳಿಕ, ಉದ್ಯಮಿ ಮನೆಯಲ್ಲಿ ಗಲಾಟೆ ಆರಂಭವಾಗಿತ್ತು' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಅಸಭ್ಯ ವರ್ತನೆ: ಇಬ್ಬರ ಬಂಧನ

ಬೆಂಗಳೂರು: ಕೋಗಿಲು ಮುಖ್ಯರಸ್ತೆಯ ಮಾರುತಿನಗರದಲ್ಲಿ ನಡೆದು ತೆರಳುತ್ತಿದ್ದ ಯುವತಿಯ ಜತೆಗೆ ಅಸಭ್ಯವಾಗಿ ವರ್ತಿಸಿದ್ದ ಇಬ್ಬರು ಆರೋಪಿಗಳನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಆವಲಹಳ್ಳಿಯ ಬಿಗ್‌ಬಾಸ್ಕೆಟ್‌ನಲ್ಲಿ ಡೆಲಿವರಿ ಬಾಯ್‌ಗಳಾಗಿ ಕೆಲಸ ಮಾಡುತ್ತಿರುವ ಹರೀಶ್ (21) ಹಾಗೂ ಪ್ರಜ್ವಲ್ (23) ಬಂಧಿತರು.

ಏಪ್ರಿಲ್ 21ರ ಮಧ್ಯಾಹ್ನ ಯುವತಿ ರಸ್ತೆ ಬದಿಯಲ್ಲಿ ನಡೆದು ತೆರಳುತ್ತಿದ್ದರು. ಆಗ ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು ಆಕೆಯನ್ನು ತಡೆದು ಅಸಭ್ಯವಾಗಿ ವರ್ತಿಸಿ ಕಿರುಕುಳ ನೀಡಿದ್ದರು. ಅದೇ ರಸ್ತೆಯಲ್ಲಿ ಸಾಗುತ್ತಿದ್ದ ವ್ಯಕ್ತಿಯೊಬ್ಬರು, ಆರೋಪಿಗಳ ಕೃತ್ಯವನ್ನು ವಿಡಿಯೊ ಮಾಡಿ 'ನಮ್ಮ ಬೆಂಗಳೂರು' ಹೆಸರಿನ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡಿದ್ದರು. ವಿಡಿಯೊ ಪರಿಶೀಲಿಸಿದ ಯಲಹಂಕ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

'ವಿಡಿಯೊ ಪರಿಶೀಲನೆ ನಡೆಸಿದಾಗ, ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ಪತ್ತೆ ಆಯಿತು. ಬಳಿಕ, ಆರೋಪಿಗಳ ವಿಳಾಸ ಪತ್ತೆ ಮಾಡಿ, ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿತ್ತು. ಗುರುವಾರ ಮಧ್ಯಾಹ್ನ ಇಬ್ಬರೂ ವಿಚಾರಣೆಗೆ ಬಂದಿದ್ದರು. ವಿಚಾರಣೆಗೆ ಒಳಪಡಿಸಿದಾಗ ಯುವತಿಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾಗಿ ತಪ್ಪೊಪ್ಪಿಕೊಂಡಿದ್ದಾರೆ. ಬಳಿಕ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಕಿರುಕುಳ: 13ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ


ವಿವೇಕಾನಂದ

ಬೆಂಗಳೂರು: ಸಾಲ ನೀಡಿದವರ ಕಿರುಕುಳದಿಂದ ಬೇಸತ್ತು ವ್ಯಕ್ತಿಯೊಬ್ಬರು ಅಪಾರ್ಟ್‌ಮೆಂಟ್‌ವೊಂದರ 13ನೇ ಮಹಡಿಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಂಪಿಗೆಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ನಡೆದಿದೆ.

ವಿವೇಕಾನಂದ (45) ಆತ್ಮಹತ್ಯೆ ಮಾಡಿಕೊಂಡವರು.

ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಕೊಂಡುಕೊಳ್ಳಬೇಕಿದೆ. ಒಮ್ಮೆ ಫ್ಲ್ಯಾಟ್ ನೋಡಬೇಕಿದೆ ಎಂದು ಹೇಳಿ ಮಹಡಿಗೆ ತೆರಳಿದ್ದರು. ಅಲ್ಲಿಂದ ಏಕಾಏಕಿ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ವಿವೇಕಾನಂದ ಅವರು ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದರು. ಸಾಲ ನೀಡಿದವರು ಹಣ ವಾಪಸ್ ನೀಡುವಂತೆ ಒತ್ತಡ ಹೇರಿದ್ದರು. ಅದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ.

ವಿವೇಕಾನಂದ ಅವರ ವಿರುದ್ಧ ಸಿಸಿಬಿ ಪೊಲೀಸರಿಗೆ ದೂರು ನೀಡಲಾಗಿತ್ತು. ಪೊಲೀಸರು ವಿವೇಕಾನಂದ ಅವರನ್ನು ವಿಚಾರಣೆಗೆ ಕರೆದಿದ್ದರು. ವಿಚಾರಣೆ ವೇಳೆ ಸಿಸಿಬಿ ಪೊಲೀಸರು, ಕಿರುಕುಳ ನೀಡಿದ್ದರು ಎಂದು ವಿವೇಕಾನಂದ ಕುಟುಂಬಸ್ಥರು ಆರೋಪಿಸಿದ್ದಾರೆ.


ಬಿದರಹಳ್ಳಿ ಸಮೀಪದ ರಾಂಪುರದ ಹೊರವಲಯದಲ್ಲಿ ಪ್ಲಾಸ್ಟಿಕ್ ಗೋದಾಮಿಗೆ ಬೆಂಕಿ ಬಿದ್ದಿತ್ತು

ಪ್ಲಾಸ್ಟಿಕ್ ಮರುಬಳಕೆಯ ಗೋದಾಮಿಗೆ ಬೆಂಕಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿದರಹಳ್ಳಿ ಸಮೀಪದ ರಾಂಪುರದ ಹೊರವಲಯದಲ್ಲಿ ಪ್ಲಾಸ್ಟಿಕ್ ಮರುಬಳಕೆ ಗೋದಾಮಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಅಪಾರ ಪ್ರಮಾಣದ ವಸ್ತುಗಳುಸಂಪೂರ್ಣವಾಗಿಭಸ್ಮವಾಗಿದೆ.

ಗುರುವಾರ ಮಧ್ಯಾಹ್ನ 3 ಗಂಟೆಗೆ, ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಂಡ ಬೆಂಕಿ ಬಿಸಿಲಿನ ದಗೆಗೆ ಪೂರ್ತಿ ಗೋದಾಮು ಆವರಿಸಿಕೊಂಡಿತು. ಮರುಬಳಕೆಗೆ ಶೇಖರಿಸಿದ್ದ ಪ್ಲಾಸ್ಟಿಕ್ ಬಾಟಲ್, ಸೋಫಾ ಸ್ಪಾಂಜ್, ಪ್ಲಾಸ್ಟಿಕ್ ಕುರ್ಚಿ ಇತರ ಪ್ಲಾಸ್ಟಿಕ್ ವಸ್ತುಗಳು ಬೆಂಕಿಗೆ ಸಂಪೂರ್ಣ ಆಹುತಿಯಾದವು.

ಘಟಕದಲ್ಲಿದ್ದ ಶೆಡ್‌ಗಳಲ್ಲಿ 15ಕ್ಕೂ ಹೆಚ್ಚು ಕಾರ್ಮಿಕರು ವಾಸವಾಗಿದ್ದರು. ಬೆಂಕಿ ಕಾಣಿಸಿಕೊಂಡ ತಕ್ಷಣವೇ ಘಟಕದಿಂದ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ. ಘಟಕದ ಮಾಲೀಕ ಮಾಧವ, ತಮಿಳುನಾಡಿನವರಾಗಿದ್ದ ಮತದಾನಕ್ಕೆ ತೆರಳಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಸತತ ಆರು ಗಂಟೆ ಸಾಹಸ ಪಟ್ಟು ಬೆಂಕಿಯನ್ನು ತಹಬದಿಗೆ ತಂದರು.

ಯಶವಂತಪುರ ಠಾಣೆ ಪೊಲೀಸರ ಕಾರ್ಯಾಚರಣೆ • ಕೆಲಸ ಅರಸಿ ನಗರಕ್ಕೆ ಬಂದಿದ್ದ ಆರೋಪಿಗಳು

ತಾಮ್ರದ ಕೇಬಲ್ ಕಳವು: ಮೂವರ ಬಂಧನ

ಪ್ರಜಾವಾಣಿ ವಾರ್ತೆ


ಚೌವ್ಹಾಣ್


ಸಂದೀಪ್


ಸೈಯದ್

ಬೆಂಗಳೂರು: ಬಿಎಸ್‌ಎನ್‌ಎಲ್ ಸಿಬ್ಬಂದಿಯಂತೆ ಸಮವಸ್ತ್ರ ಧರಿಸಿಕೊಂಡು, ಮಾಡ್ಯೂಲ್ಸ್ ಹಾಗೂ ತಾಮ್ರದ ಕೇಬಲ್ ಕಳ್ಳತನ ಮಾಡುತ್ತಿದ್ದ ಅಂತರ ರಾಜ್ಯದ ಮೂವರನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶದ ಚೌವ್ಹಾಣ್ (32), ಸಂದೀಪ್ (23) ಹಾಗೂ ಸೈಯದ್ ಜಾಹೇದ್ ಹಸನ್ (40) ಬಂಧಿತರು. ಮತ್ತೊಬ್ಬ ಆರೋಪಿ ಶೋಯಬ್ ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ₹7 ಲಕ್ಷ ಮೌಲ್ಯದ 4,140 ಮಾಡ್ಯೂಲ್ಸ್ ಮತ್ತು 60 ಮೀಟರ್ ತಾಮ್ರದ ಕೇಬಲ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಉತ್ತರಪ್ರದೇಶದಿಂದ ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಮೂವರು ಆರೋಪಿಗಳು, ಬಿಎಸ್‌ಎನ್‌ಎಲ್ ಸಿಬ್ಬಂದಿಯಂತೆ ನೀಲಿ ಬಣ್ಣದ ಶರ್ಟ್ ಹಾಗೂ ಬಿಳಿ ಬಣ್ಣದ ಹೆಲ್ಮೆಟ್‌ಗಳನ್ನು ಧರಿಸಿಕೊಂಡು ಮತ್ತಿಕೆರೆ, ಯಶವಂತಪುರ, ಮಲ್ಲೇಶ್ವರ ಹಾಗೂ ಸದಾಶಿವನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಡ್ಡಾಡುತ್ತಿದ್ದರು. ಪಾದಚಾರಿ ಮಾರ್ಗದ ಬಳಿ ಬಿಎಸ್‌ಎನ್‌ಎಲ್ ಕಂಪನಿಗೆ ಸಂಬಂಧಿಸಿದ ಟೆಲಿಫೋನ್, ಇಂಟರ್‌ನೆಟ್ ಹಾಗೂ ಲ್ಯಾನ್‌ಗೆ ಅಳವಡಿಸಿರುವಂತಹ ಪಿಲ್ಲರ್‌ಗಳನ್ನು ಪಿಕಾಸಿ, ಸುತ್ತಿಗೆ, ಸ್ಕ್ರೂಡ್ರೈವರ್ ಹಾಗೂ ಕಟರ್‌ಗಳನ್ನು ಬಳಸಿ ಒಡೆದು ಹಾಕುತ್ತಿದ್ದರು. ಬಳಿಕ ಮಾಡ್ಯೂಲ್ ಹಾಗೂ ತಾಮ್ರದ ಕೇಬಲ್ ಕಳ್ಳತನ ಮಾಡುತ್ತಿದ್ದರು. ರಸ್ತೆಬದಿಯಲ್ಲಿ ನಡೆದು ತೆರಳುವವರು ಹಾಗೂ ವಾಹನ ಸವಾರರು, ಬಿಎಸ್‌ಎನ್‌ಎಲ್ ಸಿಬ್ಬಂದಿಯೇ ಕೇಬಲ್ ದುರಸ್ತಿ ಮಾಡುತ್ತಿರಬಹುದೆಂದು ಭಾವಿಸುತ್ತಿದ್ದರು ಎಂದು ಪೊಲೀಸರು ಹೇಳಿದರು.

ಕಳ್ಳತನ ಮಾಡಿದ್ದ 4,140 ಮಾಡ್ಯೂಲ್ಸ್ ಹಾಗೂ ತಾಮ್ರದ ಕೇಬಲ್ ಅನ್ನು ರೈಲು ಮೂಲಕ ಉತ್ತರಪ್ರದೇಶಕ್ಕೆ ಸಾಗಿಸಲು ಮುಂದಾಗಿದ್ದರು. ಆಗ ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಿ ರೈಲು ನಿಲ್ದಾಣದಲ್ಲಿ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಬಂಧಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿತ್ತು. ಮೂವರಿಗೆ ನ್ಯಾಯಾಂಗ ಬಂಧನ ವಿಧಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಉತ್ತರ ವಿಭಾಗದ ಡಿಸಿಪಿ ಬಿ.ಎಸ್. ನೇಮಗೌಡ ಅವರ ಮಾರ್ಗದರ್ಶನದಲ್ಲಿ ಯಶವಂತಪುರ ಠಾಣೆಯ ಇನ್‌ಸ್ಪೆಕ್ಟರ್ ಎಸ್.ಮಂಜುನಾಥ್ ಅವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಯಿತು.

ಶೌಚಾಲಯದ ಕೊಳವೆಯಲ್ಲಿ ಶಿಶು ಶವ ಪತ್ತೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ತಾಲ್ಲೂಕಿನ ಕುಂದಾಣ ಹೋಬಳಿಯ ಬೀರಸಂದ್ರ ಸಮೀಪದ ಫಾಕ್ಸ್‌ಕಾನ್ ಕಾರ್ಖಾನೆಯ ಮಹಿಳಾ ಶೌಚಾಲಯದ ಕೊಳವೆಯಲ್ಲಿ ಬುಧವಾರ ನವಜಾತ ಹೆಣ್ಣು ಶಿಶುವಿನ ಶವ ಪತ್ತೆಯಾಗಿದೆ.

ಹೆರಿಗೆಯಾದ ತಕ್ಷಣ ಶಿಶುವಿನ ಕತ್ತು ಕತ್ತರಿಸಿ ಹತ್ಯೆ ಮಾಡಿ ಶೌಚಾಲಯದೊಳಗೆ ಎಸೆಯಲಾಗಿದೆ. ಶೌಚಾಲಯ ನೀರು ಹರಿದು ಹೋಗುವ ಕೊಳವೆಯಲ್ಲಿ ನವಜಾತ ಶಿಶುವಿನ ಶವ ಪತ್ತೆಯಾಗಿದೆ. ತಕ್ಷಣ ಕಾರ್ಖಾನೆ ಆಡಳಿತ ಮಂಡಳಿಯವರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ವಿಶ್ವನಾಥಪುರ ಪೊಲೀಸ್ ಠಾಣೆಯ ಸಿಬ್ಬಂದಿ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಏ.21ರಂದು ರಾತ್ರಿ ಸುಮಾರು 9.15ರ ವೇಳೆಗೆ ಶೌಚಾಲಯದ ಕೊಳವೆ ಕಟ್ಟಿಕೊಂಡಿರುವುದು ಗಮನಕ್ಕೆ ಬಂದಿತ್ತು. ಸಿಬ್ಬಂದಿ ಕೆಲಸದ ಅವಧಿ ಮುಗಿದಿದ್ದರಿಂದ ಮರುದಿನ ಬೆಳಗ್ಗೆ ಕೊಳವೆ ಸ್ವಚ್ಛಗೊಳಿಸುವಾಗ ನವಜಾತ ಶಿಶುವಿನ ದೇಹ ಪತ್ತೆಯಾಗಿದೆ. ಶಿಶು ಕತ್ತು ಕತ್ತರಿಸಿ ಹತ್ಯೆ ಮಾಡಿರುವುದು ದೃಢಪಟ್ಟಿದೆ.


ಫಾಕ್ಸ್‌ಕಾನ್ ಕಾರ್ಖಾನೆ (ಎ.ಐ ಚಿತ್ರ)

ಮೊಬೈಲ್ ತಯಾರಿಕಾ ಘಟಕವಾದ ಫಾಕ್ಸ್‌ಕಾನ್ ಕಾರ್ಖಾನೆಯಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ.19 ವರ್ಷದ ಯುವತಿ ಈ ಕೃತ್ಯ ಎಸಗಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.

ಯುವತಿ ಕಾರ್ಖಾನೆಯಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದು, ವಸತಿ ನಿಲಯದಲ್ಲೇ ವಾಸವಾಗಿದ್ದಾಳೆ. ಹೆರಿಗೆ ನಂತರ ಚಿಕಿತ್ಸೆ ಪಡೆಯದ ಕಾರಣ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿದೆ. ಹಾಗಾಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆಕೆ ಚೇತರಿಸಿಕೊಂಡ ಬಳಿಕ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ ಅವಿವಾಹಿತೆಯಾಗಿರುವ ಕಾರಣ ಹೆರಿಗೆ ನಂತರ ಶಿಶುವನ್ನು ಹತ್ಯೆ ಮಾಡಿದ್ದಾಳೆ ಎಂದು ಶಂಕಿಸಲಾಗಿದೆ.

ವಿಶ್ವನಾಥಪುರ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 103ರ ಅಡಿಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಯುವತಿ ಕುಟುಂಬದವರಿಗೆ ಮಾಹಿತಿ ನೀಡಲಾಗಿದೆ.

ಐಪಿಎಲ್ ಪಂದ್ಯ: ವಾಹನಗಳ ನಿಲುಗಡೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಹಾಗೂ ಗುಜರಾತ್ ಟೈಟಾನ್ಸ್ (ಜಿಟಿ) ತಂಡಗಳ ನಡುವೆ ಏಪ್ರಿಲ್ 24ರಂದು ಇಲ್ಲಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ನಡೆಯುತ್ತಿದ್ದು, ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳು, ಜಂಕ್ಷನ್‌ಗಳಲ್ಲಿ ವಾಹನ ನಿಲುಗಡೆ ನಿಷೇಧಿಸಿ ಸಂಚಾರ ಪೊಲೀಸರು ಆದೇಶಿಸಿದ್ದಾರೆ.

ನಿಲುಗಡೆಗೆ ಅವಕಾಶ ಕಲ್ಪಿಸಿರುವ ಸ್ಥಳಗಳು

- ಸೇಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಮೈದಾನ, ಸಿದ್ದಲಿಂಗಯ್ಯ ವೃತ್ತ
- ಸೇಂಟ್ ಜೋಸೆಫ್ ಯುರೋಪಿಯನ್ ಸ್ಕೂಲ್ ಮೈದಾನ, ಮ್ಯೂಸಿಯಂ ರಸ್ತೆ
- ಫ್ರೀಡಂ ಪಾರ್ಕ್ ಎಂಎಲ್‌ಸಿಪಿ ಪಾರ್ಕಿಂಗ್ ಸ್ಥಳ
- ಗರುಡಾ ಮಾಲ್ ಪಾರ್ಕಿಂಗ್ ಸ್ಥಳ
- ಶಿವಾಜಿನಗರ ಬಸ್ ನಿಲ್ದಾಣದ ಒಂದನೇ ಮಹಡಿ
- ಯುಬಿಸಿಟಿ ನಿಲುಗಡೆ ಸ್ಥಳ
- ಕಂಠೀರವ ಕ್ರೀಡಾಂಗಣ

ವಾಹನಗಳ ನಿಲುಗಡೆ ನಿಷೇಧಿಸಿರುವ ರಸ್ತೆಗಳು

- ಕ್ವೀನ್ಸ್ ರಸ್ತೆಯ ಎರಡೂ ಬದಿಯಲ್ಲಿ ಹಾಗೂ ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದ ವರೆಗೆ. ಕ್ವೀನ್ಸ್ ವೃತ್ತದಿಂದ ಸಿ.ಟಿ.ಒ ಜಂಕ್ಷನ್ ವರೆಗೆ
- ಎಂ.ಜಿ ರಸ್ತೆಯಲ್ಲಿ ಅನಿಲ್ ಕುಂಬ್ಳೆ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಮತ್ತು ಕ್ವೀನ್ಸ್ ರಸ್ತೆಯಿಂದ ಅನಿಲ್ ಕುಂಬ್ಳೆ ಜಂಕ್ಷನ್ ವರೆಗೆ ರಸ್ತೆಯ ಎರಡೂ ಕಡೆ
- ಲಿಂಕ್ ರಸ್ತೆ- ಎಂ.ಜಿ ರಸ್ತೆಯಿಂದ ಕಬ್ಬನ್ ರಸ್ತೆವರೆಗೆ
- ರಾಜಭವನ ರಸ್ತೆ, ಟಿ.ಚೌಡಯ್ಯ ರಸ್ತೆ ಮತ್ತು ರೇಸ್ ಕೋರ್ಸ್ ರಸ್ತೆ
- ಸೆಂಟ್ರಲ್ ಸ್ಟ್ರೀಟ್ ರಸ್ತೆಯಲ್ಲಿ ಎರಡೂ ಕಡೆ
- ಕಬ್ಬನ್ ರಸ್ತೆಯಲ್ಲಿ, ಸಿ.ಟಿ.ಒ ವೃತ್ತದಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ. ಕಬ್ಬನ್ ರಸ್ತೆಯಲ್ಲಿ ಕಾಮರಾಜ ರಸ್ತೆ ಜಂಕ್ಷನ್‌ನಿಂದ ಡಿಕನ್ಸನ್ ರಸ್ತೆ ಜಂಕ್ಷನ್‌ವರೆಗೆ ಬಿಎಂಟಿಸಿ ಬಸ್‌ಗಳನ್ನು ಹೊರತುಪಡಿಸಿ, ಇತರೆ ಎಲ್ಲಾ ತರಹದ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ
- ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ, ಕ್ಯಾಶ್ ಫಾರ್ಮಸಿ ಜಂಕ್ಷನ್‌ನಿಂದ ಅನಿಲ್ ಕುಂಬ್ಳೆ ವೃತ್ತದವರೆಗೆ
- ಮ್ಯೂಸಿಯಂ ರಸ್ತೆಯಲ್ಲಿ, ಎಂ.ಜಿ ರಸ್ತೆಯಿಂದ ಸೇಂಟ್ ಮಾರ್ಕ್ಸ್ ರಸ್ತೆ ವರೆಗೆ ಹಾಗೂ ಆಶೀರ್ವಾದಂ ವೃತ್ತದವರೆಗೆ
- ಕಸ್ತೂರಬಾ ರಸ್ತೆಯಲ್ಲಿ, ಕ್ವೀನ್ಸ್ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಹಾಗೂ ಮಲ್ಯ ಆಸ್ಪತ್ರೆ ರಸ್ತೆಯಲ್ಲಿ ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದವರೆಗೆ
- ಕಬ್ಬನ್‌ಪಾರ್ಕ್ ಒಳಭಾಗದ ಕಿಂಗ್ ರಸ್ತೆ, ಪ್ರೆಸ್‌ಕ್ಲಬ್ ಮುಂಭಾಗ, ಬಾಲಭವನ ಮುಂಭಾಗ, ಫೌಂಟೇನ್ ರಸ್ತೆ
- ಲ್ಯಾವೆಲ್ಲೆ ರಸ್ತೆಯಲ್ಲಿ ಕ್ವೀನ್ಸ್ ವೃತ್ತದಿಂದ ವಿಠಲ್‌ಮಲ್ಯ ರಸ್ತೆ ಜಂಕ್ಷನ್‌ವರೆಗೆ
- ವಿಠಲ್ ಮಲ್ಯ ರಸ್ತೆ, ಸಿದ್ದಲಿಂಗಯ್ಯ ವೃತ್ತದಿಂದ ಸೇಂಟ್ ಮಾರ್ಕ್ಸ್ ರಸ್ತೆಯ ಬಿಷಪ್ ಕಾಟನ್ ಬಾಲಕಿಯರ ಶಾಲೆಯವರೆಗೆ

ಎಫ್‌ಐಆರ್ ದಾಖಲಿಸಲು ಕೋರಿ ಹೈಕೋರ್ಟ್‌ಗೆ ಅರ್ಜಿ

ಕರೀಗೌಡ ವಿರುದ್ಧ ಲಂಚದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಘನತ್ಯಾಜ್ಯ ಟೆಂಡರ್ ಅಂತಿಮಗೊಳಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಮಂಡಳಿ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೀಗೌಡ ಲಂಚಕ್ಕೆ ಬೇಡಿಕೆ ಇರಿಸಿದ್ದು ಈ ಸಂಬಂಧ ಪ್ರಮಾಣ ಪತ್ರ ಸಲ್ಲಿಸಲು ಸಿದ್ಧ' ಎಂದು ಗುತ್ತಿಗೆದಾರ ಎಸ್.ಎನ್. ಬಾಲಸುಬ್ರಮಣ್ಯಂ ಹೈಕೋರ್ಟ್‌ಗೆ ಅರುಹಿದ್ದಾರೆ.

'ಕರೀಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ ಎಸ್‌ಐಟಿ ತನಿಖೆಗೆ ನಿರ್ದೇಶಿಸಬೇಕು' ಎಂದು ಕೋರಿ 'ಬೆಂಗಳೂರು ನಗರ ಸ್ವಚ್ಛತೆ, ಲಾರಿ ಮಾಲೀಕರ ಮತ್ತು ಗುತ್ತಿಗೆದಾರರ ಸಂಘ'ದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯಂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಾಲಸುಬ್ರಮಣ್ಯಂ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, 'ಸಿ.ವಿ.ರಾಮನ್ ನಗರ ಪ್ಯಾಕೇಜ್-1, ಶಾಂತಿನಗರ ತ್ಯಾಜ್ಯ ವಿಲೇವಾರಿ ಟೆಂಡರ್ ಪ್ಯಾಕೇಜ್-2 ಹಾಗೂ ದಾಸರಹಳ್ಳಿ ಪ್ಯಾಕೇಜ್-3ಕ್ಕೆ ಅರ್ಜಿದಾರರು ಸಲ್ಲಿಸಿದ ಎಲ್-1 ಬಿಡ್ ಅಂಗೀಕರಿಸಲಾಗಿತ್ತು. ಆದರೆ, ಕರೀಗೌಡ ಅವರು ಮಾರ್ಚ್ 10ರಂದು ಅರ್ಜಿದಾರರನ್ನು ಕರೆಯಿಸಿಕೊಂಡು ಹಣ ನೀಡಬೇಕು. ಇಲ್ಲವಾದರೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಟೆಂಡರ್ ಅಂತಿಮಗೊಳಿಸುವುದಿಲ್ಲ ಎಂಬುದಾಗಿ ತಿಳಿಸಿದ್ದರು' ಎಂದು ಆರೋಪಿಸಿದರು.

'ಏಳು ವರ್ಷದ ಗುತ್ತಿಗೆಗೆ ಸರ್ಕಾರ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಶೇ 15ರಷ್ಟು ಲಂಚ ನೀಡಬೇಕೆಂದು ಕೇಳಿದ್ದಾರೆ. ಲಂಚ ನೀಡದಿದ್ದರೆ ಅರ್ಜಿದಾರರ ಇತರೆ ಗುತ್ತಿಗೆಗಳನ್ನೂ ರದ್ದುಪಡಿಸುತ್ತೇವೆ ಎಂದು ಬೆದರಿಸಿದ್ದಾರೆ. ಈ ಬಗ್ಗೆ ಮಾರ್ಚ್ 11ರಂದು ಮುಖ್ಯ ಕಾರ್ಯದರ್ಶಿಗೆ ದೂರನ್ನೂ ನೀಡಲಾಗಿದೆ. ಅಂತಿಮ ವಾಗಿ ಲಂಚದ ಬೇಡಿಕೆಗೆ ಒಪ್ಪದೇ ಹೋದ ಕಾರಣಕ್ಕೆ ಜುಲೈ 30ರಂದು ಕರೆಯಲಾಗಿದ್ದ ಟೆಂಡರ್ ಹಿಂಪಡೆದು ಹೊಸ ಟೆಂಡರ್ ಪ್ರಕಟಿಸಿ 2026ರ ಮಾರ್ಚ್ 25ರಂದು ಅಧಿಸೂಚನೆ ಹೊರಡಿಸಲಾಗಿದೆ' ಎಂದು ಹೇಳಿದರು.

'ಈ ಹಿನ್ನೆಲೆಯಲ್ಲಿ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು. ಅಧಿಕಾರ ದುರುಪಯೋಗ ಮಾಡಿಕೊಂಡು, ಟೆಂಡರ್ ಅಧಿಸೂಚನೆ ಹಿಂಪಡೆದ ಹಾಗೂ ಲಂಚಕ್ಕೆ ಬೇಡಿಕೆಯಿಟ್ಟ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶಿಸಬೇಕು' ಎಂದು ಕೋರಿದರು.

ಈ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, 'ಕರೀಗೌಡ ಅವರು ಮಾರ್ಚ್ 10ರಂದು ಬೆಂಗಳೂರಿನಲ್ಲೇ ಇರಲಿಲ್ಲ. ದೆಹಲಿಯಲ್ಲಿದ್ದರು. ಬೆಳಗ್ಗೆ ಹೋಗಿ ರಾತ್ರಿ ಬಂದರು. ಆ ದಿನ ದೆಹಲಿಯಲ್ಲಿದ್ದ ಬಗ್ಗೆ ವಿಮಾನ ಪ್ರಯಾಣದ ಬೋರ್ಡಿಂಗ್ ಪಾಸ್ ಇದೆ' ಎಂದರು.

ಇದನ್ನು ಬಲವಾಗಿ ಅಲ್ಲಗಳೆದ ಪ್ರಸನ್ನ ಕುಮಾರ್, 'ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಲಾಗುವುದು. ಒಂದು ವೇಳೆ ನಮ್ಮ ಆರೋಪ ಸುಳ್ಳು ಎಂದಾದರೆ ಮುಂದಿನ ಕಾನೂನು ಕ್ರಮಕ್ಕೆ ಸಿದ್ಧ' ಎಂದು ಸವಾಲೆಸೆದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಶುಕ್ರವಾರಕ್ಕೆ (ಮಾ.24) ಮುಂದೂಡಿತು.

ಹೊತ್ತಿ ಉರಿದ 32 ವಾಹನ

ರಾಮನಗರ: ನಗರದ ಹೊರವಲಯದ ವಡೇರಹಳ್ಳಿಯಲ್ಲಿ ನಾಲ್ಕು ಚಕ್ರದ 32 ವಾಹನಗಳಿದ್ದ ಗೋದಾಮಿನಲ್ಲಿ ಗುರುವಾರ ರಾತ್ರಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದ್ದರಿಂದ ಅಷ್ಟೂ ವಾಹನಗಳು ಬೆಂಕಿಗೆ ಆಹುತಿಯಾಗಿವೆ. ಇತರ 10 ವಾಹನಗಳಿಗೆ ಹಾನಿಯಾಗಿದೆ.

ಭೋಜರಾಜು ಎಂಬುವರಿಗೆ ಸೇರಿದ್ದ ಗೋಡೌನ್‌ನ ಹೊರಭಾಗದ ಬಯಲಿನಲ್ಲಿ ಅಂಗವಿಕಲರಿಗೆ ವಿತರಣೆ ಮಾಡುವುದಕ್ಕಾಗಿ ನಾಲ್ಕು ಚಕ್ರದ ವಾಹನಗಳನ್ನು ಸಂಗ್ರಹಿಸಿ ಇಡಲಾಗಿತ್ತು. ರಾತ್ರಿ 9.45ರ ಸುಮಾರಿಗೆ ಗೋಡೌನ್‌ನಲ್ಲಿ ಏಕಾಏಕಿ ಕಾಣಿಸಿಕೊಂಡ ಬೆಂಕಿ, ಎಲ್ಲೆಡೆ ವ್ಯಾಪಿಸಿತು.

ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು.

ಮಣಸಿಗನಹಳ್ಳಿ: ರೈತನ ಮೇಲೆ ಚಿರತೆ ದಾಳಿ

ಚನ್ನಪಟ್ಟಣ: ತಾಲ್ಲೂಕಿನ ಮಣಸಿಗನಹಳ್ಳಿಯಲ್ಲಿ ಗುರುವಾರ ಮುಂಜಾನೆ ಚಿರತೆ ದಾಳಿಯಲ್ಲಿ ರೈತರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ನೀರು ಹಾಯಿಸಲು ಬೆಳಗಿನ ಜಾವ ಜಮೀನಿಗೆ ಹೊರಟಿದ್ದ ಮಣಸಿಗನಹಳ್ಳಿಯ ರೈತ ಸಣ್ಣಪ್ಪ (73) ಅವರ ಮೇಲೆ ಪೊದೆಯಲ್ಲಿ ಅವಿತಿದ್ದ ಚಿರತೆ ದಾಳಿ ನಡೆಸಿದೆ.

ಹಠಾತ್ ದಾಳಿಯಿಂದ ಭೀತಗೊಂಡ ರೈತ ಕೂಗಿಕೊಂಡಾಗ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಆಗಮಿಸಿ ಕಿರುಚಿದಾಗ ಚಿರತೆ ಪರಾರಿಯಾಗಿದೆ. ಸಣ್ಣಪ್ಪ ಅವರ ಎಡತೋಳು, ಬಲಗಣ್ಣು, ಮುಖದ ಭಾಗದಲ್ಲಿ ಗಾಯಗಳಾಗಿವೆ. ಗ್ರಾಮಸ್ಥರಿಂದ ವಿಷಯ ತಿಳಿದು ತಕ್ಷಣ ಸ್ಥಳಕ್ಕೆ ಆಗಮಿಸಿದ ವಲಯ ಅರಣ್ಯಾಧಿಕಾರಿ ಮಲ್ಲೇಶ್ ಹಾಗೂ ಸಿಬ್ಬಂದಿ ಗಾಯಗೊಂಡ ರೈತನನ್ನು ತಕ್ಷಣ ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮಲ್ಲೇಶ್ ತಿಳಿಸಿದ್ದಾರೆ.

'ಸ್ವಚ್ಛ ರಾಮಮೂರ್ತಿನಗರ' ಅಭಿಯಾನ

ಬೆಂಗಳೂರು: ಪೂರ್ವ ನಗರ ಪಾಲಿಕೆ, ರಾಮಮೂರ್ತಿನಗರ ಕ್ಷೇಮಾಭಿವೃದ್ಧಿ ಸಂಘ, ಬೃಂದಾವನ್ ಎಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ ಸ್ವಚ್ಛ ರಾಮಮೂರ್ತಿನಗರಕ್ಕಾಗಿ ವಿಶೇಷ ಅಭಿಯಾನ ಬುಧವಾರ ಆರಂಭವಾಯಿತು.

ಸ್ಥಳೀಯ ನಾಗರಿಕರು, ವ್ಯಾಪಾರಿಗಳು ಕಸವನ್ನು ಎಲ್ಲೆಂದರಲ್ಲೇ ಹಾಕದೆ ಪಾಲಿಕೆ ವತಿಯಿಂದ ನಿಯೋಜಿಸಲಾಗಿರುವ ಕಸ ಸಂಗ್ರಹ ವಾಹನಕ್ಕೆ ನೀಡಬೇಕು ಎಂದು ಪ್ರಾಯೋಗಿಕ ಯೋಜನೆ ಹಮ್ಮಿಕೊಳ್ಳಲಾಗಿದೆ.

ಪೌರಕಾರ್ಮಿಕರಿಗೆ ಕಸದ ವಿಂಗಡನೆ ಹೇಗೆ ಮಾಡಬೇಕು? ಎಲ್ಲಿ ಸಂಗ್ರಹಿಸಬೇಕು? ನಾಗರಿಕರಿಗೆ ಹೇಗೆ ತಿಳಿಹೇಳಬೇಕು ಮತ್ತು ನಾಗರಿಕರೊಂದಿಗೆ ಹೇಗೆ ವರ್ತಿಸಬೇಕು ಎಂಬ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ರಾಮಮೂರ್ತಿನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ವಿ. ಶಾಮರಾವ್, ಸದಸ್ಯ ಅಭಿಷೇಕ್ ನಾಯರ್, ಸ್ಥಳೀಯ ಮುಖಂಡ ಬಾಕ್ಸರ್ ನಾಗರಾಜ್ ಭಾಗವಹಿಸಿದ್ದರು.

ಭಾರತ ಕುರಿತು ಟ್ರಂಪ್ ಅವಹೇಳನಕಾರಿ ಹೇಳಿಕೆ

'ಕೀಳು ಅಭಿರುಚಿಯ ಮಾತು'

ನವದೆಹಲಿ (ಪಿಟಿಐ): 'ಭಾರತ ನರಕದಂತಹ ಪ್ರದೇಶ' ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ 'ತಿಳಿವಳಿಕೆ ಕೊರತೆ'ಯಿಂದ ಕೂಡಿದೆ ಹಾಗೂ 'ಅನುಚಿತ' ಎಂದು ಭಾರತ ಗುರುವಾರ ಪ್ರತಿಕ್ರಿಯಿಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ್ ಜೈಸ್ವಾಲ್, 'ಭಾರತ ಕುರಿತು ಟ್ರಂಪ್ ಹೇಳಿಕೆ ಹಾಗೂ ಈ ಕುರಿತು ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ನೀಡಿರುವ ಹೇಳಿಕೆಗಳನ್ನು ಗಮನಿಸಿದ್ದೇವೆ' ಎಂದು ಹೇಳಿದ್ದಾರೆ.

'ಟ್ರಂಪ್ ಅವರ ಹೇಳಿಕೆಗಳು ತಿಳಿವಳಿಕೆ ಕೊರತೆ ಹಾಗೂ ಕೀಳು ಅಭಿರುಚಿಯಿಂದ ಕೂಡಿವೆ. ಈ ಹೇಳಿಕೆಗಳು ಭಾರತ ಮತ್ತು ಅಮೆರಿಕ ಸಂಬಂಧವನ್ನು ಪ್ರತಿಫಲಿಸುವುದಿಲ್ಲ. ಉಭಯ ದೇಶಗಳ ನಡುವಿನ ಬಾಂಧವ್ಯ ಪರಸ್ಪರರ ಗೌರವ ಹಾಗೂ ಹಿತಾಸಕ್ತಿಗಳ ಆಧಾರದಲ್ಲಿ ರೂಪುಗೊಂಡಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ರೇಡಿಯೊ ಕಾರ್ಯಕ್ರಮವೊಂದರಲ್ಲಿ ಭಾರತ ಕುರಿತು ತಾವು ನೀಡಿದ್ದ ಹೇಳಿಕೆಯ ವಿಡಿಯೊವನ್ನು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು.

ಅಮೆರಿಕದಲ್ಲಿ ಜಾರಿಯಲ್ಲಿರುವ ಜನ್ಮಸಿದ್ಧ ಪೌರತ್ವ ಹಕ್ಕು ಕುರಿತು ಮಾತನಾಡುವ ವೇಳೆ,'ಏಷ್ಯಾದ ಎರಡು ದೇಶಗಳಿಂದ(ಚೀನಾ ಅಥವಾ ಭಾರತ) ಇಲ್ಲಿಗೆ ಬರುವ ಜನರು ಮಗುವನ್ನು ಹೆರುತ್ತಾರೆ. ಮಗು ಪೌರತ್ವ ಪಡೆಯುತ್ತದೆ. ಬಳಿಕ, ಚೀನಾ ಅಥವಾ ಭಾರತ ಇಲ್ಲವೇ ಇತರ 'ನರಕಕೂಪ'ಗಳಿಂದ ಸಂಪೂರ್ಣ ಕುಟುಂಬವನ್ನು ಇಲ್ಲಿಗೆ ಕರೆತಂದು ನೆಲಸುತ್ತಾರೆ' ಎಂದು ದೂಷಿಸಿದ್ದರು.

ಇದು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ ಟ್ರಂಪ್ ಉಲ್ಟಾ ಹೊಡೆದಿದ್ದರು. ಇದರ ಬೆನ್ನಲ್ಲೇ, ಟ್ರಂಪ್ ಹೇಳಿಕೆಯಿಂದ ದ್ವಿಪಕ್ಷೀಯ ಸಂಬಂಧಕ್ಕೆ ಹಾನಿಯಾಗುವುದನ್ನು ತಡೆಯಲು ಮುಂದಾದ ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ,'ಭಾರತವು ಒಂದು ಮಹಾನ್ ದೇಶವಾಗಿದ್ದು, ನನ್ನ ಆಪ್ತ ಸ್ನೇಹಿತ ಅಲ್ಲಿನ ಉನ್ನತ ಸ್ಥಾನದಲ್ಲಿದ್ದಾರೆ ಎಂಬುದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ' ಎಂದು ಪ್ರತಿಕ್ರಿಯಿಸಿತ್ತು.

ಮಲ್ಲಿಕಾರ್ಜುನ ಖರ್ಗೆ ಪ್ರಶ್ನೆ


ಮಲ್ಲಿಕಾರ್ಜುನ ಖರ್ಗೆ

ಟ್ರಂಪ್ ಅವರು ಭಾರತ ಕುರಿತು ಅವಹೇಳನಕಾರಿ ಪದ ಬಳಸಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಇನ್ನೂ ಮೌನ ಮುರಿದಿಲ್ಲ ಏಕೆ ಎಂದು ಕಾಂಗ್ರೆಸ್ ಪಕ್ಷ ಗುರುವಾರ ಪ್ರಶ್ನಿಸಿದೆ.

'140 ಕೋಟಿ ಭಾರತೀಯರ ಕುರಿತ ಅವಹೇಳನಕ್ಕೆ ಪ್ರತಿಕ್ರಿಯಿಸಲು ಪ್ರಧಾನಿ ಪುರುಸೊತ್ತು ಮಾಡಿಕೊಳ್ಳುವರು ಎಂಬ ವಿಶ್ವಾಸ ಇದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಛೇಡಿಸಿದ್ದಾರೆ.

'ಮೋದಿಯವರು ಯಾವುದಕ್ಕೆ ಹೆದರಿಕೊಂಡು ಪ್ರತಿಕ್ರಿಯೆ ನೀಡುತ್ತಿಲ್ಲ? ಅಮೆರಿಕ ಸರ್ಕಾರದ ಉನ್ನತ ಮಟ್ಟದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಅವರಿಗೆ ಅಡ್ಡಿಯಾಗಿರುವ ಅಂಶವಾದರೂ ಯಾವುದು' ಎಂದು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಖರ್ಗೆ ಪ್ರಶ್ನಿಸಿದ್ದಾರೆ.

ಟಮ್ಮೊಕ್ ಮೊಬಿಲಿಟಿ ಅಪ್ಲಿಕೇಶನ್ ಬಳಸುವ ಬಯೋಕಾನ್ ನೌಕರರಿಗೆ ಪ್ರೋತ್ಸಾಹಧನ

'ಕಾರ್ಪೊರೇಟ್ ಕಮ್ಯೂಟ್ ನಡ್ಜ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ



'ಕಾರ್ಪೊರೇಟ್ ಕಮ್ಯೂಟ್ ನಡ್ಜ್' ಕಾರ್ಯಕ್ರಮದಲ್ಲಿ ಕಿರಣ್ ಮಜುಂದಾರ್ ಶಾ ಮಾತನಾಡಿದರು

ಬೆಂಗಳೂರು: ರಸ್ತೆ ಸಂಚಾರ ದಟ್ಟಣೆ ಮತ್ತು ವಾಹನಗಳ ಸಂಖ್ಯೆ ಕಡಿಮೆ ಮಾಡುವ ಉದ್ದೇಶದಿಂದ 'ಕಾರ್ಪೊರೇಟ್ ಕಮ್ಯೂಟ್ ನಡ್ಜ್' ಕಾರ್ಯಕ್ರಮಕ್ಕೆ ಬಯೋಕಾನ್ ಸಂಸ್ಥೆಯ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಗುರುವಾರ ಚಾಲನೆ ನೀಡಿದರು.

ವೈಯಕ್ತಿಕ ವಾಹನಗಳ ಬಳಕೆ ಕಡಿಮೆ ಮಾಡಿ ಸಾರ್ವಜನಿಕ ಸಾರಿಗೆಗೆ ಟಮ್ಮೊಕ್ ಮೊಬಿಲಿಟಿ ಅಪ್ಲಿಕೇಶನ್ ಬಳಸುವ ಬಯೋಕಾನ್ ನೌಕರರಿಗೆ ಪ್ರೋತ್ಸಾಹಧನ ನೀಡಲು ಇದೇ ಸಂದರ್ಭದಲ್ಲಿ ಬಯೋಕಾನ್ ಸಂಸ್ಥೆ ನಿರ್ಧರಿಸಿದೆ.

'ಸ್ವ್ಯಾಂಪ್: ನಡ್ಜಿಂಗ್ ಕಮ್ಯೂಟರ್ ಬಿಹೇವಿಯರ್' ಅಡಿಯಲ್ಲಿ ಡಬ್ಲ್ಯುಆರ್‌ಐ ನೇತೃತ್ವದಲ್ಲಿ ಮತ್ತು ಟೊಯೋಟಾ ಮೊಬಿಲಿಟಿ ಫೌಂಡೇಷನ್, ಇಎಲ್‌ಸಿಐಎ, ಬಿಎಂಆರ್‌ಸಿಎಲ್, ಬಿಎಂಟಿಸಿ, ಜಿಬಿಎ ಸಹಯೋಗಲ್ಲಿ ಅಪ್ಲಿಕೇಶನ್ ಅನ್ನು ಬಿಡುಗಡೆ ಮಾಡಲಾಯಿತು.

ಟಮ್ಮೊಕ್ ಆ್ಯಪ್ ಮೂಲಕ 'ಮೊಬಿಲಿಟಿ-ಆಸ್-ಎ-ಸರ್ವಿಸ್' ವೇದಿಕೆಯನ್ನು ಬಳಸಿಕೊಂಡು ಉದ್ಯೋಗಿಗಳು ಮೆಟ್ರೊ, ಬಸ್ ಮತ್ತು ಫೀಡರ್ ಸೇವೆಗಳನ್ನು ಸುಲಭವಾಗಿ ಯೋಜಿಸಬಹುದು ಮತ್ತು ಹಣ ಪಾವತಿಸಬಹುದು. ಆ್ಯಪ್‌ನಲ್ಲಿ ಪ್ರಯಾಣದ ಟ್ರೆಂಡ್‌ಗಳು, ಲೀಡರ್‌ಬೋರ್ಡ್‌ಗಳು ಮತ್ತು ಇಂಗಾಲದ ಡೈ ಆಕ್ಸೈಡ್ (ಹೊಗೆ) ಕಡಿಮೆಯಾದ ಪ್ರಮಾಣದ ವಿವರಗಳನ್ನು ನೀಡಲಾಗಿದೆ.

ಈ ಯೋಜನೆಯು ಈಗಾಗಲೇ ಗಮನಾರ್ಹ ಯಶಸ್ಸನ್ನು ಕಂಡಿದೆ. ಯಾವುದೇ ಆರ್ಥಿಕ ಪ್ರೋತ್ಸಾಹಕಗಳನ್ನು ನೀಡುವ ಮೊದಲೇ ಸುಮಾರು 6,000 ಮೆಟ್ರೊ ಟಿಕೆಟ್‌ಗಳು ಮಾರಾಟವಾಗಿವೆ. ಪ್ರತಿದಿನ ಸುಮಾರು 500 ಉದ್ಯೋಗಿಗಳು ಫೀಡರ್ ಸೇವೆಗಳನ್ನು ಬಳಸುತ್ತಿದ್ದಾರೆ ಎಂದು ಕಿರಣ್ ಮಜುಂದಾರ್ ಷಾ ಮಾಹಿತಿ ನೀಡಿದರು.

ಬೆಂಗಳೂರು ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಮಾತನಾಡಿ, 'ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಇದು ಪ್ರಾಯೋಗಿಕ ಪರಿಹಾರವಾಗಿದೆ. ಹಳದಿ ಮಾರ್ಗ ಪ್ರಾರಂಭವಾದ ನಂತರ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಶೇ 30ರಷ್ಟು ಕಡಿಮೆಯಾಗಿದೆ. ಇಂತಹ ಯೋಜನೆಗಳು ನಗರವನ್ನು ಹೆಚ್ಚು ವಾಸಯೋಗ್ಯವಾಗಿಸುತ್ತವೆ' ಎಂದರು.

ಐಪಿಎಲ್ ಕ್ರಿಕೆಟ್‌ನ ವೀಕ್ಷಣೆಯ ಟಿಕೆಟ್‌ಗೆ ಮೆಟ್ರೊ ಟಿಕೆಟ್ ಸಂಯೋಜಿಸಿದ್ದರಿಂದ 22 ಸಾವಿರ ವೀಕ್ಷಕರು ಮೆಟ್ರೊದಲ್ಲಿ ಪ್ರಯಾಣಿಸಿದ್ದರು. ಇದರಿಂದ ವಾಹನದಟ್ಟಣೆ, ಪಾರ್ಕಿಂಗ್ ಸಮಸ್ಯೆ ಕಡಿಮೆಯಾಗಿತ್ತು. ಕ್ರಿಕೆಟ್ ಮಾತ್ರವಲ್ಲ ಮುಂದೆ ನಡೆಯುವ ಎಲ್ಲ ದೊಡ್ಡ ಕಾರ್ಯಕ್ರಮಗಳನ್ನು ಈ ರೀತಿ ಸಂಯೋಜಿಸುವಂತಾಗಬೇಕು ಎಂದು ಹೇಳಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ಬಿಎಂಆರ್‌ಸಿಎಲ್ ಯೋಜನಾ ನಿರ್ದೇಶಕ ಯು.ಎ. ವಸಂತ ರಾವ್, ಬಿಎಂಟಿಸಿ ನಿಯಂತ್ರಣಾಧಿಕಾರಿ ಪ್ರಭಾಕರ್ ರೆಡ್ಡಿ, ಬಯೋಕಾನ್ ಸಿಇಒ ಶ್ರೀಹಸ್ ತಾಂಬೆ, ಡಬ್ಲ್ಯುಆರ್‌ಐ ಕಾರ್ಯನಿರ್ವಾಹಕ ನಿರ್ದೇಶಕ ಪವನ್ ಮುಲುಕುಟ್ಲಾ, ಟೊಯೋಟಾ ಮೊಬಿಲಿಟಿ ಫೌಂಡೇಶನ್‌ನ ಕಾರ್ಯಕ್ರಮ ನಿರ್ದೇಶಕ ಪ್ರಸನ್ನ ಗಣೇಶ್, ಟಮ್ಮೊಕ್ ಸಹ-ಸಂಸ್ಥಾಪಕಿ ಮೊನಾಲಿಶಾ ಭಾಗವಹಿಸಿದ್ದರು.

ಆದಿ ಶಂಕರರ ಪ್ರತಿಮೆ ಸ್ಥಾಪನೆ: ಗೋಪಾಲಯ್ಯ

ಬೆಂಗಳೂರು: ಮುಂದಿನ ವರ್ಷದ ಶಂಕರ ಜಯಂತಿಗೆ ಮುನ್ನ, ಮಹಾಲಕ್ಷ್ಮಿ ಲೇಔಟ್‌ನಲ್ಲಿ ಆದಿ ಶಂಕರಾಚಾರ್ಯರ ಬೃಹತ್ ಪ್ರತಿಮೆ ನಿರ್ಮಿಸಲಾಗುವುದು ಎಂದು ಶಾಸಕ ಕೆ. ಗೋಪಾಲಯ್ಯ ತಿಳಿಸಿದರು.

ಶಂಕರ ಜಯಂತಿ ಅಂಗವಾಗಿ ಮಹಾಲಕ್ಷ್ಮಿಪುರ ಬ್ರಾಹ್ಮಣ ಮಹಾಸಭಾ ಏರ್ಪಡಿಸಿದ್ದ ತತ್ವಜ್ಞಾನಿಗಳ ದಿನಾಚರಣೆಯಲ್ಲಿ ಮಾತನಾಡಿ, 'ಪ್ರತಿಮೆ ನಿರ್ಮಾಣಕ್ಕಾಗಿ ಜಾಗ ಗುರುತಿಸಲಾಗುತ್ತಿದೆ. ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ನೀಡುವ ಅನುದಾನ ಬಳಸಿ ಪ್ರತಿಮೆ ನಿರ್ಮಿಸಿ, ಆಧ್ಯಾತ್ಮಿಕ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಗೊಳಿಸಲಾಗುವುದು' ಎಂದರು.

ವೇದ ವಿದ್ವಾಂಸರಾದ ರಾಮಚಂದ್ರ ಭಟ್ ಕೋಟೆಮನೆ, ಉಮಾಕಾಂತ ಭಟ್ ಕೆರೆಕೈ, ಮಹಾಬಲೇಶ್ವರ ಭಟ್, ತಿರುಪತಿ ವಿಶ್ವ ವಿದ್ಯಾಲಯದ ವೇದಾಂತ ವಿಭಾಗದ ಮುಖ್ಯಸ್ಥ ಕೆ. ಗಣಪತಿ ಭಟ್, ಚಂದ್ರಕಾಂತ ಸೋಮಯಾಜಿ ಅವರಿಗೆ ಹೈಕೋರ್ಟ್ ನ್ಯಾಯಮೂರ್ತಿ ವೇದವ್ಯಾಸಾಚಾರ್ ಶ್ರೀಶಾನಂದ ಅವರು ಶಂಕರ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು. ಸಮಾಜ ಸೇವಕರಾದ ರಾಜೇಶ್ವರಿ ರಮೇಶ್ ಹಾಗೂ ಶೇಷಗಿರಿರಾವ್ ದಂಪತಿಗಳನ್ನು ಸನ್ಮಾನಿಸಲಾಯಿತು.

ಆದಿ ಶಂಕರಾಚಾರ್ಯರ ಕುರಿತ ಸಂಕ್ಷಿಪ್ತ ವಿವರ ನೀಡುವ ಪುಸ್ತಕವನ್ನು ಜನಾರ್ಪಣೆ ಮಾಡಲಾಯಿತು. ಮಹಾಸಭಾದ ಅಧ್ಯಕ್ಷ ಬಿ.ಎಸ್. ರಾಘವೇಂದ್ರ ಭಟ್, ರಾಜ್ಯದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಮಲ್ಹಾರಿ ರಾವ್ ಉಪಸ್ಥಿತರಿದ್ದರು.

‘ಕನಕ ಕವನ ಸ್ಪರ್ಧೆ’ಗೆ ಆಹ್ವಾನ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ರಾಜ್ಯಮಟ್ಟದ ‘ಕನಕ ಕವನ ಸ್ಪರ್ಧೆ’ ಏರ್ಪಡಿಸಿದೆ. ಜೂನ್ 22ರ ಒಳಗೆ ಕವನ ಕಳುಹಿಸಿಕೊಡಬಹುದು.

ಸ್ಪರ್ಧೆಯ ವಯೋಮಿತಿ 18ರಿಂದ 30 ವರ್ಷ. ಸ್ವರಚಿತ ಕವನಗಳಷ್ಟೆ ಅರ್ಹ. ಅರ್ಜಿ ಮತ್ತು ಕವನವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಇಲ್ಲಿಗೆ ಅಂಚೆ/ಕೊರಿಯರ್/ಇ-ಮೇಲ್ ಅಥವಾ ಖುದ್ದಾಗಿ ಸಲ್ಲಿಸಬಹುದು.

ಅರ್ಜಿ ನಮೂನೆಯನ್ನು website: https://kanakadasaresearchcenter.karnataka.gov.in/ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಮಾಹಿತಿಗಾಗಿ 9743545865 ಸಂಪರ್ಕಿಸಬಹುದು.

ಎಲ್ಲ ‘ಒನ್’ ಕೇಂದ್ರಗಳಲ್ಲಿ ‘ಇ-ಸ್ವತ್ತು’ ಅರ್ಜಿ ಸಲ್ಲಿಕೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಗರಿಕರು ಇನ್ನು ಮುಂದೆ ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಸೇವಾ ಕೇಂದ್ರಗಳ ಮೂಲಕ ‘ಇ-ಸ್ವತ್ತು’ ಅರ್ಜಿ ಸಲ್ಲಿಸಬಹುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಕುರಿತಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಇ-ಆಡಳಿತ ಇಲಾಖೆಯ ಅಡಿಯಲ್ಲಿರುವ ವಿದ್ಯುನ್ಮಾನ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿವೆ. ಇ-ಆಡಳಿತ ನಿರ್ದೇಶಕ ರಾಹುಲ್ ರತ್ನಂ ಪಾಂಡೆ ಮತ್ತು ಇಡಿಸಿಎಸ್ ನಿರ್ದೇಶನಾಲಯದ ನಿರ್ದೇಶಕರಾದ ಅಪರ್ಣಾ ರಮೇಶ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

‘ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಭಿವೃದ್ಧಿಪಡಿಸಿರುವ ಇ-ಸ್ವತ್ತು ವ್ಯವಸ್ಥೆಗೆ ರಾಜ್ಯದಾದ್ಯಂತ ಇರುವ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಈ ವ್ಯವಸ್ಥೆಯ ಬಗ್ಗೆ ನಾಗರಿಕ ಸೇವಾ ಕೇಂದ್ರಗಳ ನಿರ್ವಾಹಕರಿಗೆ ತರಬೇತಿ ನೀಡಲಾಗುವುದು. ಅಲ್ಲದೆ, ನಿರ್ವಾಹಕರಿಗೆ ಪ್ರತ್ಯೇಕ ಲಾಗಿನ್ ಖಾತೆ ನೀಡಲಾಗುವುದು. ಸೇವೆಗಳ ಸಮನ್ವಯಕ್ಕೆ ಇಲಾಖೆಯ ವತಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುವುದು’ ಎಂದೂ ಪ್ರಿಯಾಂಕ್ ತಿಳಿಸಿದ್ದಾರೆ.

ಹೊಸ ಖಾತಾ ಪಡೆಯಲು ₹45 ಶುಲ್ಕ ನಿಗದಿಪಡಿಸಲಾಗಿದೆ. ಈ ವೆಚ್ಚವನ್ನು ನಾಗರಿಕರೇ ಭರಿಸಬೇಕು. ಇ-ಆಸ್ತಿ ಅರ್ಜಿಗೆ ಬೇಕಾದ ದಾಖಲೆಗಳ ಸ್ಕ್ಯಾನಿಂಗ್ ಮತ್ತು ಅಪ್‌ಲೋಡ್ ಮಾಡಲು ಪ್ರತಿ ಪುಟಕ್ಕೆ ₹5 ಪಾವತಿಸಬೇಕು. ಎಲ್ಲ ನಾಗರಿಕ ಸೇವಾ ಕೇಂದ್ರಗಳಿಗೆ ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ, ಕಾರ್ಮಿಕರ ದಿನ, ಗಾಂಧಿ ಜಯಂತಿ, ಕನ್ನಡ ರಾಜ್ಯೋತ್ಸವ ಮತ್ತು ಮತದಾನದ ದಿನ ರಜೆ ಇರಲಿದೆ. ಉಳಿದ ದಿನಗಳಲ್ಲಿ ಈ ಕೇಂದ್ರಗಳು ಬೆಳಿಗ್ಗೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಕಾರ್ಯನಿರ್ವಹಿಸಲಿವೆ.

ಆಪ್ತರ ಜತೆ ಸಿಎಂ ‘ಔತಣಕೂಟ’

ಸಚಿವ ಸಂಪುಟ ಪುನರ್‌ರಚನೆ, ಮೀಸಲಾತಿ ಬಗ್ಗೆ ಗೋಪ್ಯ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ಪುನರ್‌ರಚನೆ, ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆ, ಒಳ ಮೀಸಲಾತಿ ಕುರಿತು ತಮ್ಮ ಆಪ್ತ ಸಚಿವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ (ಏ.22) ರಾತ್ರಿ ಗೋಪ್ಯವಾಗಿ ‘ಔತಣಕೂಟ’ದ ನೆಪದಲ್ಲಿ ಸಭೆ ನಡೆಸಿದ್ದಾರೆ.



ಸಿದ್ದರಾಮಯ್ಯ

ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ಪ್ರಭಾವಿ ಸಚಿವರೊಬ್ಬರಿಗೆ ಸೇರಿದ ವಸತಿಸಂಕೀರ್ಣದಲ್ಲಿ ಸಭೆ ನಡೆಸಿರುವ ಸಿದ್ದರಾಮಯ್ಯ ಅವರು ಮುಂದಿನ ಕಾರ್ಯತಂತ್ರಗಳ ಕುರಿತು ಬಗ್ಗೆ ಚರ್ಚೆ ನಡೆಸಿದ್ದಾರೆ.

ಸಚಿವರಾದ ಜಿ. ಪರಮೇಶ್ವರ, ಎಚ್‌.ಸಿ. ಮಹದೇವಪ್ಪ, ಸತೀಶ ಜಾರಕಿಹೊಳಿ, ಬಿ.ಝಡ್. ಜಮೀರ್ ಅಹಮದ್ ಖಾನ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಶಾಸಕ ಕೆ.ಎನ್. ರಾಜಣ್ಣ ಸೇರಿದಂತೆ ಹಲವರು ಈ ಸಭೆಯಲ್ಲಿ ಭಾಗವಹಿಸಿದ್ದರು ಎಂದು ಗೊತ್ತಾಗಿದೆ.

‘ರಾಜ್ಯ ರಾಜಕೀಯ ಮತ್ತು ಕಾಂಗ್ರೆಸ್ ಪಕ್ಷದ ಆಂತರಿಕ ವಲಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳು ಸೇರಿದಂತೆ ಹಲವು ವಿಚಾರಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಕೆಲವು ವಿಚಾರಗಳಲ್ಲಿ ಮುಖ್ಯಮಂತ್ರಿ ಮೌನ ವಹಿಸಿರುವ ಬಗ್ಗೆಯೂ ಸುದೀರ್ಘ ಚರ್ಚೆ |ಡೆದಿದೆ. ಪಕ್ಷದಲ್ಲಿ ಕೆಲವು ನಿರ್ಧಾರಗಳನ್ನು ಏಕಪಕ್ಷೀಯ ತೆಗೆದುಕೊಳ್ಳುತ್ತಿರುವ ಬಗ್ಗೆಯೂ ವಿಷಯ ಪ್ರಸ್ತಾಪವಾಗಿದೆ’ ಎಂದು ಮೂಲಗಳು ಹೇಳಿವೆ.

ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆ ನಂತರ ಮುಸ್ಲಿಂ ನಾಯಕರ ಮೇಲೆ ಶಿಸ್ತು ಕ್ರಮ ತೆಗೆದುಕೊಂಡಿರುವ ವಿಚಾರದಲ್ಲಿ ತಕ್ಷಣ ಮಧ್ಯಪ್ರವೇಶಿಸಬೇಕೆಂದು ಕೆಲವು ಸಚಿವರು ಸಿದ್ದರಾಮಯ್ಯನವರ ಮೇಲೆ ಒತ್ತಡ ಹೇರಿದ್ದಾರೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಪಕ್ಷದ ಹಿರಿಯ ನಾಯಕರ ಅಸ್ತಿತ್ವಕ್ಕೂ ಕುತ್ತು ಬರಬಹುದು. 2028ರ ಚುನಾವಣೆ ವೇಳೆ ಸಮುದಾಯಗಳು ಮುನಿಸಿಕೊಂಡು ದೂರ ಸರಿಯಬಹುದು ಎಂದು ಕೆಲವರು ಆತಂಕ ವ್ಯಕ್ತಪಡಿಸಿದರು ಎಂದೂ ಗೊತ್ತಾಗಿದೆ.

‘ಮೇ 4ರ ಬಳಿಕ ಏನಾಗುತ್ತೊ ಗೊತ್ತಿಲ್ಲ’

‘ಮೇ 4ರ (ಚುನಾವಣೆಯ ಫಲಿತಾಂಶ) ನಂತರ ರಾಜ್ಯ ರಾಜಕೀಯದಲ್ಲಿ ಏನಾಗುತ್ತೊ ಗೊತ್ತಿಲ್ಲ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಗೋಪ್ಯ ಸಭೆಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ‘ಹಿರಿಯ ಸಚಿವರು ಸಭೆ ಸೇರಿದ್ದೆವು. ಆದರೆ, ನಮ್ಮ ಸಭೆಯಲ್ಲಿ ರಾಜಕೀಯಕ್ಕಿಂತಲೂ ಕ್ರಿಕೆಟ್ ಬಗ್ಗೆಯೇ ಚರ್ಚೆ ಆಗಿದೆ. ಎಲ್ಲರೂ ಕ್ರಿಕೆಟ್ ಆಡುವುದರಲ್ಲಿ ಪರಿಣತರಿದ್ದಾರೆ’ ಎಂದರು.

‘ಒಳ ಮೀಸಲಾತಿ ಗೊಂದಲ ಕುರಿತು ಚರ್ಚಿಸಲು ಶುಕ್ರವಾರ (ಏಪ್ರಿಲ್ 24) ಸಚಿವ ಸಂಪುಟದ ವಿಶೇಷ ಸಭೆ ಕರೆಯಲಾಗಿದೆ. ನಮ್ಮ ಸಭೆಯಲ್ಲಿ ಈ ಬಗ್ಗೆ ಮಾತುಕತೆ ನಡೆಸಿದ್ದೇವೆ. ನಮ್ಮಲ್ಲಿ ಎರಡು ಗುಂಪು ಇಲ್ಲ. ನೀವು ಮಧ್ಯಸ್ಥಿಕೆ ವಹಿಸಬೇಕೆಂದು ಮುಖ್ಯಮಂತ್ರಿಗೆ ಎಲ್ಲರೂ ಮನವಿ ಮಾಡಿದ್ದೇವೆ’ ಎಂದರು.

‘ರಾಜಕೀಯ ಬೆಳವಣಿಗೆಗಳ ವಿಚಾರವಾಗಿ ಜಮೀರ್ ಅಹಮದ್ ಖಾನ್ ನನ್ನನ್ನು ಭೇಟಿ ಮಾಡಿಲ್ಲ. ಮುಸ್ಲಿಂ ಮೌಲ್ವಿಗಳ ಹೇಳಿಕೆ ನಮ್ಮ ಪಕ್ಷಕ್ಕೆ ಸಂಬಂಧಿಸಿದ್ದಲ್ಲ. ಕಾಂಗ್ರೆಸ್‌ನಿಂದ ಇಡೀ ಸಮುದಾಯಕ್ಕೆ ಅನ್ಯಾಯ ಆಗಿಲ್ಲ. ಆಗಿರುವ ಗೊಂದಲವನ್ನು ಸರಿಪಡಿಸುವ ಕೆಲಸ ಆಗುತ್ತಿದೆ’ ಎಂದೂ ಹೇಳಿದರು.

ಲೋಕಾಯುಕ್ತ ಬಲೆಗೆ ಟ್ರಾಫಿಕ್ ಹೆಡ್‌ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಯಾದಗಿರಿ: ಅಪಘಾತ ಪ್ರಕರಣವೊಂದರ ಬೈಕ್ ಬಿಟ್ಟುಕೊಡಲು ₹13 ಸಾವಿರ ಲಂಚ ಪಡೆದ ಆರೋಪದಡಿ ಯಾದಗಿರಿ ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಒಬ್ಬರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.



ನಾಗೇಶ

ಹೆಡ್‌ಕಾನ್‌ಸ್ಟೆಬಲ್ ನಾಗೇಶ ಲಂಚ ಪಡೆದ ಆರೋಪಿ. ತಾಲ್ಲೂಕಿನ ಮುದ್ನಾಳ ದೊಡ್ಡ ತಾಂಡಾ ನಿವಾಸಿ ಅಣ್ಣಯ್ಯ ರಾಠೋಡ ಅವರು ನೀಡಿದ ದೂರಿನ ಮೇರೆಗೆ ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದಾರೆ.

ಅಪಘಾತ ಪ್ರಕರಣದಲ್ಲಿ ಅಣ್ಣಯ್ಯ ಅವರ ಬೈಕ್ ವಶಕ್ಕೆ ಪಡೆಯಲಾಗಿತ್ತು. ಪ್ರಕರಣ ಇತ್ಯರ್ಥವಾದರೂ ಮಾಲೀಕರಿಗೆ ಬೈಕ್ ಹಸ್ತಾಂತರ ಮಾಡಿರಲಿಲ್ಲ. ಬೈಕ್ ಕೊಡಲು ಹೆಡ್ ಕಾನ್‌ಸ್ಟೆಬಲ್ ₹13 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಪೊಲೀಸ್ ಠಾಣೆಯಲ್ಲಿ ನಾಗೇಶ ₹13 ಸಾವಿರ ಲಂಚದ ಹಣವನ್ನು ಪಡೆದಿದ್ದರು. ಆರೋಪಿಯನ್ನು ಬಂಧಿಸಿ ವಿಚಾರಣೆ ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿ: ತಪ್ಪು ಮಾಡಿದವರ ರಕ್ಷಣೆಗೆ ಸದನ ಸಮಿತಿ–ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಹಾಸನ: ‘ಕರ್ನಾಟಕ ಲೋಕಸೇವಾ ಆಯೋಗವನ್ನು ಸ್ವಚ್ಛಗೊಳಿಸುತ್ತೇವೆ ಎಂದು ಹೇಳುತ್ತಿದ್ದವರು ಈಗ ಸದನ ಸಮಿತಿ ರಚಿಸಿ, ತಪ್ಪಿತಸ್ಥರನ್ನು ರಕ್ಷಿಸಲು ಹೊರಟಿದ್ದಾರೆ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.


ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಆ ಸಮಿತಿಗೆ ತಜ್ಞರನ್ನೋ, ನ್ಯಾಯಾಧೀಶರನ್ನೋ ನೇಮಿಸಬೇಕಿತ್ತು. ಈ ಸರ್ಕಾರದ ಅವಧಿಯಲ್ಲಿ ಕ್ಷೇತ್ರಗಳ ಅಭಿವೃದ್ಧಿ ಮಾಡಲು ಶಾಸಕರಿಗೆ ಆಗುತ್ತಿಲ್ಲ. ಅಂಥದ್ದರಲ್ಲಿ ಅವರು ಬಂದು ಕೆಪಿಎಸ್‌ಸಿಯನ್ನು ತೊಳೆದುಬಿಡುತ್ತಾರಾ’ ಎಂದು ಪ್ರಶ್ನಿಸಿದರು.

‘ಮುಖ ಮುಚ್ಚಿಕೊಳ್ಳಲು ಈಗ ಸದನ ಸಮಿತಿ ನಾಟಕ ಮಾಡುತ್ತಿದ್ದಾರೆ. ಕಾಂಗ್ರೆಸ್‌ನಿಂದ 7 ಶಾಸಕರಂತೆ, ಬಿಜೆಪಿಯಿಂದ ಮೂರು ಹಾಗೂ ನಮ್ಮ ಪಕ್ಷದಿಂದ ಒಬ್ಬ ಶಾಸಕರ ಹೆಸರು ಕೊಡಿ ಎಂದು ಕೇಳಿದ್ದಾರೆ. ಈ ಸದನ ಸಮಿತಿ ಏನು ವರದಿ ಕೊಡುತ್ತದೆ? ತಿಂದು ತೇಗಿದವರನ್ನು ರಕ್ಷಣೆ ಮಾಡುತ್ತಾರಷ್ಟೆ’ ಎಂದರು.

‘ಕೆಪಿಎಸ್‌ಸಿ ಬಗ್ಗೆ ಸಚಿವ ಕೃಷ್ಣ ಬೈರೇಗೌಡರು ಸದನದಲ್ಲಿ ನೀಡಿರುವ ಹೇಳಿಕೆ ಗಮನಿಸಿದ್ದೇನೆ. ಸದನ ಸಮಿತಿ ರಚಿಸಿ ಏನು ಮಾಡುತ್ತೀರಿ? ಇದರ ಕರ್ಮಕಾಂಡ ಎಲ್ಲಿಂದ ಆರಂಭವಾಯಿತು? ರೀ ಡೂ ಮೂಲಕ ಕೋಟ್ಯಂತರ ರೂಪಾಯಿ ಲೂಟಿ ಮಾಡಿದವರನ್ನು ಅಧ್ಯಕ್ಷನನ್ನಾಗಿಸಿದ್ದೀರಿ. ಕೋಟಿ ಕೋಟಿ ಪಡೆದು ಉಪವಿಭಾಗಾಧಿಕಾರಿ ಹುದ್ದೆಯನ್ನು ಮಾರಿಕೊಂಡರು ಎಂದು ಬೀದಿಯಲ್ಲಿ ಚರ್ಚೆ ನಡೆಯಿತು. ಸಾಲದ್ದಕ್ಕೆ 15ರಿಂದ 18 ಸದಸ್ಯರನ್ನು ಬೇರೆ ಮಾಡಿದ್ದೀರಿ. ವಾಸ್ತವ ಸ್ಥಿತಿ ಹೀಗಿರಬೇಕಾದರೆ ಸದನ ಸಮಿತಿ ರಚಿಸಿ ಏನು ಮಾಡುತ್ತೀರಿ’ ಎಂದು ಪ್ರಶ್ನಿಸಿದರು.

‘2013ರಲ್ಲಿ ಇದೇ ಮುಖ್ಯಮಂತ್ರಿಯು ಒಬ್ಬ ಹೆಣ್ಣು ಮಗಳಿಗೆ ಉದ್ಯೋಗ ಕೊಡಿಸಬೇಕೆಂದು 370 ಜನರ ಜೀವನದಲ್ಲಿ ಚೆಲ್ಲಾಟವಾಡಿದ್ದರು. ಈ ಸಿ.ಎಂ ಆಗಲೇ ಕೆಪಿಎಸ್‌ಸಿಯನ್ನು ಕ್ಲೀನ್ ಮಾಡಿದ್ದರೆ ಇಷ್ಟೆಲ್ಲ ಅಧ್ವಾನವಾಗುತ್ತಿರಲಿಲ್ಲ’ ಎಂದರು.

‘ಜಮೀರ್ ಅಂಥವರನ್ನು ಪಕ್ಷಕ್ಕೆ ಸೇರಿಸಲ್ಲ’



ಕುಮಾರಸ್ವಾಮಿ

ಹಾಸನ: ‘ನಮ್ಮ ಪಕ್ಷವು ಅಧಿಕಾರಕ್ಕಾಗಿ ಜಮೀರ್ ಅಹ್ಮದ್ ಖಾನ್ ಅಂತಹ ಕೆಟಗರಿ ಜನಗಳನ್ನು ಸೇರಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ನಮಗೆ ಎಲ್ಲ ಅನುಭವಗಳಾಗಿವೆ. ಯಾವುದೇ ಕಾರಣಕ್ಕೂ ನನ್ನ ಬಳಿ ಆ ವಿಷಯ ಕೇಳಬೇಡಿ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಉದ್ದೂರು ಹೊಸಹಳ್ಳಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಮಗೆ ಅದರ ಅವಶ್ಯಕತೆ ಇಲ್ಲ. ಯಾವುದೇ ಕಾರಣಕ್ಕೂ, ರಾಜಕೀಯದಲ್ಲಿ ಏನೋ ಶಕ್ತಿ ಬರುತ್ತದೆ ಎಂದು ಬೆಂದ ಮನೆಯಲ್ಲಿ ಗಳ ಹಿರಿಯುವ ಕೆಲಸಕ್ಕೆ ಕೈ ಹಾಕಲ್ಲ’ ಎಂದರು.

‘2028ಕ್ಕೆ ನಾವೇ ಅಧಿಕಾರಕ್ಕೆ ಬರುತ್ತೇವೆ ಎನ್ನುತ್ತಾರೆ. ಮೂರು ವರ್ಷ ನಿರಂತರವಾಗಿ ಮುಖ್ಯಮಂತ್ರಿ ಕುರ್ಚಿ ಬಗ್ಗೆ ಚರ್ಚೆ ನಡೆಯಿತು. ಅವರ ಮೇಲೆ ಇವರು, ಇವರ ಮೇಲೆ ಅವರು ಹೇಳುತ್ತಿದ್ದರು. ಇನ್ನೊಬ್ಬರು ದೇವರ ಮೊರೆ ಹೋಗುತ್ತಿದ್ದಾರೆ. ಇದೀಗ ಮಾಟಮಂತ್ರದ್ದು ಪ್ರಾರಂಭವಾಗಿದೆ. ಮುಖ್ಯಮಂತ್ರಿ ಮೇಲೆ ಮಾಟ ಮಾಡಿದ್ದಾರೆ ಎಂದು ಆ ಪಕ್ಷದ ಶಾಸಕರೇ ಹೇಳುತ್ತಿದ್ದಾರೆ. ಹುಡುಗಾಟದ ರಾಜಕಾರಣ ಮಾಡುತ್ತಿದ್ದಾರೆ’ ಎಂದು ದೂರಿದರು.

ನಾನೂ ರಾಮಭಕ್ತನೇ: ಹೊಳೆನರಸೀಪುರ ತಾಲ್ಲೂಕಿನ ದೊಡ್ಡಬೀಕನಹಳ್ಳಿಯಲ್ಲಿ ಆಂಜನೇಯ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಮಾತನಾಡಿ, ‘ನೀವು ಮಾತ್ರ ಕೇಸರಿ ಶಾಲು ಹಾಕಿದ್ದೀರಿ. ನನಗೆ ಕೊಟ್ಟಿಲ್ಲ. ನಾನು ಕೂಡ ನಿಮ್ಮಂತೆಯೇ ರಾಮಭಕ್ತ’ ಎಂದರು.

‘ಕರ್ನಾಟಕದಲ್ಲಿ ರಾಮರಾಜ್ಯ ಸ್ಥಾಪನೆಯಾಗಲೆಂದು ದೇವಸ್ಥಾನ ಕಟ್ಟುತ್ತಿದ್ದೀರಿ. ನನ್ನದೂ ಅದೇ ಪ್ರಾರ್ಥನೆ. ಒಮ್ಮೆ ನನ್ನ ಕೈಗೆ ಸರ್ಕಾರ ಕೊಟ್ಟರೆ, ಅದನ್ನು ಮಾಡಿ ತೋರಿಸುವೆ’ ಎಂದರು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಟ್ರಸ್ಟ್ ತೀರ್ಮಾನ

ಏ. 27ರ ಸಭೆಯಲ್ಲೇ ಲೆಕ್ಕ ಮಂಡನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಲೆಕ್ಕವನ್ನು ಬಹಿರಂಗ ಸಭೆಯಲ್ಲಿ ಮಂಡಿಸಲು ಗುರುಪೀಠದ ಟ್ರಸ್ಟ್ ನಿರ್ಧರಿಸಿದೆ. ಏ.27ರಂದು ಬೆಳಿಗ್ಗೆ 11ಕ್ಕೆ ಮಠದಲ್ಲಿ ಏರ್ಪಡಿಸಿದ ಸಭೆಗೆ ಬರುವಂತೆ ಭಕ್ತರು ಹಾಗೂ ವಚನಾನಂದ ಸ್ವಾಮೀಜಿ ಅವರಿಗೆ ಆಹ್ವಾನ ನೀಡಿದೆ.

‘2008ರಿಂದ 2025ರವರೆಗೆ ಪ್ರತಿಯೊಂದು ಲೆಕ್ಕ ಟ್ರಸ್ಟ್ ಬಳಿ ಇದೆ. ಪ್ರತಿ ವರ್ಷ ಆದಾಯ ತೆರಿಗೆ ಇಲಾಖೆಗೂ ಇದನ್ನು ಸಲ್ಲಿಕೆ ಮಾಡಲಾಗಿದೆ. ಟ್ರಸ್ಟ್‌ವೊಂದು ಸಾರ್ವಜನಿಕವಾಗಿ ಲೆಕ್ಕಕೊಡುವ ಅಗತ್ಯವಿಲ್ಲ. ಆದರೆ, ಭಕ್ತರ ಕೋರಿಕೆ ಹಾಗೂ ಅನುಮಾನಗಳನ್ನು ನಿವಾರಿಸುವ ಉದ್ದೇಶದಿಂದ ಟ್ರಸ್ಟ್ ಈ ತೀರ್ಮಾನ ಕೈಗೊಂಡಿದೆ’ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪ್ರಧಾನ ಟ್ರಸ್ಟಿ ಬಿ.ಸಿ. ಉಮಾಪತಿ ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

> **ಪದಚ್ಯುತ ವಚನಾನಂದ ಸ್ವಾಮೀಜಿ ಮಠದಿಂದ ಗೌರವಯುತವಾಗಿ ಹೊರ ನಡೆಯಬೇಕು. ಹೊರಹೋಗದಿದ್ದರೆ ಟ್ರಸ್ಟ್ ತೀರ್ಮಾನ ಕೈಗೊಳ್ಳುತ್ತದೆ**
>
> **ಬಿ.ಸಿ. ಉಮಾಪತಿ,** ಪ್ರಧಾನ ಧರ್ಮದರ್ಶಿ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಟ್ರಸ್ಟ್

‘ವಚನಾನಂದ ಸ್ವಾಮೀಜಿ ಸಮುದಾಯದ ಅಪೇಕ್ಷೆಗೆ ತಕ್ಕಂತೆ ನಡೆದುಕೊಂಡಿಲ್ಲ. ಭಕ್ತರ ಭಾವನೆಗಳಿಗೆ ಧಕ್ಕೆಯುಂಟು ಮಾಡಿದ್ದರಿಂದ ಅವರನ್ನು ಪದಚ್ಯುತಿಗೊಳಿಸಿ ಗೌರವಯುತವಾಗಿ ಕಳುಹಿಸಿಕೊಡಲು ನಿರ್ಧರಿಸಿದ್ದೆವು. ಆದರೆ, ಅವರು ಲೆಕ್ಕಕೊಡುವಂತೆ ಕೆಲವರನ್ನು ಎತ್ತಿಕಟ್ಟಿ ದಿಕ್ಕು ತಪ್ಪಿಸುವ ಪ್ರಯತ್ನ ಮಾಡಿದ್ದಾರೆ. ಅಂದಿನ ಸಭೆಗೆ ಸ್ವಾಮೀಜಿ ಬರುವಂತೆ ಕೋರುತ್ತೇವೆ’ ಎಂದರು.

‘ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯ ಘಟಕಕ್ಕೆ ಟ್ರಸ್ಟ್ ಪ್ರತಿ ವರ್ಷ ಲೆಕ್ಕ ಕೊಟ್ಟಿದೆ. ಏ.11ರಂದು ಸಮಾಜದ ಪ್ರಮುಖರ ಸಮ್ಮುಖದಲ್ಲಿ ಮಠದಲ್ಲಿ ಲೆಕ್ಕ ಮಂಡಿಸಲಾಗಿದೆ. ಈ ಸಭೆಯಲ್ಲಿ ಹಾಜರಿದ್ದ ವಚನಾನಂದ ಸ್ವಾಮೀಜಿಗೆ ಪ್ರತಿಯೊಂದನ್ನು ಮನವರಿಕೆ ಮಾಡಿಕೊಡಲಾಗಿದೆ. ಪದಚ್ಯುತಿಯ ಬಳಿಕ ‘ಲೆಕ್ಕ ಕೊಡಿ’ ಚಳವಳಿಗೆ ಕುಮ್ಮಕ್ಕು ನೀಡಿ ಗೊಂದಲ ಸೃಷ್ಟಿಸಿದ್ದಾರೆ’ ಎಂದು ಹೇಳಿದರು.

ಸಮಾವೇಶಕ್ಕೆ ಟ್ರಸ್ಟ್ ವಿರೋಧ

ಹರಿಹರದ ಗುರುಪೀಠದಲ್ಲಿ ಪದಚ್ಯುತ ಪೀಠಾಧಿಪತಿ ವಚನಾನಂದ ಶ್ರೀ ನೇತೃತ್ವದಲ್ಲಿ ಏ. 24ರಂದು ಹಮ್ಮಿಕೊಂಡಿರುವ ಬಸವ ಜಯಂತಿ ಹಾಗೂ ರಾಜ್ಯ ಸಮಾವೇಶಕ್ಕೆ ಗುರುಪೀಠದ ಟ್ರಸ್ಟ್ ವಿರೋಧ ವ್ಯಕ್ತಪಡಿಸಿದೆ.

‘ಸಿನಿಮಾ ನಟರೊಂದಿಗೆ ಸ್ವಾಮೀಜಿ ಇರುವ ಚಿತ್ರಗಳೇ ಮಠದ ಆವರಣವನ್ನು ತುಂಬಿಕೊಂಡಿದ್ದವು. ಇದಕ್ಕೆ ಭಕ್ತರು ವಿರೋಧ ವ್ಯಕ್ತಪಡಿಸಿದ ಬಳಿಕ ಬಸವಣ್ಣನ ಮೂರ್ತಿಯೊಂದನ್ನು ತಂದಿಡಲಾಯಿತು. 8 ವರ್ಷಗಳಿಂದ ಒಮ್ಮೆಯೂ ಬಸವ ಜಯಂತಿ ಆಚರಿಸದ ವಚನಾನಂದ ಶ್ರೀ, ಈ ಸಂದರ್ಭದಲ್ಲಿ ಉತ್ಸುಕತೆ ತೋರಿದ್ದು ಏಕೆ? ಈ ಕಾರ್ಯಕ್ರಮಕ್ಕೆ ಟ್ರಸ್ಟ್ ವಿರೋಧವಿದೆ. ಇದನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೂ ತರಲಾಗಿದೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.



ಸಾಧನೆಯ ಸಂಭ್ರಮ



625/625 ಟಾಪರ್ಸ್ ಮಾತು

ರಾಜ್ಯಕ್ಕೆ ಮೊದಲ ಸ್ಥಾನ ಗಳಿಸುವ ನಿರೀಕ್ಷೆ ಇತ್ತು. ಶಿಕ್ಷಕರ ಮಾರ್ಗದರ್ಶನ, ತಂದೆ–ತಾಯಿ ಪ್ರೋತ್ಸಾಹ ನೀಡಿದರು. ವೈದ್ಯೆಯಾಗುವ ಗುರಿ ಇದೆ
ಸೌಜನ್ಯಾ ಬಸವರಾಜ ಕಂದಕೂರ, ಆಕ್ಸಫರ್ಡ್ ಇಂಗ್ಲಿಷ್ ಸ್ಕೂಲ್, ಮುದ್ದೇಬಿಹಾಳ, ವಿಜಯಪುರ

625 ಅಂಕ ಪಡೆದಿದ್ದಕ್ಕೆ ತುಂಬಾ ಖುಷಿ ಆಗುತ್ತಿದೆ. ಶಿಕ್ಷಕರೂ ಬಹಳಷ್ಟು ಪ್ರೋತ್ಸಾಹಿಸಿದರು. ತಂದೆ–ತಾಯಿ ಬೆಂಬಲ ನೀಡಿದರು. ಶ್ರಮಪಟ್ಟು ಓದಿದ್ದು ಸಾರ್ಥಕವಾಯಿತು
ಪ್ರಾರ್ಥನಾ ನಾಗಪ್ಪ ಬಿರಾದಾರ, ಸರ್ಕಾರಿ ಪ್ರೌಢಶಾಲೆ, ಅಥಣಿ, ಬೆಳಗಾವಿ

ಪೂರ್ಣ ಅಂಕ ನಿರೀಕ್ಷಿಸಿರಲಿಲ್ಲ. ಅಂದಿನ ಪಾಠವನ್ನು ಅಂದೇ ಪುನರಾವಲೋಕನ ಮಾಡುತ್ತಿದ್ದೆ. ಎಂಜಿನಿಯರ್ ಆಗುವ ಬಯಕೆ ಇದೆ
ಪ್ರೀತಂ ಜಿ. ಪೂಜಾರಿ, ಮದರ್ ಥೆರೆಸಾ ಮೆಮೋರಿಯಲ್ ಶಾಲೆ, ಶಂಕರನಾರಾಯಣ, ಉಡುಪಿ

625 ಅಂಕ ಬಂದಿರುವುದು ಖುಷಿ ತಂದಿದೆ. ಎಲ್ಲ ವಿಷಯಗಳಿಗೂ ಸಮಾನ ಆದ್ಯತೆ ನೀಡುತ್ತಿದ್ದೆ. ದಿನಕ್ಕೆ ಇಂತಿಷ್ಟು ಓದಬೇಕೆಂಬ ಗುರಿ ಇಟ್ಟುಕೊಳ್ಳುತ್ತಿದ್ದೆ. ಅದನ್ನು ಅಂದೇ ಓದಿ ಮುಗಿಸುತ್ತಿದ್ದೆ
ಬೃಂದಾ ಎಂ. ತಾಪ್ಸೆ, ಸೇಂಟ್ ಮೇರಿಸ್ ಶಾಲೆ, ಚಿಕ್ಕಮಗಳೂರು

ದಿನವೂ ಐದಾರು ಗಂಟೆ ಓದುತ್ತಿದ್ದೆ. ಪೋಷಕರ ಒತ್ತಡ ಇರಲಿಲ್ಲ. ಹೀಗಾಗಿ ಪೂರ್ಣ ಅಂಕಗಳನ್ನು ಗಳಿಸಲು ಸಾಧ್ಯವಾಯಿತು. ವೈದ್ಯನಾಗುವ ಇಚ್ಛೆ ಇದೆ
ಭರತ್, ಶ್ರೀವಿದ್ಯಾಲಕ್ಷ್ಮಿ ಇಂಗ್ಲಿಷ್ ಸ್ಕೂಲ್ ಕಬ್ಬಳ, ಚನ್ನಗಿರಿ, ದಾವಣಗೆರೆ

ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುತ್ತೇನೆ ಎಂದುಕೊಂಡಿರಲಿಲ್ಲ. ಟ್ಯೂಷನ್‌ಗೆ ಹೋಗಿಲ್ಲ. ನಿತ್ಯ ಕನಿಷ್ಠ 4 ತಾಸು ಓದುತ್ತಿದ್ದೆ. ಐಐಟಿ ಪ್ರವೇಶಕ್ಕಾಗಿ ಜೆಇಇಗೆ ಸಿದ್ಧತೆ ನಡೆಸಿರುವೆ
ಸುಖದೇವ ಕಟ್ಟಿಮನಿ, ಬಿ.ವಿ.ಆರ್ ಇಂಗ್ಲಿಷ್ ಸ್ಕೂಲ್, ಮಾನ್ವಿ, ರಾಯಚೂರು

ಪರೀಕ್ಷಾ ನೀಲನಕ್ಷೆ ಪ್ರಕಾರ ಯೋಜಿತ ಅಧ್ಯಯನ ನಡೆಸಿದ ಕಾರಣಕ್ಕೇ ಗರಿಷ್ಠ ಅಂಕ ಪಡೆಯಲು ಸಾಧ್ಯವಾಗಿದೆ. ಮುಂದೆ ಎಂಜಿನಿಯರ್ ಆಗಬೇಕು ಎಂದುಕೊಂಡಿದ್ದೇನೆ
ಧನುಶ್ ಎಂ.ಎಸ್., ಪೂರ್ಣಪ್ರಜ್ಞಾ ಶೈಕ್ಷಣಿಕ ಕೇಂದ್ರ, ಸದಾಶಿವನಗರ, ಬೆಂಗಳೂರು ಉತ್ತರ

ಪಿಯು ಶಿಕ್ಷಣಕ್ಕೆ 'ಸಂಜೀವಿನಿ'

ದಾಖಲೆಯ ಫಲಿತಾಂಶ: ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಾಗುವ ನಿರೀಕ್ಷೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಬಾರಿ ದಾಖಲೆಯ ಫಲಿತಾಂಶ ಬಂದಿರುವುದು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿದ್ದ ಸರ್ಕಾರಿ ಹಾಗೂ ಅನುದಾನಿತ ಪದವಿಪೂರ್ವ ಕಾಲೇಜುಗಳಿಗೆ ಸಂಜೀವಿನಿ ಸಿಕ್ಕಂತಾಗಿದೆ.

ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದ್ದು, ಬಹುತೇಕ ಕಾಲೇಜುಗಳು ವಿದ್ಯಾರ್ಥಿಗಳ ಕೊರತೆ ಎದುರಿಸುತ್ತಿದ್ದವು. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಗಿಂತ ಪ್ರಥಮ ಪಿಯುಸಿಯ ಸೀಟುಗಳ ಸಂಖ್ಯೆ ಪ್ರತಿ ವರ್ಷ ಏರಿಕೆಯಾಗುತ್ತಿದ್ದು, 2025–26ನೇ ಸಾಲಿನಲ್ಲಿ ಪಿಯು ಕಾಲೇಜುಗಳಿಗೆ 1.18 ಲಕ್ಷ ವಿದ್ಯಾರ್ಥಿಗಳ ಕೊರತೆ ಎದುರಾಗಿತ್ತು.

ಪ್ರಸ್ತುತ 3,623 ಖಾಸಗಿ ಕಾಲೇಜುಗಳಿವೆ. ನಿಗದಿತ ಪಠ್ಯದ ಜತೆಗೆ ಕಾಲೇಜುಗಳಲ್ಲೇ ನೀಟ್, ಸಿಇಟಿ, ಜೆಇಇ ಕೋರ್ಸ್‌ಗಳಿಗೆ ತರಬೇತಿ ನೀಡುತ್ತಿರುವುದರಿಂದ ವಿಜ್ಞಾನ ವಿಷಯ ಓದುವ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿವೆ. ದುಬಾರಿ ಶುಲ್ಕ ವಿಧಿಸಿದರೂ ಪೋಷಕರು ಖಾಸಗಿ ಕಾಲೇಜುಗಳತ್ತ ಒಲವು ತೋರುತ್ತಿದ್ದಾರೆ. ಇದರ ಪರಿಣಾಮ ನೇರವಾಗಿ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳ ಮೇಲೆ ಬೀರುತ್ತಿದ್ದು, ಹಲವು ಕಾಲೇಜುಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿದ್ದವು.

ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಪ್ರವೇಶ ಪಡೆಯುವ ಬಾಲಕಿಯರಿಗೆ ಸರ್ಕಾರ ಉಚಿತ ಶಿಕ್ಷಣ ನೀಡುತ್ತಿದೆ. ಶುಲ್ಕ ಮರುಪಾವತಿ ಮಾಡುತ್ತಿದೆ. ಬಹುತೇಕ ಕಾಲೇಜುಗಳಲ್ಲಿ ಎರಡು ವರ್ಷಗಳಿಂದ ಉಚಿತವಾಗಿ ಸಿಇಟಿ, ನೀಟ್, ಜೆಇಇ ಕೋರ್ಸ್‌ಗಳಿಗೆ ಉಚಿತ ತರಬೇತಿ ನೀಡಲು ವ್ಯವಸ್ಥೆ ಮಾಡಿದೆ. ಹಲವು ಕಾಲೇಜುಗಳಲ್ಲಿ ಸ್ಮಾರ್ಟ್ ಕ್ಲಾಸ್, ಡಿಜಿಟಲ್ ಲ್ಯಾಬ್ ಸೌಲಭ್ಯ ಕಲ್ಪಿಸಲಾಗಿದೆ. ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲಕ ಪೂರ್ವ ಪ್ರಾಥಮಿಕದಿಂದ ದ್ವಿತೀಯ ಪಿಯುವರೆಗೂ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಸ್ಪರ್ಧಾಪರೀಕ್ಷೆಗಳ ಮೂಲಕ ಪ್ರತಿಭಾವಂತರನ್ನು ಆಯ್ಕೆ ಮಾಡಿ ವಿವಿಧ ವಿಷಯಗಳ ಉಪನ್ಯಾಸಕರಾಗಿ ನೇಮಕ ಮಾಡಿದೆ. ಆದರೂ, ಸರ್ಕಾರಿ ಕಾಲೇಜುಗಳು ವಿದ್ಯಾರ್ಥಿಗಳನ್ನು ಸೆಳೆಯುವಲ್ಲಿ ವಿಫಲವಾಗುತ್ತಾ ಸಾಗಿವೆ.

ಕಳೆದ ಸಾಲಿನಲ್ಲಿ 5,24,984 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರು. ಅವರಲ್ಲಿ ಶೇ 96ರಷ್ಟು ವಿದ್ಯಾರ್ಥಿಗಳು ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗ ಸೇರಿ ವಿವಿಧ ಪದವಿಪೂರ್ವ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದರು. ಬಹುತೇಕ ಸರ್ಕಾರಿ, ಅನುದಾನಿತ ಕಾಲೇಜುಗಳಲ್ಲಿ ಸೀಟು ಖಾಲಿ ಉಳಿದಿದ್ದವು. ಈ ಬಾರಿ ಹೊಸ ವಿದ್ಯಾರ್ಥಿಗಳು, ಪುನರಾವರ್ತಿತರೂ ಸೇರಿ 7.60 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಅಂದರೆ, ಕಳೆದ ಸಾಲಿಗೆ ಹೋಲಿಸಿದರೆ ತೇರ್ಗಡೆಯಾದವರ ಹೆಚ್ಚುವರಿ ಸಂಖ್ಯೆ 2.36 ಲಕ್ಷ. ಪ್ರಸ್ತುತ 1,319 ಸರ್ಕಾರಿ ಪಿಯು ಕಾಲೇಜುಗಳು ಹಾಗೂ 815 ಅನುದಾನಿತ ಕಾಲೇಜುಗಳಿದ್ದು, ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗುವ ನಿರೀಕ್ಷೆ ಮೂಡಿಸಿದೆ.



ಇದೇ ಮೊದಲ ಬಾರಿ ಉತ್ತರ ಕರ್ನಾಟಕ ಜಿಲ್ಲೆಗಳು ಶೇ 90ಕ್ಕಿಂತ ಅಧಿಕ ಫಲಿತಾಂಶ ಪಡೆದಿವೆ. ಶಿಕ್ಷಕರು–ವಿದ್ಯಾರ್ಥಿಗಳ ನಿರಂತರ ಸಂವಹನದ ಫಲ ಯಶಸ್ಸಿನ ದಾರಿ ತೆರೆಯಿತು
ಈಶ್ವರ ಉಳ್ಳಾಗಡ್ಡಿ, ಹೆಚ್ಚುವರಿ ಆಯುಕ್ತ, ಸಾರ್ವಜನಿಕ ಮತ್ತು ಶಿಕ್ಷಣ ಇಲಾಖೆ, ಧಾರವಾಡ ವಿಭಾಗ



ಕಳಪೆ ಫಲಿತಾಂಶದ ಕಳಂಕ ತೊಡೆದ 'ಉತ್ತರ'

ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲೂ ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಭಾರಿ ಚೇತರಿಕೆ ಕಂಡಿದೆ.

ರಾಜ್ಯದ ಜಿಲ್ಲಾವಾರು ಫಲಿತಾಂಶದ ಪಟ್ಟಿಯಲ್ಲಿ ಹಾವೇರಿ (7), ವಿಜಯನಗರ (10), ಧಾರವಾಡ (12), ಬಾಗಲಕೋಟೆ (14) ಗದಗ (16), ಬೆಳಗಾವಿ (18) ಸ್ಥಾನ ಪಡೆದಿವೆ. ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳು ಶೇ 91.6ರಷ್ಟು ಫಲಿತಾಂಶ ಪಡೆದಿವೆ. ಕಳೆದ ಬಾರಿ ಈ ಜಿಲ್ಲೆಗಳ ಒಟ್ಟು ಫಲಿತಾಂಶ ಶೇ 71.7 ಇತ್ತು. ಈ ಬಾರಿ ಶೇ 19.9ರಷ್ಟು ಹೆಚ್ಚಳವಾಗಿದೆ. ಬಾಲಕಿಯರು ಶೇ 94.4 ಫಲಿತಾಂಶ ಪಡೆದಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳ ಸಾಧನೆ ಶೇ 92.7 ಇದೆ.

ಪರೀಕ್ಷೆ ಬರೆದಿದ್ದ ಸರ್ಕಾರಿ ಶಾಲೆಗಳ 88,770 ವಿದ್ಯಾರ್ಥಿಗಳಲ್ಲಿ 81,706 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 844 ಶಾಲೆಗಳಿಗೆ ಶೇ 100 ಫಲಿತಾಂಶ ಬಂದಿದೆ. 9,915 ವಿದ್ಯಾರ್ಥಿಗಳು ಶೇ 90ರಿಂದ 100ರಷ್ಟು ಫಲಿತಾಂಶ ಪಡೆದಿದ್ದಾರೆ.

ಪಿಯು ಕಾಲೇಜು	
ಸರ್ಕಾರಿ	1,319
ಖಾಸಗಿ	3,623
ಅನುದಾನಿತ	815
ವಿಭಜಿತ	159
ಕಾರ್ಪೊರೇಷನ್	19
ವಸತಿ ಕಾಲೇಜು	116
ಅಲ್ಪಸಂಖ್ಯಾತ	126
ಒಟ್ಟು ಕಾಲೇಜು	6,177

ರಾಜ್ಯದ ಪದವಿಪೂರ್ವ ಶಿಕ್ಷಣದಲ್ಲಿ ಸುಮಾರು 14 ಲಕ್ಷ ಸೀಟುಗಳಿವೆ. ಉತ್ತೀರ್ಣರಾದ ಎಲ್ಲರಿಗೂ ಪ್ರವೇಶ ಸಿಗಲಿದೆ. ಡಿಪ್ಲೊಮಾ, ಪಾಲಿಟೆಕ್ನಿಕ್, ಐಟಿಐ, ಅರೆ ವೈದ್ಯಕೀಯದಲ್ಲೂ ಅವಕಾಶಗಳಿವೆ
ಭರತ್. ಎಸ್, ನಿರ್ದೇಶಕ, ಪದವಿಪೂರ್ವ ಶಿಕ್ಷಣ

ಪಾಸಾದ ಖುಷಿ...

ಪ್ರಜಾವಾಣಿ ಚಿತ್ರ




ಕಲಬುರಗಿಯ ಸರ್ಕಾರಿ ತಾರಫೈಲ್ ಪ್ರೌಢಶಾಲೆ ಆವರಣದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ನೋಡಿ ವಿದ್ಯಾರ್ಥಿನಿಯರು ಗುರುವಾರ ಸಂಭ್ರಮಿಸಿದರು

ಅಂಕಿ ಅಂಶಗಳು

7.70 ಲಕ್ಷ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು
7.24 ಲಕ್ಷ ತೇರ್ಗಡೆಯಾದವರು
3.92 ಲಕ್ಷ ಹಾಜರಾದ ಬಾಲಕಿಯರು
3.77 ಲಕ್ಷ ತೇರ್ಗಡೆಯಾದ ಬಾಲಕಿಯರು
3.77 ಲಕ್ಷ ಹಾಜರಾದ ಬಾಲಕರು
3.44 ಲಕ್ಷ ತೇರ್ಗಡೆಯಾದ ಬಾಲಕರು

ಶೇ 100 ಫಲಿತಾಂಶ ಪಡೆದುಕೊಂಡ ಶಾಲೆಗಳು



10ರ ಫಲಿತಾಂಶ ನೂರರ ಹತ್ತಿರ

ಒಂದನೇ ಪುಟದಿಂದ...

ಖಾಸಗಿ ಶಾಲೆಗಳು ಶೇ 95.40, ಸರ್ಕಾರಿ ಶಾಲೆಗಳು ಶೇ 93.97 ಫಲಿತಾಂಶ ಪಡೆದಿವೆ. ಶೂನ್ಯ ಫಲಿತಾಂಶ ಪಡೆದ ಶಾಲೆಗಳ ಪಟ್ಟಿಯಲ್ಲಿ ಸರ್ಕಾರಿ ಶಾಲೆಗಳು ಒಂದೂ ಇಲ್ಲ. 22 ಖಾಸಗಿ ಶಾಲೆಗಳು ಶೂನ್ಯ ಫಲಿತಾಂಶ ಪಡೆದಿವೆ. 6,176 ಶಾಲೆಗಳು ಈ ಬಾರಿ ಶೇ 100ರಷ್ಟು ಫಲಿತಾಂಶ ಪಡೆದಿವೆ.

ಪ್ರತಿ ಬಾರಿಯಂತೆ ಈ ವರ್ಷವೂ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಶೇ 96.18ರಷ್ಟು ಫಲಿತಾಂಶ ನೀಡಿದ್ದಾರೆ. ಶೇ 91.94ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳೇ ಫಲಿತಾಂಶದಲ್ಲಿ ಮುಂದಿದ್ದರೂ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ವ್ಯತ್ಯಾಸ ಭಾರಿ ಪ್ರಮಾಣದಲ್ಲಿ ತಗ್ಗಿದೆ. ಇಂಗ್ಲಿಷ್ ಮಾಧ್ಯಮದ (ಶೇ96.16) ವಿದ್ಯಾರ್ಥಿಗಳೇ ಅಧಿಕ ಸಂಖ್ಯೆಯಲ್ಲಿ ತೇರ್ಗಡೆಯಾಗಿದ್ದಾರೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಶೇ 92.60 ಫಲಿತಾಂಶ ಪಡೆದಿದ್ದಾರೆ. ಪುನರಾವರ್ತಿತರು ಹಾಗೂ ಖಾಸಗಿ ವಿದ್ಯಾರ್ಥಿಗಳು ಸೇರಿ 86,307 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಯನ್ನು ಎದುರಿಸಿದ್ದು, ಹೊಸ ವಿದ್ಯಾರ್ಥಿಗಳೂ ಸೇರಿದಂತೆ ಒಟ್ಟಾರೆ ಫಲಿತಾಂಶ ಶೇ 88.73ರಷ್ಟಿದೆ.

ಕನ್ನಡದಲ್ಲಿ 10,341, ಸಮಾಜ ವಿಜ್ಞಾನದಲ್ಲಿ 10,686 ಇಂಗ್ಲಿಷ್‌ನಲ್ಲಿ 2,678, ಗಣಿತದಲ್ಲಿ 1,264 ಹಾಗೂ ವಿಜ್ಞಾನದಲ್ಲಿ 636 ವಿದ್ಯಾರ್ಥಿಗಳು ಶೇ 100ರಷ್ಟು ಅಂಕ ಗಳಿಸಿದ್ದಾರೆ. ಪರೀಕ್ಷೆ ತೆಗೆದುಕೊಂಡಿದ್ದ ವಿವಿಧ ನ್ಯೂನತೆಯ 4,099 ವಿದ್ಯಾರ್ಥಿಗಳಲ್ಲಿ 3,621 ವಿದ್ಯಾರ್ಥಿಗಳು (ಶೇ 88) ಉತ್ತೀರ್ಣರಾಗಿದ್ದಾರೆ.

1,532 ವಿದ್ಯಾರ್ಥಿಗಳಿಗೆ 33 ಅಂಕದ ಲಾಭ

ಇದೇ ಮೊದಲ ಬಾರಿ ತೇರ್ಗಡೆಯ ಕನಿಷ್ಠ ಅಂಕವನ್ನು ಶೇ 35ರಿಂದ 33ಕ್ಕೆ ಇಳಿಸಲಾಗಿತ್ತು. ಇದರ ಪ್ರಯೋಜನವನ್ನು 1,532 ವಿದ್ಯಾರ್ಥಿಗಳು ಪಡೆದಿದ್ದಾರೆ.

ಶೇ 33ರಿಂದ ಶೇ49ರವರೆಗೆ 1.13 ಲಕ್ಷ, ಶೇ 50ರಿಂದ ಶೇ 59ರವರೆಗೆ 1.28 ಲಕ್ಷ, ಶೇ 60ರಿಂದ ಶೇ 69ರವರೆಗೆ 1.42 ಲಕ್ಷ, ಶೇ 70ರಿಂದ ಶೇ 79ರವರೆಗೆ 1.40 ಲಕ್ಷ, ಶೇ 80ರಿಂದ ಶೇ 89ರವರೆಗೆ 1.30 ಲಕ್ಷ ಹಾಗೂ ಶೇ 90ಕ್ಕೂ ಮೇಲ್ಪಟ್ಟು 68,207 ವಿದ್ಯಾರ್ಥಿಗಳು ಅಂಕಗಳನ್ನು ಪಡೆದಿದ್ದಾರೆ.

ಹಿಂದಿ: 9,481 ವಿದ್ಯಾರ್ಥಿಗಳು ಅನುತ್ತೀರ್ಣ

ತೃತೀಯ ಭಾಷೆ ಹಿಂದಿಯಲ್ಲಿ 6.92 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು (ಶೇ 98.7), 9,481 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಹಿಂದಿ ಸೇರಿದಂತೆ 11 ತೃತೀಯ ಭಾಷಾ ವಿಷಯಗಳಲ್ಲಿ ಒಟ್ಟು 10,963 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. 31,255 ವಿದ್ಯಾರ್ಥಿಗಳು ಹಿಂದಿಯಲ್ಲಿ 100ಕ್ಕೆ 100 ಅಂಕ ಪಡೆದಿದ್ದಾರೆ.

ತೃತೀಯ ಭಾಷೆ ಹಿಂದಿಯಲ್ಲಿ ಕಡಿಮೆ ಅಂಕ ಬಂದಿರುವ ವಿದ್ಯಾರ್ಥಿಗಳು ತಮ್ಮ ಅಂಕಗಳನ್ನು ಉತ್ತಮ ಪಡಿಸಿಕೊಳ್ಳಲು ಇಚ್ಛಿಸಿದರೆ ಪರೀಕ್ಷೆ–2ಗೆ ಯಾವುದೇ ಶುಲ್ಕ ಪಾವತಿಸುವ ಅಗತ್ಯವಿಲ್ಲ ಎಂದು ಪರೀಕ್ಷಾ ಮಂಡಳಿ ಹೇಳಿದೆ.

ಹಿಂದಿ ಪರೀಕ್ಷೆಗೆ ಕೆಲವೇ ದಿನಗಳ ಮೊದಲು ಗ್ರೇಡ್ ನೀಡುವುದಾಗಿ ಸರ್ಕಾರ ಘೋಷಿಸಿದ ಕಾರಣ ಕೆಲ ವಿದ್ಯಾರ್ಥಿಗಳು ನಿರ್ಲಕ್ಷ್ಯ ತೋರಿರುವ ಸಾಧ್ಯತೆ ಇದೆ. ಹಾಗಾಗಿ, ಅಂಥವರಿಗೆ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಶುಲ್ಕವಿಲ್ಲದೇ ಪರೀಕ್ಷೆ–2 ತೆಗೆದುಕೊಳ್ಳಬಹುದು. ಉಳಿದ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಲು ಒಂದು ವಿಷಯಕ್ಕೆ ₹448, ಎರಡು ವಿಷಯಗಳಿಗೆ ₹550 ಹಾಗೂ ಮೂರು ಅಥವಾ ಅದಕ್ಕಿಂತ ಹೆಚ್ಚು ವಿಷಯಗಳಿಗೆ ₹752 ಶುಲ್ಕ ಪಾವತಿಸಬೇಕು. ಅನುತ್ತೀರ್ಣರಾದವರಿಗೆ ಈ ಬಾರಿಯೂ ಶುಲ್ಕ ಇರುವುದಿಲ್ಲ ಎಂದು ಮಂಡಳಿ ಮಾಹಿತಿ ನೀಡಿದೆ.

ಪರೀಕ್ಷೆ–2: ನೋಂದಣಿಗೆ ಏ.30ರ ಗಡುವು

- ಏ.24ರಿಂದಲೇ ನೋಂದಣಿಗೆ ಅವಕಾಶ
- ನೋಂದಣಿಗೆ ಏ.30 ಕೊನೆಯ ದಿನ
- ಮೇ 4ರ ಒಳಗೆ ಶುಲ್ಕ ಜಮೆ ಮಾಡಬೇಕು
- ಉತ್ತರ ಪತ್ರಿಕೆಗಳ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಏ.26 ಕೊನೆಯ ದಿನ
- ಶುಲ್ಕ ಪಾವತಿಗೆ ಏ.29 ಕೊನೆಯ ದಿನ
- ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಅರ್ಜಿ ಸಲ್ಲಿಸಲು ಮೇ 4 ಕೊನೇ ದಿನ
- ಶುಲ್ಕ ಪಾವತಿಗೆ ಮೇ 5 ಕೊನೆಯ ದಿನ



ಪ್ರೀತಂ ಪೂಜಾರಿಗೆ ಸಿಹಿ ತಿನ್ನಿಸಿದ ತಂದೆ ಗಣಪತಿ ಪೂಜಾರಿ ಹಾಗೂ ತಾಯಿ ನಾಗರತ್ನ

'ಶೂನ್ಯ': 'ಕಲ್ಯಾಣ'ದಲ್ಲೇ ಹೆಚ್ಚು

ಕಲಬುರಗಿ: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ರಾಜ್ಯದ ಒಟ್ಟು 27 ಶಾಲೆಗಳು ಸೊನ್ನೆ ಸುತ್ತಿವೆ. 'ಶೂನ್ಯ' ಫಲಿತಾಂಶ ಪಡೆದ ಶಾಲೆಗಳಲ್ಲಿ 'ಕಲ್ಯಾಣ ಕರ್ನಾಟಕ' ಭಾಗದ ಶಾಲೆಗಳ ಪ್ರಮಾಣ ಶೇ 50ಕ್ಕೂ ಹೆಚ್ಚಿದೆ.

ಮೈಸೂರು, ಬೆಂಗಳೂರು ಹಾಗೂ ಬೆಳಗಾವಿ ಸೇರಿದಂತೆ ಮೂರು ಕಂದಾಯ ವಿಭಾಗಗಳಲ್ಲಿ ಒಟ್ಟು 13 ಶಾಲೆಗಳು 'ಶೂನ್ಯ' ಫಲಿತಾಂಶ ಪಡೆದಿವೆ. ಕಲ್ಯಾಣ ಕರ್ನಾಟಕ ವಿಭಾಗದ 14 ಶಾಲೆಗಳ ಒಬ್ಬ ವಿದ್ಯಾರ್ಥಿಯೂ ಪಾಸಾಗಿಲ್ಲ. 14 ಶಾಲೆಗಳ ಪೈಕಿ 3 ಅನುದಾನಿತ ಶಾಲೆಗಳು ಹಾಗೂ 11 ಖಾಸಗಿ ಶಾಲೆಗಳಾಗಿವೆ. ಅದರಲ್ಲಿ ಒಂದೂ ಸರ್ಕಾರಿ ಶಾಲೆ ಇಲ್ಲ.

2024–25ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ–1ರಲ್ಲಿ ಕಲ್ಯಾಣ ಕರ್ನಾಟಕದ 58 ಶಾಲೆಗಳು ಸೊನ್ನೆ ಸುತ್ತಿದ್ದವು.

95.04%	93.97%	92.44%
ಖಾಸಗಿ	ಸರ್ಕಾರಿ	ಅನುದಾನಿತ

ಪಡೆದ ಅಂಕಗಳು	625	624	623	622	621	620
ವಿದ್ಯಾರ್ಥಿಗಳ ಸಂಖ್ಯೆ	07	21	28	74	98	150

ಪಠ್ಯೇತರ ಚಟುವಟಿಕೆಯಲ್ಲೂ ಮುಂದು

ಪ್ರಜಾವಾಣಿ ವಾರ್ತೆ

ಕುಂದಾಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯದ ಟಾಪರ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಪ್ರೀತಂ ಜಿ. ಪೂಜಾರಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಸದಾ ಮುಂಚೂಣಿ ಸಾಧಕ.

ಪ್ರೀತಂ ಅವರ ತಂದೆ ಗಣಪತಿ ಪೂಜಾರಿ ಅವರು ಖಾಸಗಿ ಬಸ್‌ನ ನಿರ್ವಾಹಕರಾಗಿದ್ದಾರೆ. ತಾಯಿ ನಾಗರತ್ನ ಗೃಹಿಣಿ. ಬಿದ್ಕಲ್‌ಕಟ್ಟೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ.

ಎಲ್‌ಕೆಜಿಯಿಂದಲೇ ಮದರ್ ಥೆರೆಸಾ ಸಂಸ್ಥೆಯಲ್ಲಿ ಶಿಕ್ಷಣ ಪಡೆದಿರುವ ಪ್ರೀತಂ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯ ಕ್ವಿಜ್‌ನಲ್ಲಿ ದ್ವಿತೀಯ ಸ್ಥಾನ ಪಡೆದು ಗಮನ ಸೆಳೆದಿದ್ದ.

'ನಾನು ಟಾಪರ್ ಆಗಬೇಕೆಂಬುದು ನನ್ನ ತಂದೆಯ ಕನಸಾಗಿತ್ತು. ಅದನ್ನು ಪೂರೈಸಿದ್ದೇನೆ. ಪ್ರಾಂಶುಪಾಲೆ ಶಮಿತಾ ರಾವ್, ಶಿಕ್ಷಕಿ ವೈಶಾಲಿ ಅವರ ಮಾರ್ಗದರ್ಶನ ಪ್ರೇರಣೆ ನೀಡಿತು' ಎನ್ನುವುದು ಪ್ರೀತಂ ಹೇಳಿಕೆ.

ಪ್ರೀತಂನ ಪರಿಶ್ರಮವನ್ನು ಶಾಲೆಯ ಆಡಳಿತ ಮಂಡಳಿ ಶ್ಲಾಘಿಸಿದೆ.


ಅಲ್ಪಸಂಖ್ಯಾತರ ವಸತಿ ಶಾಲೆ: ಶೇ 98ರಷ್ಟು ಫಲಿತಾಂಶ

ಬೆಂಗಳೂರು: ಅಲ್ಪಸಂಖ್ಯಾತರ ನಿರ್ದೇಶನಾಲಯದ ವಸತಿ ಶಾಲೆಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 98.06ರಷ್ಟು ಫಲಿತಾಂಶ ಸಾಧಿಸಿವೆ.

'84 ವಸತಿ ಶಾಲೆಗಳ 3,462 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 3,395 ಮಕ್ಕಳು ಉತ್ತೀರ್ಣರಾಗಿದ್ದಾರೆ. ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ಈ ಶಾಲೆಗಳು ಒಟ್ಟಾರೆ ಶೇ 81ರಷ್ಟು ಫಲಿತಾಂಶ ಪಡೆದಿದ್ದವು. ಈ ಬಾರಿ ಉತ್ತೀರ್ಣರಾದವರ ಪ್ರಮಾಣ ಶೇ 98.06ಕ್ಕೆ ಏರಿಕೆಯಾಗಿದೆ' ಎಂದು ನಿರ್ದೇಶನಾಲಯದ ನಿರ್ದೇಶಕ ಜಿಲಾನಿ ಮೊಕಾಶಿ ತಿಳಿಸಿದ್ದಾರೆ.

'198 ಮೌಲಾನಾ ಆಜಾದ್ ಶಾಲೆಗಳ 6,147 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಈ ಪೈಕಿ 5,541 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಈ ಶಾಲೆಗಳ ವಿದ್ಯಾರ್ಥಿಗಳ ಉತ್ತೀರ್ಣ ಪ್ರಮಾಣ ಶೇ 51ರಷ್ಟು ಇತ್ತು. ಈ ಬಾರಿ ಅದು ಶೇ 90.14ಕ್ಕೆ ಏರಿಕೆಯಾಗಿದೆ' ಎಂದಿದ್ದಾರೆ. ಉತ್ತೀರ್ಣರಾದ ಎಲ್ಲ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅಭಿನಂದನೆ ಸಲ್ಲಿಸಿದ್ದಾರೆ.

ವಿಷಯವಾರು ಫಲಿತಾಂಶ



ಪರೀಕ್ಷೆಗೆ ಹಾಜರಾದರೂ ಗೈರು

ಪ್ರಜಾವಾಣಿ ವಾರ್ತೆ

ಶಿರಸಿ: ಇಲ್ಲಿನ ಯೂನಿಯನ್ ಪ್ರೌಢಶಾಲೆಯ ಅಂಧ ವಿದ್ಯಾರ್ಥಿನಿ ಲೀಜಾ ಖಾನಮ್ ಅವರು ಎಸ್‌ಎಸ್‌ಎಲ್‌ಸಿ ಎಲ್ಲಾ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಿದ್ದರೂ, ಸಮಾಜ ವಿಜ್ಞಾನ ವಿಷಯದ ಪರೀಕ್ಷೆಗೆ ಗೈರಾಗಿದ್ದಾರೆ ಎಂದು ಪ್ರೌಢಶಿಕ್ಷಣ ಇಲಾಖೆ ತಪ್ಪು ಮಾಹಿತಿ ಪ್ರಕಟಿಸಿದೆ.

'ಲೀಜಾ ಅವರು ಉರ್ದು ಪ್ರಥಮ ಭಾಷೆಗೆ (124 ಅಂಕ), ಕನ್ನಡ (100), ಇಂಗ್ಲಿಷ್ (92), ಅರ್ಥಶಾಸ್ತ್ರ (98) ಮತ್ತು ರಾಜ್ಯಶಾಸ್ತ್ರ (92) ಅಂಕ ಪಡೆದಿದ್ದಾರೆ. ಆದರೆ, ಸಮಾಜ ವಿಜ್ಞಾನದ ಪರೀಕ್ಷೆಗೆ ಹಾಜರಾದರೂ ಮಂಡಳಿಯ ಅಂಕಪಟ್ಟಿಯಲ್ಲಿ ಆಕೆ ಗೈರಾಗಿದ್ದಾರೆ ಎಂಬ ತಪ್ಪು ಮಾಹಿತಿ ಬಂದಿದೆ. ಇದರಿಂದ ಅನ್ಯಾಯವಾಗಿದ್ದು, ಸರಿಪಡಿಸುವಂತೆ' ಪೋಷಕರು ಒತ್ತಾಯಿಸಿದ್ದಾರೆ.

'ಎಲ್ಲಾ ಪರೀಕ್ಷೆಗಳಿಗೆ ಲೀಜಾ ಹಾಜರಾದ ಕುರಿತ ದಾಖಲೆಪತ್ರಗಳನ್ನು ಶಾಲಾ ಶಿಕ್ಷಣ ಇಲಾಖೆಗೆ ನೀಡಲಾಗಿದೆ. ಅವುಗಳನ್ನು ಪರೀಕ್ಷಾ ಮಂಡಳಿಗೆ ಸಲ್ಲಿಸಿ, ದೋಷ ಸರಿಪಡಿಸಲಾಗುವುದು' ಎಂದು ಶಿರಸಿ ಬಿಇಒ ನಾಗರಾಜ ನಾಯ್ಕ ತಿಳಿಸಿದ್ದಾರೆ.



ಆಶಾಬಾನು ಅವರ ತಾಯಿ ಪರಿನಾಬಾನು ಸಿಹಿ ತಿನ್ನಿಸಿ ಸಂಭ್ರಮಿಸಿದರು

ಬಡತನದಲ್ಲಿ ಅರಳಿದ ಪ್ರತಿಭೆ ಆಶಾಬಾನು

ಹೂವಿನಹಡಗಲಿ: ತಾಲ್ಲೂಕಿನ ನಂದಿಹಳ್ಳಿ ಸರ್ಕಾರಿ ಪ್ರೌಢಶಾಲೆಯ ಬಡ ವಿದ್ಯಾರ್ಥಿನಿ ಡಿ. ಆಶಾಭಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 618 (ಶೇ 98.88) ಅಂಕಗಳಿಸಿ ಉತ್ತಮ ಸಾಧನೆ ತೋರಿದ್ದಾರೆ.

ತಗಡು ಹೊಂದಿಸಿದ ಜೋಪಡಿಯಲ್ಲಿ ಬದುಕು ಕಟ್ಟಿಕೊಂಡಿರುವ ಈ ಬಡ ಕುಟುಂಬ, ಜೀವನ ನಿರ್ವಹಣೆಗೆ ಕೂಲಿ ಕೆಲಸ ಅವಲಂಬಿಸಿದೆ. ನಂದಿಹಳ್ಳಿಯ ಡಿ. ಪರಿನಾಬಾನು ಮಾಬುಸಾಬ್ ದಂಪತಿಯ ಪುತ್ರಿ ಆಶಾಬಾನು ಸಾಧನೆ ಮಾಡಿದ್ದಾರೆ.

ಹಿಂದಿ ಹಾಗೂ ಸಮಾಜ ವಿಜ್ಞಾನ ವಿಷಯದಲ್ಲಿ 100 ಅಂಕ, ಕನ್ನಡದಲ್ಲಿ 123, ಇಂಗ್ಲಿಷ್, ಗಣಿತದಲ್ಲಿ 99, ವಿಜ್ಞಾನದಲ್ಲಿ 97 ಅಂಕ ಪಡೆದಿದ್ದಾರೆ. 'ಶಿಕ್ಷಕರ ಮಾರ್ಗದರ್ಶನ, ತಾಯಿಯ ಪ್ರೋತ್ಸಾಹದಿಂದ ಉತ್ತಮ ಫಲಿತಾಂಶ ಸಾಧ್ಯವಾಯಿತು' ಎಂದು ಆಶಾಬಾನು ಹೇಳಿದರು.

ಹೊಳಗುಂದಿಯ ಗ್ಲೋಬಲ್ ಪಿಯು ಕಾಲೇಜು ಆಡಳಿತ ಮಂಡಳಿಯವರು ಆಶಾಭಾನು ಮನೆಗೆ ತೆರಳಿ, ಸನ್ಮಾನಿಸಿದ್ದಾರೆ. 'ವಿದ್ಯಾರ್ಥಿನಿಗೆ ಹಾಸ್ಟೆಲ್ ಸಹಿತ ಪಿಯುಸಿ ವಿಜ್ಞಾನ ವಿಭಾಗಕ್ಕೆ ಉಚಿತ ಪ್ರವೇಶ ಕಲ್ಪಿಸುತ್ತೇವೆ' ಎಂದು ಕಾಲೇಜು ಪ್ರಾಚಾರ್ಯ ಮಹೇಶ ಕುಮತಿಮಠ ಹೇಳಿದರು.

ಕೂಲಿ ಕಾರ್ಮಿಕನ ಮಗಳಿಗೆ 618 ಅಂಕ



ಬೃಂದಾ ಜೆ.

ಚಳ್ಳಕೆರೆ: ಗಾರೆ ಕೆಲಸ ಮಾಡುವ ಕಾರ್ಮಿಕನ ಪುತ್ರಿ, ತಾಲ್ಲೂಕಿನ ಸಾಣಿಕೆರೆಯ ವೇದ ಶಾಲೆಯ ವಿದ್ಯಾರ್ಥಿನಿ ಜೆ.ಬೃಂದಾ 618 ಅಂಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಅವರು ಹಿರಿಯೂರು ತಾಲ್ಲೂಕಿನ ಸಾಲುಹುಣಸೆ ಗ್ರಾಮದವರು.

ಅವರ ತಂದೆ ಎಚ್.ಜುಂಜೇಶ್ ಗಾರೆ ಕೆಲಸ ಮಾಡುತ್ತಿದ್ದು, ತಾಯಿ ಮಂಜುಳಾ ಮನೆ ನಿರ್ವಹಿಸಿಕೊಂಡು ಮಗಳನ್ನು ಓದಿಸುತ್ತಿದ್ದಾರೆ. ಬೃಂದಾ 10ನೇ ತರಗತಿಯನ್ನು ವಸತಿ ಶಾಲೆಯಲ್ಲಿ ಇದ್ದುಕೊಂಡು ಈ ಸಾಧನೆ ಮಾಡಿದ್ದಾರೆ.

'ಪಿಯುಸಿಯಲ್ಲಿ ವಿಜ್ಞಾನ ವಿಷಯ ಓದುವ ಮಗಳ ಆಸೆಗೆ ನೀರೆರೆಯುತ್ತೇವೆ. ಮಗಳನ್ನು ವೈದ್ಯೆಯನ್ನಾಗಿ ಮಾಡಬೇಕು ಎಂಬ ಆಸೆ ಇದೆ. ಪುತ್ರ ಚರಣ್ ಎಂಬಿಬಿಎಸ್ ಓದಬೇಕು ಎಂಬ ಆಸೆ ಹೊಂದಿದ್ದ. ಆದರೆ ಅದು ಈಡೇರದೆ ಆಯುರ್ವೇದ (ಬಿಎಎಂಎಸ್) ಓದುತ್ತಿದ್ದಾನೆ. ಮಗಳ ಮೂಲಕ ಆ ಆಸೆಯನ್ನು ಈಡೇರಿಕೊಳ್ಳಬೇಕೆಂದಿದ್ದೇವೆ' ಎಂದು ಜುಂಜೇಶ್ 'ಪ್ರಜಾವಾಣಿ'ಯೊಂದಿಗೆ ಮಗಳ ಭವಿಷ್ಯ-ಸಾಧನೆಯ ಬಗ್ಗೆ ಹಂಚಿಕೊಂಡರು.

'ಶಾಲೆಯಲ್ಲಿ ಕಲಿಕೆಯ ಜೊತೆಗೆ ಹೆಚ್ಚುವರಿಯಾಗಿ ದಿನಕ್ಕೆ 3 ಗಂಟೆ ಓದುತ್ತಿದ್ದೆ. ಅಪ್ಪ– ಅಮ್ಮನ ಆಸೆ ಈಡೇರಿಸುವ ಕನಸಿದೆ' ಎಂದು ಬೃಂದಾ ಹೇಳಿದರು.



ಬೃಂದಾ ಅವರನ್ನು ಶಿಕ್ಷಣ ಇಲಾಖೆ ಉಪನಿರ್ದೇಶಕ ತಿಮ್ಮರಾಜು ಅಭಿನಂದಿಸಿದರು. ತಾಯಿ ಹರ್ಷಿಣಿ ಡಿ., ಬಿಇಒ ರುದ್ರಪ್ಪ, ಶಿಕ್ಷಣಾಧಿಕಾರಿ ನಾಗರಾಜ್, ಬೃಂದಾ ತಂದೆ ಮಂಜುನಾಥ್ ಉಪಸ್ಥಿತರಿದ್ದರು

'ಕಷ್ಟಪಡುತ್ತಿರುವ ಪಾಲಕರಿಗೆ ಗೌರವ ತಂದುಕೊಟ್ಟೆ'

ಚಿಕ್ಕಮಗಳೂರು: 'ತಂದೆ–ತಾಯಿ ಟೈಲರ್ ವೃತ್ತಿ ಮಾಡಿಕೊಂಡು ಕಷ್ಟಪಟ್ಟು ಓದಿಸಿದ್ದಾರೆ. ಅವರಿಗೆ ಗೌರವ ತಂದುಕೊಡಬೇಕು ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದೆ. ಈಗ ಸಾಧ್ಯವಾಗಿದೆ'.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 625 ಅಂಕ ಪಡೆದಿರುವ ನಗರದ ಸೇಂಟ್ ಮೇರಿಸ್ ಶಾಲೆಯ ವಿದ್ಯಾರ್ಥಿನಿ ಬೃಂದಾ ಎಂ. ತಾಪ್ಸೆಯ ಮನದಾಳ ಇದು. ಬೃಂದಾ, ಕೋಟೆ ಬಡಾವಣೆಯ ಮಂಜುನಾಥ್ ತಾಪ್ಸೆ ಮತ್ತು ಹರ್ಷಿಣಿ ಡಿ. ಅವರ ಪುತ್ರಿ.

ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿ ಬೆಳೆದಿರುವ ಈಕೆ, ಟೈಲರಿಂಗ್ ವೃತ್ತಿಯಲ್ಲಿ ತಂದೆ– ತಾಯಿ ಇಬ್ಬರೂ ಹಗಲಿರುಳು ಶ್ರಮಪಡುವುದನ್ನು ಕಣ್ಣಾರೆ ಕಂಡಿದ್ದಳು.

'ಮೊದಲಿನಿಂದಲೂ ಓದಿನಲ್ಲಿ ಮುಂದಿರುವ ಬೃಂದಾ, ಶೇ 98ರಷ್ಟು ಅಥವಾ ಶೇ 98.5ರಷ್ಟು ಅಂಕ ಪಡೆಯಬಹುದು ಎಂದು ನಿರೀಕ್ಷೆ ಮಾಡಿದ್ದೆವು. 625 ಅಂಕ ಪಡೆದಿರುವುದು ಖುಷಿ ತಂದಿದೆ' ಎಂದು ಮಂಜುನಾಥ್ ಸಂತಸ ವ್ಯಕ್ತಪಡಿಸಿದರು.

'ಸೇಂಟ್ ಮೇರಿಸ್ ಶಾಲೆಯ ಆಡಳಿತ ಮಂಡಳಿ ಮತ್ತು ಶಿಕ್ಷಕರ ಸಹಕಾರ ಚೆನ್ನಾಗಿತ್ತು. ತರಗತಿ ಮುಗಿದ ನಂತರ ಶಾಲೆಯಲ್ಲೇ ವಿಶೇಷ ಕೋಚಿಂಗ್ ಇರುತ್ತಿತ್ತು. ಶಾಲೆಯಿಂದ ಬಂದ ಕೂಡಲೇ ಸ್ವಲ್ಪ ಬಿಡುವು ನೀಡಿ ಊಟ ಮಾಡಿ ಮತ್ತೆ ಓದಲು ಕುಳಿತರೆ ರಾತ್ರಿ 12 ಗಂಟೆ ತನಕ ಓದುತ್ತಿದ್ದಳು. ಪರೀಕ್ಷೆ ಸಮಯದಲ್ಲಿ ಮತ್ತೆ ನಸುಕಿನಲ್ಲಿ 4 ಗಂಟೆಗೆ ಎದ್ದು ಓದಿದ ಉದಾಹರಣೆಗಳು ಇವೆ' ಎಂದು ತಾಯಿ ಹರ್ಷಿಣಿ ಡಿ. ಅವರು ವಿವರಿಸಿದರು.

ಶಾಲೆಯ ಆಡಳಿತ ಮಂಡಳಿಯವರು ಸಿಹಿ ಹಂಚಿ ಸಂಭ್ರಮಿಸಿದರು.

ತಂದೆ ನಿಧನದ ದಿನವೇ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿನಿಗೆ 589 ಅಂಕ



ಫಾತಿಮಾ

ಉಳ್ಳಾಲ: ತಂದೆ ನಿಧನದ ದಿನವೇ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ಕೊಣಾಜೆ ಪದವು ಪ್ರೌಢಶಾಲೆಯ ವಿದ್ಯಾರ್ಥಿನಿ ಫಾತಿಮಾ ಶಿಝಾ (589) ಶಾಲೆಗೆ ಅಗ್ರ ಸ್ಥಾನ ಪಡೆದಿದ್ದಾಳೆ. ಕೊಣಾಜೆ ಗ್ರಾಮದ ಕೋಡಿಜಾಲ್ ಕರ್ಮಾರ್ ನಿವಾಸಿ ಸೂಫಿ ಕುಞಿ ಕೋಡಿಜಾಲ್ ಮಾರ್ಚ್ 31ರಂದು ನಿಧನರಾಗಿದ್ದರು. ತಂದೆ ಅನಾರೋಗ್ಯದಲ್ಲಿ ಇದ್ದಾರೆ ಎಂದು ತಿಳಿಸಿ ಮನೆಯವರು ಆಕೆಯನ್ನು ಸಂತೈಸಿ ಪರೀಕ್ಷೆಗೆ ಕಳುಹಿಸಿದ್ದರು.

ಅಡುಗೆ ಸಹಾಯಕನ ಮಗಳು ವರ್ಷಿತಾ ಸಾಧನೆ



ವರ್ಷಿತಾ

ಭಟ್ಕಳ: ಹೋಟೆಲ್‌ನಲ್ಲಿ ಅಡುಗೆ ಸಹಾಯಕರಾಗಿ ಕೆಲಸ ಮಾಡುವ ಕಾರ್ಮಿಕನ ಮಗಳು ವರ್ಷಿತಾ ಶಿವಕುಮಾರ ನಾಯ್ಕ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 99.20 (620 ಅಂಕ) ಗಳಿಸಿ ಭಟ್ಕಳ ತಾಲ್ಲೂಕಿಗೆ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅವರು ತೆರ್ನಮಕ್ಕಿ ಕೆಪಿಎಸ್‌ಸಿ ಶಾಲೆಯ ವಿದ್ಯಾರ್ಥಿನಿ.

ತಾಲ್ಲೂಕಿನ ಮುರುಡೇಶ್ವರ ನಿವಾಸಿ ಶಿವಕುಮಾರ ನಾಯ್ಕ ಅವರು ಇಲ್ಲಿನ ಬೆಂಜಿ ಹೋಟೆಲ್‌ನಲ್ಲಿ ಅಡುಗೆ ಸಹಾಯಕರು. 'ಮಗಳ ಮುಂದಿನ ಶಿಕ್ಷಣಕ್ಕೆ ನೆರವಾಗುವೆ' ಎಂದು ಶಿವಕುಮಾರ ನಾಯ್ಕ ತಿಳಿಸಿದರು.

ಸ್ಟ್ರೆಚರ್‌ನಲ್ಲಿ ಮಲಗಿ ಪರೀಕ್ಷೆ ಬರೆದಿದ್ದ ಬಾಲಕಿ ತೇರ್ಗಡೆ

ಕೆಜಿಎಫ್: ರಸ್ತೆ ಅಪಘಾತದಲ್ಲಿ ಗಾಯಗೊಂಡು ಸ್ಟ್ರೆಚರ್ ಮೇಲೆ ಮಲಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ ಚೆನ್ನಾಗನ-ಹಳ್ಳಿಯ ಕುಸುಮಾ ಶೇ.59 ರಷ್ಟು ಫಲಿತಾಂಶ ಪಡೆದಿದ್ದಾಳೆ.

ಆಗಸ್ಟ್‌ನಲ್ಲಿ ಆಂಡರಸನ್‌ಪೇಟೆಯಲ್ಲಿ ಬೈಕ್‌ನಲ್ಲಿ ಬರುತ್ತಿದ್ದಾಗ ಟ್ರಾಕ್ಟರ್ ಡಿಕ್ಕಿ ಹೊಡೆದು ಕುಸುಮಾ ಕಾಲಿನ ಮೂಳೆ ಮುರಿದಿತ್ತು. ಎರಡು ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಇನ್ನೂ ಒಂದು ಶಸ್ತ್ರಚಿಕಿತ್ಸೆ ಬಾಕಿ ಇತ್ತು. ಮನೆಯಲ್ಲಿ ಮಲಗಿದಲ್ಲಿಯೇ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಳು. ಸೇಂಟ್ ಮೇರೀಸ್ ಶಾಲೆಯ ಶಿಕ್ಷಕರು ಮನೆಗೆ ಹೋಗಿ ಪಾಠ ಹೇಳಿ ಕೊಡುತ್ತಿದ್ದರು.



ಬೆಂಗಳೂರಿನ ಇಂದಿರಾಗಾಂಧಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಕುಸುಮಾ

ಪರಮೇಶ್ವರ ವಿರುದ್ಧದ ಪ್ರಕರಣಕ್ಕೆ ತಡೆ

ಕಬಡ್ಡಿ ಪಂದ್ಯದಲ್ಲಿ ಅನಧಿಕೃತ ಬೆಟ್ಟಿಂಗ್ ಕಟ್ಟಿ, ಅಪರಾಧ ಕೃತ್ಯ ಎಸಗಿದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬಡ್ಡಿ ಪಂದ್ಯದಲ್ಲಿ ಅನಧಿಕೃತ ಬೆಟ್ಟಿಂಗ್ ಕಟ್ಟಿ, ಸಣ್ಣ ಸಂಘಟಿತ ಅಪರಾಧ ಕೃತ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಗೃಹಸಚಿವ ಜಿ.ಪರಮೇಶ್ವರ ವಿರುದ್ಧ ಕ್ರಿಮಿನಲ್ ಅಪರಾಧ ಪ್ರಕರಣ ದಾಖಲಿಸಲು ಆದೇಶಿಸಿರುವ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸುವಂತೆ ಕೋರಿ ಪರಮೇಶ್ವರ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.


ಜಿ.ಪರಮೇಶ್ವರ

ಪ್ರಕರಣ: 'ತುಮಕೂರಿನಲ್ಲಿ 2025ರ ಅಕ್ಟೋಬರ್ 19ರಂದು ನಡೆದಿದ್ದ ಕಬಡ್ಡಿ ಪಂದ್ಯದಲ್ಲಿ ಪರಮೇಶ್ವರ ಅವರು ಅತಿಥಿಯಾಗಿ ಪಾಲ್ಗೊಂಡು ₹500 ಬೆಟ್ಟಿಂಗ್ ಕಟ್ಟುವ ಮೂಲಕ ಅಪರಾಧ ಕೃತ್ಯಗಳನ್ನು ಎಸಗಲು ಸಾರ್ವಜನಿಕವಾಗಿ ಪ್ರಚೋದನೆ ನೀಡಿದ್ದಾರೆ' ಎಂದು ಆರೋಪಿಸಿ ಮಧುಗಿರಿ ತಾಲ್ಲೂಕಿನ ಹಂದ್ರಾಳು ಗ್ರಾಮದ ಎಚ್.ಆರ್. ನಾಗಭೂಷಣ್ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ದೂರಿನ ವಿಚಾರಣೆ ನಡೆಸಿದ್ದ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಪರಮೇಶ್ವರ ಮತ್ತು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ವಿರುದ್ಧ ಅಪರಾಧ ಪ್ರಕರಣ ದಾಖಲಿಸುವಂತೆ ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿ ಪೊಲೀಸ್ ಠಾಣಾಧಿಕಾರಿಗೆ ಆದೇಶಿಸಿದ್ದರು.

'ಶಿಸ್ತು ಕ್ರಮಕ್ಕೆ ರೀತಿ-ನೀತಿ ಇದೆಯಲ್ಲವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷಕ್ಕಿಂತ ಯಾರೂ ದೊಡ್ಡವರಿಲ್ಲ. ಜಮೀರ್ ಕೂಡ ಪಕ್ಷಕ್ಕಿಂತ ದೊಡ್ಡವನಲ್ಲ. ಪಕ್ಷ ವಿರೋಧಿ ಕೆಲಸ ನಾನು ಮಾಡಿದರೂ ಶಿಸ್ತು ಕ್ರಮ ಆಗಬೇಕು. ಆದರೆ, ಅದಕ್ಕೊಂದು ರೀತಿ, ನೀತಿ ಇದೆಯಲ್ಲವೇ' ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಪ್ರಶ್ನಿಸಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರನ್ನು ಗುರುವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಜಮೀರ್, 'ಪಕ್ಷ ವಿರೋಧಿ ಚಟುವಟಿಕೆ ನಡೆಸಿದರೆ ಮೊದಲು ನೋಟಿಸ್ ನೀಡಬೇಕು. ಆಮೇಲೆ ಕ್ರಮ ಕೈಗೊಳ್ಳಬೇಕು' ಎಂದರು. ಆ ಮೂಲಕ, ನಸೀರ್ ಅಹಮದ್ ಮತ್ತು ಅಬ್ದುಲ್ ಜಬ್ಬಾರ್ ವಿರುದ್ಧದ ಕ್ರಮಕ್ಕೆ ಜಮೀರ್ ಅಸಮಾಧಾನ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಪಕ್ಷದಲ್ಲಿ ನನ್ನನ್ನು ಯಾರೂ ಗುರಿ ಮಾಡಿಲ್ಲ. ಹಾಗೆಂದು ನಾನೊಬ್ಬ ಮಾತ್ರ ಮುಸ್ಲಿಂ ನಾಯಕನೇ? ನಾನು ನಾಯಕನೇ ಅಲ್ಲ. ಪಕ್ಷದಲ್ಲಿ ಆರೋಪ ಮಾಡಿದವರು ಯಾರೂ ನನ್ನ ಹೆಸರು ಹೇಳಿಲ್ಲ. ಧರ್ಮ ಗುರುಗಳು ಹೇಳಿದ್ದನ್ನು ನೀವು ಅವರ ಬಳಿಯೇ ಕೇಳಬೇಕು. ಯಾರೂ ನನ್ನ ಹೆಸರನ್ನು ಹೇಳಲಿಲ್ಲ' ಎಂದರು.



ಜಮೀರ್

'ಧರ್ಮಗುರುಗಳ ಜೊತೆ ಶುಕ್ರವಾರ ನಮಾಜ್ ಬಳಿಕ ಮಾತನಾಡಿ, ಗೊಂದಲಗಳನ್ನು ಬಗೆಹರಿಸುತ್ತೇನೆ. ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಸಲೀಂ ಅಹಮದ್ ಕೂಡ ಕರೆ ಮಾಡಿ ಮಾತಾಡಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಟಿಕೆಟ್ ಕೊಟ್ಟಿಲ್ಲ ಎಂದು ಸಮುದಾಯಕ್ಕೆ ಬೇಸರ ಆಗಿರುವುದು ನಿಜ. ಧರ್ಮಗುರುಗಳಿಗೂ ಅಸಮಾಧಾನ ಆಗಿದೆ' ಎಂದರು.

'ಸಾರ್ವತ್ರಿಕ ಚುನಾವಣೆಯಲ್ಲಿ ಟಿಕೆಟ್ ಕೊಡೋಣವೆಂದು ಹೈಕಮಾಂಡ್ ಹೇಳಿದೆ' ಎಂದೂ ಹೇಳಿದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಜನ ಯಾವಾಗಲೂ ಒಬ್ಬನನ್ನು ಮೇಲೇರಿಸಿ ನಾಯಕಪಟ್ಟವನ್ನು ಕಟ್ಟುತ್ತಾರೆ. ದಬ್ಬಾಳಿಕೆಗಾರರು ಹುಟ್ಟುವ ಮೂಲ ಇದೇ.

–ಪ್ಲೇಟೊ

ಸಂಪಾದಕೀಯ

ಎಸ್‌ಎಸ್‌ಎಲ್‌ಸಿ ದಾಖಲೆ ಫಲಿತಾಂಶ ಗೊಂದಲಗಳ ಮೀರಿ ಉತ್ತಮ ಸಾಧನೆ

ದ್ವಿತೀಯ ಪಿಯು ಪರೀಕ್ಷೆಯಲ್ಲಿನ ದಾಖಲೆ ಫಲಿತಾಂಶದ ಯಶಸ್ಸಿನ ಲಹರಿಯನ್ನು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳೂ ಮುಂದುವರಿಸಿದ್ದಾರೆ. ಇದು, ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯು ಮಗ್ಗುಲು ಬದಲಿಸಿರುವುದರ ಸೂಚನೆಯಂತಿದೆ. ಮೊದಲ ಬಾರಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ 7.70 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ 7.24 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ, ಶೇ 94.1ರಷ್ಟು ಫಲಿತಾಂಶ ಬಂದಿದೆ. ಕಳೆದ ವರ್ಷದ ಶೇ 80ರಷ್ಟು ಫಲಿತಾಂಶಕ್ಕೆ ಹೋಲಿಸಿದರೆ, ಈ ಬಾರಿ ಶೇ 14ರಷ್ಟು ಹೆಚ್ಚು ಫಲಿತಾಂಶ ದಾಖಲಾಗಿದೆ. ಪುನರಾವರ್ತಿತ ವಿದ್ಯಾರ್ಥಿಗಳೂ ಸೇರಿದಂತೆ 8.56 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ 88.73ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ದಾಖಲೆ ಫಲಿತಾಂಶವು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕೈಗೊಂಡಿದ್ದ ಕ್ರಮಗಳು ಯಶಸ್ವಿಯಾಗಿರುವುದನ್ನು ಸೂಚಿಸುವಂತಿದೆ. ಶೈಕ್ಷಣಿಕ ವರ್ಷದ ಆರಂಭದಿಂದಲೇ ಅತಿಥಿ ಶಿಕ್ಷಕರು ಲಭ್ಯವಿರುವಂತೆ ನೋಡಿಕೊಂಡಿದ್ದರಿಂದ ಬೋಧನೆ ಸಕಾಲದಲ್ಲಿ ಪೂರ್ಣಗೊಳ್ಳಲು ಕಾರಣವಾಗಿದೆ. ಫಲಿತಾಂಶ ಸುಧಾರಣೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮಂಡಳಿ ಹೊರಡಿಸಿದ 29 ಅಂಶಗಳ ಸಮಗ್ರ ಸುತ್ತೋಲೆಯೂ ಫಲ ಕೊಟ್ಟಂತಿದೆ. ನಿರಂತರ ಕಲಿಕೆಯೊಂದಿಗೆ ಪಾಠವಾರು ಮೌಲ್ಯಮಾಪನ ಕ್ರಮವು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಕಾರಣವಾಗಿದೆ.



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ದಾಖಲೆ ಪ್ರಮಾಣದಲ್ಲಿ ಉತ್ತೀರ್ಣರಾಗಿರುವುದು, ಶಿಕ್ಷಣ ಇಲಾಖೆ ಕೈಗೊಂಡ ಸುಧಾರಣಾ ಕ್ರಮಗಳು ಫಲಪ್ರದ ಆಗಿರುವುದರ ಸಂಕೇತವಾಗಿದೆ.

ಫಲಿತಾಂಶದಲ್ಲಿ ಬಾಲಕರಿಗಿಂತಲೂ (ಶೇ 91.94) ಬಾಲಕಿಯರು (ಶೇ 96.18) ಮುಂದಿರುವುದು ಹಾಗೂ ನಗರ ಪ್ರದೇಶದ ಸಹವರ್ತಿಗಳನ್ನು (ಶೇ 93.2) ಗ್ರಾಮೀಣ ವಿದ್ಯಾರ್ಥಿಗಳು (ಶೇ 94.8)ಹಿಂದಿಕ್ಕಿರುವುದು ಹಿಂದಿನ ವರ್ಷಗಳ ಫಲಿತಾಂಶಗಳನ್ನು ನೆನಪಿಸುವಂತಿದೆಯಾದರೂ, ಅಂತರದ ಪ್ರಮಾಣ ಕಡಿಮೆ ಆಗಿರುವುದು ಗಮನಾರ್ಹ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸ್ಪರ್ಧಾತ್ಮಕ ಶಿಕ್ಷಣದ ಸ್ವರೂಪದಲ್ಲಿ ಹೆಚ್ಚಿನ ವ್ಯತ್ಯಾಸ ಇಲ್ಲದಿರುವುದನ್ನು ಈ ಅಂಕಿ ಅಂಶಗಳು ಸೂಚಿಸುವಂತಿವೆ. 625ಕ್ಕೆ ಅಷ್ಟೂ ಅಂಕಗಳನ್ನು ಪಡೆದಿರುವ ಏಳು ವಿದ್ಯಾರ್ಥಿಗಳಲ್ಲಿ ಚಿಕ್ಕೋಡಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯೂ ಇರುವುದು ವಿಶೇಷ. ಶೇ 92.44ರಷ್ಟು ಫಲಿತಾಂಶ ಪಡೆದಿರುವ ಅನುದಾನಿತ ಶಾಲೆಗಳು ಹಾಗೂ ಶೇ 95.4 ಫಲಿತಾಂಶ ದಾಖಲಿಸಿರುವ ಅನುದಾನರಹಿತ ಶಾಲೆಗಳಿಗೆ ಹೋಲಿಸಿದಲ್ಲಿ, ಶೇ 93.97ರಷ್ಟು ಫಲಿತಾಂಶ ದಾಖಲಿಸಿರುವ ಸರ್ಕಾರಿ ಶಾಲೆಗಳ ಸಾಧನೆಯೂ ಗಮನಸೆಳೆಯುವಂತಿದೆ. ಕಳೆದ ವರ್ಷ 766 ಸರ್ಕಾರಿ ಶಾಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸಿದ್ದವು; ಈ ಬಾರಿ ಆ ಶ್ರೇಯ 2,393 ಸರ್ಕಾರಿ ಶಾಲೆಗಳಿಗೆ ಸಂದಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗಿಂತಲೂ (ಶೇ 92.6) ಇಂಗ್ಲಿಷ್ ಮಾಧ್ಯಮದವರು (ಶೇ 96.16) ಮುಂದಿದ್ದಾರೆ. ಜಿಲ್ಲಾವಾರು ಫಲಿತಾಂಶದಲ್ಲಿ ಗಮನಾರ್ಹ ಸ್ಥಾನಪಲ್ಲಟ ಇಲ್ಲದಿದ್ದರೂ, ಕೊನೆಯ ಸ್ಥಾನದಲ್ಲಿರುವ ಕಲಬುರಗಿಯಲ್ಲಿ ಶೇ 85ರಷ್ಟು ಫಲಿತಾಂಶ ದಾಖಲಾಗಿರುವುದು ಗಮನಾರ್ಹ ಸಾಧನೆಯೇ ಆಗಿದೆ. ದಕ್ಷಿಣ ಕನ್ನಡ (98.4), ಉಡುಪಿ (98.18) ಜಿಲ್ಲೆಗಳು ಮುಂಚೂಣಿಯಲ್ಲಿದ್ದರೆ, ಚಿಕ್ಕಬಳ್ಳಾಪುರ (ಶೇ 90.88) ಹಾಗೂ ಮಧುಗಿರಿ (ಶೇ 90.24) ಪಟ್ಟಿಯಲ್ಲಿ ಕೆಳಗಿವೆ.

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಾಗೂ ಫಲಿತಾಂಶ, ತೃತೀಯ ಭಾಷೆಗೆ ಸಂಬಂಧಿಸಿದ ಗೊಂದಲದೊಂದಿಗೆ ತಳಕು ಹಾಕಿಕೊಂಡಿತ್ತು. ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ನಿರ್ಧಾರವನ್ನು ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಸರ್ಕಾರ ಪ್ರಕಟಿಸಿತು. ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ಹಗುರಗೊಳಿಸುವ ಸರ್ಕಾರದ ಕಾಳಜಿ ಸರಿಯಾದುದೇ ಆಗಿದ್ದರೂ, ಮಹತ್ವದ ತೀರ್ಮಾನವನ್ನು ಪರೀಕ್ಷೆಯ ಸಂದರ್ಭದಲ್ಲಿ ತೆಗೆದುಕೊಂಡದ್ದು ವಿದ್ಯಾರ್ಥಿಗಳನ್ನು ಅನಗತ್ಯ ಗೊಂದಲಕ್ಕೆ ದೂಡುವಂತಹದ್ದಾಗಿತ್ತು. ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಹಿಂದಿ ಸೇರಿದಂತೆ ತೃತೀಯ ಭಾಷೆಯ ವಿಷಯಗಳಿಗೆ ಈ ಬಾರಿ ಗ್ರೇಡ್ ಬದಲು ಅಂಕಗಳನ್ನೇ ನೀಡುವಂತೆ ಆದೇಶಿಸಿದ್ದು ಕೂಡ ಸರ್ಕಾರದ ತೀರ್ಮಾನ ಅಕಾಲಿಕ ಆಗಿರುವುದನ್ನು ಎತ್ತಿತೋರಿಸುವಂತಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕದ ಬದಲು ಗ್ರೇಡ್ ನೀಡಲಾಗುವುದು ಎಂದು ಸ್ಪಷ್ಟಪಡಿಸಬೇಕಿತ್ತು; ಅಧಿಸೂಚನೆಯಲ್ಲಿ ಇಲ್ಲದ ಗ್ರೇಡ್ ಪದ್ಧತಿಯನ್ನು ಈಗ ಅನುಷ್ಠಾನಕ್ಕೆ ತರುವುದು ಸರಿಯಲ್ಲ ಎಂದು ಹೈಕೋರ್ಟ್ ಹೇಳಿದ್ದು ಸರಿಯಾಗಿಯೇ ಇದೆ. ಅಂಕಗಳ ಬದಲು ಗ್ರೇಡ್ ನೀಡುವುದಾಗಿ ಹಾಗೂ ತೃತೀಯ ಭಾಷೆ ವಿಷಯಗಳ ಫಲಿತಾಂಶವನ್ನು ಸರಾಸರಿಗೆ ಪರಿಗಣಿಸುವುದಿಲ್ಲ ಎನ್ನುವ ಸರ್ಕಾರದ ನಿರ್ಧಾರದಿಂದ ಕೆಲವು ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವ ಸಾಧ್ಯತೆ ಇದೆ. ಗ್ರೇಡ್ ಕಾರಣದಿಂದಾಗಿ ತೃತೀಯ ಭಾಷೆ ವಿಷಯವನ್ನು ಗಂಭೀರವಾಗಿ ಪರಿಗಣಿಸದವರ ಸರಾಸರಿಯ ಮೇಲೆ ಅಂಕ ನೀಡುವ ಪದ್ಧತಿ ಮುಂದುವರಿದಿರುವುದು ಪರಿಣಾಮ ಬೀರಿರುವ ಸಾಧ್ಯತೆಯಿದೆ. ಈ ಬೆಳವಣಿಗೆಯಿಂದ ಸರ್ಕಾರ ಪಾಠ ಕಲಿತು, ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲೇ ತೃತೀಯ ಭಾಷೆಗೆ ಸಂಬಂಧಿಸಿದಂತೆ ಸ್ಪಷ್ಟನೀತಿ ಪ್ರಕಟಿಸಬೇಕು. ಶೈಕ್ಷಣಿಕ ನೀತಿಗಳು ವಿದ್ಯಾರ್ಥಿಗಳಿಗೆ ಸ್ಪಷ್ಟತೆ ನೀಡುವಂತೆ ಇರಬೇಕು, ಗೊಂದಲ ಮೂಡಿಸಬಾರದು.

ಕಾಲವೇ ಸೃಷ್ಟಿಸಿದ ಮಹಾಕಾವ್ಯ!



ವಿಶ್ಲೇಷಣೆ

ಜಿ.ವಿ. ಆನಂದಮೂರ್ತಿ

> ರಾಜಕುಮಾರ್ ಕನ್ನಡಜನತೆ ಸೃಷ್ಟಿಸಿರುವ ಮೌಖಿಕ ಮಹಾಕಾವ್ಯ. ನಾಯಕನೊಬ್ಬ ಹೇಗಿರಬೇಕು ಎನ್ನುವುದಕ್ಕೆ ಎಲ್ಲ ಕಾಲಕ್ಕೂ ಸಲ್ಲುವ ಮಾದರಿ. ಕನ್ನಡ ಚಿತ್ರರಂಗ ಹಾಗೂ ಸಮಾಜ ಮೌಲ್ಯಗಳಿಂದ ದೂರ ಆಗುತ್ತಿರುವ ಸಂದರ್ಭದಲ್ಲಿ, ಎರಡೂ ಕ್ಷೇತ್ರಗಳ ಆರೋಗ್ಯಕ್ಕೆ ರಾಜ್ ಸಿನಿಮಾ ಮತ್ತು ವ್ಯಕ್ತಿತ್ವದಲ್ಲಿ ಉತ್ತರವಿದೆ.

ನಾಯಕನೊಬ್ಬ ಹೇಗಿರಬೇಕು ಎನ್ನುವುದಕ್ಕೆ ಕರ್ನಾಟಕ ಸೃಷ್ಟಿಸಿದ ಅತ್ಯುತ್ತಮ ಮಾದರಿಗಳಲ್ಲೊಬ್ಬರು, ವರನಟ ರಾಜಕುಮಾರ್. ನಾಯಕತ್ವಕ್ಕೂ ನೈತಿಕತೆಗೂ ಸಂಬಂಧವೇ ಇಲ್ಲ ಎನ್ನುವಂತಹ ಮಾದರಿಗಳೇ ನಮ್ಮ ನಡುವೆ ತುಂಬಿ ತುಳುಕುತ್ತಿರುವಾಗ, ನಾಯಕತ್ವದ ನಿಜ ಮಾದರಿಯನ್ನು ಅರಿಯಲು ರಾಜ್ ಅವರ ವ್ಯಕ್ತಿತ್ವ ಹಾಗೂ ಸಾಧನೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಅಗತ್ಯ.

ಕರ್ನಾಟಕದಲ್ಲಿ 'ಅಣ್ಣಾವ್ರು' ಎಂದು ಕರೆಯುವುದು ರಾಜಕುಮಾರ್ ಅವರನ್ನು ಮಾತ್ರ. ಆ ಸ್ಥಾನವನ್ನು ತುಂಬಬಲ್ಲ ಮತ್ತೊಬ್ಬ 'ಅಣ್ಣಾವ್ರು' ಪ್ರಸ್ತುತ ನಾಡಿನಲ್ಲಿಲ್ಲ! ರಾಜಕುಮಾರ್ ಅವರು ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದಕ್ಕೆ ಸಿನಿಮಾಗಳಷ್ಟೇ ಮುಖ್ಯವಾಗಿ ಅವರ ನೈತಿಕ ನಡಾವಳಿಗಳೂ ಕಾರಣ. ಅವರು ಸದಾ ಧರಿಸುತ್ತಿದ್ದ ಬಿಳಿಯ ಉಡುಪು, ಎಲ್ಲವನ್ನೂ ತನ್ನೊಳಗೆ ತುಂಬಿಕೊಳ್ಳುವಂತಹ ನದಿಯಂತಹ ಕಣ್ಣೋಟ, ಮಗುವಿನ ಮುಗ್ಧತೆಯಂತಿದ್ದ ನಗು, ಯಾವುದಕ್ಕೂ ಆಸೆಪಡದ ಸ್ವಚ್ಛ ಮನಸ್ಸು ಅವರ ಸುತ್ತ ಒಂದು ಪ್ರಭಾವಳಿಯನ್ನು ನಿರ್ಮಿಸಿತ್ತು. ಅದರ ಜೊತೆಗೆ ತಮ್ಮ ಜೀವಿತದುದ್ದಕ್ಕೂ ಅಧಿಕಾರದ ವ್ಯಾಮೋಹಕ್ಕೆ ಸಿಲುಕದ, ಜಾತಿ ಸಂಘಟನೆಗಳಲ್ಲಿ ಎಂದೂ ಕಾಣಿಸಿಕೊಳ್ಳದ ಅವರ ಜಾತ್ಯತೀತ ಗುಣಗಳು ಜನರನ್ನು ಸೂಜಿಗಲ್ಲಿನಂತೆ ಸೆಳೆದಿದ್ದವು. ಆದ್ದರಿಂದಲೇ ಅವರು ಕರ್ನಾಟಕದಲ್ಲಿ ಯಾವುದೇ ರಾಜಕೀಯ ಮತ್ತು ಜಾತಿ ಧುರೀಣರಿಗಿಂತ ಮಿಗಿಲಾಗಿ ಎಲ್ಲ ಜಾತಿಗಳ, ಎಲ್ಲ ಧರ್ಮಗಳ ಹಾಗೂ ಎಲ್ಲ ಭಾಷಿಕರ ಅಭಿಮಾನ ಮತ್ತು ಪ್ರೀತಿಯನ್ನು ಗಳಿಸಿದ್ದರು. ಅಣ್ಣಾವ್ರ ಅಭಿಮಾನಿಗಳೆಂದರೆ, ಅವರು ವಿಸ್ತೃತ ರೂಪದಲ್ಲಿ ಕನ್ನಡದ ಅಭಿಮಾನಿಗಳೂ ಆಗಿದ್ದರು. ಹೀಗೆ ರಾಜಕುಮಾರ್ ಅವರು ತಮ್ಮ ಅಭಿಮಾನಿಗಳನ್ನು ರೂಪಿಸಿದ್ದರು. ಆದ್ದರಿಂದಲೇ ಇಂದು 'ಕನ್ನಡ ಎಂದರೆ ರಾಜಕುಮಾರ್, ರಾಜಕುಮಾರ್ ಎಂದರೆ ಕನ್ನಡ' ಎಂಬುದು ರೂಪಕವಾಗಿ ಬಳಕೆಯಲ್ಲಿದೆ.

'ನಾನು ಕಲಾವಿದ ಮಾತ್ರ. ವ್ಯವಹಾರ ನನಗೆ ಗೊತ್ತಿಲ್ಲ. ದುಡ್ಡು-ಕಾಸು ಮತ್ತೊಂದು ತಲೆಗೆ ಹಚ್ಚಿಕೊಂಡಿಲ್ಲ. ಆದ್ದರಿಂದಲೇ ನಾನು ಇಷ್ಟು ಚೆನ್ನಾಗಿರುವುದು' ಎಂದು ರಾಜಕುಮಾರ್ ಹೇಳುತ್ತಿದ್ದರು. ಎಲ್ಲ ಬಂಧನಗಳಿಂದಲೂ ಬಿಡುಗಡೆ ಪಡೆದ ಸಂತನಲ್ಲಿರುವ ಇಂತಹ ಗುಣ ಅವರಲ್ಲಿ ಬಾಲ್ಯದಿಂದಲೂ ಮೈಗಂಟಿ ಬಂದಿತ್ತು.

ರಾಜಕುಮಾರ್ ಅವರ ತಾಯಿ ಲಕ್ಷ್ಮಮ್ಮನವರು ಬಾಲಕಿಯಾಗಿದ್ದಾಗ, ಮೈಸೂರಿನಿಂದ ಗುರುಮಾರ್ಗದ ಪೇರ್‌ಸಿಂಗ್ ಎನ್ನುವ ತತ್ತ್ವಸಾಧಕರು ತಮ್ಮ ಮಗಳ ಸಹಾಯದೊಂದಿಗೆ ಏಕತಾರಿಯೊಡನೆ ಅವರ ದೊಡ್ಡ ಹಟ್ಟಿಗೆ ಬರುತ್ತಿದ್ದರು. ಬಂದವರು ಬಾಲಕಿಯಾಗಿದ್ದ ಲಕ್ಷ್ಮಮ್ಮನವರನ್ನು ತಮ್ಮ ತೊಡೆಯ ಮೇಲೆ ಕೂರಿಸಿಕೊಂಡು ತತ್ತ್ವಪದಗಳನ್ನು ಇಡೀ ರಾತ್ರಿ ಹಾಡುತ್ತಿದ್ದರು. ಹೀಗೆ ತಿಂಗಳುಗಟ್ಟಲೆ ಹಟ್ಟಿಯಲ್ಲಿದ್ದು ನಂತರ ತೆರಳುತ್ತಿದ್ದರು. ಅವರು ಬಂದಾಗ ಕುಳಿತುಕೊಳ್ಳುತ್ತಿದ್ದ ಮಂಚವನ್ನು ಈಗಲೂ ಗಾಜನೂರಿನ ಲಕ್ಷ್ಮಮ್ಮನವರ ಮನೆಯಲ್ಲಿ ಗುರುವಿನ ನೆನಪಿಗಾಗಿ ಇಟ್ಟಿದ್ದಾರೆ. ಅದನ್ನು ಯಾರೂ ಬಳಸುವುದಿಲ್ಲ. ಹೀಗೆ ತತ್ತ್ವಸಾಧಕರ ಪ್ರಭಾವಕ್ಕೆ ಒಳಗಾಗಿದ್ದ ಲಕ್ಷ್ಮಮ್ಮನವರಿಂದ ಗುರುಮಾರ್ಗದ ಸಂತರ ಗುಣಗಳು ರಾಜಕುಮಾರ್ ಅವರಿಗೂ ಬಂದಿರಬಹುದು.

ರಾಜಕುಮಾರ್ ಅವರನ್ನು ಬಹುವಾಗಿ ಸೆಳೆದ ಸ್ಥಳ, ದೊಡ್ಡಗಾಜನೂರಿನ ಸಮೀಪವೇ ಹರಿಯುವ 'ಹೊನ್ನೊಳೆ' ಎಂಬ ನದಿ. ಮಳೆಗಾಲದಲ್ಲಿ ಮಾತ್ರ ತುಂಬಿಹರಿಯುವಈಹೊಳೆಯತಾಣರಾಜಕುಮಾರ್ ಅವರ ಮೇಲೆ ದಟ್ಟ ಪ್ರಭಾವ ಬೀರಿದೆ. ತಾನು, ತನ್ನದೆಂದು ಅಹಂಕಾರದಿಂದ ಬೀಗುವ ಶಾಬ್ದಿಕ ಜಗತ್ತು ಬರಡು ಎನಿಸಿದಾಗಲೆಲ್ಲಾ ರಾಜಕುಮಾರ್ 'ಹೊನ್ನೊಳೆ'ಯ ತಟದಲ್ಲಿ ಹರಡಿಕೊಂಡಿದ್ದ ಹೊಂಗೆ ಮತ್ತು ಮತ್ತಿ ಮರದ ನೆರಳಿನಲ್ಲಿ ಮೈ ಮರೆತವರಂತೆ ಕುಳಿತುಕೊಳ್ಳುತ್ತಿದ್ದರು. ಇನ್ನೂ ಕೆಲವು ಸಲ ತಮ್ಮ ಹೊಲದಲ್ಲಿ ಬಿಳಲು ಬಿಟ್ಟಿದ್ದ ವಿಶಾಲ ಆಲದಮರದ ನೆರಳು ಅವರ ದಣಿದ ಮನಸ್ಸನ್ನು ಸಂತೈಸುತ್ತಿತ್ತು. ಸಂತರು ಇರುವುದು ಹೀಗೆಯೇ. ನದಿಯಂತೆ ನಾಡನ್ನೇ ಆವರಿಸಿಕೊಂಡಿದ್ದ ರಾಜಕುಮಾರ್, 'ನಾನಾಗಲೇ ತೀರ್ಮಾನ ಮಾಡಿದ್ದೇನೆ. ಜಮೀನಿಗೆ ಹೋಗಿಬಿಡುವುದು ಎಂದು. ವ್ಯವಸಾಯ ಮಾಡುವುದು ನನ್ನ ಬಹಳ ಕಾಲದ ಆಸೆ. ವ್ಯವಸಾಯ ಅಂದರೆ ನನಗೆ ತುಂಬಾ ಹುಚ್ಚು. ಆದ್ದರಿಂದ ಯಾವಾಗ ಬೇಕಾದರೂ ಹೊರಟುಬಿಡುತ್ತೇನೆ. ಅದರಿಂದ ನಮಗೆ ತೊಂದರೆಯೇನೂ ಇಲ್ಲ. ನಮ್ಮ ಕಸುಬೇ ಅದು' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದರು. 'ಉಟ್ಟುದ ತೊರೆದವಂಗೆ ಊರೇನು? ಕಾಡೇನು?' ಎನ್ನುವ ಶರಣರ ಮಾತಿನಂತೆ, ರಾಜಕುಮಾರ್ ಅವರ ವ್ಯಕ್ತಿತ್ವದಲ್ಲಿ ಈ ಗುಣಗಳು ಯಾವಾಗಲೂ ಸಹಜವಾಗಿಯೇ ಇದ್ದವು. ತನಗಾಗಿ ಏನನ್ನೂ ಇಟ್ಟುಕೊಳ್ಳದ ಸಂತರಿಗಿರುವ ಸರಳತೆ ಮತ್ತು ಮುಗ್ಧತೆಯ ಗುಣಗಳನ್ನೇ ಹೊದ್ದಿರುವ ರಾಜಕುಮಾರ್ ಜನತೆಯ ನಡುವೆ ಸಂದೇಹರಹಿತ ನಾಯಕರಾಗಿ ಇಂದಿಗೂ ಉಳಿದಿರುವುದು ಇಂತಹ ಗುಣಗಳಿಂದಲೇ.


ರಾಜಕುಮಾರ್ ಬೇರೊಬ್ಬ ನಟರಂತಾಗುವ ಪ್ರಯತ್ನವನ್ನು ಎಂದೂ ಮಾಡಲಿಲ್ಲ. ಏಕೆಂದರೆ, ಸ್ಪರ್ಧೆ ಎನ್ನುವುದೇ ಸಮಸ್ಯಾತ್ಮಕ ಸಂಗತಿ. ಅದು ಮನುಷ್ಯನಲ್ಲಿ ಅಸೂಯೆ, ದ್ವೇಷ, ಸ್ವಾರ್ಥಗಳನ್ನು ಹುಟ್ಟುಹಾಕುತ್ತದೆ ಎಂದು ಅವರಿಗೆ ತಿಳಿದಿತ್ತು. ಅವರು ಹೇಳುತ್ತಿದ್ದರು: 'ಅವರನ್ನು ಮೀರಿಸಬೇಕು, ನಾನೂ ಅವರ ತರಹ ಕಲಿತರೆ ಒಳ್ಳೆಯದು. ನಾನೂ ಅವರ ಮಟ್ಟಕ್ಕೆ ಬರಬೇಕು ಎಂಬ ಧೋರಣೆಯನ್ನು ಮಾತ್ರ ಎಂದಿಗೂ ತಳೆದಿಲ್ಲ'. ಇಂತಹ ನಿರಾಳ ಮನಸ್ಸಿನ ರಾಜಕುಮಾರ್ ಕನ್ನಡ ಜನತೆಯ ಮನೋಲೋಕದಲ್ಲಿ ರೂಪು ಪಡೆದಿದ್ದು ನಿರಂತರ ಆಗುವಿಕೆಯಲ್ಲಿಯೇ. 'ನನಗಿನ್ನೂ ತೃಪ್ತಿ ನೀಡುವಂತಹ ಪಾತ್ರವನ್ನು ಮಾಡಿಲ್ಲ ಎನಿಸುತ್ತದೆ. ನನ್ನ ಚಿತ್ರಗಳನ್ನು ಈಗ ನೋಡಿದರೆ ಅದಕ್ಕಿಂತ ಉತ್ತಮವಾಗಿ ನಟಿಸಬಹುದಾಗಿತ್ತು ಎಂಬ ಭಾವ ಈಗ ಬರುತ್ತದೆ' ಎಂದು ಮತ್ತೆ ಮತ್ತೆ ಹೇಳುತ್ತಿದ್ದರು. ಚಿತ್ರರಂಗಕ್ಕೆ ಬರುವ ಮುನ್ನವೇ ಅವರು ರಂಗಭೂಮಿಯಲ್ಲಿ ತಮ್ಮ ನಟನೆಯ ಮೂಲಕ ಪ್ರಸಿದ್ಧರಾಗಿದ್ದರು. ನಟನೆಯ ಬಗ್ಗೆ ಅವರಿಗಿದ್ದ ಗೌರವ ಹಾಗೂ ಇನ್ನೂ ಕಲಿಯಬೇಕೆಂಬ ಹಂಬಲ ಅವರ ಮಾತುಗಳಲ್ಲಿದೆ. ಇದು ಪೂರ್ಣತೆಯಿಂದ ಪೂರ್ಣತೆಯ ಕಡೆಗೆ ನಡೆಯುವ ದಾರಿ. ಎಲ್ಲಿಯೂ ನಿಲ್ಲದ, ಗುರಿಯನ್ನೆಂದೂ ಮುಟ್ಟದ ನಿರಂತರ ಆಗುವಿಕೆಯ ಪಯಣವೇ ಇದು.

ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ರಾಜಕುಮಾರ್ ಎನ್ನುವುದು ಕನ್ನಡ ಮನಸ್ಸುಗಳು ಕಟ್ಟಿದ ಭಾಷಿಕ ರೂಪದಲ್ಲಿಲ್ಲದ ಮೌಖಿಕ ಮಹಾಕಾವ್ಯದಂತಿದೆ. ಇವರನ್ನು ಹಿಡಿಯಲು ಹೋದಷ್ಟೂ ಅದು ಇನ್ನಷ್ಟು ಬೆಳೆಯುತ್ತಲೇ ಹೋಗುತ್ತದೆ; ಹಿಮಾಲಯ ಪರ್ವತದಂತೆ! ಆದ್ದರಿಂದಲೇ ಅವರನ್ನು ಕುರಿತು ಹೊಸ ಹೊಸ ದಂತಕಥೆಗಳು, ಕೃತಿಗಳು ಸೃಷ್ಟಿಯಾಗುತ್ತಿವೆ. ಇವುಗಳ ಪೈಕಿ ರಾಜಕುಮಾರ್ ಅವರ ಸಮಗ್ರ ವ್ಯಕ್ತಿತ್ವ ಮತ್ತು ಸಿನಿಮಾಗಳನ್ನು ಕುರಿತು ದೊಡ್ಡಹುಲ್ಲೂರು ರುಕ್ಕೋಜಿ ತಮ್ಮ ಇಪ್ಪತ್ತು ವರ್ಷಗಳ ನಿರಂತರ ಸಂಶೋಧನೆಯಿಂದ ಹೊರತಂದ 'ಡಾ. ರಾಜಕುಮಾರ್ ಸಮಗ್ರ ಚರಿತ್ರೆ'ಯ ಎರಡು ಬೃಹತ್ ಸಂಪುಟಗಳು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿವೆ. ರಾಜಕುಮಾರ್ ಅವರ ಸಮಗ್ರ ಬದುಕನ್ನು ವಿವರಿಸುತ್ತಲೇ ಕನ್ನಡ ರಂಗಭೂಮಿ ಮತ್ತು ಚಿತ್ರರಂಗದ ವಿಕಾಸದ ಕಥನವನ್ನು ಕಟ್ಟಿಕೊಡುವ ಸಂಪುಟಗಳು ಇವು.

ಕುವೆಂಪು ಹೇಗೆ ಭಾರತದ ಮತ್ತು ಕರ್ನಾಟಕದ ಸಂತ ಪರಂಪರೆಯನ್ನು ಒಗ್ಗೂಡಿಸಿ ನಾಡಗೀತೆಯಲ್ಲಿ ಹೆಣೆದರೋ ಹಾಗೆಯೇ ರಾಜಕುಮಾರ್ ಅವರೂ ತಮ್ಮ ಸಿನಿಮಾಗಳಲ್ಲಿ ಭಾರತ ಮತ್ತು ಕರ್ನಾಟಕದ ಸಂತ ಪರಂಪರೆಯ ಶ್ರೇಷ್ಠ ವ್ಯಕ್ತಿಗಳನ್ನು ಮುನ್ನೆಲೆಗೆ ತಂದರು. 'ಸಂತ ತುಕಾರಾಮ', 'ಭಕ್ತ ಕನಕದಾಸ', 'ಸರ್ವಜ್ಞ ಮೂರ್ತಿ', 'ಮಂತ್ರಾಲಯ ಮಹಾತ್ಮೆ', 'ಭಕ್ತ ಕುಂಬಾರ' ಈ ಸಿನಿಮಾಗಳ ಪಾತ್ರಗಳು ನನ್ನ ಮನಸ್ಸಿಗೆ, ಹೃದಯಕ್ಕೆ ಬಹಳವಾಗಿ ಅಂಟಿದಂತಹ ಕ್ಯಾರೆಕ್ಟರ್‌ಗಳು ಎಂದು ರಾಜಕುಮಾರ್ ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಯಾವುದೇ ರೀತಿಯ ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯದ ಅವರು, ಜನಸಾಮಾನ್ಯರ ನಡುವೆಯೇ ಹುಟ್ಟಿ ಬೆಳೆದವರು. ಜನಸಾಮಾನ್ಯರ ಬವಣೆಗಳನ್ನೆಲ್ಲಾ ಕಂಡವರು. ಹೀಗಾಗಿ ಜನತೆಯೊಂದಿಗೆ ಆಳವಾಗಿ ಬೆಸೆದುಕೊಂಡಿದ್ದ ರಂಗಭೂಮಿಯೇ ಅವರ ಮೊದಲ ಪಾಠಶಾಲೆಯಾಯಿತು. 'ಯಾವುದಾದರೂ ಪಾತ್ರ ಮಾಡುವಾಗ ಕೆಲವೊಂದು ವ್ಯಕ್ತಿಗಳು ಕಣ್ಣಮುಂದೆ ನಿಂತ ಹಾಗೆ ಆಗುತ್ತದೆ' ಎಂದು ತಾವು ಎಲ್ಲಿಂದ ಕಲಿತೆ ಎನ್ನುವುದನ್ನು ನೆನೆಯುತ್ತಾರೆ.

ರಾಜಕುಮಾರ್ ಅವರಿಗೆ ರಂಗಭೂಮಿ ಮತ್ತು ಚಿತ್ರರಂಗವೇ ಧರ್ಮವಾಗಿತ್ತು. ಇದನ್ನು ಬಿಟ್ಟು ಬೇರೆ ಧರ್ಮ ಅವರಿಗಿರಲಿಲ್ಲ. ಅವರು ತಮ್ಮ ಚಿತ್ರಗಳಲ್ಲಿ ಪ್ರತಿಪಾದಿಸುತ್ತಿದ್ದುದು ನೈತಿಕತೆಯಿಂದ ಕೂಡಿದ ಮಾನವಧರ್ಮವನ್ನು. ಇದು ಮನುಷ್ಯ ಸೃಷ್ಟಿಸುವ ಎಲ್ಲ ಕಲೆಗಳ ಮೂಲ ತತ್ತ್ವ. ಎಲ್ಲಿ ಸಕಲ ಜೀವಿಗಳಿಗೂ ಲೇಸನೇ ಬಯಸುವ ಧರ್ಮವಿರುತ್ತದೋ ಅಲ್ಲಿ ಜಾತಿ, ವರ್ಗ, ಅತಾರ್ಕಿಕ ದ್ವೇಷ, ತಿರಸ್ಕಾರ, ಅಸೂಯೆ ಇರುವುದಿಲ್ಲ. ಇಂತಹ ಉನ್ನತ ಮಾನವೀಯತೆಯ ದರ್ಶನವನ್ನು ರಾಜಕುಮಾರ್ ಅವರ ಸಿನಿಮಾಗಳು ಹೊಂದಿದ್ದವು. ಇಂದಿನ ಚಿತ್ರರಂಗ ತನ್ನ ಕೊಳೆಯುವಿಕೆಯ ಸ್ಥಿತಿಯಿಂದ ಪಾರಾಗಲು ರಾಜಕುಮಾರ್ ಅವರು ಹಾಕಿಕೊಟ್ಟ ನೈತಿಕತೆಯ ದಾರಿಯನ್ನು ಅನುಸರಿಸಬೇಕಾಗಿದೆ. ಇಲ್ಲದಿದ್ದರೆ ತಾನು ಸೃಷ್ಟಿಸಿದ ಭಾರಕ್ಕೆ ತಾನೇ ಕುಸಿಯುತ್ತದೆ.

ಸಾಮಾನ್ಯವಾಗಿ ಸೋಲು ವ್ಯಕ್ತಿಯನ್ನು ಮನುಷ್ಯನನ್ನಾಗಿ ಮಾಡುತ್ತದೆ ಎಂದು ಹೇಳುತ್ತಾರೆ. ಆದರೆ ಕೆಲವು ಸಲ ಗೆಲುವೂ ವ್ಯಕ್ತಿಯನ್ನು ಇನ್ನಷ್ಟು ಉನ್ನತೀಕರಿಸುತ್ತದೆ, ಮೃದುಗೊಳಿಸುತ್ತದೆ ಎನ್ನುವುದಕ್ಕೆ ಉದಾಹರಣೆಯ ರೂಪದಲ್ಲಿ, ಕುವೆಂಪು ಮತ್ತು ರಾಜಕುಮಾರ್ ಎಂಬ ಮಾನವೀಯತೆಯ ಉನ್ನತ ಶಿಖರಗಳು ನಮ್ಮ ಕಣ್ಣಮುಂದಿವೆ.



ವಾಚಕರ ವಾಣಿ

ಪೊಲೀಸ್ ತನಿಖೆಯಲ್ಲಿ ಹಸ್ತಕ್ಷೇಪ ಸಲ್ಲ

ನ್ಯಾಯಕ್ಕಾಗಿ ನಾಗರಿಕರು ಪೊಲೀಸ್ ಠಾಣೆಯ ಮೆಟ್ಟಿಲೇರಿದಾಗ ರಾಜಕೀಯ ನಾಯಕರು ಅನವಶ್ಯಕವಾಗಿ ಮಧ್ಯಪ್ರವೇಶಿಸುತ್ತಾರೆ. ಈ ಹಸ್ತಕ್ಷೇಪವು ನ್ಯಾಯಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಲಿದೆ. ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕಾದ ಸಂದರ್ಭದಲ್ಲಿ, ಹೊರಗಿನ ಒತ್ತಡಗಳಿಂದ ಅವರ ಕಾರ್ಯಕ್ಕೆ ಅಡ್ಡಿಯಾಗುತ್ತಿದೆ. ಕೆಲವೊಮ್ಮೆ ಈ ಪ್ರಭಾವದಿಂದ ಪ್ರಕರಣಗಳು ತಮಗೆ ಅನುಕೂಲವಾಗುವ ರೀತಿಯಲ್ಲಿ ತಿರುಗುವ ಸಾಧ್ಯತೆಯಿದೆ. ಇದು ಜನಸಾಮಾನ್ಯರಿಗೆ ನ್ಯಾಯದ ಮೇಲಿನ ನಂಬಿಕೆಯನ್ನು ಕುಗ್ಗಿಸುತ್ತದೆ. ಇದಕ್ಕೆ ಧಾರವಾಡದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣ ನಿದರ್ಶನ. ಪ್ರಾರಂಭಿಕ ಹಂತದಲ್ಲಿ ಹಲವು ಗೊಂದಲ ಉಂಟಾದರೂ, ಕೊನೆಗೆ ನ್ಯಾಯ ದೊರೆತಿದೆ. ಠಾಣೆಗಳಲ್ಲಿ ರಾಜಕೀಯ ಹಸ್ತಕ್ಷೇಪವನ್ನು ಕಟ್ಟುನಿಟ್ಟಾಗಿ ತಡೆಯಬೇಕಿದೆ. ಪೊಲೀಸರು ರಾಜಕೀಯ ನಾಯಕರ ಮರ್ಜಿಗೆ ಒಳಗಾಗದೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕಿದೆ.

ಪ್ರದೀಪ ಬಿಸಲನಾಯಿಕ, ಚಿಕ್ಕೋಡಿ

'ಆರೋಗ್ಯ ಭಾಗ್ಯ'ಕ್ಕೆ ಗ್ಯಾರಂಟಿ ದೊರೆಯಲಿ

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧ ದಾಸ್ತಾನು ಖಾಲಿಯಾಗಿರುವುದು 'ಪ್ರಜಾವಾಣಿ'ಯ ರಿಯಾಲಿಟಿ ಚೆಕ್‌ನಿಂದ ಬಯಲಾಗಿದೆ (ಪ್ರ.ವಾ., ಏ. 22). ಜೀವನದಲ್ಲಿ ಮನುಷ್ಯ ಎಷ್ಟೇ ಎತ್ತರಕ್ಕೇರಿದರೂ ಅಂತಿಮವಾಗಿ ಉತ್ತಮ ಆರೋಗ್ಯ ಇಲ್ಲದಿದ್ದರೆ ಅದು ನಶ್ವರ. ಸರ್ಕಾರಿ ಆಸ್ಪತ್ರೆಗಳನ್ನು ಅತಿ ಹೆಚ್ಚು ಅವಲಂಬಿಸಿರುವುದು ದೀನದಲಿತರು, ಕಾರ್ಮಿಕರು, ಮಹಿಳೆಯರು. ಬಡವರಿಗೆ ಕನಿಷ್ಠ ಆರೋಗ್ಯದ ಅವಶ್ಯಕತೆಯ ಮೇಲ್ವಿಚಾರಣೆ ಮಾಡಿ ಔಷಧಗಳನ್ನು ಒದಗಿಸುವುದರಲ್ಲಿ ಸರ್ಕಾರ ಸೋತಿದೆ. ಈ ಬಗ್ಗೆ ಜನಪ್ರತಿನಿಧಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸರ್ಕಾರವು 'ಆರೋಗ್ಯ ಭಾಗ್ಯ'ದ ಗ್ಯಾರಂಟಿಯನ್ನು ನೀಡಬೇಕಿದೆ.

ಹೆಂದೊರೆ ಸಂಜು, ಶಿರಾ

ಕೊರತೆ ಆಗರ: ದಾಖಲೆಯ ಫಲಿತಾಂಶ

ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ದಾಖಲೆಯ ಶೇ 94.1ರಷ್ಟು ಬಂದಿದೆ. ಅನುತ್ತೀರ್ಣಗೊಂಡ ಮಕ್ಕಳೇ ನತದೃಷ್ಟರು. ಒಂದೇ ವರ್ಷದಲ್ಲಿ ನಾಡಿನ ಮಕ್ಕಳು ಜಾಣರಾಗಿ ಬಿಟ್ಟರು. ಶಿಕ್ಷಣ ಇಲಾಖೆಯು ಮಕ್ಕಳನ್ನು ಹಲವಾರು ಉಪಕ್ರಮಗಳ ಮೂಲಕ ಜಾಣರನ್ನಾಗಿ ಮಾಡಿಬಿಟ್ಟಿದೆ. ಶಿಕ್ಷಕರ ಕೊರತೆ, ಸೌಲಭ್ಯದ ಕೊರತೆಯಿದ್ದಾಗಿಯೂ ಅಪೂರ್ವ ಸಾಧನೆ ಇದು. ಮುಂಬರುವ ವರ್ಷ ನೂರಕ್ಕೆ ನೂರರಷ್ಟು ಫಲಿತಾಂಶ ಬರುವ ರೀತಿ ಇನ್ನಷ್ಟು ವಿದ್ಯಾರ್ಥಿಸ್ನೇಹಿ ಅಥವಾ ಫಲಿತಾಂಶ ಪೂರಕ ಸಿದ್ಧಮಾದರಿಗಳು, ಉಪಕ್ರಮಗಳನ್ನು ರೂಪಿಸಿ ಮುಂಚಿತವಾಗಿಯೇ ಬಿಡುಗಡೆ ಮಾಡಲಿ. ಆಗ 'ಎಸ್‌ಎಸ್‌ಎಲ್‌ಸಿ ಪಾಸಾದೆ' ಅನ್ನುವ ಸಂಭ್ರಮ ಎಲ್ಲ ಮಕ್ಕಳದ್ದಾಗಬಹುದು. ಸರ್ಕಾರ ಕೂಡ ನೂರಕ್ಕೆ ನೂರರಷ್ಟು ಫಲಿತಾಂಶದ ಬಗ್ಗೆ ಬೀಗಬಹುದು.

ವೆಂಕಟೇಶ ಮಾಚಕನೂರ, ಧಾರವಾಡ

ಗೃಹ ಸಚಿವರ ಬೆಟ್ಟಿಂಗ್ ತಮಾಷೆಯಲ್ಲ!

ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯು ಶುರುವಾಗುವ ಮೊದಲೇ ಪೊಲೀಸ್ ಇಲಾಖೆ ಬೆಟ್ಟಿಂಗ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿತ್ತು. ಬೆಟ್ಟಿಂಗ್ ಆಡುವುದು ಅಪರಾಧ. ಇದು ಬದುಕನ್ನು ಅವನತಿಗೆ ದೂಡುತ್ತದೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ತುಮಕೂರಿನಲ್ಲಿ ನಡೆದ ಕಬಡ್ಡಿ ಪಂದ್ಯದಲ್ಲಿ ಭಾಗವಹಿಸಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರು, ದಕ್ಷಿಣ ಕನ್ನಡ ಜಿಲ್ಲಾ ತಂಡದ ವಿರುದ್ಧ ₹500 ಬೆಟ್ಟಿಂಗ್ ಕಟ್ಟಿದ್ದರು. ಈ ಬಗ್ಗೆ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ದೂರು ದಾಖಲಿಸಲು ಪೊಲೀಸರು ಹಿಂದೇಟು ಹಾಕಿದ್ದರು. ಕೊನೆಗೆ, ಖಾಸಗಿ ದೂರು ಸ್ವೀಕರಿಸಿದ ಜನಪ್ರತಿನಿಧಿಗಳ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಗೃಹ ಸಚಿವರ ವಿರುದ್ಧ ಪ್ರಕರಣ ದಾಖಲಿಸಲು ಸೂಚಿಸಿದೆ. ರಾಜ್ಯದಲ್ಲಿ ಬೆಟ್ಟಿಂಗ್ ದಂಧೆಕೋರರ ಹಾವಳಿ ಹೆಚ್ಚಿದೆ. ಇದಕ್ಕೆ ಕಡಿವಾಣ ಹಾಕುವುದು ಪೊಲೀಸರ ಹೊಣೆಗಾರಿಕೆ. ಆದರೆ, ಗೃಹ ಸಚಿವರೇ ಬೆಟ್ಟಿಂಗ್ ಆಡಿದರೆ ನಾಗರಿಕರು ಪೊಲೀಸರ ಮಾತು ಕೇಳುತ್ತಾರೆಯೇ?

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ನಾಯಕರಿಗೆ 'ಹೃದಯಪರೀಕ್ಷೆ'ಯ ಕಾಲ

ಈಗ ನಮಗೆ ನಿಜವಾಗಿಯೂ ಬೇಕಿರುವುದು ಹೃದಯವಂತಿಕೆಯ ನಾಯಕತ್ವ. ಎಲ್ಲೆಲ್ಲೂ ಯುದ್ಧ ನಡೆಯುತ್ತಿರುವುದರಿಂದ ಜನಸಾಮಾನ್ಯರು ದಣಿದಿದ್ದಾರೆ. ಹಾಗಾಗಿ, ನಮ್ಮ ನಾಯಕರು ಕನಿಷ್ಠ ಹೃದಯವಂತಿಕೆ ತೋರಬೇಕಿದೆ. ಆದರೆ, ವಿಶ್ವನಾಯಕರೆನಿಸಿಕೊಂಡ ಅನೇಕರು ನಡೆದುಕೊಳ್ಳುವ ರೀತಿಯು ಅಸಹ್ಯ ಹುಟ್ಟಿಸುತ್ತದೆ. ಅಧಿಕಾರಕ್ಕೇರಿದ ಕೂಡಲೇ ಅಹಂಕಾರದಿಂದ ವರ್ತಿಸುವುದು, ಇತರರನ್ನು ಕೀಳಾಗಿ ಕಾಣುವುದು ಸಹಜ ಗುಣವಾಗಿ ಬಿಡುವುದು ವಿಚಿತ್ರವಾದರೂ ನಿಜವೇ. ಸದ್ಯದ ಪರಿಸ್ಥಿತಿಯಲ್ಲಿ ಈ ನಾಯಕರು ತಮ್ಮ ವಿಚಿತ್ರ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು; ತಮಗೂ ಜನರಿಗಾಗಿ ಮಿಡಿಯುವ ಹೃದಯ ಮತ್ತು ಮನಸ್ಸು ಇದೆಯೆಂದು ತೋರಿಸಿಕೊಡುವ ಕಾಲ ಬಂದಿದೆ. ಈ ಸತ್ಯ ಅರಿಯುವ ಸದ್ಬುದ್ಧಿ ಎಲ್ಲಾ ಹೃದಯವಂತ ನಾಯಕರಿಗೆ ಬಂದರಷ್ಟೇ ವಿಶ್ವಕ್ಕೆ ಉಳಿಗಾಲ.

ವಾಸಣ್ಣ, ಧಾರವಾಡ

ಯುವಶಕ್ತಿ ಸದ್ಬಳಕೆ: ಅಭಿವೃದ್ಧಿಗೆ ಪೂರಕ

ದೇಶದಲ್ಲಿ 37 ಕೋಟಿ ಯುವಜನರಿದ್ದಾರೆ. ಈ ಯುವಶಕ್ತಿ ಸದ್ಬಳಕೆಯಾದರೆ ಭಾರತವು ವಿಶ್ವದ ಸುಸ್ಥಿರ ಅಭಿವೃದ್ಧಿಯ ನಾಯಕನಾಗುವುದರಲ್ಲಿ ಅನುಮಾನವಿಲ್ಲ. ಈಗಿರುವ ಭ್ರಷ್ಟ ನಾಯಕತ್ವ ಬೇಡ. ತಮ್ಮ ಕುಟುಂಬ ಮತ್ತು ಭಾರತವನ್ನು ಸರಿದಾರಿಯಲ್ಲಿ ಕೊಂಡೊಯ್ಯುವ ಯುವಶಕ್ತಿ ಬೇಕಿದೆ. ಉತ್ತಮ ಚಾರಿತ್ರ್ಯ ಬೆಳೆಸಿಕೊಳ್ಳದ ಯುವಜನರು ಮೊಬೈಲ್, ಮೋಜುಮಸ್ತಿಯಲ್ಲಿ ಕಳೆದುಹೋಗದಿರಲಿ. ತಮ್ಮ ಜವಾಬ್ದಾರಿ ಅರಿತು ಕುಟುಂಬ ಮತ್ತು ದೇಶವನ್ನು ಸನ್ಮಾರ್ಗದಲ್ಲಿ ನಡೆಸುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಸಮರ್ಥನೀಯ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಚಾಟಿ

ಸಾಹಿತ್ಯ–ಸಿನಿಮಾ ನಿರ್ಲಕ್ಷ್ಯ



ಕನ್ನಡ ಪುಸ್ತಕ ಖರೀದಿಗೆ ಆಸಕ್ತಿ ಇಲ್ಲ! ಕನ್ನಡ ಚಲನಚಿತ್ರಗಳ ಸಬ್ಸಿಡಿಗೆ ಹಣವಿಲ್ಲ! ಭರಪೂರ ತೆರಿಗೆ ವಸೂಲಿ ನಡೆಯುತ್ತಿದೆ. ಇದನ್ನೆಲ್ಲಾ ಗಮನಿಸಲು ನಾಡಿನ ದೊರೆಗೆ ಸಮಯವೇ ಇಲ್ಲ! ಎಲ್ಲೆಲ್ಲೂ ಹಾಹಾಕಾರ, ಮುಂದೇನು?

ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಕಾಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಮಹಿಳಾ ಮೀಸಲಾತಿ ವಿರೋಧಿಸುವ ಮೂಲಕ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ತಮ್ಮ ಶವಪೆಟ್ಟಿಗೆಗೆ ತಾವೇ ಮೊಳೆ ಹೊಡೆದುಕೊಳ್ಳುತ್ತಿವೆ. ದೇಶದ ನಾರಿಯರು ತಕ್ಕಪಾಠ ಕಲಿಸುವ ಕಾಲ ದೂರವಿಲ್ಲ.

ವಿ. ಸೋಮಣ್ಣ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ

ಚುರುಮುರಿ



ಸೈಲೆಂಟ್ ಟಗರು!

• ಬಿ.ಎನ್. ಮಲ್ಲೇಶ್

ರಕ್ತಾಕ್ಷಿ ಮಾಂತ್ರಿಕರು! ಇಲ್ಲಿ ಶತ್ರು ನಾಶ, ವಶೀಕರಣ, ದಾಂಪತ್ಯ ಕಲಹ, ಮಾಟ-ಮಂತ್ರ... ಎಲ್ಲ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ನೀಡಲಾಗುವುದು... ಎನ್ನುವ ಬೋರ್ಡ್ ನೋಡಿದ ದುಬ್ಬೀರ, ಮಾಂತ್ರಿಕನ ಕಚೇರಿ ಒಳಹೊಕ್ಕ.

ದುಬ್ಬೀರನನ್ನು ನೋಡುತ್ತಲೇ ಮಾಂತ್ರಿಕರು ಹೇಳಿದರು, 'ನಿಮ್ಮಲ್ಲೇನೋ ಸಮಸ್ಯೆ ಇದೆ..!'

'ಅದ್ಕೇ ಸ್ವಾಮಿ ಬಂದಿರೋದು, ಸಮಸ್ಯೆ ಇರೋದು ನಂಗಲ್ಲ, ನಮ್ ಟಗರಿಗೆ...' ಎಂದ ದುಬ್ಬೀರ.

'ಏನು? ಟಗರಿಗಾ? ಏನ್ ಹೇಳ್ತಿದೀರಿ ನೀವು?'

'ಹೌದು ಸ್ವಾಮಿ, ನಮ್ ಟಗರು ಯಾಕೋ ಮೊದ್ಲು ಇದ್ದಂಗಿಲ್ಲ... ಗುದ್ದಲ್ಲ, ಗುಮ್ಮಲ್ಲ. ಯಾಕೋ ಮಂಕಾಗಿ ಬುಟ್ಟದೆ, ಯಾರೋ ಮಾಟ ಮಾಡ್ಸಿರಬೇಕು ಅನ್ಸುತ್ತೆ...'

'ಹೌದಾ? ಮೊದ್ಲು ನಿಮ್ ಟಗರು ಹೆಂಗಿತ್ತು?'

'ಬಲೇ ಜೋರಿತ್ತು ಸ್ವಾಮಿ. ಗೌಡ್ರ ಹಟ್ಟೀನೆ ಒದ್ಕಂಡ್ ಬಂದಿತ್ತು. ಎದುರಾಳಿ ಯಾರೇ ಇರ್ಲಿ, ಎಗರಿ ಎಗರಿ ಡಿಚ್ಚಿ ಹೊಡೀತಿತ್ತು. ಸಿಟ್ಟು ಬಂದ್ರೆ 'ಏಯ್, ಹೊಡೀರಿ ಕಪಾಳಕ್ಕೆ' ಅಂತಿತ್ತು... ಈಗ ಏನೂ ಮಾತಾಡ್ತಿಲ್ಲ, ಸೈಲೆಂಟಾಗಿಬುಟ್ಟದೆ...' ದುಬ್ಬೀರ ಎಲ್ಲ ಬಿಡಿಸಿ ಹೇಳಿದ.

ಮಾಂತ್ರಿಕರು ಕವಡೆ ಹಾಕಿದರು, ಏನೂ ಗೊತ್ತಾಗಲಿಲ್ಲ. ಅಂಜನ ಹಾಕಿ ನೋಡಿದರು, ಏನೂ ಕಾಣಲಿಲ್ಲ. 'ಫಟ್ ಸ್ವಾಹ' ಎಂದರು, ಯಾವುದೂ ಪಿಟಿಕ್ಕನ್ನಲಿಲ್ಲ. ಮಾಂತ್ರಿಕರು ಕಣ್ಣು ಮುಚ್ಚಿ ಆಕಾಶ ನೋಡಿ ಹೇಳಿದರು: 'ನಿಮ್ಮ ಟಗರಿಗೆ ಯಾರೋ ದಿಗ್ಬಂಧನ ಹಾಕ್ಸಿದಾರೆ, ಯಾವುದೋ 'ಮೇಲಿನ' ಶಕ್ತಿ ಅವರನ್ನ ನಿಯಂತ್ರಿಸ್ತಾ ಇದೆ...'

'ಹೌದಾ ಸ್ವಾಮಿ, ಮತ್ತೆ ಅದಕ್ಕೆ ಪರಿಹಾರ ಏನು?'

ಮಾಂತ್ರಿಕರು ಗಾಳಿಯಲ್ಲಿ ಕೈಯಾಡಿಸಿ 'ಫಟ್' ಅಂತ ಎರಡು ನಿಂಬೆಹಣ್ಣು ಸೃಷ್ಟಿಸಿದರು. ದುಬ್ಬೀರನಿಗೆ ಆಶ್ಚರ್ಯ!

'ಈ ನಿಂಬೆಹಣ್ಣನ್ನ ನಿಮ್ಮ ಟಗರಿಗೆ ಕೊಡಿ, ನಿಂಬೆಹಣ್ಣು ಅಂದ್ರೆ ಅದಕ್ಕೆ ಇಷ್ಟಾನಾ?' ಮಾಂತ್ರಿಕರು ಕೇಳಿದರು.

'ಬಾಳ ಇಷ್ಟ ಸ್ವಾಮಿ, ನಾಟಿ ಕೋಳಿ ಸಾರು ಮಾಡಿದಾಗೆಲ್ಲ ನಿಂಬೆಹಣ್ಣನ್ನ ಅದ್ಕೆ ಹಿಂಡಿಕೊಳ್ಳುತ್ತಲೇ ಇರುತ್ತೆ...' ಎಂದ ದುಬ್ಬೀರ. ಮಾಂತ್ರಿಕನಿಗೆ ಅರ್ಥವಾಗಲಿಲ್ಲ.

25 ವರ್ಷಗಳ ಹಿಂದೆ

ಮಂಗಳವಾರ, 24-4-2001

• **ರಾಜ್ಯದಲ್ಲಿ 5 ಮಿನಿ ವಿಮಾನ ನಿಲ್ದಾಣ: ಅನುಮತಿಗೆ ಕೋರಿಕೆ**

ಬೆಂಗಳೂರು, ಏ. 23– ಸುಮಾರು ರೂ. 170 ಕೋಟಿ ವೆಚ್ಚದಲ್ಲಿ ಮೈಸೂರು, ಕಲ್ಬುರ್ಗಿ, ಹಾಸನ, ವಿಜಾಪುರ ಮತ್ತು ಬಳ್ಳಾರಿಗಳಲ್ಲಿ ಮಿನಿ ವಿಮಾನ ನಿಲ್ದಾಣಗಳನ್ನು ನಿರ್ಮಿಸುವುದಕ್ಕೆ ಮಂಜೂರಾತಿ ನೀಡಬೇಕು ಎಂದು ಯೋಜನಾ ಆಯೋಗವನ್ನು ರಾಜ್ಯ ಸರ್ಕಾರ ಮತ್ತೊಮ್ಮೆ ಕೋರಲಿದೆ.

ಹಿಂದಿನ ಜನತಾದಳ ಸರ್ಕಾರ 1997ರಲ್ಲಿ ಈ ಐದು ಸ್ಥಳಗಳಲ್ಲಿ ಮಿನಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ರೂ. 170 ಕೋಟಿ ಯೋಜನೆ ತಯಾರಿಸಿ ಒಪ್ಪಿಗೆಗಾಗಿ ಯೋಜನಾ ಆಯೋಗಕ್ಕೆ ಕಳುಹಿಸಿ ಕೊಟ್ಟಿತ್ತು. ಆದರೆ, ಅದಕ್ಕೆ ಆಯೋಗ ಇಲ್ಲಿಯವರೆಗೆ ಆಸಕ್ತಿ ತೋರಿಸಿಲ್ಲ.

75 ವರ್ಷಗಳ ಹಿಂದೆ

ಮಂಗಳವಾರ, 24-4-1951

• **ನಿರಾಶ್ರಿತರ ಸ್ವತ್ತಿನ ಆಡಳಿತದ ಮಸೂದೆಗೆ ಪಾರ್ಲಿಮೆಂಟ್ ಒಪ್ಪಿಗೆ**

ನವದೆಹಲಿ, ಏ. 23– ನಿರಾಶ್ರಿತರ ಸ್ವತ್ತಿನ ಆಡಳಿತದ (ದ್ವಿತೀಯ ತಿದ್ದುಪಡಿ) ಮಸೂದೆಯು ಇಂದು ಪಾರ್ಲಿಮೆಂಟ್‌ನಲ್ಲಿ ಅಂಗೀಕೃತವಾಯಿತು.

ನಿರಾಶ್ರಿತರ ಸ್ವತ್ತನ್ನು ಬಹುಪಾಲು ಷೇರ್ ಹೋಲ್ಡರುಗಳು ಪಾಕಿಸ್ತಾನಕ್ಕೆ ತೆರಳಿರುವಂತೆ ಜಾಯಿಂಟ್ ಸ್ಟಾಕ್ ಕಂಪನಿಯ ಸ್ವತ್ತಂತೆ ಪರಿಗಣಿಸಲು ಸರ್ಕಾರಕ್ಕೆ ಈ ಮಸೂದೆ ಅಧಿಕಾರ ವೀಯುತ್ತದೆ. ಪುನರ್ ವ್ಯವಸ್ಥಾ ಶಾಖಾ ಸಚಿವ ಅಜಿತ್ ಪ್ರಸಾದ್ ಜೈನರು ಮಾತನಾಡುತ್ತಾ, ಇಂಥ ಕ್ರಮವನ್ನು ಪಾಕಿಸ್ತಾನವು ಆಗಲೇ ಅಕ್ರಮವಾಗಿ ಕೈಕೊಂಡಿದೆಯೆಂದು ತಿಳಿಸಿ, ಜಾಯಿಂಟ್ ಸ್ಟಾಕ್ ಕಂಪನಿಗಳ ಎಲ್ಲ ಷೇರುಗಳನ್ನೂ ನಿರಾಶ್ರಿತೇತರ ಸ್ವತ್ತೆಂದು ಘೋಷಿಸಲು ಈಗಲೂ ಪಾಕಿಸ್ತಾನವು ಸಿದ್ಧವಿದ್ದರೆ ಭಾರತವೂ ಹಾಗೆಯೇ ಮಾಡಲು ಸಿದ್ಧ ಇರುವುದಾಗಿ ತಿಳಿಸಿದರು.

ಸಂಗತ

ಎಥೆನಾಲ್: ಇಂಧನ ಸ್ವಾವಲಂಬನೆಗೆ ಪೂರಕ


ಎಥೆನಾಲ್ ಬಳಕೆ–ಉತ್ಪಾದನೆ ಹೆಚ್ಚಿಸುವುದು ಸದ್ಯದ ಅಗತ್ಯ ಮಾತ್ರವಲ್ಲ, ಭವಿಷ್ಯತ್ತಿನ ಬೇಡಿಕೆಯೂ ಹೌದು. ಪರಿಸರ ಹಾಗೂ ಆರ್ಥಿಕತೆಗೂ ಎಥೆನಾಲ್ ಬಳಕೆ ಪೂರಕ.

• ಬಸವರಾಜ ಶಿವಪ್ಪ ಗಿರಗಾಂವಿ

'ವಾಹನಗಳಲ್ಲಿ ಶೇ 100ರಷ್ಟು ಎಥೆನಾಲ್ ಬಳಕೆಯ ಗುರಿಯನ್ನು ಭಾರತ ಹೊಂದಬೇಕು' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೇಳಿರುವುದು, ಪರ್ಯಾಯ ಇಂಧನ ಬಳಕೆಯ ಬಗ್ಗೆ ಯೋಚಿಸಲು ಪ್ರೇರಣೆ ನೀಡುವಂತಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧ, ಇಂಧನ ವಲಯದಲ್ಲಿ ಭಾರತವು ಪರಾವಲಂಬಿ ಆಗಿರುವುದರ ಅಪಾಯವನ್ನು ಸ್ಪಷ್ಟವಾಗಿ ಕಾಣಿಸಿದೆ. ಇಂಧನ ಸ್ವಾವಲಂಬನೆಗೆ ಪೆಟ್ರೋಲಿಯಂನಿಂದ ಬೇರೆಡೆಗೆ ಹೊರಳಿಕೊಳ್ಳುವುದು ಅನಿವಾರ್ಯ. ಈ ಹುಡುಕಾಟದಲ್ಲಿ ಎಥೆನಾಲ್ ಬೆಳ್ಳಿಚುಕ್ಕಿಯಂತೆ ಕಾಣಿಸುತ್ತದೆ.

ಎಥೆನಾಲ್ ಬಳಕೆಗೆ ಹಲವು ಆಯಾಮಗಳಿವೆ. ವಿದೇಶಿ ವಿನಿಮಯ ಉಳಿತಾಯ, ದೇಶದ ಆರ್ಥಿಕ ಪ್ರಗತಿ, ಇಂಧನ ಸ್ವಾವಲಂಬನೆ, ಆಟೊಮೊಬೈಲ್ ಕ್ಷೇತ್ರದಲ್ಲಿ ಸುಧಾರಣೆ, ರೈತರ ಹಿತರಕ್ಷಣೆ, ಪರಿಸರ ಮಾಲಿನ್ಯ ನಿಯಂತ್ರಣ, ಸಕ್ಕರೆ ಉದ್ಯಮದ ಉಳಿವು ಸೇರಿದಂತೆ ಹಲವು ಸಾಧ್ಯತೆಗಳಿಗೂ ಎಥೆನಾಲ್ ಬಳಕೆ ವ್ಯಾಪಕವಾಗುವುದಕ್ಕೂ ಸಂಬಂಧವಿದೆ. ಹಾಗಾಗಿ, ಗಡ್ಕರಿ ಅವರ ಮಾತನ್ನು ಸದ್ಯದ ಸಂಘರ್ಷ ಸಂದರ್ಭದಲ್ಲಿನ ಮಾತಿನ ರೂಪದಲ್ಲಷ್ಟೇ ನೋಡದೆ, ದೇಶದ ಭವಿಷ್ಯದ ರೂಪದಲ್ಲಿ ನೋಡಬೇಕಾಗಿದೆ.

ಭಾರತದಲ್ಲಿ ಅಂದಾಜು 60 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 500 ದಶಲಕ್ಷ ಟನ್ ಕಬ್ಬು ಬೆಳೆಯಲಾಗುತ್ತಿದೆ. ಇದರಿಂದ 360 ಲಕ್ಷ ಟನ್ ಸಕ್ಕರೆ ಅಥವಾ 24 ಸಾವಿರ ಕೋಟಿ ಲೀಟರ್ ಎಥೆನಾಲ್ ಉತ್ಪಾದಿಸಬಹುದಾಗಿದೆ. ಆದರೆ, ಲಭ್ಯವಿರುವ ಕಬ್ಬನ್ನೆಲ್ಲ ಬಳಸಿಕೊಂಡು 360 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದರೆ, ಬೇಡಿಕೆಗಿಂತಲೂ ಉತ್ಪಾದನೆ ಹೆಚ್ಚಾಗಿ, ಸಕ್ಕರೆ ದರವು ಕುಸಿಯುತ್ತದೆ; ಕಬ್ಬು ಬೆಳೆಗಾರರಿಗೆ ದರ ಪಾವತಿಸಲು ವಿಳಂಬವಾಗುವ ಅಪಾಯವಿರುತ್ತದೆ. ಹಾಗೆಯೇ ಎಲ್ಲ ಕಬ್ಬನ್ನೂ ಎಥೆನಾಲ್ ಉತ್ಪಾದನೆಗೆ ಬಳಸುವುದೂ ಸಾಧ್ಯವಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದಿಸಲು ಹಾಗೂ ಬಳಸಲು ನಮ್ಮ ದೇಶದಲ್ಲಿ ಸೂಕ್ತ ವ್ಯವಸ್ಥೆಗಳಿಲ್ಲ.



ವಿಶ್ವದಲ್ಲೇ ಭಾರತ ಅತಿ ಹೆಚ್ಚು ಸಕ್ಕರೆ ಬಳಸುವ ದೇಶ. ಇಲ್ಲಿ ವಾರ್ಷಿಕ 260 ಲಕ್ಷ ಟನ್ ಸಕ್ಕರೆ ಬಳಸಲಾಗುತ್ತಿದೆ. ಹಾಗಾಗಿ, ಅಗತ್ಯವಿರುವಷ್ಟು ಸಕ್ಕರೆಯನ್ನು ಮಾತ್ರ ಉತ್ಪಾದಿಸಿ, ಉಳಿದ ಕಬ್ಬಿನಲ್ಲಿ 7,000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಬಹುದು. ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ 330 ಲಕ್ಷ ಟನ್ ಸಕ್ಕರೆ ಮತ್ತು 2,000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದನೆಯನ್ನು ನಿರೀಕ್ಷಿಸಲಾಗುತ್ತಿದೆ. ಈ ಸಮೀಕರಣ ಬದಲಾಗಬೇಕಿದೆ.

ಪ್ರಸ್ತುತ ಭಾರತದಲ್ಲಿ 380 ಡಿಸ್ಟಿಲರಿ ಘಟಕಗಳಿಂದ 2,000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಿ, ಶೇ 20ರವರೆಗೆ ಪೆಟ್ರೋಲ್‌ನಲ್ಲಿ ಮಿಶ್ರಣಗೊಳಿಸಲಾಗುತ್ತಿದೆ. ಇದರಿಂದ ಪ್ರಸಕ್ತ ವರ್ಷದಲ್ಲಿ ಸರ್ಕಾರಕ್ಕೆ ₹1.5 ಲಕ್ಷ ಕೋಟಿ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ ಎನ್ನುವ ಲೆಕ್ಕಾಚಾರವಿದೆ. ದೇಶವನ್ನು ಆರ್ಥಿಕವಾಗಿ ಮತ್ತಷ್ಟು ಪ್ರಬಲಗೊಳಿಸಲು ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಉತ್ಪಾದಿಸಿ, ವಿದೇಶಿ ವಿನಿಮಯ ಹೆಚ್ಚಿಸಿಕೊಳ್ಳುವತ್ತ ಸರ್ಕಾರ ಚಿಂತಿಸಬೇಕಾಗಿದೆ. ಸದ್ಯದ ಬಿಕ್ಕಟ್ಟುಗಳು ಭವಿಷ್ಯದಲ್ಲಿಯೂ ಮುಂದುವರಿಯುವ ಸಾಧ್ಯತೆಗಳಿವೆ ಹಾಗೂ ತೈಲಬಾವಿಗಳ ನಿಕ್ಷೇಪ ಒಂದಲ್ಲಾ ಒಂದು ದಿನ ಮುಗಿದುಹೋಗುವ ಸಂಪನ್ಮೂಲ ಆಗಿದೆ. ಹಾಗಾಗಿ, ಕಡಿಮೆ ಖರ್ಚಿನ ಹಾಗೂ ಪರಿಸರಸ್ನೇಹಿ ಇಂಧನವಾಗಿರುವ ಎಥೆನಾಲ್ ಉತ್ಪಾದನೆಗೆ ಭಾರತದಲ್ಲಿ ಮುಕ್ತ ಅವಕಾಶ ದೊರೆಯಬೇಕು. ಪ್ರಸಕ್ತ ಪಶ್ಚಿಮ ಏಷ್ಯಾದ ಬಿಕ್ಕಟ್ಟಿನ ಸಮಯವು ಎಥೆನಾಲ್ ವಿಷಯದಲ್ಲಿ ಐತಿಹಾಸಿಕ ನಿರ್ಣಯ ಕೈಗೊಳ್ಳಲು ಸಕಾಲವಾಗಿದೆ.

ಬ್ರೆಜಿಲ್ ಮತ್ತು ಅಮೆರಿಕಗಳಂತೆ ಭಾರತದಲ್ಲಿಯೂ ಎಥೆನಾಲ್ ಮಿಶ್ರಣ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು ಮತ್ತು ಡೀಸೆಲ್‌ನಲ್ಲಿಯೂ ಎಥೆನಾಲ್ ಸೇರಿಸಬೇಕು. ಈಗಾಗಲೇ ಭಾರತದಲ್ಲಿ ಎಥೆನಾಲ್‌ಗೆ ಸರಿಹೊಂದುವ ವಾಹನಗಳನ್ನು ತಯಾರಿಸಲಾಗುತ್ತಿದೆ. ಎಥೆನಾಲ್ ಬಳಕೆಯ ವಿಷಯದಲ್ಲಿದ್ದ ಗೊಂದಲಗಳಿಗೆ ಸುಪ್ರೀಂ ಕೋರ್ಟ್ ಪೂರಕವಾದ ತೀರ್ಪು ನೀಡಿದೆ. ಹಾಗಾಗಿ, ಎಥೆನಾಲ್ ಆಧಾರಿತ ಒಲೆಗಳನ್ನು ಅಭಿವೃದ್ಧಿಪಡಿಸಿ, ನಮ್ಮ ಅಡುಗೆಮನೆಗಳಿಗೆ ಹೊಸ ಸಾಧ್ಯತೆ ಪರಿಚಯಿಸಬಹುದಾಗಿದೆ. ಈ ನಿಟ್ಟಿನಲ್ಲಿ ಎಥೆನಾಲ್ ಘಟಕಗಳಿಗೆ ಸಹಕಾರ ಮತ್ತು ಸಹಾಯಧನವನ್ನು ಸರ್ಕಾರ ಕಲ್ಪಿಸಬೇಕು.

ಶೇ 20ರಷ್ಟು ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ ಬಳಕೆಗೆ 2023ರ ಏಪ್ರಿಲ್‌ನಿಂದ ಅವಕಾಶ ದೊರೆತಿದೆ. ಬ್ರೆಜಿಲ್‌ನಲ್ಲಿ ಪೂರ್ಣ ಪ್ರಮಾಣದಲ್ಲಿ ಎಥೆನಾಲ್ ಇಂಧನದಿಂದಲೇ ಸಂಚರಿಸುವ ವಾಹನಗಳನ್ನು ಬಳಸಲಾಗುತ್ತಿದೆ. ಅದು ನಮ್ಮಲ್ಲೂ ಸಾಧ್ಯವಾಗಬೇಕು. ಪ್ರಸ್ತುತ ಭಾರತದಲ್ಲಿನ ವಾಹನಗಳಿಗೆ ವಾರ್ಷಿಕವಾಗಿ 50 ಬಿಲಿಯನ್ ಲೀಟರ್ ಪೆಟ್ರೋಲ್ ಅವಶ್ಯಕತೆಯಿದೆ. ಇದರಲ್ಲಿ 10 ಬಿಲಿಯನ್ ಲೀಟರ್‌ನಷ್ಟು ಎಥೆನಾಲ್ ಮಿಶ್ರಣ ಆಗುತ್ತಿದೆ ಮತ್ತು ಇದರಿಂದ ದೇಶಕ್ಕೆ ಆರ್ಥಿಕತೆ ಬೆಳವಣಿಗೆಗೂ ಅನುಕೂಲ ಆಗಿದೆ; ಅಲ್ಪ ಪ್ರಮಾಣದಲ್ಲಿ ಪರಿಸರ ಸಂರಕ್ಷಣೆಯೂ ಆಗಿದೆ.

ಎಥೆನಾಲ್‌ನಿಂದ ಸಾಕಷ್ಟು ಉಪಯೋಗಗಳಿದ್ದರೂ, ಕೇಂದ್ರ ಸರ್ಕಾರದ ನೀತಿಗಳು ಪೂರಕವಾಗಿಲ್ಲ. ಎಥೆನಾಲ್ ಉತ್ಪಾದನೆಗಾಗಿ ಸರ್ಕಾರ ಹಲವು ಷರತ್ತುಗಳನ್ನು ವಿಧಿಸಿದೆ. ಇದರ ಪರಿಣಾಮ ಸಕ್ಕರೆ ಕಾರ್ಖಾನೆಗಳ ಮೇಲಾಗಿದೆ. ಹೆಚ್ಚುತ್ತಿರುವ ಕಬ್ಬಿನ ದರವನ್ನು ಸರಿದೂಗಿಸಲು ಪ್ರಯಾಸಪಡುತ್ತಿರುವ ಸಕ್ಕರೆ ಕಾರ್ಖಾನೆಗಳು ಸಂಕಷ್ಟದಲ್ಲಿವೆ. ದೇಶದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಥೆನಾಲ್ ಉತ್ಪಾದನೆಗೆ ಕೇಂದ್ರ ಸರ್ಕಾರವು ಷರತ್ತುರಹಿತ ಅನುಮತಿ ನೀಡಬೇಕಾಗಿದೆ.

ಲೇಖಕ: ಸಹಾಯಕ ಮಹಾ ಪ್ರಬಂಧಕ ಜಮಖಂಡಿ ಸಕ್ಕರೆ ಕಾರ್ಖಾನೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿದ್ಯಾರ್ಥಿ ಚುನಾವಣೆಯ ಸುತ್ತ

ಶೈಕ್ಷಣಿಕ ವಾತಾವರಣದ ಮೇಲೆ ಬೀರುವುದೇ ಪರಿಣಾಮ?

ಪ್ರಜಾವಾಣಿ ವಾರ್ತೆ

ರಾಜ್ಯದ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 2026-2027ರ ಬಜೆಟ್ ಭಾಷಣದಲ್ಲಿ ಪ್ರಸ್ತಾಪಿಸಿದ್ದರು. ವಿದ್ಯಾರ್ಥಿಗಳಲ್ಲಿ ನಾಯಕತ್ವ, ಹೊಣೆಗಾರಿಕೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ನಡೆಸಲು ಉದ್ದೇಶಿಸಲಾಗಿದೆ ಎಂದಿದ್ದರು. ಈ ವಿಚಾರದಲ್ಲಿ ರಾಜ್ಯ ಸರ್ಕಾರವು ಈಗ ಒಂದು ಹೆಜ್ಜೆ ಮುಂದಿಟ್ಟಿದೆ. ವಿವಿಧ ಪಕ್ಷಗಳ ವಿದ್ಯಾರ್ಥಿ ಘಟಕಗಳೊಂದಿಗೆ ಉನ್ನತ ಶಿಕ್ಷಣ ಸಚಿವರು ಮಾತುಕತೆ ನಡೆಸಿದ್ದಾರೆ. ಜೆ.ಎಂ.ಲಿಂಗ್ಡೊ ಅವರ ಸಮಿತಿಯ ಶಿಫಾರಸಿನಂತೆ ದೇಶದ ಹಲವು ವಿಶ್ವವಿದ್ಯಾಲಯಗಳು ವಿದ್ಯಾರ್ಥಿ ಚುನಾವಣೆಗಳನ್ನು ನಡೆಸುತ್ತಿವೆ. ರಾಜ್ಯದಲ್ಲಿಯೂ ಅದೇ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ಚುನಾವಣೆಗಳನ್ನು ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ರೂಪಿಸುವುದಾಗಿ ಸಚಿವರು ತಿಳಿಸಿದ್ದಾರೆ.

ರಾಜ್ಯದಲ್ಲಿ ವಿದ್ಯಾರ್ಥಿ ಚುನಾವಣೆಗಳಿಗೆ ದಶಕಗಳ ಇತಿಹಾಸವಿದೆ. ಎಪ್ಪತ್ತು, ಎಂಬತ್ತರ ದಶಕಗಳಲ್ಲಿ ವಿದ್ಯಾರ್ಥಿ ಚುನಾವಣೆಗಳು ಭಾರಿ ಪ್ರಾಮುಖ್ಯ ಪಡೆದಿದ್ದವು. ವಿದ್ಯಾರ್ಥಿ ಚುನಾವಣೆಗಳಲ್ಲಿ ಸ್ಪರ್ಧಿಸುವುದು, ಗೆಲ್ಲುವುದು ಕೇವಲ ಆ ಕಾಲೇಜಿನ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ ವಿಚಾರ ಮಾತ್ರವೇ ಆಗಿರಲಿಲ್ಲ; ಹಲವು ಕಾರಣಗಳಿಗೆ ಅದು ಪ್ರಭಾವ ಮತ್ತು ಪ್ರತಿಷ್ಠೆಯ ವಿಚಾರವಾಗಿತ್ತು. ವಿದ್ಯಾರ್ಥಿ ಮುಖಂಡರು ಶೈಕ್ಷಣಿಕ ವಿಚಾರಗಳ ಜತೆಗೆ ನಾಡಿನ ಹಲವು ಸಮಸ್ಯೆಗಳ ಕುರಿತ ಹೋರಾಟ, ಚಳವಳಿಗಳಲ್ಲೂ ಸಕ್ರಿಯರಾಗಿ ಭಾಗವಹಿಸುತ್ತಿದ್ದರು. ವಿದ್ಯಾರ್ಥಿ ಮುಖಂಡರು ವಿಶ್ವವಿದ್ಯಾಲಯಗಳ ಸೆನೆಟ್ ಸಭೆಗಳಲ್ಲಿಯೂ ಪಾಲ್ಗೊಳ್ಳುತ್ತಿದ್ದರು.

ಈಗ ರಾಜ್ಯದಲ್ಲಿ ಸಚಿವರು, ಶಾಸಕರಾಗಿರುವ ಹಲವರು ಆಗ ವಿದ್ಯಾರ್ಥಿ ಮುಖಂಡರಾಗಿದ್ದವರು. ಆದರೆ, ಕ್ರಮೇಣ ರಾಜಕೀಯ ಪಕ್ಷಗಳು ವಿದ್ಯಾರ್ಥಿ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡುವುದು ಹೆಚ್ಚಾಯಿತು. ಪಕ್ಷಗಳ ಕಾರ್ಯಸೂಚಿಗಳು ವಿದ್ಯಾಸಂಸ್ಥೆಗಳಲ್ಲಿ ಪ್ರತಿಧ್ವನಿಸತೊಡಗಿದವು. ಚುನಾವಣೆ ಸಂಬಂಧದ ಗುಂಪುಗಾರಿಕೆ, ಘರ್ಷಣೆ, ವೈಷಮ್ಯ, ಹಿಂಸಾಚಾರಗಳು ಹೆಚ್ಚಾದವು. ಶೈಕ್ಷಣಿಕ ವಾತಾವರಣ ಹದಗೆಟ್ಟಿತು. ರಾಜ್ಯ ಸರ್ಕಾರವು ಮೊದಲಿಗೆ ಕೆಲವು ವಿದ್ಯಾರ್ಥಿ ಸಂಘಗಳಿಗೆ ಚುನಾವಣೆ ನಡೆಸುವುದನ್ನು ನಿಷೇಧಿಸಿತು. ನಂತರ ಅಲ್ಪ ಕಾಲ ಚುನಾವಣೆಗಳು ನಡೆಯಲು ಅನುಮತಿ ನೀಡಲಾಯಿತು. ಅಂತಿಮವಾಗಿ 1989ರಲ್ಲಿ ವೀರೇಂದ್ರ ಪಾಟೀಲ್ ಅವರ ಸರ್ಕಾರವು ವಿದ್ಯಾರ್ಥಿ ಚುನಾವಣೆಗಳನ್ನು ನಿಷೇಧಿಸಿತು. ನಿಷೇಧದ ನಂತರವೂ ಕೆಲವು ಕಾಲೇಜುಗಳಲ್ಲಿ ಚುನಾವಣೆಗಳು ನಡೆದಿವೆ. ಆದರೆ, ಅವುಗಳಿಗೆ ವಿಶ್ವವಿದ್ಯಾಲಯದ ಆಡಳಿತದಲ್ಲಿ ಮಾನ್ಯತೆ ಇರಲಿಲ್ಲ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000 ಪ್ರಕಾರ, ವಿಶ್ವವಿದ್ಯಾಲಯದಿಂದ ನಾಮನಿರ್ದೇಶನಗೊಂಡ ವಿದ್ಯಾರ್ಥಿಗಳು ಸಂಸ್ಥೆಯ ಆಡಳಿತದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಆದರೆ, ವಿದ್ಯಾರ್ಥಿ ಸಮುದಾಯವನ್ನು ಪ್ರತಿನಿಧಿಸಬೇಕಾದ ಮುಖಂಡರು ಕಾಲೇಜು ಆಡಳಿತ ಮಂಡಳಿಗಳ ಪರ ವಹಿಸಿದ ಅನೇಕ ಉದಾಹರಣೆಗಳಿವೆ. ಈ ರೀತಿ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಪರಿಸ್ಥಿತಿಯು ಅಪ್ರಜಾತಾಂತ್ರಿಕವಾಗಿದೆ. ಈ ಕಾಯ್ದೆ ಪ್ರಕಾರ, ಖಾಸಗಿ ಕಾಲೇಜುಗಳ ಆಡಳಿತದಲ್ಲಿ ವಿದ್ಯಾರ್ಥಿಗಳ ಪ್ರಾತಿನಿಧ್ಯ ಕಡ್ಡಾಯವಲ್ಲ.

ಪ್ರಸ್ತುತ ಸರ್ಕಾರಿ ಕಾಲೇಜು-ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಚುನಾವಣೆಗಳನ್ನು ಪುನರಾರಂಭಿಸಲು ಸರ್ಕಾರ ಉತ್ಸುಕವಾಗಿದ್ದು, ವಿವಿಧ ಪಕ್ಷಗಳು, ಅವುಗಳ ವಿದ್ಯಾರ್ಥಿ ಘಟಕಗಳು ಸರ್ಕಾರದ ನಡೆಯನ್ನು ಸ್ವಾಗತಿಸಿವೆ. ಆದರೆ, ಕೆಲವು ಶಿಕ್ಷಣ ತಜ್ಞರು, ಅಧ್ಯಾಪಕರು, ಪೋಷಕರು ಸರ್ಕಾರದ ನಡೆಯನ್ನು ವಿರೋಧಿಸುತ್ತಿದ್ದಾರೆ.



ಎಐ ಚಿತ್ರ: ಈಶ್ವರ ಬಡಿಗೇರ

ಚುನಾವಣೆ ಕುರಿತು ಪರ – ವಿರೋಧ ಚರ್ಚೆ

ಏಕೆ ಬೇಕು?

- ವಿದ್ಯಾರ್ಥಿ ದೆಸೆಯಲ್ಲಿಯೇ ನಾಯಕತ್ವ ಬೆಳೆಸಿಕೊಳ್ಳಲು ಅನುಕೂಲ
- ವಿವಿ ಆಡಳಿತದಲ್ಲಿ ವಿದ್ಯಾರ್ಥಿ ಪ್ರಾತಿನಿಧ್ಯ ಇರಬೇಕು
- ವಿದ್ಯಾರ್ಥಿಗಳಲ್ಲಿ ರಾಜಕೀಯ ಪ್ರಜ್ಞೆ ಬೆಳೆಯಲು ಸಹಕಾರಿ
- ವಿದ್ಯಾರ್ಥಿಗಳ ರಾಜಕೀಯ-ಸಾಮಾಜಿಕ ಕ್ರಿಯಾಶೀಲತೆಗೆ ವೇದಿಕೆ ಕಲ್ಪಿಸುತ್ತದೆ
- ವಿದ್ಯಾರ್ಥಿಗಳ ರಾಜಕೀಯ, ಸಾಮಾಜಿಕ ಗ್ರಹಿಕೆಗೆ ಚುನಾವಣೆಗಳು ವೇದಿಕೆ ಆಗಬೇಕು
- ಕಾಲೇಜು/ವಿ.ವಿ. ಮಟ್ಟದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಗಬೇಕಾದ ಕೆಲಸಗಳನ್ನು ಮಾಡಿಸುವುದು
- ಹಾಸ್ಟೆಲ್, ಕ್ಯಾಂಟೀನ್, ಕಾಲೇಜು ಶುಲ್ಕ, ಪರೀಕ್ಷೆ-ಫಲಿತಾಂಶಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅನುಕೂಲ

ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಬೇಕೇ?

ಬೇಕು | ಬೇಡ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಏಕೆ ಬೇಡ?

- ವಿದ್ಯಾರ್ಥಿ ಚುನಾವಣೆಗಳಿಂದ ಕಾಲೇಜುಗಳಲ್ಲಿ ಗುಂಪುಗಾರಿಕೆ, ವೈಷಮ್ಯ, ಹಿಂಸಾಚಾರ ಉಂಟಾಗುವ ಅಪಾಯ
- ರಾಜಕಾರಣದಲ್ಲಿ ಕಾಣಲಾಗುವ (ಜಾತೀಯತೆ, ಸ್ವಜನಪಕ್ಷಪಾತ, ಭ್ರಷ್ಟಾಚಾರ, ಮದ್ಯ, ಹಣ ಕೊಟ್ಟು ಮತ ಕೊಳ್ಳುವ ಪರಿಪಾಟ ಇತ್ಯಾದಿ) ಎಲ್ಲ ರೀತಿಯ ಪಿಡುಗುಗಳೂ ವಿದ್ಯಾಸಂಸ್ಥೆಗಳನ್ನು ಪ್ರವೇಶಿಸುವ ಆತಂಕ
- ರಾಜಕೀಯ ಪಕ್ಷಗಳಿಗೆ ಕಾರ್ಯಕರ್ತರನ್ನು ಒದಗಿಸುವ ವೇದಿಕೆಗಳಾಗುವ ಸಂಭವ
- ಶೈಕ್ಷಣಿಕ ವಾತಾವರಣ ಹದಗೆಡುವ ಅಪಾಯ

ಜೆಎನ್‌ಯು ಇತಿಹಾಸ

ದೇಶದ ಬಹುತೇಕ ಹಳೆಯ ಮತ್ತು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಗಲಭೆ, ಹಿಂಸಾಚಾರ ಸೇರಿದಂತೆ ವಿವಿಧ ಕಾರಣಗಳಿಂದ ವಿದ್ಯಾರ್ಥಿ ಚುನಾವಣೆಗಳನ್ನು ನಿರ್ಬಂಧಿಸಲಾಗಿದೆ ಇಲ್ಲವೇ ತಡೆಹಿಡಿಯಲಾಗಿದೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ 1996ರ ನಂತರ ವಿದ್ಯಾರ್ಥಿ ಚುನಾವಣೆಗಳು ನಡೆದಿಲ್ಲ. ಗಲಭೆಗಳ ಕಾರಣಕ್ಕೆ ಚುನಾವಣೆಗಳನ್ನು ನಡೆಸದಿರಲು ವಿ.ವಿ. ತೀರ್ಮಾನಿಸಿದೆ ಎನ್ನಲಾಗುತ್ತಿದೆ. ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ 2017-2018ರ ನಂತರ ಉದ್ವಿಗ್ನ ಸ್ಥಿತಿ ಮತ್ತು ಇತರ ಕಾರಣಗಳಿಂದ ಚುನಾವಣೆಗಳನ್ನು ನಿಲ್ಲಿಸಲಾಗಿದೆ. ದೇಶಕ್ಕೆ ವಿ.ಪಿ.ಸಿಂಗ್, ಚಂದ್ರಶೇಖರ್ ಅವರಂಥ ಪ್ರಧಾನಿಗಳನ್ನು ನೀಡಿದ ಅಲಹಾಬಾದ್ ವಿ.ವಿ.ಯಲ್ಲೂ ಹಿಂಸಾಚಾರದ ಕಾರಣಕ್ಕೆ ಕ್ಯಾಂಪಸ್ ಚುನಾವಣೆಗಳನ್ನು ನಿಲ್ಲಿಸಲಾಗಿದೆ. ಈ ವಿಚಾರವು ಹೈಕೋರ್ಟ್ ಮೆಟ್ಟಿಲನ್ನೂ ಏರಿದೆ.

ವಿದ್ಯಾರ್ಥಿ ಚುನಾವಣೆ ಮತ್ತು ವಿದ್ಯಾರ್ಥಿಗಳು ನಡೆಸಿದ ಹೋರಾಟಗಳಿಂದಲೇ ದೇಶದಲ್ಲಿ ಖ್ಯಾತಿ ಗಳಿಸಿರುವುದು ದೆಹಲಿಯ ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು). ದೇಶದ ಅನೇಕ ರಾಜಕಾರಣಿಗಳು ಈ ವಿಶ್ವವಿದ್ಯಾಲಯದಿಂದಲೇ ರಾಜಕೀಯ ತಾಲೀಮು ಆರಂಭಿಸಿದವರು. ಬಹಳ ಕಾಲದವರೆಗೆ ಜೆಎನ್‌ಯು ಅನ್ನು ಎಡಪಂಥೀಯ ರಾಜಕಾರಣ ಮತ್ತು ತಾತ್ವಿಕತೆಯ ಕೇಂದ್ರ ಎಂದೇ ಹಲವರು ಭಾವಿಸಿದ್ದರು. ಇಲ್ಲಿನ ಚುನಾವಣೆಯು ರಾಜಕೀಯ ಪಕ್ಷಗಳ ಪಾಲಿಗೆ ಅತ್ಯಂತ ಪ್ರತಿಷ್ಠೆಯ ವಿಚಾರವಾಗಿದೆ. ಜೆಎನ್‌ಯು ವಿದ್ಯಾರ್ಥಿ ಚುನಾವಣೆಯಲ್ಲಿ ತಮ್ಮ ಪಕ್ಷದ ಪರವಾದ ವಿದ್ಯಾರ್ಥಿಗಳೇ ಗೆಲ್ಲಬೇಕು ಎಂದು ರಾಷ್ಟ್ರೀಯ ಪಕ್ಷಗಳು ಭಾರಿ ಕಸರತ್ತು, ಪ್ರಯತ್ನ ನಡೆಸುತ್ತವೆ. ಬಿಜೆಪಿ ಬೆಂಬಲಿತ ಎಬಿವಿಪಿ ಮತ್ತು ಎಡಪಕ್ಷಗಳ ಬೆಂಬಲದ ವಿದ್ಯಾರ್ಥಿ ಸಂಘಗಳ ನಡುವೆ ಪ್ರತಿ ಚುನಾವಣೆಯಲ್ಲೂ ಭಾರಿ ಜಿದ್ದಾಜಿದ್ದಿ ನಡೆಯುತ್ತದೆ. ಕನ್ಹಯ್ಯ ಕುಮಾರ್ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿದ್ದವರು. ಎನ್‌ಆರ್‌ಸಿ, ಸಿಎಎ ವಿರೋಧಿ ಹೋರಾಟಗಳಿಗೆ ಜೆಎನ್‌ಯು ವೇದಿಕೆಯಾಗಿತ್ತು. 2020ರಲ್ಲಿ ಗಲಭೆ ಪಿತೂರಿ ಆರೋಪದ ಮೇಲೆ ಬಂಧಿತರಾಗಿ ಜೈಲಿನಲ್ಲಿರುವ ಉಮರ್ ಖಾಲಿದ್ ಕೂಡ ಜೆಎನ್‌ಯು ವಿದ್ಯಾರ್ಥಿಯಾಗಿದ್ದರು.


ಹಾಸ್ಟೆಲ್ ಕರಡು ಕೈಪಿಡಿ ಹಿಂಪಡೆಯುವಂತೆ ಜೆಎನ್‌ಯು ವಿದ್ಯಾರ್ಥಿಗಳು 2019ರ ನವೆಂಬರ್ 11ರಂದು ಪ್ರತಿಭಟನೆ ನಡೆಸಿದ್ದರು –ಎಎಫ್‌ಪಿ ಸಂಗ್ರಹ ಚಿತ್ರ

ಲಿಂಗ್ಡೊ ನೇತೃತ್ವದ ಸಮಿತಿಯ ವರದಿ ಹೇಳುವುದೇನು?

ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಿದ್ಯಾರ್ಥಿ ಸಂಘಗಳ ಚುನಾವಣೆಗಳಲ್ಲಿ ಸುಧಾರಣೆ ತರುವ ದಿಸೆಯಲ್ಲಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ, ಶಿಫಾರಸುಗಳನ್ನು ಮಾಡಲು ಸಮಿತಿಯೊಂದನ್ನು ರಚಿಸುವಂತೆ ಸುಪ್ರೀಂ ಕೋರ್ಟ್ 2005ರ ಡಿಸೆಂಬರ್ 12ರಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಕ್ಕೆ (ಎಂಎಚ್‌ಆರ್‌ಡಿ) ಸೂಚಿಸಿತ್ತು. ನ್ಯಾಯಾಲಯದ ನಿರ್ದೇಶನದ ಅನ್ವಯ, ಸಚಿವಾಲಯವು 2006ರ ಜನವರಿ 4ರಂದು ಭಾರತೀಯ ಚುನಾವಣಾ ಆಯೋಗದ ನಿವೃತ್ತ ಮುಖ್ಯ ಆಯುಕ್ತ ಜೆ.ಎಂ.ಲಿಂಗ್ಡೊ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು. ಸಮಿತಿಯು 2006ರ ಮೇ 23ರಂದು ಹಲವು ಶಿಫಾರಸುಗಳನ್ನೊಳಗೊಂಡ ವರದಿಯನ್ನು ಸಲ್ಲಿಸಿತ್ತು. ಸುಪ್ರೀಂ ಕೋರ್ಟ್ ಕೂಡ ಈ ಎಲ್ಲ ಶಿಫಾರಸುಗಳನ್ನು ಒಪ್ಪಿಕೊಂಡಿತ್ತು.


ಜೆ.ಎಂ.ಲಿಂಗ್ಡೊ

ಈ ಸಮಿತಿಯ ರಚನೆಗೆ ಕಾರಣವಾಗಿದ್ದು, ಕೇರಳದಲ್ಲಿ ನಡೆದ ಒಂದು ಪ್ರಕರಣ. ಕಾಲೇಜೊಂದರ ವಿದ್ಯಾರ್ಥಿ ಸಂಘಟನೆಯ ಪ್ರತಿನಿಧಿಯಾಗಿದ್ದ ವಿದ್ಯಾರ್ಥಿಯೊಬ್ಬನಿಗೆ ಹಾಜರಾತಿ ಕೊರತೆ ಇದ್ದುದರಿಂದ ಪರೀಕ್ಷೆ ಬರೆಯಲು ಆ ಕಾಲೇಜಿನ ಪ್ರಾಂಶುಪಾಲರು ಅವಕಾಶ ನೀಡಿರಲಿಲ್ಲ. ವಿದ್ಯಾರ್ಥಿಯು ಈ ನಿರ್ಧಾರವನ್ನು ಪ್ರಶ್ನಿಸಿ ಕೇರಳ ಹೈಕೋರ್ಟ್‌ನ ಮೆಟ್ಟಿಲೇರಿದ್ದ. ಪ್ರಾಂಶುಪಾಲರ ನಿರ್ಧಾರವನ್ನು ಎತ್ತಿಹಿಡಿದು ಹೈಕೋರ್ಟ್ ತೀರ್ಪು ನೀಡಿತ್ತು. ಪ್ರಾಂಶುಪಾಲರ ಸಂಘವು ಸಂಸತ್ ಮಾದರಿಯ (ನೇರವಾಗಿ ವಿದ್ಯಾರ್ಥಿಗಳೇ ಆಯ್ಕೆ ಮಾಡುವುದು) ಬದಲು ಅಧ್ಯಕ್ಷೀಯ ಚುನಾವಣೆ (ತರಗತಿವಾರು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ, ನಂತರ ಅವರು ಇಡೀ ಕಾಲೇಜಿನ ವಿದ್ಯಾರ್ಥಿ ನಾಯಕನನ್ನು ಆಯ್ಕೆ ಮಾಡುವುದು) ಮಾದರಿಯಲ್ಲಿ ವಿದ್ಯಾರ್ಥಿ ಸಂಘಟನೆಗಳಿಗೆ ಚುನಾವಣೆ ನಡೆಸಬೇಕು ಎಂದು ಪ್ರತಿಪಾದಿಸಿತ್ತು. ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಕೇರಳದ ವಿಶ್ವವಿದ್ಯಾಲಯ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ರಜಾ ಕಾಲದ ಅರ್ಜಿ ಸಲ್ಲಿಸಿತ್ತು.

ಪ್ರಮುಖ ಮಾರ್ಗಸೂಚಿಗಳು ಮತ್ತು ಶಿಫಾರಸುಗಳು

- ದೇಶದಾದ್ಯಂತ ಇರುವ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳನ್ನು ಪ್ರತಿನಿಧಿಸುವ ಸಂಘಕ್ಕೆ ವಿದ್ಯಾರ್ಥಿಗಳನ್ನು ನೇಮಕ ಮಾಡಲು ಚುನಾವಣೆ ನಡೆಸಬೇಕು. ಒಂದು ವೇಳೆ ಪಾರದರ್ಶಕ ಚುನಾವಣೆ ನಡೆಸುವ ವಾತಾವರಣ ಇಲ್ಲದೇ ಇದ್ದರೆ, ತಾತ್ಕಾಲಿಕ ಅವಧಿಗಾಗಿ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ನಾಮನಿರ್ದೇಶನದ ಮೂಲಕ ನೇಮಕ ಮಾಡಬೇಕು
- ಜೆಎನ್‌ಯು, ಹೈದರಾಬಾದ್ ವಿವಿಯಂತಹ ಸಂಯೋಜಿತ ಕಾಲೇಜುಗಳು, ವಿದ್ಯಾರ್ಥಿಗಳು ಕಡಿಮೆ ಇರುವ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಪ್ರತಿನಿಧಿಗಳನ್ನು ವಿದ್ಯಾರ್ಥಿಗಳು ನೇರವಾಗಿ ಆಯ್ಕೆ ಮಾಡುವ ಚುನಾವಣಾ ವ್ಯವಸ್ಥೆಯನ್ನು ಅನುಸರಿಸಬಹುದು. ದೊಡ್ಡ ವಿಶ್ವವಿದ್ಯಾಲಯಗಳಲ್ಲಿ ಸಂಯೋಜಿತ ಕಾಲೇಜುಗಳು ಮತ್ತು ವಿವಿ ಕ್ಯಾಂಪಸ್‌ಗೆ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಮೊದಲಿಗೆ ಆಯ್ಕೆ ಮಾಡಿ, ನಂತರ ಈ ಪ್ರತಿನಿಧಿಗಳು ವಿವಿ ವಿದ್ಯಾರ್ಥಿ ಸಂಘದ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು
- ವಿದ್ಯಾರ್ಥಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು, ಅವುಗಳ ಮುಖಂಡರು ಭಾಗಿಯಾಗುವುದನ್ನು ತಡೆಯಬೇಕು. ಇದಕ್ಕಾಗಿ ಕಾಲೇಜು ಅಥವಾ ವಿಶ್ವವಿದ್ಯಾಲಯದ ವಿದ್ಯಾರ್ಥಿ ಅಲ್ಲದವರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲೇಬಾರದು
- ಚುನಾವಣೆ ವಾರ್ಷಿಕವಾಗಿ ನಡೆಯಬೇಕು. ಶೈಕ್ಷಣಿಕ ವರ್ಷ ಆರಂಭಗೊಂಡ ಆರರಿಂದ ಎಂಟು ವಾರದ ಒಳಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು. ಇಡೀ ಪ್ರಕ್ರಿಯೆ 10 ದಿನಗಳಲ್ಲಿ ಮುಗಿಯಬೇಕು
- ಪದವಿ ಕಾಲೇಜುಗಳಲ್ಲಿ 17ರಿಂದ 22 ವರ್ಷದೊಳಗಿನ ವಿದ್ಯಾರ್ಥಿಗಳು ಚುನಾವಣೆಗೆ ಸ್ಪರ್ಧಿಸಬಹುದು. 4ರಿಂದ 5 ವರ್ಷಗಳ ಕೋರ್ಸ್‌ಗಳನ್ನು ಹೊಂದಿರುವ ವೃತ್ತಿಪರ ಕಾಲೇಜುಗಳ ವಿಚಾರದಲ್ಲಿ ವಯಸ್ಸಿನ ಮಿತಿಯಲ್ಲಿ ಸೂಕ್ತ ಸಡಿಲಿಕೆ ಮಾಡಿಕೊಳ್ಳಬಹುದು. ಚುನಾವಣೆಯಲ್ಲಿ ಸ್ಪರ್ಧಿಸುವವರು ಸ್ನಾತಕೋತ್ತರ ವಿದ್ಯಾರ್ಥಿಗಳಾದರೆ ಅವರ ಗರಿಷ್ಠ ವಯಸ್ಸಿನ ಮಿತಿ 24ರಿಂದ 25 ವರ್ಷಗಳು. ಸಂಶೋಧನಾ ವಿದ್ಯಾರ್ಥಿಗಳಿಗೆ ಈ ಮಿತಿ ಗರಿಷ್ಠ 28 ವರ್ಷ
- ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸುವ ಅಭ್ಯರ್ಥಿಯು ಆ ವರ್ಷ ಯಾವ ಪಠ್ಯ ವಿಷಯವನ್ನೂ ಬಾಕಿ ಉಳಿಸಿಕೊಂಡಿರಬಾರದು, ಅಭ್ಯರ್ಥಿಯು ವಿವಿ ನಿಗದಿಪಡಿಸುವ ಕನಿಷ್ಠ ಹಾಜರಾತಿ ಪ್ರಮಾಣ ಅಥವಾ ಶೇ 75ರಷ್ಟು ಹಾಜರಾತಿ, ಈ ಎರಡರಲ್ಲಿ ಯಾವುದು ಗರಿಷ್ಠವೋ ಅಷ್ಟು ಪ್ರಮಾಣದ ಹಾಜರಾತಿ ಹೊಂದಿರಬೇಕು
- ಒಬ್ಬ ವಿದ್ಯಾರ್ಥಿಯು ಸಂಘದ ಕಾರ್ಯಕಾರಿ ಸದಸ್ಯತ್ವಕ್ಕೆ ಎರಡು ಬಾರಿ ಮತ್ತು ಸಂಘದ ಪದಾಧಿಕಾರಿ ಸ್ಥಾನಕ್ಕೆ ಒಂದು ಬಾರಿ ಮಾತ್ರ ಸ್ಪರ್ಧಿಸಬಹುದು
- ವಿದ್ಯಾರ್ಥಿಯು ಅಪರಾಧ ಹಿನ್ನೆಲೆ ಹೊಂದಿರಬಾರದು. ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರಬಾರದು, ವಿವಿ/ಕಾಲೇಜು ಆಡಳಿತದಿಂದ ಶಿಸ್ತು ಕ್ರಮವನ್ನೂ ಎದುರಿಸಿರಬಾರದು
- ಅಭ್ಯರ್ಥಿಯೊಬ್ಬ ಗರಿಷ್ಠ ಎಂದರೆ ₹5,000 ವೆಚ್ಚ ಮಾಡಬಹುದು. ಫಲಿತಾಂಶ ಪ್ರಕಟವಾದ ಎರಡು ವಾರಗಳ ಒಳಗಾಗಿ ಪ್ರತಿ ಅಭ್ಯರ್ಥಿಯು ವೆಚ್ಚದ ಲೆಕ್ಕಾಚಾರ ಮಾಡಿ, ಅದರ ವಿವರಗಳನ್ನು ಕಾಲೇಜು/ವಿಶ್ವವಿದ್ಯಾಲಯದ ಆಡಳಿತಕ್ಕೆ ಸಲ್ಲಿಸಬೇಕು. ನಿಯಮಗಳನ್ನು ಪಾಲನೆ ಮಾಡದಿದ್ದರೆ ಅಥವಾ ಮಿತಿಗಿಂತ ಹೆಚ್ಚು ಮಾಡಿದ್ದರೆ, ಅಭ್ಯರ್ಥಿಯ ಆಯ್ಕೆಯನ್ನು ಅಸಿಂಧುಗೊಳಿಸಬೇಕು
- ರಾಜಕೀಯ ಪಕ್ಷಗಳು ವಿದ್ಯಾರ್ಥಿ ಚುನಾವಣೆಗೆ ಹಣ ನೀಡುವುದನ್ನು ತಡೆಯಲು ವಿದ್ಯಾರ್ಥಿ ಸಂಘದ ಸ್ವಯಂಪ್ರೇರಿತ ದೇಣಿಗೆಯನ್ನು ಬಿಟ್ಟು ಬೇರೆ ಯಾವುದೇ ಮೂಲಗಳಿಂದ ಪಡೆದ ಹಣದ ಬಳಕೆಯನ್ನು ನಿರ್ಬಂಧಿಸಬೇಕು
- ಯಾವುದೇ ಅಭ್ಯರ್ಥಿ ಜಾತಿ, ಧರ್ಮ, ಭಾಷಾ ಸಮುದಾಯಗಳು ಅಥವಾ ವಿದ್ಯಾರ್ಥಿ ಗುಂಪುಗಳ ನಡುವೆ ಸಂಘರ್ಷ ಉಂಟು ಮಾಡುವ ರೀತಿಯಲ್ಲಿ ನಡೆದುಕೊಳ್ಳಬಾರದು. ಬೇರೆ ವಿದ್ಯಾರ್ಥಿಗಳನ್ನು ಅವರು ರೂಪಿಸಿದ ಕಾರ್ಯಕ್ರಮಗಳು ಮತ್ತು ನೀತಿಗಳ ಆಧಾರದಲ್ಲಿ ಮಾತ್ರ ಟೀಕಿಸಬೇಕು. ಬೇರೆ ಅಭ್ಯರ್ಥಿಗಳ ಖಾಸಗಿ ಜೀವನದ ಬಗ್ಗೆ ಮಾತನಾಡಬಾರದು
- ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ಭ್ರಷ್ಟಾಚಾರ, ಲಂಚ, ಆಮಿಷ ನೀಡುವಂತಹ ಕೃತ್ಯಗಳಲ್ಲಿ ತೊಡಗಬಾರದು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256


ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಈ ದಿಸೆಯಲ್ಲಿ ಬಿಜೆಪಿ ನಾಯಕರು ಹೊರಡಿಸಿದ್ದು ಎನ್ನಲಾದ ಪತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಜ್ಯದ ಚುನಾವಣೆಯಲ್ಲಿ ಮತದಾನ ಮಾಡಲು ಬಿಜೆಪಿಯು ಹೊರರಾಜ್ಯಗಳಿಂದ ಕಾರ್ಯಕರ್ತರನ್ನು ಕರೆತರುತ್ತಿದೆ. ಹೊರರಾಜ್ಯಗಳಿಂದ ಮತ ಹಾಕಲು ಬಂದವರಿಗೆ ಅಗತ್ಯ ಇರುವ ಸೌಕರ್ಯಗಳನ್ನು ಕಲ್ಪಿಸುವಂತೆ ಪಕ್ಷವು ತನ್ನ ಕಾರ್ಯಕರ್ತರಿಗೆ ಸೂಚಿಸಿದೆ ಎಂದು ಪತ್ರವನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಪತ್ರವನ್ನು ರಿವರ್ಸ್ ಇಮೇಜ್ ಸರ್ಚ್ ಮಾಡಿದಾಗ, ಹಲವರು ಇಂಥದೇ ಪ್ರತಿಪಾದನೆಯೊಂದಿಗೆ ಪತ್ರ ಹಂಚಿಕೊಂಡಿರುವುದು ಕಂಡಿತು. ಪತ್ರದಲ್ಲಿ ಬಿಜೆಪಿಯ ಮಾಸ್ಟ್‌ಹೆಡ್, ಲೋಗೊ, ವಿಳಾಸ ಇದ್ದು, ಅದಕ್ಕೆ ರಾಜ್ಯ ಕಚೇರಿ ಉಸ್ತುವಾರಿ ಸಹಿ ಮಾಡಿದ್ದಾರೆ. ಪತ್ರದ ಮೇಲೆ ಏಪ್ರಿಲ್ 20 ಎಂದಿದೆ. ಆದರೆ, ಟಿಎಂಸಿ ಮುಖಂಡ ಕುನಾಲ್ ಘೋಷ್ ಪತ್ರವನ್ನು ಏಪ್ರಿಲ್ 19ರಂದೇ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ಪತ್ರದ ಮೇಲೆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಕಚೇರಿ ಉಸ್ತುವಾರಿ ಜಗನ್ನಾಥ ಚಟ್ಟೋಪಾಧ್ಯಾಯ ಅವರ ಸಹಿ ಇದೆ. ಆದರೆ, ಜಗನ್ನಾಥ ಅವರು ಪಕ್ಷದ ರಾಜ್ಯ ಉಪಾಧ್ಯಕ್ಷರಲ್ಲೊಬ್ಬರಾಗಿದ್ದಾರೆ. ವಾಸ್‌ಇಟ್‌ಎಐ ಸಾಧನದ ಮೂಲಕ ಪರೀಕ್ಷಿಸಿದಾಗ, ಪತ್ರವು ಎಐನಿಂದ ರೂಪಿಸಿರುವುದು ಎಂದು ಖಚಿತವಾಯಿತು. ಎಐ ನಿರ್ಮಿತ ಪತ್ರವನ್ನು ಹಂಚಿಕೊಳ್ಳುವ ಮೂಲಕ ಸುಳ್ಳು ಪ್ರತಿಪಾದನೆ ಮಾಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಉತ್ತಮ ನಾಗರಿಕರನ್ನು ರೂಪಿಸುವ ಹೊಣೆ

ನುಡಿ ಬೆಳಗು


ರೇಣುಕಾ ನಿಡಗುಂದಿ

ಒಬ್ಬ ವ್ಯಕ್ತಿ ಎಲ್ಲೋ ಹೊರಟಿದ್ದ. ದಾರಿಯಲ್ಲಿ ಅವನಿಗೆ ಕಟ್ಟಿಹಾಕಿದ್ದ ಆನೆಗಳು ಕಂಡವು. ಆನೆಗಳ ಒಂದು ಕಾಲಿಗೆ ಹಗ್ಗದಿಂದ ಕಟ್ಟಲಾಗಿತ್ತು. ಅವನಿಗೆ ಅಚ್ಚರಿಯಾಗುತ್ತದೆ. ಇಷ್ಟು ವಿಶಾಲಕಾಯದ ಆನೆಯನ್ನು ಕೇವಲ ಹಗ್ಗದಿಂದ ಕಟ್ಟಲಾಗಿದೆ, ಅದು ಬಯಸಿದರೆ ಹಗ್ಗ ಕಿತ್ತುಕೊಂಡು ಎಲ್ಲಿ ಬೇಕಾದರೂ ಹೋಗಬಹುದಾಗಿತ್ತು. ಆದರೆ ಅವು ಸ್ಥಿರವಾಗಿದ್ದವು.

ಕುತೂಹಲದಿಂದ ಮಾವುತನನ್ನು ಕೇಳುತ್ತಾನೆ: 'ನಿನ್ನ ಈ ಆನೆಗಳೆಷ್ಟು ಶಾಂತಿಯಿಂದ ನಿಂತುಕೊಂಡಿವೆ. ಓಡಿಹೋಗುವ ಪ್ರಯತ್ನ ಮಾಡುವುದಿಲ್ಲವೇ?' ಮಾವುತ ಉತ್ತರಿಸುತ್ತಾನೆ: 'ಈ ಆನೆಗಳನ್ನು ಚಿಕ್ಕವಿರುವಾಗಿನಿಂದಲೇ ಹೀಗೆ ಹಗ್ಗದಿಂದ ಕಟ್ಟಿಹಾಕುತ್ತೇವೆ. ಆಗ ಅವುಗಳಿಗೆ ಹಗ್ಗವನ್ನು ಕಿತ್ತುಹಾಕಿ ಓಡುವಷ್ಟು ಶಕ್ತಿ ಇರುವುದಿಲ್ಲ. ಅವು ಪ್ರಯತ್ನಿಸಿದರೂ ಹಗ್ಗ ಕಿತ್ತುಕೊಳ್ಳಲಾಗದು. ಹಗ್ಗವನ್ನು ಹರಿಯಲಾಗದು ಎಂಬ ನಂಬಿಕೆ ನಿಧಾನವಾಗಿ ಮನಸ್ಸಿನಲ್ಲಿ ಬೇರೂರುತ್ತದೆ. ಬೆಳೆದು ದೊಡ್ಡವಾದಾಗಲೂ ಅಭ್ಯಾಸಬಲದಿಂದ ಹಾಗೂ ನಂಬಿಕೆಯ ಬಲದಿಂದ ಅವು ಹಾಗೇ ನಿಶ್ಚಿಂತವಾಗಿ ನಿಂತಿರುತ್ತವೆ. ಹಗ್ಗವನ್ನು ಕಿತ್ತುಹಾಕಲು ಯತ್ನಿಸುವುದಿಲ್ಲ. ಆ ವ್ಯಕ್ತಿ ಯೋಚನೆಯಲ್ಲಿ ಮಗ್ನನಾಗುತ್ತಾನೆ. ಇಷ್ಟು ದೊಡ್ಡ ತಾಕತ್ತುಳ್ಳ ಪ್ರಾಣಿಗೆ ಅಭ್ಯಾಸ ಮಾಡಿಸಲಾದ ನಂಬಿಕೆಯ ಫಲವಾಗಿ ಅವು ಕಟ್ಟಿದ ಹಗ್ಗವನ್ನು ಬಿಡಿಸಿಕೊಳ್ಳುವುದಿಲ್ಲ. ಯಾಕೆಂದರೆ ತಮ್ಮಿಂದ ಈ ಹಗ್ಗ ಹರಿಯದು ಎಂಬ ಪಾಠ ಬಾಲ್ಯದಿಂದಲೇ ಕಲಿತಿವೆ.

ಈ ಆನೆಗಳಂತೆಯೇ ಮನುಷ್ಯರಾದ ನಾವು ನಮ್ಮಲ್ಲಿ ಎಷ್ಟೇ ಸಾಮರ್ಥ್ಯವಿದ್ದರೂ ನಮ್ಮ ಕೈಲಾಗದು, ನನ್ನಿಂದ ಸಾಧ್ಯವಿಲ್ಲ ಎಂಬ ನಂಬುಗೆಯನ್ನು ಬೆಳೆಸಿಕೊಂಡು ಸಫಲತೆಗಾಗಿ ಯಾವ ಹೆಚ್ಚಿನ ಪ್ರಯತ್ನವನ್ನು ಮಾಡುವುದಿಲ್ಲ. 'ಅಯ್ಯೋ, ಸಿಬಿಎಸ್‌ಸಿ ಸಿಲೆಬಸ್ ಬಹಳ ಕಠಿಣ, ನಿನ್ನಿಂದ ಓದೋಕಾಗಲ್ಲ, ನೀನು ದಡ್ಡ, ಇಂಗ್ಲಿಷ್ ಮೀಡಿಯಂನಲ್ಲಿ ಓದೋದು ಕಷ್ಟ, ಬಿಸಿನೆಸ್ ಮಾಡೋ ಚಾಕಚಕ್ಯತೆ ನಿನ್ನಲ್ಲಿಲ್ಲ, ಸುಮ್ಮನೇ ಹಣ ಹೂಡಿ ಕೈಸುಟ್ಟುಕೊಳ್ಳಬೇಡ' ಇಂತಹವೇ ಉಪದೇಶಗಳನ್ನು ಕೇಳುತ್ತ ಬದುಕುವ ನಾವು ಒಂದು ರೀತಿ ಈ ಆನೆಗಳಂತೆಯೇ ನಮ್ಮ ಮನಸ್ಸಿನ ಸುತ್ತಲೂ ಕಟ್ಟಲಾದ ನೆಗೆಟಿವ್ ವಿಚಾರ ಸಂಕೋಲೆಯಲ್ಲಿ ಕಟ್ಟಿಹಾಕಲ್ಪಟ್ಟಿದ್ದೇವೆ. ನಮ್ಮಲ್ಲಿ ಅರ್ಹತೆಯೇ ಇಲ್ಲ, ನಮ್ಮಿಂದ ಅಸಾಧ್ಯವೆಂಬ ನಂಬಿಕೆಯಲ್ಲಿಯೇ ದಿನಗಳೆಯುತ್ತೇವೆ.

ಸೋಲು ಗೆಲುವು ಎನ್ನುವುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ನಿರಂತರ ಅಭ್ಯಾಸದಿಂದ ಗೆಲುವನ್ನು ಯಶಸ್ಸನ್ನು ಪಡೆಯಬಹುದು. ನಮ್ಮ ಮನಸ್ಸು ಬುದ್ಧಿಯನ್ನು ಕಟ್ಟಿಹಾಕಿರುವ, ನಿಮ್ಮ ಕನಸುಗಳನ್ನು ತಡೆಯುವ, ಇಚ್ಛಾಶಕ್ತಿಯನ್ನು ಕುಂಠಿತಗೊಳಿಸುವಂತಹ ಯಾವುದೇ ಅಡೆತಡೆಗಳಿದ್ದರೂ ಅವನ್ನು ದಾಟಿಕೊಂಡು ಮುನ್ನಡೆಯಬಲ್ಲ ಹುಮ್ಮಸ್ಸು, ಸ್ಥೈರ್ಯ ನಿಮ್ಮಲ್ಲಿದೆ. ಅದನ್ನು ಬಳಸಿಕೊಳ್ಳಬೇಕು.

ಅಬ್ರಾಹಂ ಲಿಂಕನ್ ತಮ್ಮ ಮಗನನ್ನು ಶಾಲೆಗೆ ಸೇರಿಸುವಾಗ ಶಿಕ್ಷಕರಿಗೆ ಒಂದು ಕಳಕಳಿಯ ಪತ್ರ ಬರೆಯುತ್ತಾರೆ– 'ದಯವಿಟ್ಟು ನನ್ನ ಮಗನಿಗೆ ಅಂಕಗಳ ಹುಚ್ಚು ಹಿಡಿಸಬೇಡಿ. ಒಂದು ಉನ್ನತ ಹುದ್ದೆ ಹಿಡಿಯಲಿಕ್ಕಾಗಿಯೇ ಓದಲು ಬಂದಿದ್ದೀಯ ಎಂದು ದಯವಿಟ್ಟು ಹೇಳಿಕೊಡಬೇಡಿ. ಅವನಿಗೆ ಭಯದಿಂದ ನಡುಗುವ ಬದಲು ಖುಷಿಯಿಂದ ಶಿಸ್ತಿಗೆ ಒಗ್ಗಿಕೊಳ್ಳುವುದನ್ನು ಹೇಳಿಕೊಡಿ. ಅವನಿಗೆ ಬದುಕು ಕಲಿಸಿ, ಬದುಕಿನಲ್ಲಿ ಮೋಸ ಮಾಡಿ ಗೆಲ್ಲುವುದಕ್ಕಿಂತ ಪ್ರಾಮಾಣಿಕವಾಗಿ ಸೋಲುವುದನ್ನು ಕಲಿಸಿ'.

ವರ್ತಮಾನದ ನಮ್ಮ ಜೆನ್ ಝೀ, ಜೆನ್ ಬೀಟಾ, ಜೆನ್ ಆಲ್ಫಾ ಮಕ್ಕಳನ್ನು ಉತ್ತಮ ನಾಗರಿಕರನ್ನಾಗಿಸಿ, ನಡೆನುಡಿ ಕಲಿಸುವ ಹೊಣೆ ಎಂದಿಗಿಂತಲೂ ಹೆಚ್ಚಿದೆ.

ಪದಬಂಧ 6383


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯಜಮಾನನ ಹುಟ್ಟುಗುಣ (4)
3.ಯತಿಗಳು ಬಳಸುವ ನೀರಿನ ಪಾತ್ರೆ (4)
4.ನೀರಿನ ಅಧಿದೇವತೆ (3)
5.ತಂದೆ-ತಾಯಿ ಇರುವ ಊರು (3)
7.ಸಂಕಲನ ಮಾಡುವಾಗ ಪ್ರಾರಂಭವಾದ ಜಗಳ (3)
9.ಋತುಗಳ ರಾಜ (3)
10.ಕಮ್ಮಾರನ ಒಲೆ (3)
11.ಚಿಕ್ಕ ಮಕ್ಕಳನ್ನು ಹೀಗೆ ಸಂತೈಸು (3)
13.ನೀರನ್ನು ಹಿಡಿದಿಟ್ಟುಕೊಂಡಿರುವ ಮೋಡ (3)
15.ದೃಷ್ಟಿಗೆ ದೂರವಾಗಿರುವುದು (3)
17.ಯಾಗದ ಸಮಾಪ್ತಿ (4)
18.ಇಂಪಾದ ಮಾತು (4)

ಮೇಲಿಂದ ಕೆಳಕ್ಕೆ

1.ಈತ ಎಚ್ಚರ ಗೊಂಡಿರುವವನು (3)
2.ಹೊಸತು ಉಲ್ಟಾ ಆದರೆ ಕಾಡಾದೀತು! (2)
3.ಕಲೆಸಿದ ಗೋಧಿ ಹಿಟ್ಟು (3)
6.ಬೇರೆ ಬೇರೆ ಬಣ್ಣಗಳ ಬೆರಕೆ (5)
8.ಈತ ಮೋಸಗಾರ (5)
12.ಒಳ್ಳೆಯ ದಾರಿಯಿದು (3)
14.ದಡಿಯ ಹಿಡಿದಿರುವ ವಾದ್ಯ (3)
16.ಇತರರ ತಪ್ಪನ್ನು ಮನ್ನಿಸುವ ಗುಣ (2)



6382ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮುಗ್ಧ 3.ಪಿಕಾಸಿ 5.ಮಕರಂದ 7.ಮೃತಾ 9.ಗುಣಗ್ರಾಹಿ 10.ಅಲೆ 11.ತಡ 12.ಸ್ವಪ್ರೇರಣೆ 13.ಶಂಖ 14.ಮಲಯಜ 16.ವರಸೆ 17.ಚಡಿ

ಮೇಲಿಂದ ಕೆಳಕ್ಕೆ: 1.ಪ್ರೇಮ 2.ಮುದ 3.ಪಿತಾಮಹಿ 4.ಸಿರಿಗನ್ನಡ 6.ಕರೆಯೋಲೆ 8.ಒಣಹರಟೆ 10.ಅವಿನಾಭಾವ 11.ತಳಪಾಯ 12.ಸ್ವಪ್ರಶಂಸೆ 14.ಮಡಿ 15.ಜರಿ

ಸುಡೊಕು 6766

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3		4						2
	7			4	8		6	
	4		6				8	5
8		9		7				
	5		8		4		9	
2				9			3	
4		3		5	2			8
	1		4			5		

6765 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಏಪ್ರಿಲ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು, ತಿಥಿ: ವೈಶಾಖ ಶುಕ್ಲ ಅಷ್ಟಮಿ ಗಂ. 19-22, **ನಕ್ಷತ್ರ:** ಪುಷ್ಯ ಗಂ. 20-15, **ಯೋಗ:** ಶೂಲ ಗಂ. 25-25, **ಕರಣ:** ವಿಷ್ಟಿ ಗಂ. 8-02, ಮೇಷ ಮಾಸದ 11 ನೇ ದಿನ. **ಮಳೆ ನಕ್ಷತ್ರ:** ಅಶ್ವಿನಿ 4 ನೇ ಪಾದ. **ರಾಹುಕಾಲ:** ಬೆಳಿಗ್ಗೆ 10-30 - 12-00, **ಸೂರ್ಯೋದಯ:** 06-16 **ಸೂರ್ಯಾಸ್ತ:** 06-41, **ಮುಸ್ಲಿಂ ದಿನಾಂಕ:** 5 ಜುಲ್ಕಾದಾ, **ಅದೃಷ್ಟ ಸಂಖ್ಯೆ:** 2, 3

ಮೇಷ: ಯಾವುದೇ ವಿಷಯದಲ್ಲಿ ಮುಂದುವರಿಯುವ ಮೊದಲು ಅದರ ಉದ್ದಗಲದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನವಿರಲಿ. ವ್ಯಾಪಾರಿಗಳಿಗೆ ವ್ಯವಹಾರ ಕುಂಠಿತವಾದರೂ ಮುಂದಿನ ದಿನಗಳಲ್ಲಿ ಅಭಿವೃದ್ಧಿಯಾಗುತ್ತದೆ.

ವೃಷಭ: ಹಳೆಯ ಘಟನೆಗಳಿಂದ ಪಾಠ ಕಲಿಯುವುದರಿಂದ ಯಶಸ್ಸು ಲಭಿಸುವುದು. ಅನಾರೋಗ್ಯ ಸ್ಥಿತಿಯು ಎದುರಾಗಿ ಆರ್ಥಿಕವಾಗಿ ಧನ ವ್ಯಯವಾಗಲಿದೆ. ಹಿರಿಯರು ಮಾಡಿದ ಪುಣ್ಯದ ಫಲ ಅನುಭವಕ್ಕೆ ಬರಲಿದೆ.

ಮಿಥುನ: ಟಿ.ವಿ., ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹೆಚ್ಚಿನ ಆದಾಯವಿರುವುದು. ತಂದೆಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳಾಗಬಹುದು. ಹಣದ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಕರ್ಕಾಟಕ: ಅಲಂಕಾರಿಕ ವಿಭಾಗದಲ್ಲಿ ಸ್ವ ಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿ, ಹುದ್ದೆಯನ್ನು ಸುಲಭವಾಗಿ ಪಡೆದುಕೊಳ್ಳುವಿರಿ. ಮಹಿಳಾ ಉದ್ಯೋಗಿಗಳಿಗೆ ಕೆಲಸದ ಒತ್ತಡ ಮತ್ತು ಮಾನಸಿಕ ಒತ್ತಡ ಹೆಚ್ಚಲಿದೆ.

ಸಿಂಹ: ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಗುಣದಿಂದಾಗಿ ಸ್ನೇಹದಲ್ಲಿ ಬಿರುಕು ಮೂಡುವ ಪ್ರಸಂಗವಿರುವುದು. ಕೆಲವೊಂದು ಕಹಿ ಘಟನೆಗಳು ಜರುಗಲಿವೆ. ದೈವಾನುಗ್ರಹದಿಂದ ಅವನ್ನು ನಿವಾರಿಸಿಕೊಳ್ಳುವಿರಿ.

ಕನ್ಯಾ: ಈ ದಿನ ಕಚೇರಿ ಕೆಲಸಗಳಲ್ಲಿ ನಿರ್ದಿಷ್ಟವಾದ ಕಾರ್ಯಸೂಚಿಯನ್ನು ಹಾಕಿಕೊಳ್ಳಿ ಮತ್ತು ಅಧಿಕ ಸಮಯ ನೀಡಿ. ಉನ್ನತಾಧಿಕಾರಿಯ ದಿಢೀರ್ ವರ್ಗಾವಣೆಯಿಂದಾಗಿ ನಿಮ್ಮ ಸ್ಥಾನಕ್ಕೆ ಜವಾಬ್ದಾರಿ ಹೆಚ್ಚಾಗುವುದು.

ತುಲಾ: ಕೌಟುಂಬಿಕ ವಿಚಾರಗಳಲ್ಲಿ ಅನ್ಯ ವ್ಯಕ್ತಿಯ ಪ್ರವೇಶವಾಗದಂತೆ ಜಾಗ್ರತೆವಹಿಸಿ. ವಸ್ತು ವಿನ್ಯಾಸದ ಕೆಲಸಗಳಿಂದ ಹೇರಳವಾಗಿ ಸಂಪಾದನೆ ಆಗುತ್ತದೆ. ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು.

ವೃಶ್ಚಿಕ: ಯಶಸ್ಸು ಹೊಂದಲು ಹಲವು ಬಾರಿ ಪ್ರಯತ್ನಿಸಬೇಕಾದೀತು. ನಿಮ್ಮ ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ನಡೆದುಕೊಳ್ಳುವುದು ಉತ್ತಮ. ವಾಣಿಜ್ಯ ರಂಗದಲ್ಲಿ ಹೊಸ ತಿರುವು ಸಿಗಲಿದೆ.

ಧನು: ಉದ್ಯೋಗದಲ್ಲಿ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳದಂತೆ ಮಗನಿಗೆ ತಿಳಿಸಿ. ಸ್ನೇಹಿತನ ಭೇಟಿಯು ಸಂತೋಷ ಮೂಡಿಸುತ್ತದೆ. ವ್ಯಾಪಾರ ಕ್ಷೇತ್ರದವರಿಗೆ ಹೊಸ ಯೋಜನೆಯತ್ತ ಮುನ್ನುಗ್ಗುವ ಆಲೋಚನೆ ಬರಲಿದೆ.

ಮಕರ: ಮನಸ್ಸಿನ ಸ್ಥಿತಿ ಬದಲಾಗಲು ಕೆಲದಿನಗಳ ಕಾಲ ವಾಸಸ್ಥಳ ಬದಲಾವಣೆ ಮಾಡಬೇಕಾಗಬಹುದು. ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗಬಹುದು.


ಕುಂಭ: ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾದ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ. ಮಕ್ಕಳಲ್ಲಿ ಹೊಂದಾಣಿಕೆಯಿದ್ದು, ಮನೆಯಲ್ಲಿ ನೆಮ್ಮದಿಯ ವಾತಾವರಣ ಕಂಡುಬರುವುದು.

ಮೀನ: ಆರೋಗ್ಯದ ಕಡೆ ಗಮನವಿರಲಿ. ಆಹಾರದಲ್ಲಿ ವಾಯು ಪದಾರ್ಥದ ಬಳಕೆ ಕಡಿಮೆ ಮಾಡಿ. ಶತ್ರುಗಳ ಬಲೆಗೆ ಬೀಳದಂತೆ ಎಚ್ಚರವಹಿಸಿ. ಹಿರಿಯರ ಆಸೆಯಂತೆ ಹೊಸ ಆಸ್ತಿಯನ್ನು ಕೊಳ್ಳುವ ಅವಕಾಶ ಸಿಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,378
ಇಂದಿನ ಅಂತ್ಯ:	24,173
ದಿನದ ಕನಿಷ್ಠ:	24,134
	205

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹575
	12 ಕ್ಕೆ	₹78
ಮೈಸೂರು:	100 ಕ್ಕೆ	₹580

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹300-675
ದ್ವಿತಳಿ (ಬಿ.ವಿ)	₹389-833

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹232
ಆರ್‌ಎಸ್‌ಎಸ್-5	₹226.50
ಗುಡ್ ಲಾಟ್	₹204

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹23,500
ಎಸಿ	₹14,000
ಆರ್‌ಪಿ	₹18,200
ಆರ್‌ಸಿ	₹9,775

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹33400-35944
ತುರುವೇಕೆರೆ	₹35000-35000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1640 (1650)
ಸೋಯಾ (ರಿಫೈನ್ಡ್)	₹1520 (1530)
ಸೂರ್ಯಕಾಂತಿ (ರಿಫೈನ್ಡ್)	₹1660 (1670)
ಪಾಮೋಲಿನ್	₹1445 (1445)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1000-1300
ಮಧ್ಯಮ	₹600-1000
ಸಣ್ಣ	₹300-600

ಯುದ್ಧಾಪರಾಧದ ಆರೋಪ

ಬೈರೂತ್ (ಲೆಬನಾನ್) (ಎಎಫ್‌ಪಿ): 'ಇಸ್ರೇಲ್ ಯುದ್ಧಾಪರಾಧದಲ್ಲಿ ತೊಡಗಿದೆ' ಎಂದು ಲೆಬನಾನ್ ಅಧ್ಯಕ್ಷ ಮತ್ತು ಪ್ರಧಾನಿ ಗುರುವಾರ ಆರೋಪಿಸಿದ್ದಾರೆ.

ಇಸ್ರೇಲ್ ಪಡೆಗಳು ವಶಪಡಿಸಿಕೊಂಡಿರುವ ಲೆಬನಾನ್‌ನ ದಕ್ಷಿಣ ಭಾಗದಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ದೇಶದ ಪತ್ರಕರ್ತೆಯೊಬ್ಬರು ಹತ್ಯೆಗೀಡಾದ ಬೆನ್ನಲ್ಲೇ ಈ ಆರೋಪ ಮಾಡಿದ್ದಾರೆ. ಹತ್ಯೆಗೀಡಾದ ಅಮಲ್ ಖಲೀಲ್ ಅವರು 'ಅಲ್-ಅಕ್ಬರ್' ಎಂಬ ಲೆಬನಾನೀಸ್ ದಿನಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದರು.

'ಇಸ್ರೇಲ್ ಉದ್ದೇಶಪೂರ್ವಕವಾಗಿ ಈ ದಾಳಿ ನಡೆಸುತ್ತಿದೆ' ಎಂದು ಅಧ್ಯಕ್ಷ ಜೋಸೆಫ್ ಔನ್ ಆರೋಪಿಸಿದ್ದಾರೆ

ಮುಂಬೈ ಧಾರಣೆ (ಶೇಂಗಾ)

23-04-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1660)
ಒಂದು ವಾರದ ಡೆಲಿವರಿ	1645(1655)
ಪಾಮ್ ವಾರದ ಡೆಲಿವರಿ	1443(1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1560(1565)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,000 (1,51,000)
ಬೆಳ್ಳಿ ಕೆ.ಜಿಗೆ	2,40,000 (2,48,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಲೀಟರ್ ಡೀಸೆಲ್‌ಗೆ ₹100 ನಷ್ಟ

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಆಲೋಚನೆ ಸದ್ಯಕ್ಕಿಲ್ಲ: ಕೇಂದ್ರ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಲೀಟರ್ ಪೆಟ್ರೋಲ್ ಮಾರಾಟದಿಂದ ₹20ರಷ್ಟು ಹಾಗೂ ಡೀಸೆಲ್ ಮಾರಾಟದಿಂದ ₹100ರಷ್ಟು ನಷ್ಟ ಅನುಭವಿಸುತ್ತಿವೆ.

ಆದರೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಳ ಮಾಡುವ ಆಲೋಚನೆ ತಕ್ಷಣಕ್ಕೆ ಇಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ನಾಲ್ಕು ವರ್ಷಗಳಿಂದ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಬದಲಾಗಿಲ್ಲ. ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶುರುವಾದ ನಂತರದಲ್ಲಿ ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಆಗಿದೆ.

ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ಬಳಿಕ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಲೀಟರಿಗೆ ₹28ರವರೆಗೆ ಹೆಚ್ಚಾಗಬಹುದು ಎಂಬ ವರದಿಗಳು ಆಧಾರರಹಿತ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು 'ಎಕ್ಸ್' ಮೂಲಕ ಹೇಳಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮ ಅವರು, 'ಕಚ್ಚಾ ತೈಲದ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಹಳ ಏರಿಳಿತ ಕಾಣುತ್ತಿದೆ. ಕಳೆದ ವರ್ಷ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 70 ಡಾಲರ್‌ನಷ್ಟಿತ್ತು. ಅದು ಈ ತಿಂಗಳಲ್ಲಿ ಸರಾಸರಿ 113 ಡಾಲರ್ ಆಗಿದೆ. ಕಚ್ಚಾ ತೈಲದ ಬೆಲೆ ಭಾರಿ ಹೆಚ್ಚಾಗಿದ್ದರೂ ಸರ್ಕಾರವು ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿಲ್ಲ. ಅವುಗಳ ಬೆಲೆ



ಸ್ಥಿರವಾಗಿರುವಂತೆ ನೋಡಿಕೊಳ್ಳಲು ಸರ್ಕಾರ ಯತ್ನಿಸುತ್ತಿದೆ' ಎಂದಿದ್ದಾರೆ.

2022ರ ಏಪ್ರಿಲ್ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಿಸಿಲ್ಲ. ಈ ಅವಧಿಯಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಾದ, ಕಡಿಮೆ ಆದ ನಿದರ್ಶನಗಳು ಇವೆ. ಬೆಲೆ ಕಡಿಮೆ ಆದ ಸಂದರ್ಭಗಳಲ್ಲಿ ಕಂಪನಿಗಳು ಉತ್ತಮ ಲಾಭ ಕಂಡಿವೆ. ಆ ಲಾಭವನ್ನು ಅವು, ದರ ಹೆಚ್ಚಾದಾಗ ಉಂಟಾಗುವ ನಷ್ಟವನ್ನು ಸರಿದೂಗಿಸಲು ಬಳಸಿವೆ.

ಅಡುಗೆಗೆ ಬಳಕೆ ಮಾಡುವ ಎಲ್‌ಪಿಜಿ ಬೆಲೆ ನಿಗದಿಗೆ ಮಾನದಂಡವಾಗಿ ಆಶ್ರಯಿಸುವ 'ಸೌದಿ ಸಿಪಿ' ಬೆಲೆಯು 2023ರ ಜುಲೈನಿಂದ ಈಚೆಗೆ ಶೇ 102ರಷ್ಟು ಹೆಚ್ಚಾಗಿದೆ. ಆದರೆ ದೇಶದಲ್ಲಿ ಎಲ್‌ಪಿಜಿ ಬೆಲೆ ಈ ಅವಧಿಯಲ್ಲಿ ಶೇ 17ರಷ್ಟು ತಗ್ಗಿದೆ ಎಂದು ಸುಜಾತಾ ಹೇಳಿದ್ದಾರೆ.

'ಬೆಲೆ ಪರಿಸ್ಥಿತಿ ಏನಿದೆ ಎಂಬುದನ್ನು ಅಂಕಿ-ಅಂಶಗಳೇ ಹೇಳುತ್ತಿವೆ. ಸರ್ಕಾರದ ಪ್ರಯತ್ನಗಳೂ ಕಣ್ಣಿಗೆ ಕಾಣುವಂತಿವೆ' ಎಂದು ಅವರು ತಿಳಿಸಿದ್ದಾರೆ.

ಸಚಿವಾಲಯದಿಂದ ಸ್ಪಷ್ಟನೆ ಏಕೆ?

ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆ ಮುಗಿದ ನಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ತೀವ್ರವಾಗಿ ಹೆಚ್ಚಳವಾಗಬಹುದು ಎಂದು ಕೋಟಕ್ ಇನ್‌ಸ್ಟಿಟ್ಯೂಷನಲ್ ಈಕ್ವಿಟೀಸ್ ವರದಿ ಅಂದಾಜಿಸಿದೆ. ಈ ವರದಿ ಪ್ರಕಟವಾದ ನಂತರದಲ್ಲಿ ಕೇಂದ್ರ ಸರ್ಕಾರವು ಈ ಸ್ಪಷ್ಟನೆ ನೀಡಿದೆ.

ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 120 ಡಾಲರ್ ಆಸುಪಾಸಿನಲ್ಲಿ ಉಳಿದರೆ ಪೆಟ್ರೋಲ್, ಡೀಸೆಲ್ ಬೆಲೆಯು ಲೀಟರಿಗೆ ₹28ರವರೆಗೆ ಹೆಚ್ಚಬಹುದು ಎಂದು ಕೋಟಕ್ ವರದಿ ಅಂದಾಜಿಸಿದೆ.

ಇಂತಹ ವರದಿಗಳು 'ಪ್ರಜೆಗಳಲ್ಲಿ ಭೀತಿ ಮತ್ತು ಆತಂಕ ಸೃಷ್ಟಿಸುವಂತಿವೆ, ಇವು ಕಿಡಿಗೇಡಿತನದವು, ತಪ್ಪುದಾರಿಗೆ ಎಳೆಯುವಂಥವು' ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿದೆ.

'ಕಳೆದ ನಾಲ್ಕು ವರ್ಷಗಳಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಕಂಡಿರದ ದೇಶ ಭಾರತ ಮಾತ್ರ' ಎಂದು ಸಚಿವಾಲಯ ಹೇಳಿದೆ.

ಆನ್‌ಲೈನ್ ಆಟಗಳಿಗೆ ನಿಯಮ

ನವದೆಹಲಿ (ಪಿಟಿಐ): 'ಆನ್‌ಲೈನ್ ಆಟಗಳ ಉತ್ತೇಜನ ಮತ್ತು ನಿಯಂತ್ರಣ ಕಾಯ್ದೆ'ಯ ಅನುಷ್ಠಾನಕ್ಕೆ ಅಗತ್ಯವಿರುವ ನಿಯಮಗಳನ್ನು ಕೇಂದ್ರ ಸರ್ಕಾರವು ಬುಧವಾರ ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಆನ್‌ಲೈನ್ ಆಟಗಳಿಗೆ ಸಂಬಂಧಿಸಿದ ಪ್ರಾಧಿಕಾರವೊಂದರ ರಚನೆಗೆ ಅವಕಾಶ ಕಲ್ಪಿಸಿದೆ. ನಿಯಮಗಳು ಮೇ 1ರಿಂದ ಜಾರಿಗೆ ಬರಲಿವೆ.

ಹೊಸ ನಿಯಮಗಳ ಪ್ರಕಾರ, ಆಟವೊಂದು ಹಣ ತೊಡಗಿಸಬೇಕಾದ ವರ್ಗಕ್ಕೆ ಸೇರಿದೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಹಣ ತೊಡಗಿಸಬೇಕಾದ ಆಟಗಳಿಗೆ ಕಾಯ್ದೆಯು ನಿಷೇಧ ಹೇರಿದೆ.

'ಇಡೀ ವ್ಯವಸ್ಥೆಯು ಕಡಿಮೆ ಪ್ರಮಾಣದಲ್ಲಿ ನಿಯಂತ್ರಣವನ್ನು ಹೇರುತ್ತದೆ. ಹಣವನ್ನು ತೊಡಗಿಸದೆಯೇ ಆಡಬಹುದಾದ ಬಹುತೇಕ ಆಟಗಳು ನೋಂದಣಿ ಮಾಡಿಸುವ ಅಗತ್ಯ ಇಲ್ಲದೆಯೇ ಕಾರ್ಯಾಚರಿಸಲು ಅವಕಾಶ ಇದೆ' ಎಂದು ಮಾಹಿತಿ ತಂತ್ರಜ್ಞಾನ ಕಾರ್ಯದರ್ಶಿ ಎಸ್. ಕೃಷ್ಣನ್ ಅವರು ಹೇಳಿದ್ದಾರೆ.

ಮಕ್ಕಳು ಸೇರಿದಂತೆ ಆಟ ಆಡುವವರಿಗೆ ಅಪಾಯ ಇದ್ದಲ್ಲಿ, ಆಟದಲ್ಲಿ ಭಾಗವಹಿಸುತ್ತಿರುವ ಜನರ ಪ್ರಮಾಣವನ್ನು ಗಮನಿಸಿ, ಆಟದಲ್ಲಿನ ಹಣದ ವಹಿವಾಟು ಗಮನಿಸಿ, ಆಟವು ಯಾವ ದೇಶದ್ದು ಎಂಬುದನ್ನು ಗಮನಿಸಿ ಸರ್ಕಾರವು ಆಟವನ್ನು ನೋಂದಣಿ ಮಾಡುವಂತೆ ಸೂಚಿಸಬಹುದು. ಇ-ಸ್ಪೋರ್ಟ್ ಚಟುವಟಿಕೆಗಳನ್ನು ನೋಂದಣಿ ಮಾಡಿಸುವುದು ಕಡ್ಡಾಯ.

ಆನ್‌ಲೈನ್ ಆಟವೊಂದು ಹಣವನ್ನು ತೊಡಗಿಸುವ ಅಗತ್ಯ ಸೃಷ್ಟಿಸುವ ಆಟವೇ ಅಥವಾ ಅದು ಕಾನೂನಿನ ಅಡಿ ಅನುಮತಿ ಹೊಂದಿರುವ ಆನ್‌ಲೈನ್ ಸಾಮಾಜಿಕ ಆಟವೇ ಎಂಬುದನ್ನು ಸಮಯಮಿತಿಯಲ್ಲಿ ಹಾಗೂ ಪಾರದರ್ಶಕವಾಗಿ ತೀರ್ಮಾನಿಸಲು ಹೊಸ ನಿಯಮಗಳು ಸ್ಪಷ್ಟವಾದ ಚೌಕಟ್ಟನ್ನು ಕಲ್ಪಿಸುತ್ತವೆ.

'ಸ್ಪಷ್ಟತೆ ತಂದಿವೆ'

ನವದೆಹಲಿ (ಪಿಟಿಐ): ಆನ್‌ಲೈನ್ ಆಟಗಳಿಗೆ ಸಂಬಂಧಿಸಿದಂತೆ ಹೊಸದಾಗಿ ರೂಪಿಸಿರುವ ನಿಯಮಗಳು ನೋಂದಾಯಿತ ಇ-ಸ್ಪೋರ್ಟ್ ಚಟುವಟಿಕೆಗಳನ್ನು ಕಾನೂನುಬದ್ಧ ಎಂದು ಗುರುತಿಸುತ್ತವೆ ಎಂದು ಆನ್‌ಲೈನ್ ಆಟಗಳ ಉದ್ಯಮ ವಲಯ ಹೇಳಿದೆ.

ನಿಯಮಗಳು ದೇಶದ ಇ-ಸ್ಪೋರ್ಟ್ ವಲಯಕ್ಕೆ ಬಹಳ ಅಗತ್ಯವಾಗಿದ್ದ ಸ್ಪಷ್ಟತೆಯನ್ನು ತಂದುಕೊಟ್ಟಿವೆ ಎಂದು ನಾಡ್ವಿನ್ ಗೇಮಿಂಗ್‌ನ ವ್ಯವಸ್ಥಾಪಕ ನಿರ್ದೇಶಕ ಅಕ್ಷತ್ ರಾಠೀ ಹೇಳಿದ್ದಾರೆ.

ಹೊಸ ನಿಯಮಗಳು ಇ-ಸ್ಪೋರ್ಟ್ ಹಾಗೂ ಹಣ ತೊಡಗಿಸಿ ಆಡುವ ಆಟಗಳ ನಡುವೆ ಬಹಳ ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸಿವೆ. ಇದು ತೀರಾ ಅಗತ್ಯವಾಗಿತ್ತು ಎಂದು ಎಸ್‌8ಯುಎಲ್ ಕಂಪನಿಯ ಸಿಇಒ ಅನಿಮೇಶ್ ಅಗರ್ವಾಲ್ ಹೇಳಿದ್ದಾರೆ.

ಭದ್ರತಾ ಸಿಬ್ಬಂದಿ ಗಸ್ತು

ಪಿಟಿಐ ಚಿತ್ರ



ಮಣಿಪುರದ ಇಂಫಾಲ ಪಶ್ಚಿಮ ಜಿಲ್ಲೆಯಲ್ಲಿ ಗುರುವಾರ ಪ್ರಕ್ಷುಬ್ಧ ವಾತಾವರಣ ಉಂಟಾಗಿದ್ದು, ಭದ್ರತಾ ಸಿಬ್ಬಂದಿ ಗಸ್ತು ನಡೆಸಿ, ಪರಿಸ್ಥಿತಿ ಪರಿಶೀಲಿಸಿದರು

ಅಡಿಕೆ ಧಾರಣೆ

ಕುಮಟಾ		ಶಿರಸಿ		ಯಲ್ಲಾಪುರ	
ಹಳೇಚಾಲಿ	45619-49098	ತಟ್ಟಿಬೆಟ್ಟೆ	38089-45699	ಆಪಿ	58399-60119
ಚಿಪ್ಪು	29899-40196	ಬೆಟ್ಟೆ	41899-53899	ಬಿಳಿಗೋಟು	16612-40099
ಕೋಕ	17620-36100	ಬಿಳಿಗೋಟು	24199-38309	ಚಾಲಿ	38415-48501
ಹೊಸಚಾಲಿ	35169-46899	ಚಾಲಿ	44500-48600	ಕೋಕ	16501-35312
ಪುತ್ತೂರು		ಕೆಂಪುಗೋಟು	31211-40500	ಕೆಂಪುಗೋಟು	16501-39699
ಕೋಕ	20000-34500	ರಾಶಿ	50300-54299	ರಾಶಿ	48899-56200
ಹೊಸತು	30000-47500	**ಸಾಗರ**		ತಟ್ಟಿಬೆಟ್ಟೆ	38810-50799
ಸಿದ್ದಾಪುರ		ಬಿಳಿಗೋಟು	10229-37099	**ಶಿವಮೊಗ್ಗ**	
ಬಿಳಿಗೋಟು	26899-37689	ಚಾಲಿ	28129-43919	ಬೆಟ್ಟೆ	49129-65001
ಚಾಲಿ	41099-47639	ಕೋಕ	10129-37105	ರಾಶಿಇಡಿ	46689-57059
ಕೋಕ	24319-33299	ಕೆಂಪುಗೋಟು	19829-39999	ಗೊರಬಲು	19072-43699
ಕೆಂಪುಗೋಟು	31000-34609	ರಾಶಿ	26999-55869	ಸರಕು/ಹಸ	57129-97399
ರಾಶಿ	49099-53699	ಸಿಪ್ಪೆಗೋಟು	9919-23399		

ಇನ್ಫಿ ಲಾಭ ಶೇ 21ರಷ್ಟು ಏರಿಕೆ

ಷೇರುದಾರರಿಗೆ ₹25ರಷ್ಟು ಅಂತಿಮ ಲಾಭಾಂಶ ಘೋಷಣೆ

ನವದೆಹಲಿ (ಪಿಟಿಐ): ಭಾರತದ ಐ.ಟಿ. ಸೇವಾ ಕ್ಷೇತ್ರದ ಎರಡನೆಯ ಅತಿದೊಡ್ಡ ಕಂಪನಿ ಇನ್ಫೊಸಿಸ್‌ನ ಮಾರ್ಚ್ ತ್ರೈಮಾಸಿಕದ ಒಟ್ಟು ನಿವ್ವಳ ಲಾಭವು ಶೇಕಡ 20.8ರಷ್ಟು ಹೆಚ್ಚಳ ಕಂಡಿದ್ದು, ₹8,501 ಕೋಟಿ ಆಗಿದೆ.

2026-27ನೆಯ ಹಣಕಾಸು ವರ್ಷದಲ್ಲಿ ತನ್ನ ವರಮಾನ ಹೆಚ್ಚಳವು ಶೇ 1.5ರಿಂದ ಶೇ 3.5ರ ಮಟ್ಟದಲ್ಲಿ ಇರಲಿದೆ ಎಂದು ಕಂಪನಿಯು ಹೇಳಿದೆ.

ಪ್ರಸಕ್ತ ಕ್ಯಾಲೆಂಡರ್ ವರ್ಷವು ಆಶಾದಾಯಕವಾಗಿ ಆರಂಭವಾಗಿತ್ತಾದರೂ, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ನಡುವೆ 'ಆರ್ಥಿಕ ಪರಿಸ್ಥಿತಿ ಬದಲಾಯಿತು' ಎಂದು ಕಂಪನಿ ಹೇಳಿದೆ. ಪರಿಸ್ಥಿತಿಯು ಈಗ ಸ್ಥಿರವಾಗುತ್ತಿರುವಂತೆ ಕಾಣುತ್ತಿದೆ ಎಂದೂ ಅದು ಹೇಳಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ₹46,402 ಕೋಟಿ



ಆಗಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದ ₹40,925 ಕೋಟಿ ಕಾರ್ಯಾಚರಣೆ ವರಮಾನಕ್ಕೆ ಹೋಲಿಸಿದರೆ ಶೇ 13.4ರಷ್ಟು ಹೆಚ್ಚು. 2025-26ನೆಯ ಪೂರ್ಣ ವರ್ಷದಲ್ಲಿ ಕಂಪನಿಯ ನಿವ್ವಳ ಲಾಭವು ಶೇ 10.20ರಷ್ಟು ಹೆಚ್ಚಾಗಿ ₹29,440 ಕೋಟಿ ಆಗಿದೆ.

2025-26ರಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನ ಶೇ 9.6ರಷ್ಟು ಜಾಸ್ತಿ ಆಗಿದ್ದು ₹1.78 ಲಕ್ಷ ಕೋಟಿಗೆ ತಲುಪಿದೆ.

'ಹಣಕಾಸು ಸೇವೆಗಳು, ಸಂವಹನ, ತಯಾರಿಕಾ ವಲಯದಲ್ಲಿ ಉತ್ತಮ ಬೆಳವಣಿಗೆಯನ್ನು ಕಂಡಿದ್ದೇವೆ. ಯುರೋಪಿನಲ್ಲಿಯೂ ಒಳ್ಳೆಯ ಬೆಳವಣಿಗೆ ಆಗಿದೆ. 2026-27ರಲ್ಲಿ ಎ.ಐ ಸಂಬಂಧಿತ ಸೇವಾ ವಹಿವಾಟುಗಳಲ್ಲಿ ಉತ್ತಮ ಅವಕಾಶಗಳಿವೆ' ಎಂದು ಕಂಪನಿಯ ಸಿಇಒ ಸಲೀಲ್ ಪಾರೇಖ್ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯು 20 ಸಾವಿರ ಮಂದಿ ಹೊಸಬರನ್ನು ನೇಮಕ ಮಾಡಿಕೊಳ್ಳುವ ಉದ್ದೇಶ ಹೊಂದಿದೆ.

ಎ.ಐ ತಂತ್ರಜ್ಞಾನವು ಕಂಪನಿಯ ಐ.ಟಿ ಸೇವೆಗಳು ಮತ್ತು ವಾಣಿಜ್ಯ ಪ್ರಕ್ರಿಯೆಗಳ ನಿರ್ವಹಣಾ ವಹಿವಾಟುಗಳ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ಇನ್ಫೊಸಿಸ್ ಒಪ್ಪಿಕೊಂಡಿದೆ. ಆದರೆ ಎ.ಐ ಆಧಾರಿತ ಸೇವೆಗಳಲ್ಲಿನ ಹೆಚ್ಚಳವು ಈ ಪರಿಣಾಮವನ್ನು ಸರಿದೂಗಿಸುವ ಕೆಲಸ ಮಾಡುತ್ತಿದೆ ಎಂದು ಕೂಡ ತಿಳಿಸಿದೆ.

ಕಂಪನಿಯು ಷೇರುದಾರರಿಗೆ ಪ್ರತಿ ಷೇರಿಗೆ ₹25ರಷ್ಟು ಅಂತಿಮ ಲಾಭಾಂಶ ಘೋಷಿಸಿದೆ.

ಕೇರಳ ಗ್ರಾಮೀಣ ಬ್ಯಾಂಕ್ ವಹಿವಾಟು ಗುರಿ ನಿಗದಿ

ಬೆಂಗಳೂರು: ಕೆನರಾ ಬ್ಯಾಂಕ್ ಪ್ರಾಯೋಜಕತ್ವದ ಕೇರಳ ಗ್ರಾಮೀಣ ಬ್ಯಾಂಕ್ ಈ ಹಣಕಾಸು ವರ್ಷದಲ್ಲಿ ₹1 ಲಕ್ಷ ಕೋಟಿ ಮೊತ್ತದ ವಹಿವಾಟು ನಡೆಸುವ ಗುರಿ ನಿಗದಿ ಮಾಡಿಕೊಂಡಿದೆ.

ತಿರುವನಂತಪುರದಲ್ಲಿ ಈಚೆಗೆ ನಡೆದ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದು, ಗುರಿಯನ್ನು ಅಂತಿಮಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಕೆನರಾ ಬ್ಯಾಂಕ್‌ನ ಎಂ.ಡಿ. ಹಾಗೂ ಸಿಇಒ (ಉಸ್ತುವಾರಿ) ಹರದೀಪ್ ಸಿಂಗ್ ಅಹ್ಲುವಾಲಿಯಾ ಅಧ್ಯಕ್ಷತೆಯಲ್ಲಿ ಚರ್ಚೆಗಳು ನಡೆದವು.

ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಬಲವರ್ಧನೆ ಆಗಬೇಕು ಎಂದು ಕೇಂದ್ರ ಹಣಕಾಸು ಸೇವೆಗಳ ಇಲಾಖೆಯು ನಿರ್ದೇಶನ ನೀಡಿದೆ. ಇಲಾಖೆಯ ಈ ನಿರ್ದೇಶನಕ್ಕೆ ಅನುಗುಣವಾಗಿ ಕೇರಳ ಗ್ರಾಮೀಣ ಬ್ಯಾಂಕ್ ತನ್ನ ವಹಿವಾಟು ಗುರಿಯನ್ನು ನಿಗದಿ ಮಾಡಿಕೊಂಡಿದೆ.

'ಭಯೋತ್ಪಾದಕ ಗುಂಪುಗಳನ್ನು ಪಾಕಿಸ್ತಾನ ಹತ್ತಿಕ್ಕಬೇಕು'

ವಾಷಿಂಗ್ಟನ್ (ಪಿಟಿಐ): 2025ರ ಪಹಲ್ಗಾಮ್ ಉಗ್ರ ದಾಳಿಗೆ ಕಾರಣವಾಗಿರುವ ಲಷ್ಕರ್-ಎ-ತಯಬಾದಂತಹ ಭಯೋತ್ಪಾದಕ ಸಂಘಟನೆಗಳನ್ನು ಪಾಕಿಸ್ತಾನ ನಿಗ್ರಹಿಸಬೇಕು ಎಂದು ಅಮೆರಿಕ ಸಂಸದ ಬ್ರಾಡ್ ಶೆರ್ಮನ್ ಅವರು ಆಗ್ರಹಿಸಿದ್ದಾರೆ.

ಭಾರತೀಯ ರಾಯಭಾರ ಕಚೇರಿ ಆಯೋಜಿಸಿದ್ದ 'ಭಯೋತ್ಪಾದನೆಯಿಂದ ಮನುಕುಲಕ್ಕೆ ಉಂಟಾಗಿರುವ ಹಾನಿ' ಎಂಬ ವಿಷಯಾಧಾರಿತ ಪ್ರದರ್ಶನದಲ್ಲಿ ಮಾತನಾಡಿದ ಶೆರ್ಮನ್ ಅವರು, ಪಹಲ್ಗಾಮ್ ಉಗ್ರ ದಾಳಿಯಲ್ಲಿ ಮೃತಪಟ್ಟ 26 ಜನರನ್ನು ಸ್ಮರಿಸಿದರು.

ದಾಳಿಕೋರರನ್ನು 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ಎಂದು ಗುರುತಿಸಲಾಗಿದ್ದು, ಧರ್ಮದ ಆಧಾರದ ಮೇಲೆ ಮುಗ್ಧ ಜನರನ್ನು ಹತ್ಯೆ ಮಾಡಲಾಗಿದೆ. ಈ ಗುಂಪು ಪಾಕಿಸ್ತಾನದಲ್ಲಿ ಆಶ್ರಯ ಪಡೆದಿರುವ ಲಷ್ಕರ್-ಎ-ತಯಬಾ ಸಂಘಟನೆಯೊಂದಿಗೆ ಸಂಬಂಧ ಹೊಂದಿರುವುದು ತಿಳಿದುಬಂದಿದೆ ಎಂದು ಹೇಳಿದರು.

'ಲಷ್ಕರ್-ಎ- ತಯಬಾ, ಜೈಶ್-ಎ-ಮೊಹಮ್ಮದ್ ಮತ್ತು ಇತರ ಭಯೋತ್ಪಾದಕ ಗುಂಪುಗಳನ್ನು ನಿಗ್ರಹಿಸುವಂತೆ ಪಾಕಿಸ್ತಾನ ಸರ್ಕಾರವನ್ನು ಒತ್ತಾಯಿಸಲು ಈ ಸಂದರ್ಭವನ್ನು ಬಳಸಿಕೊಳ್ಳಬೇಕು' ಎಂದರು.

ಇರಾನ್ ರಾಜಕುಮಾರನ ಮೇಲೆ ಕೆಂಪು ದ್ರವ ಎರಚಿದ ಆರೋಪಿ



ರಾಜಕುಮಾರ ರೇಜಾ ಪಹ್ಲಾವಿ ಅವರ ಮೇಲೆ ಕೆಂಪು ಬಣ್ಣದ ದ್ರವ ಚೆಲ್ಲಿದ ಬಳಿಕ ಅವರನ್ನು ಕಾರಿನೊಳಗೆ ಕರೆದೊಯ್ಯಲಾಯಿತು –ಪಿಟಿಐ ಚಿತ್ರ

ಬರ್ಲಿನ್ (ಎಪಿ): ಇರಾನ್‌ನಿಂದ ಗಡೀಪಾರಾಗಿರುವ ರಾಜಕುಮಾರ ರೆಜಾ ಪಹ್ಲಾವಿ ಅವರ ಮೇಲೆ ಕೆಂಪು ಬಣ್ಣದ ದ್ರವ ಚೆಲ್ಲಿದ ಘಟನೆ ಜರ್ಮನಿಯ ಬರ್ಲಿನ್‌ನಲ್ಲಿ ಗುರುವಾರ ನಡೆದಿದೆ.

ಜರ್ಮನಿಯ ಫೆಡರಲ್ ಪ್ರೆಸ್ ಕಾನ್ಫರೆನ್ಸ್ ಕಟ್ಟಡದ ಹೊರಗೆ ಘಟನೆ ನಡೆದಿದೆ. ಸುದ್ದಿಗೋಷ್ಠಿಯಲ್ಲಿ ಅವರು ಅಮೆರಿಕ ಮತ್ತು ಇರಾನ್ ನಡುವಣ ಕದನ ವಿರಾಮವನ್ನು ಟೀಕಿಸಿದ್ದರು. ಬಳಿಕ ಬೆಂಬಲಿಗರತ್ತ ಕೈ ಬೀಸುತ್ತಿದ್ದರು. ಈ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಕೆಂಪು ಬಣ್ಣದ ದ್ರವವನ್ನು ಅವರ ಮೇಲೆ ಎರಚಿದ. ಬಳಿಕ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಪಹ್ಲಾವಿ ಅವರು ಇರಾನ್‌ನ ಮಾಜಿ ರಾಜನ ಪುತ್ರ. ಅವರನ್ನು ಅಧಿಕಾರದಿಂದ ಕೆಳಗಿಳಿಸಲು 1979ರಲ್ಲಿ ಜನರು ಬೀದಿಗಿಳಿದು ಪ್ರತಿಭಟಿಸಿದ್ದರು.

ಭಾರತ ತನ್ನ ಹಿತಾಸಕ್ತಿ ಬಿಡುವುದಿಲ್ಲ: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಭಾರತವು ಕೃಷಿ ಮಾರುಕಟ್ಟೆಯಲ್ಲಿ ದೀರ್ಘಕಾಲದಿಂದ ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿದೆ. ಅದರಿಂದ ಹೊರಬಂದು, ನಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳುವಂತೆ ಆ ದೇಶದ ಮನವೊಲಿಸುವುದು ಕಷ್ಟ ಎಂದು ಅಮೆರಿಕ ಹೇಳಿದೆ.

ಭಾರತ ಮತ್ತು ಅಮೆರಿಕ ನಿಯೋಗಗಳು ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ನಡೆಸಿದವು. ಮೂರು ದಿನಗಳ ಈ ಸಭೆಯು ಬುಧವಾರ ಮುಕ್ತಾಯವಾಯಿತು.

ಕೇಂದ್ರ ವಾಣಿಜ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ದರ್ಪಣ್ ಜೈನ್ ಅವರ ನೇತೃತ್ವದ 12 ಸದಸ್ಯರ ನಿಯೋಗವು, ದಕ್ಷಿಣ ಮತ್ತು ಕೇಂದ್ರ ಏಷ್ಯಾದಲ್ಲಿನ ಅಮೆರಿಕದ ವ್ಯಾಪಾರ ಪ್ರತಿನಿಧಿ (ಯುಎಸ್‌ಟಿಆರ್) ಬ್ರೆಂಡನ್ ಲಿಂಚ್ ಅವರ ನೇತೃತ್ವದ ಅಮೆರಿಕ ನಿಯೋಗದೊಂದಿಗೆ ಮಾತುಕತೆ ನಡೆಸಿತು.

'ಈ ಒಪ್ಪಂದದ ಭಾಗವಾಗಿ ಭಾರತವು ತನ್ನ ಕೃಷಿ ಮಾರುಕಟ್ಟೆಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಹೆಚ್ಚಾಗಿ ಬಯಸುತ್ತದೆ. ಆದರೂ ಪರಸ್ಪರ ಒಪ್ಪಂದ ಮಾಡಿಕೊಳ್ಳಬಹುದಾದ ಅನೇಕ ವಿಷಯಗಳಿವೆ' ಎಂದು ಯುಎಸ್‌ಟಿಆರ್ ಜೆಮಿಸನ್ ಗ್ರೀರ್ ಹೇಳಿದರು.

ಆರಂಭಿಕ ಬೆಲೆ ₹61.99 ಲಕ್ಷ • ಜೂನ್‌ನಿಂದ ಗ್ರಾಹಕರಿಗೆ ಲಭ್ಯ

ಟೆಸ್ಲಾ: 'ಮಾಡೆಲ್ ವೈಎಲ್' ಅನಾವರಣ

• ಎ.ಎಂ.ಸುರೇಶ

ಮುಂಬೈ: ವಿದ್ಯುತ್‌ಚಾಲಿತ ವಾಹನಗಳ (ಇ.ವಿ) ತಯಾರಿಕೆಯಲ್ಲಿ ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರುವ ಟೆಸ್ಲಾ ಕಂಪನಿಯು ಎಸ್‌ಯುವಿ ವಿಭಾಗದ 'ಮಾಡೆಲ್ ವೈಎಲ್' ಕಾರನ್ನು ಇಲ್ಲಿನ 'ದ ಬಲ್ಲಾರ್ಡ್ ಪಿಯರ್ ಡೌನ್‌ಟೌನ್ ಎಕ್ಸ್‌ಪೀರಿಯನ್ಸ್ ಸೆಂಟರ್'ನಲ್ಲಿ ಬುಧವಾರ ಅನಾವರಣಗೊಳಿಸಿತು.

ಆರು ಆಸನಗಳ ಈ ಕಾರಿನ ಆರಂಭಿಕ ಬೆಲೆ ₹61.99 ಲಕ್ಷವಾಗಿದ್ದು, ಮಾಸಿಕ ಕಂತು (ಇಎಂಐ) ₹49,000 ದಿಂದ ಪ್ರಾರಂಭವಾಗುತ್ತದೆ. ದೇಶದಾದ್ಯಂತ ಆನ್‌ಲೈನ್ ಮೂಲಕ ಬುಕ್ಕಿಂಗ್ ಶುರುವಾಗಿದೆ ಎಂದು ಟೆಸ್ಲಾ ಇಂಡಿಯಾದ ಪ್ರಧಾನ ವ್ಯವಸ್ಥಾಪಕ ಶರದ್ ಅಗರ್ವಾಲ್ ಅವರು ತಿಳಿಸಿದರು.

ಕಳೆದ ವರ್ಷ 'ಮಾಡೆಲ್ ವೈ'



'ಮಾಡೆಲ್ ವೈಎಲ್' ಕಾರು

ಕಾರನ್ನು ಇಲ್ಲಿನ ಮಳಿಗೆಯಲ್ಲಿ ಅನಾವರಣ ಮಾಡುವ ಮೂಲಕ ಭಾರತದ ಮಾರುಕಟ್ಟೆ ಪ್ರವೇಶಿಸಿದ್ದ ಟೆಸ್ಲಾ, ಈಗ 'ಮಾಡೆಲ್ ವೈಎಲ್' ಕಾರನ್ನು ಅನಾವರಣಗೊಳಿಸಿದೆ. ಇದು ಈ ವರ್ಷದ ಜೂನ್‌ನಿಂದ ಗ್ರಾಹಕರಿಗೆ ಲಭ್ಯವಾಗಲಿದೆ.

ಗಂಟೆಗೆ ಗರಿಷ್ಠ 200 ಕಿ.ಮೀ. ಕ್ರಮಿಸಲಿದ್ದು ಒಮ್ಮೆ ಚಾರ್ಜ್ ಮಾಡಿದರೆ ಗರಿಷ್ಠ 681 ಕಿ.ಮೀ. ವರೆಗೂ ಸಂಚರಿಸಬಹುದು. ಬೆಂಗಳೂರು, ದೆಹಲಿ, ಚಂಡೀಗಢ, ಜೈಪುರ, ಅಹಮದಾಬಾದ್, ಪುಣೆ ಮತ್ತು ಚೆನ್ನೈ ಸೇರಿದಂತೆ ದೇಶದ ಪ್ರಮುಖ ನಗರಗಳು ಮತ್ತು ಹೆದ್ದಾರಿಗಳಲ್ಲಿ ಸೂಪರ್ ಚಾರ್ಜಿಂಗ್ ಸ್ಟೇಷನ್‌ಗಳನ್ನು ಆರಂಭಿಸಲಾಗುವುದು ಎಂದು ಅಗರ್ವಾಲ್ ತಿಳಿಸಿದರು.

ಕಂಪನಿಯು ಈಗಾಗಲೇ 21 ರಾಜ್ಯಗಳಲ್ಲಿ ಕಾರುಗಳನ್ನು ಪೂರೈಸುತ್ತಿದೆ. ಮುಂಬರುವ ದಿನಗಳಲ್ಲಿ ಇನ್ನಷ್ಟು ಸ್ಥಳಗಳಿಗೆ ವಿಸ್ತರಣೆಯಾಗಲಿದೆ. 'ಮಾಡೆಲ್ ವೈಎಲ್' ಕಾರನ್ನು ಅತ್ಯುತ್ತಮ ಕೌಟುಂಬಿಕ ವಾಹನವಾಗಿ ವಿನ್ಯಾಸಗೊಳಿಸಲಾಗಿದೆ. ಒಳಾಂಗಣದಲ್ಲಿ ಹೆಚ್ಚಿನ ಸ್ಥಳಾವಕಾಶ ಇರುವುದರಿಂದ ಇದರ ಉಪಯುಕ್ತತೆ ಹೆಚ್ಚು ಎಂದು ವಿವರಿಸಿದರು.

ಟೆಸ್ಲಾ ಪ್ರಸ್ತುತ ಮುಂಬೈ, ಗುರುಗ್ರಾಮ, ದೆಹಲಿ ಮತ್ತು ಪುಣೆಯಲ್ಲಿ ಸೇವಾ ಕೇಂದ್ರಗಳನ್ನು ಹೊಂದಿದೆ. ಜೂನ್ ಒಳಗಾಗಿ ಬೆಂಗಳೂರು, ಹೈದರಾಬಾದ್, ಚೆನ್ನೈ ಮತ್ತು ಅಹಮದಾಬಾದ್‌ನಲ್ಲಿ ಈ ಕೇಂದ್ರಗಳನ್ನು ಆರಂಭಿಸಲಿದೆ. ಗ್ರಾಹಕರ ಹಿತಾಸಕ್ತಿ, ಗುಣಮಟ್ಟಕ್ಕೆ ಟೆಸ್ಲಾ ಮೊದಲ ಆದ್ಯತೆ ನೀಡಿದ್ದು, ಹೆಚ್ಚಿನ ನಿರ್ವಹಣೆಯ ಅಗತ್ಯವಿಲ್ಲ ಎಂದರು.

'ಟೆಸ್ಲಾ ಕಳೆದ ವರ್ಷದ ಸೆಪ್ಟೆಂಬರ್‌ನಿಂದ ಭಾರತದಲ್ಲಿ 'ಮಾಡೆಲ್ ವೈ' ಕಾರುಗಳ ವಿತರಣೆಯನ್ನು ಆರಂಭಿಸಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಲಿದ್ದೇವೆ. ನಮ್ಮ ಮಳಿಗೆಗಳಲ್ಲಿ ಗ್ರಾಹಕಸ್ನೇಹಿ ವಾತಾವರಣವಿದೆ. ಉತ್ತಮ ಸೇವೆ ನೀಡಬೇಕು ಎಂಬುದು ನಮ್ಮ ಆಶಯವಾಗಿದೆ' ಎಂದು ತಿಳಿಸಿದರು.

(ಕಂಪನಿ ಆಹ್ವಾನದ ಮೇರೆಗೆ ಪ್ರತಿನಿಧಿ ಮುಂಬೈಗೆ ತೆರಳಿದ್ದರು)

ಆಯುಷ್, ಲಕ್ಷ್ಯ ಮೇಲೆ ಭರವಸೆ

ಥಾಮಸ್ –ಊಬರ್ ಕಪ್ ಬ್ಯಾಡ್ಮಿಂಟನ್ ಇಂದಿನಿಂದ: ಕಣದಲ್ಲಿ ಪಿ.ವಿ. ಸಿಂಧು

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಉದಯೋನ್ಮುಖ ತಾರೆ ಆಯುಷ್ ಶೆಟ್ಟಿ ಅವರು ಇರುವ ಪುರುಷರ ತಂಡವು ಶುಕ್ರವಾರ ಆರಂಭವಾಗಲಿರುವ ಬಿಡಬ್ಲ್ಯುಎಫ್ ಥಾಮಸ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್‌ನಲ್ಲಿ ಕಣಕ್ಕಿಳಿಯಲಿದೆ. ಈ ತಂಡವು ಮತ್ತೊಮ್ಮೆ ಪ್ರಶಸ್ತಿ ಜಯಿಸುವ ಛಲದಲ್ಲಿದೆ.

ಮೊದಲ ದಿನವೇ ಭಾರತ ತಂಡವು ಎ ಗುಂಪಿನಲ್ಲಿ ಕೆನಡಾ ವಿರುದ್ಧ ಅಭಿಯಾನ ಆರಂಭಿಸಲಿದೆ. ಏ.27ರಂದು ಆಸ್ಟ್ರೇಲಿಯಾ ಮತ್ತು ಏ. 29ರಂದು ಚೀನಾದ ಎದುರು ಆಡಲಿದೆ.

ನಾಲ್ಕು ವರ್ಷಗಳ ಹಿಂದೆ ಥಾಮಸ್ ಕಪ್ ಕಿರೀಟವನ್ನು ಭಾರತ ಮುಡಿಗೇರಿಸಿಕೊಂಡಿತ್ತು. ಆಗ ಕೆ. ಶ್ರೀಕಾಂತ್ ಹಾಗೂ ಎಚ್.ಎಸ್. ಪ್ರಣಯ್ ಸಾರಥ್ಯದಲ್ಲಿ ಭಾರತವು ಡೆನ್ಮಾರ್ಕ್, ಮಲೇಷ್ಯಾ ಮತ್ತು ಇಂಡೊನೇಷ್ಯಾ ತಂಡಗಳ ಸವಾಲು ಮೆಟ್ಟಿ ನಿಂತು ಐತಿಹಾಸಿಕ ಸಾಧನೆ ಮಾಡಿತ್ತು. ಎರಡು ವರ್ಷಗಳ ಹಿಂದೆ ಭಾರತವು ಈ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾದ ಎದುರು ಸೋತಿತ್ತು.

ಈ ಸಲವೂ ಭಾರತ ತಂಡವು ಸಮರ್ಥ ಆಟಗಾರರನ್ನು ಒಳಗೊಂಡಿದೆ. ಈಚೆಗೆ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದ ಆಯುಷ್ ಶೆಟ್ಟಿ ಮತ್ತು ಆಲ್ ಇಂಗ್ಲೆಂಡ್ ರನ್ನರ್ ಅಪ್ ಲಕ್ಷ್ಯ ಸೇನ್ ಅವರ ಮೇಲೆ ಹೆಚ್ಚಿನ ಭರವಸೆ ಇದೆ. ಏಷ್ಯಾ ಬ್ಯಾಡ್ಮಿಂಟನ್‌ನಲ್ಲಿ 61 ವರ್ಷಗಳ ನಂತರ ಫೈನಲ್ ಪ್ರವೇಶಿಸಿದ ಭಾರತದ ಆಟಗಾರನೆಂಬ ಹೆಗ್ಗಳಿಕೆ ಆಯುಷ್ ಅವರಿಗೆ ಇದೆ.

ಆಯುಷ್ ಮತ್ತು ಲಕ್ಷ್ಯ ಅವರಿಬ್ಬರೂ ವಿಶ್ವದ ಅಗ್ರಮಾನ್ಯ ಆಟಗಾರರಾದ ಲೀ ಶಿ ಫೆಂಗ್ ಮತ್ತು ಜೊನಾಥನ್ ಕ್ರಿಸ್ಟಿ ವಿರುದ್ಧ ಮೇಲುಗೈ ಸಾಧಿಸಿದ್ದಾರೆ. ಇದರಿಂದಾಗಿ ಅಪಾರ ಅತ್ಮವಿಶ್ವಾಸದಲ್ಲಿದ್ದಾರೆ.

ಗಾಯದಿಂದ ಚೇತರಿಸಿಕೊಂಡಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ತಮ್ಮ ಜೊತೆಗಾರ ಚಿರಾಗ್ ಶೆಟ್ಟಿ ಅವರೊಂದಿಗೆ ಕಣದಲ್ಲಿದ್ದಾರೆ. ಡಬಲ್ಸ್‌ನಲ್ಲಿ ಮತ್ತೊಮ್ಮೆ ಯಶಸ್ಸು ಸಾಧಿಸುವ ಛಲದಲ್ಲಿದ್ದಾರೆ.

‘ಮತ್ತೊಮ್ಮೆ ಥಾಮಸ್ ಕಪ್ ಜಯಿಸುವ ಉತ್ತಮ ಅವಕಾಶ ನಮಗೆ ಈಗ ಇದೆ. ಆಯುಷ್ ಹಾಗೂ ಲಕ್ಷ್ಯ ಸಿಂಗಲ್ಸ್‌ನಲ್ಲಿ, ಸಾತ್ವಿಕ್–ಚಿರಾಗ್ ಡಬಲ್ಸ್‌ನಲ್ಲಿ ಇರುವುದರಿಂದಾಗಿ ಸಫಲತೆ ಸಾಧ್ಯವಿದೆ’ ಎಂದು ಭಾರತ ತಂಡದ ಮಾಜಿ ಕೋಚ್ ವಿಮಲ್ ಕುಮಾರ್ ಭರವಸೆ ವ್ಯಕ್ತಪಡಿಸಿದ್ದಾರೆ.


ಮಹಿಳೆಯರಿಗೆ ಸವಾಲು: ಊಬರ್ ಕಪ್ ಟೂರ್ನಿಯಲ್ಲಿ ಮಹಿಳೆ ಯರ ಬಳಗಕ್ಕೆ ಹಾದಿ ಸುಲಭವಿಲ್ಲ. ಚೀನಾ, ಉಕ್ರೇನ್ ಮತ್ತು ಡೆನ್ಮಾರ್ಕ್ ತಂಡಗಳ ಸವಾಲನ್ನು ಭಾರತ ಎದುರಿಸಲಿದೆ.

ಒಲಿಂಪಿಯನ್ ಪಿ.ವಿ. ಸಿಂಧು ಅವರೊಬ್ಬರೇ ಭಾರತ ತಂಡದಲ್ಲಿರುವ ಅನುಭವಿ ಆಟಗಾರ್ತಿ. ಆದರೆ ಅವರು ಉತ್ತಮ ಫಾರ್ಮ್‌ನಲ್ಲಿ ಇಲ್ಲ. ಯುವ ಆಟಗಾರ್ತಿಯರಾದ ಉನ್ನತಿ ಹೂಡಾ, ತನ್ವಿ ಶರ್ಮಾ ಅವರು ಸಿಂಗಲ್ಸ್ ವಿಭಾಗದಲ್ಲಿ ಭರವಸೆ ಮೂಡಿಸಿರುವ ಆಟಗಾರ್ತಿಯರು. ಆದರೆ ಡಬಲ್ಸ್‌ನಲ್ಲಿ ಬಹುತೇಕ ಆಟಗಾರ್ತಿಯರಿಗೆ ಅನುಭವದ ಕೊರತೆ ಇದೆ. ಎದುರಾಳಿ ತಂಡಗಳಲ್ಲಿ ಅನುಭವಿ ಆಟಗಾರ್ತಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ತಂಡಗಳು

ಥಾಮಸ್ ಕಪ್: ಸಿಂಗಲ್ಸ್: ಲಕ್ಷ್ಯ ಸೇನ್, ಆಯುಷ್ ಶೆಟ್ಟಿ, ಕೆ. ಶ್ರೀಕಾಂತ್, ಎಚ್.ಎಸ್. ಪ್ರಣಯ್, ಕಿರಣ್ ಜಾರ್ಜ್
ಡಬಲ್ಸ್: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಹರಿಹರನ್ ಅಮ್ಸಾಕರುಣನ್, ಎಂ. ಆರ್. ಅರ್ಜುನ್, ಧ್ರುವ ಕಪಿಲಾ.
ಊಬರ್ ಕಪ್: ಸಿಂಗಲ್ಸ್: ಪಿ.ವಿ. ಸಿಂಧು, ಉನ್ನತಿ ಹೂಡಾ, ತನ್ವಿ ಶರ್ಮಾ, ದೇವಿಕಾ ಸಿಹಾಗ್, ಇಶಾರಾಣಿ ಬರುವಾ.
ಡಬಲ್ಸ್: ಕವಿಪ್ರಿಯಾ ಸೆಲ್ವಮ್, ಸಿಮ್ರನ್ ಸಿಂಘಿ, ತನೀಶಾ ಕ್ರಾಸ್ಟೊ, ಶ್ರುತಿಮಿಶ್ರಾ, ಪ್ರಿಯಾ ಕಾಂಜೆಂಗ್‌ಬಾಮ್.


ಲಕ್ಷ್ಯ ಸೇನ್


ಆಯುಷ್ ಶೆಟ್ಟಿ

ಆರು ಕ್ರೀಡಾಂಗಣಗಳಿಗೆ ಎನ್‌ಜಿಟಿ ನೋಟಿಸ್

ನವದೆಹಲಿ (ಪಿಟಿಐ): ಪಿಚ್ ಮತ್ತು ಮೈದಾನದ ನಿರ್ವಹಣೆಗೆ ಬಳಸುತ್ತಿರುವ ನೀರಿನ ಮೂಲ ಕುರಿತ ಮಾಹಿತಿಯನ್ನು ಬಹಿರಂಗಪಡಿಸಲು ವಿಫಲವಾದ ಕಾರಣಕ್ಕಾಗಿ ಕ್ರೀಡಾಂಗಣದಲ್ಲಿನ ಎಲ್ಲ ಚಟುವಟಿಕೆಗಳಿಗೆ ಏಕೆ ನಿಷೇಧ ಹೇರಬಾರದು ಎಂದು ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣವೂ ಸೇರಿದಂತೆ ದೇಶದ ಒಟ್ಟು ಆರು ಕ್ರೀಡಾಂಗಣಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನೋಟಿಸ್ ಜಾರಿಗೊಳಿಸಿದೆ.

ದೇಶದ ಏಳು ಕ್ರೀಡಾಂಗಣಗಳಲ್ಲಿ ಪಿಚ್ ನಿರ್ವಹಣೆಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿದ ನೀರನ್ನು ಬಳಸುವ ಬದಲಿಗೆ ಅಂತರ್ಜಲವನ್ನೇ ಬಳಕೆ ಮಾಡಲಾಗುತ್ತಿದೆ. ಜತೆಗೆ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನೂ ಅಳವಡಿಸಲಾಗಿಲ್ಲ ಎಂದು ಆರೋಪಿಸಿ ಸಲ್ಲಿಕೆಯಾಗಿರುವ ಅರ್ಜಿ ಎನ್‌ಜಿಟಿ ವಿಚಾರಣೆ ನಡೆಸುತ್ತಿದೆ.

ಇದಕ್ಕೆ ಸಂಬಂಧಿಸಿದಂತೆ ಕ್ರೀಡಾಂಗಣದಲ್ಲಿ ಬಳಸುತ್ತಿರುವ ನೀರಿನ ಮೂಲದ ಬಗ್ಗೆ ಮಾಹಿತಿ ಸಲ್ಲಿಸುವಂತೆಯೂ ಈ ಹಿಂದೆಯೇ ನಿರ್ದೇಶಿಸಲಾಗಿದೆ.

ಹೈದರಾಬಾದ್‌ನ ಕ್ರೀಡಾಂಗಣದ ಆಡಳಿತವು ಪ್ರತಿಕ್ರಿಯೆ ಸಲ್ಲಿಸಲು ಮೂರು ವಾರಗಳ ಕಾಲಾವಕಾಶ ಕೋರಿದ್ದು, ಉಳಿದ ಆರು ಕ್ರೀಡಾಂಗಣಗಳ ಆಡಳಿತದಿಂದ ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂಬುದನ್ನು ಎನ್‌ಜಿಟಿ ಪೀಠ ಗಮನಿಸಿ, ಈಗ ನೋಟಿಸ್ ಜಾರಿಗೊಳಿಸಿದೆ.

ನೋಟಿಸ್ ಪಡೆದಿರುವ ಕ್ರೀಡಾಂಗಣಗಳ ಪೈಕಿ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ, ರಾಯಪುರದ ಶಾಹೀದ್ ವೀರ ನಾರಾಯಣ ಸಿಂಗ್ ಅಂತರರಾಷ್ಟ್ರೀಯ ಕ್ರೀಡಾಂಗಣ, ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣ, ಮುಂಬೈನ ಡಾ.ಡಿ.ವೈ. ಪಾಟೀಲ್ ಕ್ರೀಡಾಂಗಣ, ಲಖನೌನ ಭಾರತ ರತ್ನಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ಮತ್ತು ಒಡಿಶಾದ ಬಾರಾಬತಿ ಕ್ರೀಡಾಂಗಣವೂ ಸೇರಿವೆ.

ತುಮಕೂರು: 1380 ಅಥ್ಲೀಟ್‌ಗಳು ಭಾಗಿ ನಿರೀಕ್ಷೆ

ಜೂನಿಯರ್ ಅಥ್ಲೆಟಿಕ್ಸ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ತುಮಕೂರು: 24ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಕ್ರೀಡಾಕೂಟದ ಆತಿಥ್ಯಕ್ಕೆ ಕಲ್ಪತರು ನಾಡು ತುಮಕೂರು ಸಜ್ಜಾಗಿದೆ. ಇಲ್ಲಿನ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಇದೇ 24ರಿಂದ 26ರವರೆಗೆ ನಡೆಯುವ ಕೂಟದಲ್ಲಿ ದೇಶದ ಅಗ್ರ ಅಥ್ಲೀಟ್‌ಗಳು ಕಣಕ್ಕಿಳಿಯಲಿದ್ದಾರೆ.

ಜಿಲ್ಲಾಡಳಿತ, ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ, ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಆಶ್ರಯದಲ್ಲಿ ನಡೆಯುವ ಈ ಕೂಟದಲ್ಲಿ ಕರ್ನಾಟಕ ಸೇರಿದಂತೆ 28 ರಾಜ್ಯಗಳ 1380 ಅಥ್ಲೀಟ್‌ಗಳು (20 ವರ್ಷದೊಳಗಿನವರು) ಪಾಲ್ಗೊಳ್ಳಲಿದ್ದಾರೆ. ಜೆಎಸ್‌ಡಬ್ಲ್ಯು ಮತ್ತು ರಿಲಯನ್ಸ್ ಫೌಂಡೇಷನ್ ತಂಡಗಳು ಸ್ಪರ್ಧೆಯಲ್ಲಿವೆ. ಕರ್ನಾಟಕದ 110 ಅಥ್ಲೀಟ್‌ಗಳು ಕಣದಲ್ಲಿದ್ದಾರೆ.

ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ 100 ಮೀ, 200 ಮೀ, 400 ಮೀ, 800 ಮೀ, 1500 ಮೀ, 3000 ಮೀ, 5000 ಮೀಟರ್ ಓಟ, ಹರ್ಡಲ್ಸ್, ಸ್ಟೀಪಲ್‌ಚೇಸ್, ಹೈಜಂಪ್, ಪೋಲ್‌ವಾಲ್ಟ್, ಲಾಂಗ್‌ಜಂಪ್, ಟ್ರಿಪಲ್ ಜಂಪ್, ಹ್ಯಾಮರ್ ಥ್ರೋ, ಜಾವೆಲಿನ್ ಥ್ರೋ, ರೇಸ್‌ವಾಕ್, ರಿಲೇ, ಡೆಕಾಥ್ಲಾನ್ (ಪುರುಷರಿಗೆ), ಹೆಪ್ಟಾಥ್ಲಾನ್ (ಮಹಿಳೆಯರಿಗೆ) ಸೇರಿದಂತೆ ಒಟ್ಟು 40 ಸ್ಪರ್ಧೆಗಳು ನಡೆಯಲಿವೆ.

ಈ ಕ್ರೀಡಾಕೂಟದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಅಥ್ಲೀಟ್‌ಗಳಿಗೆ ಭಾರತವನ್ನು ಪ್ರತಿನಿಧಿಸುವ ಅವಕಾಶ ಸಿಗಲಿದೆ. ಹಾಂಗ್‌ಕಾಂಗ್‌ನಲ್ಲಿ ಮೇ 28ರಿಂದ 31 ರವರೆಗೆ ನಡೆಯುವ ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಮತ್ತು ಆ.5ರಿಂದ 9ರವರೆಗೆ ಅಮೆರಿಕದಲ್ಲಿ ನಡೆಯುವ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಇದನ್ನು ಭಾರತ ತಂಡದ ಆಯ್ಕೆ ಟ್ರಯಲ್ಸ್ ಆಗಿ ಪರಿಗಣಿಸಲಾಗಿದೆ.

ಅಂತರರಾಷ್ಟ್ರೀಯ ಕೂಟಕ್ಕೂ ಆಯ್ಕೆ ಟ್ರಯಲ್ಸ್ ಇದಾಗಿರುವುದರಿಂದ ಭಾರತ ಅಥ್ಲೆಟಿಕ್ ಫೆಡರೇಷನ್ ಅಧಿಕಾರಿಗಳು ಹಾಗೂ ತಾಂತ್ರಿಕ ವರ್ಗದವರು ಕ್ರೀಡಾಕೂಟದ ಸಂಪೂರ್ಣ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ‘ಫೋಟೋ ಫಿನಿಷ್’ ಸೇರಿದಂತೆ ಅತ್ಯಾಧುನಿಕ ತಾಂತ್ರಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಅಥ್ಲೀಟ್‌ಗಳ ಉದ್ದೀಪನ ಮದ್ದು ಪರೀಕ್ಷೆ ಕೂಡ ನಡೆಯಲಿದೆ.

‘ಪ್ರಥಮ ಬಾರಿಗೆ ಜಿಲ್ಲಾ ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಕೂಟ ಆಯೋಜಿಸಲಾಗಿದೆ. ಮಧ್ಯಾಹ್ನ ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ಬೆಳಿಗ್ಗೆ 6ರಿಂದ 10.30ರವರೆಗೆ, ಮಧ್ಯಾಹ್ನ 3.30ರಿಂದ ರಾತ್ರಿ 8ರವರೆಗೆ ಸ್ಪರ್ಧೆಗಳನ್ನು ನಡೆಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ ಮಾಹಿತಿ ನೀಡಿದ್ದಾರೆ.

ಪಾಸ್ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ಆ್ಯಂಡ್ರಿಯಾ ಎಲಿಜಬೆತ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕೆಎಸ್‌ಎಫ್‌ಎ ‘ಎ’ ಡಿವಿಷನ್ ಮಹಿಳಾ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಪಾಸ್ ಎಫ್‌ಸಿ ಸ್ಪಾರ್ಕ್ಸ್ ತಂಡವು ಗುರುವಾರ 4–0ಯಿಂದ ಟೆಕ್ನಿಕೊ ಎಫ್‌ಎಫ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆ್ಯಂಡ್ರಿಯಾ (5ನೇ, 21ನೇ ಮತ್ತು 44ನೇ ನಿಮಿಷ) ಗೋಲು ಬಾರಿಸಿದರು. ಮತ್ತೊಂದು ಗೋಲನ್ನು ಪೂಜಾ ಡಿ. ದಾಖಲಿಸಿದರು.

ಶುಕ್ರವಾರದ ಪಂದ್ಯದಲ್ಲಿ ಪರಿಕ್ರಮ ಎಫ್‌ಸಿ ತಂಡವು ರೆಡ್ಸ್ ಯುನೈಟೆಡ್ ಎಫ್‌ಸಿ ವಿರುದ್ಧ; ಯಂಗ್ ಬ್ಲೂಸ್ ಎಲೀಟ್ ಎಫ್‌ಸಿ ತಂಡವು ಕೆಂಪ್ ಎಫ್‌ಸಿ ಜೂನಿಯರ್ ತಂಡವನ್ನು ಎದುರಿಸಲಿವೆ.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಮಿಚೆಲ್ ಸ್ಟಾರ್ಕ್



ದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಅವರು ಮೇ 1ರಂದು ರಾಜಸ್ಥಾನ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಕಣಕ್ಕಿಳಿಯುವ ನಿರೀಕ್ಷೆಯಿದೆ.

ಸ್ಟಾರ್ಕ್ ಅವರು ಭುಜ ಮತ್ತು ಮೊಣಕೈ ಗಾಯದಿಂದಾಗಿ ಐಪಿಎಲ್ ಆವೃತ್ತಿಯ ಆರಂಭಿಕ ಕೆಲ ಪಂದ್ಯಗಳಿಗೆ ಅಲಭ್ಯರಾಗಿದ್ದರು. ಈಗ ಅವರಿಗೆ ಕ್ರಿಕೆಟ್ ಆಸ್ಟ್ರೇಲಿಯಾ ಅನುಮತಿ ನೀಡಿದೆ. ಗಾಯದಿಂದ ಚೇತರಿಸಿಕೊಂಡಿರುವ ಅವರು ಶುಕ್ರವಾರ ಭಾರತಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

ಕಳೆದ ಋತುವಿನಲ್ಲಿ ಡೆಲ್ಲಿ ತಂಡದ ಪರ ಸ್ಟಾರ್ಕ್ 11 ಪಂದ್ಯಗಳಲ್ಲಿ 14 ವಿಕೆಟ್‌ಗಳನ್ನು ಕಬಳಿಸಿದ್ದರು. ಸದ್ಯ ಕ್ಯಾಪಿಟಲ್ಸ್ ತಂಡವು ಟೂರ್ನಿಯಲ್ಲಿ ಆರು ಪಂದ್ಯಗಳಲ್ಲಿ ಮೂರನ್ನು ಗೆದ್ದಿದೆ.

ಕ್ಯಾಪಿಟಲ್ಸ್ ತಂಡವು ಶನಿವಾರ (ಇದೇ 25) ಪಂಜಾಬ್ ಕಿಂಗ್ಸ್ ವಿರುದ್ಧ ಮತ್ತು ಸೋಮವಾರ (ಏಪ್ರಿಲ್ 29) ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಆಡಲಿದೆ.

ಜೂನಿಯರ್ ವಿಶ್ವಕಪ್ ಶೂಟಿಂಗ್

ಪ್ರಾಚಿಗೆ ಚಿನ್ನ, ಪ್ರಣವ್‌ಗೆ ಕಂಚು

ಕೈರೊ (ಪಿಟಿಐ): ಭಾರತದ ಪ್ರಾಚಿ ಗಾಯಕವಾಡ್ ಅವರು ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್ ಟೂರ್ನಿಯ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಗುರುವಾರ ಚಿನ್ನದ ಪದಕ ಗೆದ್ದುಕೊಂಡರು. ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ನಾರಾಯಣ್ ಪ್ರಣವ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಭಾರತಕ್ಕೆ ಇದು ಎರಡನೆ ಚಿನ್ನ. ಟೂರ್ನಿಯ ಮೊದಲ ದಿನ ಪುರುಷರ 10 ಮೀ. ಏರ್ ಪಿಸ್ತೂಲ್‌ನಲ್ಲಿ ಚಿನ್ನ ಗೆದ್ದುಕೊಂಡಿದ್ದರು. ಭಾರತ ಎರಡು ಚಿನ್ನಗಳ ಜೊತೆ ನಾಲ್ಕು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಗಳಿಸಿದೆ.

ಪ್ರಾಚಿ ಫೈನಲ್‌ನಲ್ಲಿ 354.6 ಸ್ಕೋರ್ ಗಳಿಸಿ, ತಟಸ್ಥ ತಂಡದ ಸ್ಪರ್ಧಿ ದರ್ಯಾ ಚುಪ್ರಿಸ್ (354.4) ಅವರನ್ನು ಎರಡನೇ ಸ್ಥಾನಕ್ಕೆ ಸರಿಸಿದರು. ತಟಸ್ಥ ತಂಡದ ಎಲಿನಾ ಕ್ರೆಟಿನಿನಾ (343.3) ಕಂಚಿನ ಪದಕ ಗಳಿಸಿದರು. ಪ್ರಾಚಿ ಫೈನಲ್ ಸುತ್ತಿಗೆ ಏರಿದ್ದ ಭಾರತದ ಏಕೈಕ ಶೂಟರ್ ಆಗಿದ್ದರು. ಅರ್ಹತಾ ಸುತ್ತಿನಲ್ಲಿ 578 ಸ್ಕೋರ್‌ನೊಡನೆ ಆರನೇ ಸ್ಥಾನ ಗಳಿಸಿದ್ದರು.

ಜೂನಿಯರ್ ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಭಾರತದ ಮೂವರು ಅಂತಿಮ ಸುತ್ತಿಗೆ ತಲುಪಿದ್ದರು. ನಾರಾಯಣ್ ಅವರು 630.9 ಸ್ಕೋರ್‌ನೊಡನೆ ಮೂರನೇ ಸ್ಥಾನ ಗಳಿಸಿದ್ದರು. ಅಭಿನವ್ ನಾಲ್ಕನೇ ಸ್ಥಾನ ಮತ್ತು ದಿವ್ಯಾಂಶು ದೇವಾಂಗನ್ ಏಳನೇ ಸ್ಥಾನ ಪಡೆದು ಅಂತಿಮ ಸುತ್ತಿಗೆ ಅರ್ಹತೆ ಪಡೆದಿದ್ದರು. ಫೈನಲ್‌ನಲ್ಲಿ ನರೇನ್ (229.5) ಮೂರನೇ ಸ್ಥಾನ ಪಡೆದರು. ಸೊಖಿಬೋವ್ (251.2) ಮೊದಲನೇ ಮತ್ತು ಸೊಫೊಕ್ಲಿಯಸ್ (250.2) ಎರಡನೇ ಸ್ಥಾನ ಗಳಿಸಿದರು.


ಪ್ರಾಚಿ ಗಾಯಕವಾಡ್

‘ಭಾರತದ ಅಥ್ಲೆಟಿಕ್ಸ್‌ನಲ್ಲಿ ಪ್ರಗತಿ’

ಬೆಂಗಳೂರು: ‘ಸುಮಾರು ಒಂದು ದಶಕದಿಂದ ಭಾರತದ ಅಥ್ಲೆಟಿಕ್ಸ್ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಅಥ್ಲೀಟುಗಳ ಪ್ರದರ್ಶನದಲ್ಲೂ ಸಾಕಷ್ಟು ಸುಧಾರಣೆಯಾಗಿದೆ. ನನ್ನಿಂದ ಯಾವುದೇ ನೆರವು ಬೇಕಾದರೆ ನೀಡಲು ಸಿದ್ಧಳಾಗಿದ್ದೇನೆ’ ಎಂದು ಎರಡು ಬಾರಿ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿರುವ ಹೈಜಂಪ್ ತಾರೆ ಬ್ಲಾಂಕಾ ವ್ಲಾಸಿಕ್ ಹೇಳಿದರು.

ಟಿಸಿಎಸ್ ವಿಶ್ವ 10ಕೆ ಬೆಂಗಳೂರು ಓಟದ ಅಂತರರಾಷ್ಟ್ರೀಯ ರಾಯಭಾರಿ ಆಗಿರುವ ವ್ಲಾಸಿಕ್ ಗುರುವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. 42 ವರ್ಷ ವಯಸ್ಸಿನ ವ್ಲಾಸಿಕ್ ಎರಡು ಬಾರಿಯ ವಿಶ್ವ ಚಾಂಪಿಯನ್ (2007, 2009) ಕೂಡ.

‘ಕ್ರೀಡೆ ನನ್ನ ಜೀವನದ ಅವಿಭಾಜ್ಯ ಅಂಗವಾಗಿದೆ. ಇದು ದೈಹಿಕ ಕ್ಷಮತೆಗೆ ಮಾತ್ರವಲ್ಲ, ಮಾನಸಿಕ ಆರೋಗ್ಯ ಕಾಪಾಡಲೂ ನೆರವಾಗುತ್ತದೆ’ ಎಂದು ಕ್ರೊವೇಷ್ಯಾದ ಕ್ರೀಡಾತಾರೆ ಹೇಳಿದರು.

2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಭಾರತ ಬಿಡ್ ಸಲ್ಲಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಒಲಿಂಪಿಕ್ಸ್ ಆಯೋಜಿಸುವುದು ಒಂದು ಪೀಳಿಗೆಗೆ ಸ್ಫೂರ್ತಿ ನೀಡುತ್ತದೆ. ದೇಶದ ಕ್ರೀಡಾ ಬೆಳವಣಿಗೆಗೆ ವೇಗ ನೀಡುತ್ತದೆ. ಪ್ರತಿಭಾವಂತ ಕ್ರೀಡಾಪಟುಗಳನ್ನು ರೂಪಿಸಲೂ ಇದರಿಂದ ಸಾಧ್ಯ’ ಎಂದರು.

ಭಾನುವಾರದ ಈ ಕೂಟದಲ್ಲಿ ಸುಮಾರು 36,000 ಮಂದಿ ಭಾಗವಹಿಸಲಿದ್ದಾರೆ. ಇವರಲ್ಲಿ 9,000 ಮಹಿಳೆಯರು ಒಳಗೊಂಡಿದ್ದಾರೆ.


ಬ್ಲಾಂಕಾ ವ್ಲಾಸಿಕ್

ಶಾಂತೊ ಶತಕ; ಬಾಂಗ್ಲಾಕ್ಕೆ ಸರಣಿ

ಛತ್ತೋಗ್ರಾಮ್ (ಬಾಂಗ್ಲಾದೇಶ) (ಎಪಿ): ನಜ್ಮುಲ್ ಹುಸೇನ್ ಶಾಂತೊ ಅವರ ಶತಕ (105, 119 ಎಸೆತ) ಮತ್ತು ಮುಸ್ತಫಿಝುರ್ ರಹಮಾನ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಬಾಂಗ್ಲಾದೇಶ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ 55 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಮಣಿಸಿತು.

ಆತಿಥೇಯರು ಸರಣಿಯನ್ನು 2–1 ರಿಂದ ಸರಣಿ ಗೆದ್ದರು. ಇದು ಬಾಂಗ್ಲಾದೇಶಕ್ಕೆ ಸತತ ಮೂರನೇ ಸರಣಿ ಗೆಲುವು. ಇದಕ್ಕೆ ಮೊದಲು ವೆಸ್ಟ್ ಇಂಡೀಸ್ ಮತ್ತು ಪಾಕಿಸ್ತಾನ ತಂಡಗಳ ವಿರುದ್ಧವೂ ಏಕದಿನ ಸರಣಿ ಜಯಿಸಿತ್ತು.

ಸ್ಕೋರುಗಳು: ಬಾಂಗ್ಲಾದೇಶ: 50 ಓವರುಗಳಲ್ಲಿ 8 ವಿಕೆಟ್‌ಗೆ 265 (ನಜ್ಮುಲ್ ಹುಸೇನ್ ಶಾಂತೊ 105, ಲಿಟನ್ ದಾಸ್ 76; ವಿಲ್ ಓ ರೂರ್ಕೆ 32ಕ್ಕೆ3); ನ್ಯೂಜಿಲೆಂಡ್: 44.5 ಓವರುಗಳಲ್ಲಿ 210 (ನಿಕ್ ಕೆಲಿ 59, ಡೀನ್ ಫಾಕ್ಸ್‌ಕ್ರಾಫ್ಟ್ 75; ಮುಸ್ತಫಿಝುರ್ ರಹಮಾನ್ 43ಕ್ಕೆ5).

ಪುಟಿದೇಳುವುದೇ ರಜತ್ ಪಡೆ?

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕೊನೆಯ ಲೀಗ್ ಪಂದ್ಯ ಆಡಲಿರುವ ಆರ್‌ಸಿಬಿ

• ನಾಗೇಶ್ ಶೆಣೈ

ಬೆಂಗಳೂರು: ವಾರದ ಹಿಂದೆ ಡೆಲ್ಲಿ ಕ್ಯಾಪಿಟಲ್ಸ್ ಎದುರು ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಋತುವಿನ ಮೊದಲ ಪಂದ್ಯ ಸೋತಿದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಶುಕ್ರವಾರ ಇಲ್ಲಿಯೇ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದೆ. ಲೀಗ್‌ನ ಉಳಿದ ಎಲ್ಲಾ ಪಂದ್ಯಗಳನ್ನು ಬೆಂಗಳೂರಿನಿಂದ ಆಚೆ ಆಡಲಿರುವ ಆರ್‌ಸಿಬಿ ತಂಡಕ್ಕೆ ಈ ಪಂದ್ಯದ ಗೆಲುವು, ಮುಂದಿನ ಸವಾಲುಗಳಿಗೆ ಸಜ್ಜಾಗಲು ಆತ್ಮವಿಶ್ವಾಸ ತುಂಬಲಿದೆ.

ಪೂರ್ವ ನಿರ್ಧಾರಿತವಾಗಿರುವಂತೆ ಆರ್‌ಸಿಬಿ ತನ್ನ ಉಳಿದ ಎರಡು ತವರು ಪಂದ್ಯಗಳನ್ನು ಛತ್ತೀಸಗಢದ ರಾಜಧಾನಿ ರಾಯಪುರದಲ್ಲಿ (ಶಹೀದ್ ವೀರನಾರಾಯಣ ಸಿಂಗ್ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ) ಆಡಲಿದೆ. ಇತರ ಐದು ಪಂದ್ಯಗಳನ್ನೂ ತವರಿನಿಂದಾಚೆ ಆಡಬೇಕಾಗಿದೆ. ಹೀಗಾಗಿ ತಂಡಕ್ಕೆ ಮುಂದಿನ ಪಂದ್ಯಗಳಲ್ಲಿ ಹೆಚ್ಚಿನ ಸವಾಲು ಇದೆ. ತವರಿನ ಅಭಿಮಾನಿಗಳಿಗೆ ಗೆಲುವಿನ ಉಡುಗೊರೆ ನೀಡಲು ಹಾಲಿ ಚಾಂಪಿಯನ್ ತಂಡಕ್ಕೆ ಇದೊಂದು ಅವಕಾಶ.

ಡೆಲ್ಲಿ ವಿರುದ್ಧ ಆಡಿದ್ದ ಪಿಚ್ ನಿಧಾನ ಗತಿಯಿಂದ ಕೂಡಿದ್ದು, ಬ್ಯಾಟರ್‌ಗಳಿಗೆ 'ಸ್ಟ್ರೈಕ್ ಮೇಕಿಂಗ್' ಸುಲಭವಾಗಿರಲಿಲ್ಲ. ಹೀಗಾಗಿ ಆರ್‌ಸಿಬಿ ಮತ್ತು ಡೆಲ್ಲಿ ಬ್ಯಾಟರ್‌ಗಳು ಪರದಾಡಿದ್ದರು. ಈಗ ಬ್ಯಾಟರ್‌ಗಳಿಗೆ ಮತ್ತೆ ಲಯಕ್ಕೆ ಮರಳಬೇಕಾದ ಸವಾಲು ಇದೆ.

ತಂಡದ ಪ್ರಮುಖ ಬ್ಯಾಟರ್‌ಗಳು ಈ ಋತುವಿನಲ್ಲಿ ಯಶಸ್ಸು ಗಳಿಸಿದ್ದಾರೆ. ಆರಂಭ ಆಟಗಾರ ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ, ಮೂರನೇ ಕ್ರಮಾಂಕದಲ್ಲಿ ಸ್ಥಳೀಯರೇ ಆದ ದೇವದತ್ತ ಪಡಿಕ್ಕಲ್, ನಾಯಕ ರಜತ್ ಪಾಟೀದಾರ್, ಟಿಮ್ ಡೇವಿಡ್ ಸಾಕಷ್ಟು ರನ್ ಗಳಿಸಿದ್ದಾರೆ.

ಪಾಟೀದಾರ್ ಆಕ್ರಮಣಕಾರಿಯಾಗಿ ಆಡಿದ್ದು, ಈ ಋತುವಿನಲ್ಲಿ ತಮ್ಮ ಆಟಕ್ಕೆ ಹೊಸ ಆಯಾಮ ನೀಡಿದ್ದಾರೆ. 230 ರನ್ ಕಲೆಹಾಕಿರುವ ಅವರು ಕೊಹ್ಲಿ ಅವರಿಗಿಂತ 17 ರನ್‌ಗಳಷ್ಟೇ ಹಿಂದೆಯಿದ್ದಾರೆ. ಸ್ಟ್ರೈಕ್‌ರೇಟ್ ಸಹ 213ರ ಹತ್ತಿರವಿದೆ. 22 ಸಿಕ್ಸರ್ ಬಾರಿಸಿರುವ ಅವರು ಸನ್‌ರೈಸರ್ಸ್‌ನ ಅಭಿಷೇಕ್ ಶರ್ಮಾ (27 ಸಿಕ್ಸರ್) ನಂತರದ ಸ್ಥಾನದಲ್ಲಿದ್ದಾರೆ.

ತಂಡವು ವಿಂಡೀಸ್ ಆಲ್‌ರೌಂಡರ್ ರೊಮಾರಿಯೊ ಶೆಫರ್ಡ್ ಬದಲು ಜೇಕಬ್ ಡಫಿ ಅವರಿಗೆ ಅವಕಾಶ ನೀಡಬಹುದೇ ಎಂಬುದು ಕುತೂಹಲಕ್ಕೆ ಎಡೆಮಾಡಿದೆ.

'ತವರು ಮೈದಾನ, ಪ್ರೇಕ್ಷಕರ ಬೆಂಬಲ ಇವೆರಡು ನಮಗೆ ಸಿಗಲಿದೆ. ಪಿಚ್ ಬಿಸಿಸಿಐ ಕ್ಯುರೇಟರ್ ಉಸ್ತುವಾರಿಯಲ್ಲಿರುವುದರಿಂದ ನಮ್ಮದೇನೂ ಪ್ರಭಾವ ಇರುವುದಿಲ್ಲ' ಎಂದು ಆರ್‌ಸಿಬಿ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಅವರು ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಟೈಟನ್ಸ್‌ಗೆ ಒತ್ತಡ: ಗುಜರಾತ್ ಟೈಟನ್ಸ್ ತಂಡವು ತವರಿನ ಕೊನೆಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು 99 ರನ್‌ಗಳ ಭಾರಿ ಸೋಲು ಅನುಭವಿಸಿತು. ಈ ದೊಡ್ಡ ಅಂತರದ ಸೋಲು ತಂಡದ ಮೇಲೆ ಒತ್ತಡ ಹೇರಿದೆ. ಪ್ರಬಲ ಬೌಲಿಂಗ್ ಪಡೆ, ತಿಲಕ್ ವರ್ಮಾ ಅವರನ್ನು ಕಟ್ಟಿಹಾಕಲು ವಿಫಲವಾಯಿತು. ನಂತರ ಬ್ಯಾಟಿಂಗ್ ಕುಸಿತ ಕಂಡು 100 ರನ್‌ಗಳಿಗೆ ಉರುಳಿತು.

ವೇಗಿಗಳಾದ ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಕಗಿಸೊ ರಬಾಡ, ಸ್ಪಿನ್ನರ್ ರಶೀದ್ ಖಾನ್ ಅವರನ್ನು ಒಳಗೊಂಡ ಬೌಲಿಂಗ್ ಪಡೆ ಪ್ರಬಲವಾಗಿಯೇ ಇದೆ. ಆದರೆ ಬ್ಯಾಟರ್‌ಗಳ ವೈಫಲ್ಯವು ತಂಡಕ್ಕೆ ಮುಳುವಾಗುತ್ತಿದೆ.

ನಾಯಕ ಶುಭಮನ್ ಗಿಲ್ (5 ಪಂದ್ಯಗಳಿಂದ 265) ಮಾತ್ರ ಯಶಸ್ಸು ಗಳಿಸಿದ್ದಾರೆ. ಕೆಲಮಟ್ಟಿಗೆ ಬಟ್ಲರ್ ಸ್ಥಿರ ಪ್ರದರ್ಶನ ನೀಡಿದ್ದಾರೆ. ಆದರೆ ಸಾಯಿ ಸುದರ್ಶನ್, ಗ್ಲೆನ್ ಫಿಲಿಪ್ಸ್, ರಾಹುಲ್ ತೆವಾಟಿಯಾ ಅವರು ಉಪಯುಕ್ತ ಆಟವಾಡುತ್ತಿಲ್ಲ. ಇದು ತಂಡದ ಮೇಲಿನ ಒತ್ತಡ ಹೆಚ್ಚಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಗುಜರಾತ್ ಟೈಟನ್ಸ್

ತಾಣ: ಬೆಂಗಳೂರು,
ಪಂದ್ಯ ಆರಂಭ: ರಾತ್ರಿ 7.30

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಶುಭಮನ್ ಗಿಲ್



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ ಅಭ್ಯಾಸ ನಡೆಸಿದರು ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	6	5	0	1	11	1.420
ಆರ್ ಆರ್	7	5	2	0	10	0.790
ಆರ್‌ಸಿಬಿ	6	4	2	0	8	1.171
ಎಸ್‌ಆರ್‌ಎಚ್	7	4	3	0	8	0.820
ಸಿಎಸ್‌ಕೆ	7	3	4	0	6	0.118
ಡಿ ಸಿ	6	3	3	0	6	- 0.130
ಜಿ ಟಿ	6	3	3	0	6	- 0.821
ಎಂ ಐ	7	2	5	0	4	0.736
ಎಲ್‌ಎಸ್‌ಜಿ	7	2	5	0	4	- 1.277
ಕೆಕೆಆರ್	7	1	5	1	3	- 0.879

ಆರೆಂಜ್ ಕ್ಯಾಪ್–ಅಭಿಷೇಕ್ ಶರ್ಮಾ, ಎಸ್‌ಆರ್‌ಎಚ್ (323 ರನ್)

ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್ , ಸಿಎಸ್‌ಕೆ (14 ವಿಕೆಟ್)

ಗೆಲುವಿನ ಹಳಿಗೆ ಚೆನ್ನೈ: ವಾಂಖೆಡೆಯಲ್ಲಿ ಮುಂಬೈಗೆ ಹ್ಯಾಟ್ರಿಕ್ ಸೋಲು

ಸಂಜು ಶತಕ: ಅಕೀಲ್ ಕೈಚಳಕ

ಮುಂಬೈ (ಪಿಟಿಐ): ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ (ಔಟಾಗದೇ 101) ಅವರು ಈ ಸಲದ ಐಪಿಎಲ್ ಟೂರ್ನಿಯಲ್ಲಿ ಎರಡನೇ ಶತಕ ದಾಖಲಿಸಿದರು. ವೆಸ್ಟ್ ಇಂಡೀಸ್‌ನ ಸ್ಪಿನ್ನರ್ ಅಕೀಲ್ ಹುಸೇನ್ (17ಕ್ಕೆ 4) ಕೈಚಳಕ ತೋರಿದರು. ಅವರಿಬ್ಬರ ಅಮೋಘ ಆಟದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೆಲುವಿನ ಹಳಿಗೆ ಮರಳಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಚೆನ್ನೈ ತಂಡವು 103 ರನ್‌ಗಳಿಂದ ಮುಂಬೈ ಇಂಡಿಯನ್ಸ್ ತಂಡವನ್ನು ಸುಲಭವಾಗಿ ಮಣಿಸಿತು. ಇದು ಐಪಿಎಲ್ ಇತಿಹಾಸದಲ್ಲಿ ಚೆನ್ನೈ ತಂಡಕ್ಕೆ ರನ್ ಆಧಾರದಲ್ಲಿ ಅತಿದೊಡ್ಡ ಗೆಲುವಾಗಿದೆ. ಮುಂಬೈ ತಂಡವು ತನ್ನ ತವರಿನಲ್ಲಿ ಹ್ಯಾಟ್ರಿಕ್ ಸೋಲು ಅನುಭವಿಸಿತು. ಏಳು ಪಂದ್ಯಗಳಲ್ಲಿ ಐದನೇ ಸೋಲು ಅನುಭವಿಸಿದ ಹಾರ್ದಿಕ್ ಪಾಂಡ್ಯ ಪಡೆಯ ಪ್ಲೇ ಆಫ್ ಹಾದಿ ಕಠಿಣವಾಗಿದೆ. ಅಂಕಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದ್ದ ಚೆನ್ನೈ ತಂಡ ಐದನೇ ಸ್ಥಾನಕ್ಕೆ ಜಿಗಿದಿದೆ.

ಲೀಗ್‌ನ ಮೊದಲ ಮೂರು ಪಂದ್ಯಗಳಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದ ಸಂಜು ನಾಲ್ಕನೇ ಪಂದ್ಯದಲ್ಲಿ ಅಜೇಯ 115 ರನ್ ಗಳಿಸಿದ್ದರು. ಅದು ಪ್ರಸಕ್ತ ಆವೃತ್ತಿಯಲ್ಲಿ ದಾಖಲಾದ ಮೊದಲ ಶತಕವೂ ಆಗಿತ್ತು. ಇದೀಗ ತಮ್ಮ ಎರಡನೇ ಶತಕದಲ್ಲಿ ಮುಂಬೈ ತಂಡದ ಅನುಭವಿ ಬೌಲಿಂಗ್ ಪಡೆಯ ಬೆವರಿಳಿಸಿದರು. ಇದರಿಂದಾಗಿ ಚೆನ್ನೈ ತಂಡವು 6 ವಿಕೆಟ್‌ಗೆ 207 ರನ್‌ಗಳ ಸವಾಲಿನ ಮೊತ್ತ ಗಳಿಸಿತು.



ಅಕೀಲ್ ಹುಸೇನ್

ಗುರಿ ಬೆನ್ನಟ್ಟಿದ ಮುಂಬೈ ಬ್ಯಾಟರ್‌ಗಳು ಅಕೀಲ್ ಹುಸೇನ್ ಮತ್ತು ನೂರ್ ಅಹಮ್ಮದ್ (24ಕ್ಕೆ 2) ಅವರ ಪರಿಣಾಮಕಾರಿ ದಾಳಿಗೆ ಸಿಲುಕಿದರು. ಹೀಗಾಗಿ, 19 ಓವರ್‌ಗಳಲ್ಲಿ 104 ರನ್ ಗಳಿಸಿ ಹೋರಾಟ ಮುಗಿಸಿತು. ತಂಡವು 11 ರನ್ ಗಳಿಸುವಷ್ಟರಲ್ಲಿ ಕ್ವಿಂಟನ್ ಡಿಕಾಕ್ (7), ದಾನಿಷ್ ಮಾಳೆವಾರ್ (0) ಮತ್ತು ನಮನ್ ಧೀರ್ (0) ಪೆವಿಲಿಯನ್ ಸೇರಿದ್ದರು. ಸೂರ್ಯಕುಮಾರ್ ಯಾದವ್ (36) ಮತ್ತು ತಿಲಕ್ ವರ್ಮಾ (37) ನಾಲ್ಕನೇ ವಿಕೆಟ್‌ಗೆ 73 ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ನಡೆಸಿದರು. ನಂತರ ಬಂದವರು ಬೇಗನೆ ವಿಕೆಟ್ ಒಪ್ಪಿಸಿದರು.

ಸಂಜು ಅಬ್ಬರ: ಚೆನ್ನೈ ತಂಡದ ಇನಿಂಗ್ಸ್‌ನ ಮೊದಲ ಓವರ್‌ನಿಂದ ಕೊನೆಯ ಓವರ್‌ನವರೆಗೂ ಕ್ರೀಸ್‌ನಲ್ಲಿ ಉಳಿದ ಸಂಜು 54 ಎಸೆತಗಳಲ್ಲಿ 101 ರನ್ ಗಳಿಸಿದರು. ಇನಿಂಗ್ಸ್‌ನ ಕೊನೆಯ ಎಸೆತದಲ್ಲಿ ಬೌಂಡರಿ ಗಳಿಸುವುದರೊಂದಿಗೆ ಶತಕ ಪೂರ್ಣಗೊಳಿಸಿ ಕೊಂಡರು. ಅವರ ಇನಿಂಗ್ಸ್‌ನಲ್ಲಿ 10 ಬೌಂಡರಿ ಮತ್ತು ಆರು ಸಿಕ್ಸರ್‌ಗಳಿದ್ದವು.



ಶತಕ ದಾಖಲಿಸಿದ ಸಂಭ್ರಮದಲ್ಲಿ ಸಂಜು ಸ್ಯಾಮ್ಸನ್ ಪಿಟಿಐ ಚಿತ್ರ

ಸಂಜು ಮತ್ತು ಋತುರಾಜ್ ಗಾಯಕವಾಡ್ (22; 14ಎ) ಅವರು ಮೂರು ಓವರ್‌ಗಳಲ್ಲಿ 32 ರನ್ ಸೇರಿಸುವ ಮೂಲಕ ಉತ್ತಮ ಆರಂಭ ನೀಡಿದರು. ಅಲ್ಲಾಹ ಘಜನಫರ್ ಅವರ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಋತುರಾಜ್ ಎಡವಿದರು.

ನಂತರದಲ್ಲಿ ಒಂದು ಬದಿಯಲ್ಲಿ ವಿಕೆಟ್‌ಗಳು ಪತನವಾಗುತ್ತಿದ್ದವು. ಆದರೆ ಸಂಜು ಆಟ ಮಾತ್ರ ಮುಂದುವರಿದಿತ್ತು. ಐಪಿಎಲ್‌ನಲ್ಲಿ ಅವರು ಐದನೇ ಶತಕ ದಾಖಲಿಸಿದರು. ಕೆ.ಎಲ್. ರಾಹುಲ್ ಅವರ ದಾಖಲೆಯನ್ನು ಸಂಜು ಸರಿಗಟ್ಟಿದರು. ಅತಿ ಹೆಚ್ಚು ಶತಕಗಳ ದಾಖಲೆ ವಿರಾಟ್ ಕೊಹ್ಲಿ (8) ಅವರ ಹೆಸರಿನಲ್ಲಿದೆ. ಮುಂಬೈ ಎದುರು ಶತಕ ಹೊಡೆದ ಚೆನ್ನೈ ತಂಡದ ಮೊದಲ ಬ್ಯಾಟರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾದರು.

ಧೋನಿ ಅಲಭ್ಯ: ವಿಕೆಟ್‌ಕೀಪರ್–ಬ್ಯಾಟರ್ ಮಹೇಂದ್ರಸಿಂಗ್ ಧೋನಿ ಅವರು ಈ ಪಂದ್ಯದಲ್ಲಿಯೂ ಆಡಲಿಲ್ಲ. ಮೀನಖಂಡದ ಸ್ನಾಯುಸೆಳೆತದ ಗಾಯದಿಂದಾಗಿ ಅವರು ಟೂರ್ನಿಯ ಮೊದಲ ಪಂದ್ಯದಿಂದ ಇಲ್ಲಿಯವರೆಗೂ ಆಡಿಲ್ಲ. ಆದರೆ ಬುಧವಾರ ಅವರು ನೆಟ್ಸ್‌ನಲ್ಲಿ ಲವಲವಿಕೆಯಿಂದ ಭಾಗವಹಿಸಿದ್ದರು. ಅದರಿಂದಾಗಿ ಈ ಪಂದ್ಯದಲ್ಲಿ ಅವರು ಆಡುವ ನಿರೀಕ್ಷೆ ಗರಿಗೆದರಿತ್ತು.

ಕಪ್ಪುಪಟ್ಟಿ: ಚೆನ್ನೈ ತಂಡದ ಬೌಲರ್ ಮುಕೇಶ್ ಚೌಧರಿ ಅವರ ತಾಯಿ ನಿಧನರಾದ ಹಿನ್ನೆಲೆಯಲ್ಲಿ ಸಹ ಆಟಗಾರರೆಲ್ಲರೂ ತಮ್ಮ ತೋಳುಗಳಿಗೆ ಕಪ್ಪುಪಟ್ಟಿ ಧರಿಸಿ ಗೌರವ ಸೂಚಿಸಿದರು. ಮುಕೇಶ್ ತಾಯಿ ಅನಾರೋಗ್ಯದಿಂದಾಗಿ ಈಚೆಗೆ ನಿಧನರಾಗಿದ್ದರು. ಈ ಕುರಿತು ಎಕ್ಸ್‌ನಲ್ಲಿ ಸಂದೇಶ ಹಾಕಿದ್ದ ಚೆನ್ನೈ ಸೂಪರ್ ಕಿಂಗ್ಸ್ 'ದುಃಖದ ಸಮಯದಲ್ಲಿ ನಾವು ಮುಕೇಶ್ ಜೊತೆಗೆ ಇದ್ದೇವೆ' ಎಂದಿತ್ತು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 207 (ಸಂಜು ಸ್ಯಾಮ್ಸನ್ ಅಜೇಯ 101, ಋತುರಾಜ್ ಗಾಯಕವಾಡ್ 22, ಸರ್ಫರಾಜ್ ಖಾನ್ 14, ಡಿವಾಲ್ಡ್ ಬ್ರೆವಿಸ್ 21, ಕಾರ್ತಿಕ್ ಶರ್ಮಾ 18, ಜೇಮಿ ಓವರ್ಟನ್ 15, ಅಲ್ಲಾಹ ಘಜನಫರ್ 25ಕ್ಕೆ2, ಅಶ್ವಿನಿ ಕುಮಾರ್ 37ಕ್ಕೆ2). ಮುಂಬೈ ಇಂಡಿಯನ್ಸ್: 19 ಓವರ್‌ಗಳಲ್ಲಿ 104 (ಸೂರ್ಯಕುಮಾರ್ ಯಾದವ್ 36, ತಿಲಕ್ ವರ್ಮಾ 37; ಅಕೀಲ್ ಹುಸೇನ್ 17ಕ್ಕೆ 4, ನೂರ್ ಅಹಮ್ಮದ್ 24ಕ್ಕೆ 2). ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಬೌಲರ್ ನಾಂದ್ರೆ ಬರ್ಗರ್‌ಗೆ ದಂಡ

ಲಖನೌ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ ವೇಗದ ಬೌಲರ್ ನಾಂದ್ರೆ ಬರ್ಗರ್ ಅವರಿಗೆ ದಂಡ ವಿಧಿಸಲಾಗಿದೆ.



ಏಕನಾ ಕ್ರೀಡಾಂಗಣದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರು ನಡೆದ ಪಂದ್ಯದಲ್ಲಿ ಅವರು ಅಶಿಸ್ತಿನಿಂದ ವರ್ತಿಸಿದ್ದರೆಂದು ಪಂದ್ಯ ಸಂಭಾವನೆಯ ಶೇ 10ರಷ್ಟು ದಂಡ ವಿಧಿಸಲಾಗಿದೆ.

'ಒಬ್ಬ ಆಟಗಾರನನ್ನು ಗುರಿಯಾಗಿಸಿ ಕೆಟ್ಟ ಭಾಷಾ ಪ್ರಯೋಗ, ಆಕ್ರಮಣಕಾರಿ ಹಾವಭಾವಗಳನ್ನು ತೋರ್ಪಡಿಸಿದ್ದಾರೆ. ಇದರಿಂದಾಗಿ ಅವರು ಐಪಿಎಲ್ ನಿಯಮಾವಳಿಯ 2.5 ಆರ್ಟಿಕಲ್ ಉಲ್ಲಂಘಿಸಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಭಾರತ ವನಿತೆಯರಿಗೆ ಹ್ಯಾಟ್ರಿಕ್ ಸೋಲು

ಜೋಹಾನೆಸ್‌ಬರ್ಗ್ (ಪಿಟಿಐ): ನಾಯಕಿ ಲಾರಾ ವೋಲ್ವಾರ್ಟ್ (115;53ಎ, 4X14, 6X5) ಅವರ ಅಮೋಘ ಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ಮಹಿಳಾ ತಂಡವು ಬುಧವಾರ ಭಾರತದ ವಿರುದ್ಧದ ಮೂರನೇ ಟಿ20 ಪಂದ್ಯದಲ್ಲಿ ಒಂಬತ್ತು ವಿಕೆಟ್‌ಗಳ ಸುಲಭ ಜಯ ದಾಖಲಿಸಿತು.

ಆತಿಥೇಯ ತಂಡವು ಐದು ಪಂದ್ಯಗಳ ಸರಣಿಯನ್ನು ಎರಡು ಪಂದ್ಯ ಬಾಕಿ ಇರುವಂತೆ 3–0ಯಿಂದ ವಶಮಾಡಿಕೊಂಡಿತು. ಮೊದಲೆರಡು ಪಂದ್ಯಗಳಲ್ಲೂ ದಕ್ಷಿಣ ಆಫ್ರಿಕಾ ಜಯ ಸಾಧಿಸಿತ್ತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಭಾರತ ತಂಡವು ಆರಂಭ ಆಟಗಾರ್ತಿ ಶಫಾಲಿ ವರ್ಮಾ (64;46ಎ, 4x6, 6x2) ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ (66;38ಎ, 4x7, 6x3) ಅವರ ಅರ್ಧಶತಕಗಳ ನೆರವಿನಿಂದ 4 ವಿಕೆಟ್‌ಗೆ 192 ರನ್ ಗಳಿಸಿತು. ಇದು ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡದ ಅತ್ಯಧಿಕ ಮೊತ್ತವಾಗಿದೆ.



ಲಾರಾ ವೋಲ್ವಾರ್ಟ್

ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 21 ಎಸೆತಗಳು ಬಾಕಿ ಇರುವಂತೆ 1 ವಿಕೆಟ್‌ಗೆ 193 ರನ್ ಗಳಿಸಿ ಹ್ಯಾಟ್ರಿಕ್ ಗೆಲುವು ಸಾಧಿಸಿತು. ಲಾರಾ ಮತ್ತು ಸುನೆ ಲೂಸ್ (ಔಟಾಗದೇ 64;42ಎ, 4x6, 6x2) ಅವರು ಮೊದಲ ವಿಕೆಟ್‌ಗೆ 183 (92ಎ) ಸೇರಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಮಹಿಳಾ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ಇದು ಮೂರನೇ ಅತ್ಯಧಿಕ ರನ್‌ಗಳ ಯಶಸ್ವಿ ಚೇಸ್ ಆಗಿತ್ತು.

ಸಂಕ್ಷಿಪ್ತ ಸ್ಕೋರ್: ಭಾರತ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 192 (ಸ್ಮೃತಿ ಮಂದಾನ 37, ಶಫಾಲಿ ವರ್ಮಾ 64, ಹರ್ಮನ್‌ಪ್ರೀತ್ ಕೌರ್ 66, ರಿಚಾ ಘೋಷ್ 18; ನಾನ್‌ಕುಲುಲೆಕೊ ಮ್ಲಾಬಾ 31ಕ್ಕೆ 2). ದಕ್ಷಿಣ ಆಫ್ರಿಕಾ: 16.3 ಓವರ್‌ಗಳಲ್ಲಿ 1 ವಿಕೆಟ್‌ಗೆ 193 (ಲಾರಾ ವೋಲ್ವಾರ್ಟ್ 115, ಸುನೆ ಲೂಸ್ 64; ಶ್ರೇಯಾಂಕಾ ಪಾಟೀಲ 30ಕ್ಕೆ 1). ಪಂದ್ಯದ ಆಟಗಾರ್ತಿ: ಲಾರಾ ವೋಲ್ವಾರ್ಟ್